ಬುಧವಾರ, ಮೇ 25, 2022 | ಬೆಂಗಳೂರು | ₹ 6.00 | ಸಂಪುಟ 75| ಸಂಚಿಕೆ 144 | ಪುಟ 16
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ತಂತ್ರಜ್ಞಾನ
ಕಾಲ್ ರೆಕಾರ್ಡಿಂಗ್ ಆ್ಯಪ್‌ಗಳಿಗೆ ಹೇರಿರುವ ನಿರ್ಬಂಧ ಜನಪ್ರಿಯ ಬ್ರ್ಯಾಂಡ್‌ನ ಸ್ಮಾರ್ಟ್‌ಫೋನ್ ಬಳಕೆ ಮಾಡುತ್ತಿರುವವರಿಗೆ ಬಾಧಿಸುವುದು ಅಷ್ಟಕ್ಕಷ್ಟೇ!



ಆಳ-ಅಗಲ
ಪಿಎಂಎಲ್‌ಎ: ದುರ್ಬಳಕೆ ದೂರುಗಳ ಮಹಾಪೂರ
'ಸಾಮಾಜಿಕ ಜಾಲತಾಣಗಳಲ್ಲಿ ಔಷಧ ಚೀಟಿ ನೀಡುವುದನ್ನು ನಿಲ್ಲಿಸಿ' 7
₹ 3.12 ಕೋಟಿ ಪಾವತಿಸಲು ಚಿತ್ರಾಗೆ ನೋಟಿಸ್ 12

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
54,052	16,125	₹52,850 (ಬೆಂಗಳೂರು)	₹ 63,200	77.57

ಖರೀದಿ ಮತ್ತು ಟೆಂಡರ್‌ಗಳಲ್ಲಿ ಶೇ 1ರಷ್ಟು ಕಮಿಷನ್ ಆರೋಪ, ಸಂಪುಟದಿಂದ ವಜಾ

ಪಂಜಾಬ್ ಆರೋಗ್ಯ ಸಚಿವ ಸೆರೆ

ಚಂಡೀಗಡ (ಪಿಟಿಐ): ಪಂಜಾಬ್ ಆರೋಗ್ಯ ಸಚಿವ ವಿಜಯ್ ಸಿಂಗ್ಲಾ ಅವರ ಮೇಲೆ ಭ್ರಷ್ಟಾಚಾರದ ಆರೋಪ ಕೇಳಿ ಬಂದ ಕಾರಣ ಅವರನ್ನು ಸಚಿವ ಸ್ಥಾನದಿಂದ ಮಂಗಳವಾರ ವಜಾಗೊಳಿಸಲಾಗಿದೆ. ಇದರ ಬೆನ್ನಲ್ಲೇ ಸಿಂಗ್ಲಾ ಅವರನ್ನು ಪೊಲೀಸರು ಬಂಧಿಸಿದ್ದಾರೆ.

ಸಿಂಗ್ಲಾ ಜೊತೆಗೆ ಅವರ ವಿಶೇಷ ಕರ್ತವ್ಯಾಧಿಕಾರಿಯನ್ನು ಬಂಧಿಸಿ ಕೋರ್ಟ್‌ಗೆ ಹಾಜರುಪಡಿಸಲಾಯಿತು. ಇಬ್ಬರನ್ನೂ ಮೂರು ದಿನಗಳ ಕಾಲ ಕೋರ್ಟ್ ಪೊಲೀಸರ ವಶಕ್ಕೆ ಒಪ್ಪಿಸಿದೆ.

ಎರಡು ತಿಂಗಳ ಹಿಂದೆಯಷ್ಟೇ ಪಂಜಾಬ್‌ನಲ್ಲಿ ಆಮ್ ಆದ್ಮಿ ಪಕ್ಷ (ಎಎಪಿ) ಸರ್ಕಾರ ರಚಿಸಿದೆ. ಮುಖ್ಯಮಂತ್ರಿ ಭಗವಂತ ಮಾನ್ ಅವರ ನಡೆಯನ್ನು ಶ್ಲಾಘಿಸಿರುವ ಎಎಪಿ ಮುಖ್ಯಸ್ಥ, ದೆಹಲಿ ಮುಖ್ಯಮಂತ್ರಿ ಅರವಿಂದ್ ಕೇಜ್ರಿವಾಲ್, 'ನೀವು ಕೈಗೊಂಡ ಕ್ರಮ ನನ್ನ ಕಣ್ಣಾಲಿಗಳನ್ನು ತೇವಗೊಳಿಸಿದವು. ಇಂದು ಇಡೀ ರಾಷ್ಟ್ರವು ಎಎಪಿ ಬಗ್ಗೆ ಹೆಮ್ಮೆ ಪಡುವಂತಾಗಿದೆ' ಎಂದು ಟ್ವೀಟ್ ಮಾಡಿದ್ದಾರೆ.

'ಸಿಂಗ್ಲಾ ಅವರು ತಮ್ಮ ಇಲಾಖೆಯ ಟೆಂಡರ್‌ಗಳು ಮತ್ತು ಖರೀದಿಗಳಲ್ಲಿ ಶೇ 1ರಷ್ಟು ಕಮಿಷನ್‌ಗೆ

ವಿಜಯ್ ಸಿಂಗ್ಲಾ

ಬೇಡಿಕೆಯಿಡುತ್ತಿದ್ದಾರೆ ಎಂಬುದು ತಿಳಿದ ಕೂಡಲೇ, ಅವರನ್ನು ವಜಾಗೊಳಿಸುವ ನಿರ್ಧಾರ ತೆಗೆದುಕೊಳ್ಳಲಾಯಿತು. ಅಲ್ಲದೆ, ಸಿಂಗ್ಲಾ ವಿರುದ್ಧ ಪ್ರಕರಣ ದಾಖಲಿಸುವಂತೆಯೂ ಪೊಲೀಸರಿಗೆ ನಿರ್ದೇಶಿಸಲಾಯಿತು' ಎಂದು ಮಾನ್ ಅವರು ವಿಡಿಯೊ ಸಂದೇಶದಲ್ಲಿ ತಿಳಿಸಿದ್ದಾರೆ.

'ಇತ್ತೀಚೆಗಷ್ಟೇ ಸಚಿವರ ವಿರುದ್ಧ ಭ್ರಷ್ಟಾಚಾರದ ಆರೋಪವು ನನ್ನ ಗಮನಕ್ಕೆ ಬಂದಿತ್ತು. ಮಾಧ್ಯಮಗಳಿಗೆ ಆ ಬಗ್ಗೆ ತಿಳಿದಿರಲಿಲ್ಲ. ಬೇಕಾದರೆ ನಾನು ಅದನ್ನು ಯಾರಿಗೂ ತಿಳಿಯದಂತೆ ತೇಲಿಸಿ ಬಿಡಬಹುದಿತ್ತು. ಹಾಗೇನಾದರೂ ನಾನು ಮಾಡಿದ್ದರೆ, ನಮ್ಮ ಮೇಲೆ ನಂಬಿಕೆ ಇಟ್ಟಿರುವ ಲಕ್ಷಾಂತರ ಜನರಿಗೆ ದ್ರೋಹ ಬಗೆದಂತೆ ಆಗುತ್ತಿತ್ತು. ಹೀಗಾಗಿ, ನಾನು ಸಚಿವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುತ್ತಿದ್ದೇನೆ' ಎಂದು ವಿವರಿಸಿದ್ದಾರೆ.

ಭಗವಂತ ಮಾನ್

ಭ್ರಷ್ಟಾಚಾರ ಆರೋಪಗಳನ್ನು ವಿಜಯ್ ಸಿಂಗ್ಲಾ ಅವರು ಒಪ್ಪಿಕೊಂಡಿರುವುದಾಗಿ ಮಾನ್ ಹೇಳಿದ್ದಾರೆ.

ಭ್ರಷ್ಟಾಚಾರ ಸಹಿಸಲ್ಲ: 'ಎಎಪಿ ಸರ್ಕಾರವು ಭ್ರಷ್ಟಾಚಾರವನ್ನು ಸಹಿಸುವುದಿಲ್ಲ' ಎಂದು ಪ್ರತಿಪಾದಿಸಿದ ಮುಖ್ಯಮಂತ್ರಿ ಮಾನ್ ಅವರು, ದೆಹಲಿ ಮುಖ್ಯಮಂತ್ರಿ ಅರವಿಂದ್ ಕೇಜ್ರಿವಾಲ್ ಅವರೂ 2015ರಲ್ಲಿ ತಮ್ಮ ಆಹಾರ ಮತ್ತು ಸರಬರಾಜು ಸಚಿವರನ್ನು ತೆಗೆದುಹಾಕಿದ್ದರು ಮತ್ತು ಆ ಪ್ರಕರಣವನ್ನು ಸಿಬಿಐಗೆ ಹಸ್ತಾಂತರಿಸಿದ್ದರು ಎಂಬುದನ್ನು ನೆನಪು ಮಾಡಿಕೊಂಡಿದ್ದಾರೆ.

'ಒಂದೂ ರೂಪಾಯಿಯ ಭ್ರಷ್ಟಾಚಾರವನ್ನು ಸಹಿಸುವುದಿಲ್ಲ. ಪಂಜಾಬ್ ಅನ್ನು ಭ್ರಷ್ಟಾಚಾರ ಮುಕ್ತ ರಾಜ್ಯವನ್ನಾಗಿ ಮಾಡಲು ಬಯಸುತ್ತೇವೆ' ಎಂದು ಅವರು ಪ್ರತಿಪಾದಿಸಿದ್ದಾರೆ.

'ಸರ್ಕಾರ ರಚನೆಯಾದ ಎರಡೇ ತಿಂಗಳಲ್ಲಿ ಎಎಪಿಯ ಸಚಿವರೊಬ್ಬರು ಭ್ರಷ್ಟಾಚಾರದಲ್ಲಿ ಭಾಗಿಯಾಗಿದ್ದಾರೆ ಎಂದು ಕೆಲ ಪಕ್ಷಗಳು ದೂರಬಹುದು. ಆದರೆ, ಈ ಕುರಿತು ಕ್ರಮ ತೆಗೆದುಕೊಂಡಿದ್ದೂ ನಾನೇ ಅಲ್ಲವೆ' ಎಂದು ಅವರು ಹೇಳಿದ್ದಾರೆ.

52 ವರ್ಷದ ವಿಜಯ್ ಸಿಂಗ್ಲಾ ಅವರು ಮಾನ್ಸಾ ಕ್ಷೇತ್ರದ ಶಾಸಕ. ಅವರು ಪಂಜಾಬಿ ಗಾಯಕ ಮತ್ತು ಕಾಂಗ್ರೆಸ್ ಅಭ್ಯರ್ಥಿ ಶುಭದೀಪ್ ಸಿಂಗ್ ಸಿಧು ವಿರುದ್ಧ ಗೆದ್ದಿದ್ದರು. ಪಂಜಾಬ್‌ನಲ್ಲಿ ಎರಡು ತಿಂಗಳ ಹಿಂದೆ ನಡೆದ ವಿಧಾನ ಸಭಾ ಚುನಾವಣೆಯಲ್ಲಿ ಒಟ್ಟು 117 ಕ್ಷೇತ್ರಗಳ ಪೈಕಿ ಎಎಪಿ 92 ಕ್ಷೇತ್ರಗಳಲ್ಲಿ ಜಯ ಸಾಧಿಸಿ ಸರ್ಕಾರ ರಚಿಸಿತ್ತು.

'ಭ್ರಷ್ಟಾಚಾರವೆಂದರೆ ದೇಶದ್ರೋಹ'

ನವದೆಹಲಿ: ಭ್ರಷ್ಟಾಚಾರದ ಆರೋಪದ ಮೇಲೆ ಆರೋಗ್ಯ ಸಚಿವ ವಿಜಯ್ ಸಿಂಗ್ಲಾ ಅವರನ್ನು ವಜಾಗೊಳಿಸಿದ್ದಕ್ಕಾಗಿ ಎಎಪಿ ಮುಖ್ಯಸ್ಥ ಅರವಿಂದ್ ಕೇಜ್ರಿವಾಲ್ ಅವರು ಪಂಜಾಬ್ ಮುಖ್ಯಮಂತ್ರಿ ಭಗವಂತ್ ಮಾನ್ ಅವರನ್ನು ಅಭಿನಂದಿಸಿದ್ದಾರೆ. ಭ್ರಷ್ಟಾಚಾರವು ದೇಶದ್ರೋಹವಾಗಿದೆ ಎಂದು ಕೇಜ್ರಿವಾಲ್ ಹೇಳಿದರು.

ಅರವಿಂದ್ ಕೇಜ್ರಿವಾಲ್

ಈ ಕುರಿತು ವಿಡಿಯೊ ಕಾನ್ಫರೆನ್ಸ್ ಮೂಲಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಕೇಜ್ರಿವಾಲ್, 'ಎಎಪಿ ಪ್ರಾಮಾಣಿಕ ಪಕ್ಷವಾಗಿದ್ದು, ಭ್ರಷ್ಟಾಚಾರ ಚಟುವಟಿಕೆಗಳನ್ನು ಸಹಿಸುವುದಿಲ್ಲ' ಎಂದು ತಿಳಿಸಿದರು.

'ಭ್ರಷ್ಟಾಚಾರದಲ್ಲಿ ಭಾಗಿಯಾಗಿರುವುದು ಕಂಡು ಬಂದರೆ ನಮ್ಮದೇ ನಾಯಕರನ್ನೂ ಬಿಡುವುದಿಲ್ಲ, ಭ್ರಷ್ಟಾಚಾರದಲ್ಲಿ ಭಾಗಿಯಾಗಿದ್ದ ತಮ್ಮ ಸಚಿವರನ್ನು ತಕ್ಷಣವೇ ಹುದ್ದೆಯಿಂದ ಕೆಳಗಿಳಿಸಿರುವ ಪಂಜಾಬ್ ಸಿ.ಎಂ ಭಗವಂತ್ ಬಗ್ಗೆ ಹೆಮ್ಮೆ ಇದೆ' ಎಂದರು.

ಅಪಘಾತ: ಎಂಟು ಮಂದಿ ಸಾವು

ಹುಬ್ಬಳ್ಳಿ: ಧಾರವಾಡದ ಬಾಡ ಕ್ರಾಸ್‌ನಲ್ಲಿ ನಡೆದ ಅಪಘಾತದ ನೆನಪು ಮಾಸುವ ಮುನ್ನವೇ, ಹುಬ್ಬಳ್ಳಿ ಹೊರವಲಯದ ಬೈಪಾಸ್ ರಸ್ತೆಯ ರೇವಡಿಹಾಳ ಸೇತುವೆ ಬಳಿ ಸೋಮವಾರ ಮಧ್ಯರಾತ್ರಿ ಬಸ್ ಮತ್ತು ಲಾರಿ ನಡುವೆ ಮತ್ತೊಂದು ಅಪಘಾತ ಸಂಭವಿಸಿದೆ. ಘಟನೆಯಲ್ಲಿ 8 ಮಂದಿ ಮೃತಪಟ್ಟಿದ್ದು, 27 ಜನ ಗಾಯಗೊಂಡಿದ್ದಾರೆ. 6

₹ 50 ಸಾವಿರ ಕೋಟಿ ಹೂಡಿಕೆ ಒಪ್ಪಂದ

ಬೆಂಗಳೂರು: ನವೀಕರಿಸಬಹುದಾದ ಇಂಧನದ ಉತ್ಪಾದನೆಯಲ್ಲಿ ತೊಡಗಿರುವ ರೆನ್ಯೂ ಪವರ್ ಕಂಪನಿಯು ರಾಜ್ಯದಲ್ಲಿ ಮುಂದಿನ 7 ವರ್ಷಗಳಲ್ಲಿ ₹ 50 ಸಾವಿರ ಕೋಟಿ ಹೂಡಿಕೆ ಮಾಡಲು ಒಪ್ಪಂದಕ್ಕೆ ಸಹಿ ಮಾಡಿದೆ. ದಾವೋಸ್‌ನ ವಿಶ್ವ ಆರ್ಥಿಕ ಒಕ್ಕೂಟ ಸಮಾವೇಶದಲ್ಲಿ ಸಿ.ಎಂ ಬಸವರಾಜ ಬೊಮ್ಮಾಯಿ ಸಮ್ಮುಖದಲ್ಲಿ ಸಹಿ ಹಾಕಲಾಯಿತು. 8

ಜೂನ್ 1ರಿಂದ ಸಕ್ಕರೆ ರಫ್ತಿಗೆ ನಿರ್ಬಂಧ

ನವದೆಹಲಿ (ಪಿಟಿಐ): ಕೇಂದ್ರ ಸರ್ಕಾರ ಜೂನ್ 1ರಿಂದ ಅನ್ವಯವಾಗುವಂತೆ ಸಕ್ಕರೆ ರಫ್ತಿಗೆ ನಿರ್ಬಂಧ ಹೇರಿದ್ದು, ಅಕ್ಟೋಬರ್ 31ರವರೆಗೆ ಜಾರಿಯಲ್ಲಿರುತ್ತದೆ.

ದೇಶಿಯವಾಗಿ ಅಗತ್ಯ ಪ್ರಮಾಣದ ಸಕ್ಕರೆ ಲಭ್ಯತೆ ಇರುವಂತೆ ನೋಡಿಕೊಳ್ಳುವುದು ಮತ್ತು ಬೆಲೆ ಏರಿಕೆಗೆ ಕಡಿವಾಣ ಹಾಕುವುದು ಇದರ ಉದ್ದೇಶವಾಗಿದೆ. 12

ಒಳ ಪುಟಗಳು

ಕ್ವಾಡ್ ಕೂಟದ ನಾಯಕರ ಸಭೆ: ಚೀನಾ ವಿರುದ್ಧ ಪರೋಕ್ಷ ಎಚ್ಚರಿಕೆ 7

ಸೂರ್ಯಕಾಂತಿ, ಸೋಯಾ ಎಣ್ಣೆ ಸುಂಕರಹಿತ ಆಮದಿಗೆ ಅನುಮತಿ 12

ಚಿನಕುರಳಿ

ಪ್ರಕಾಶ್ ಶೆಟ್ಟಿ

ಬಿಜೆಪಿ, ಕಾಂಗ್ರೆಸ್‌ನಲ್ಲಿ ಹೈಕಮಾಂಡ್ ಆಯ್ಕೆಯ ಅಭ್ಯರ್ಥಿಗಳಿಗೆ ಟಿಕೆಟ್

ಬಿಎಸ್‌ವೈ 'ವಿಜಯ'ಕ್ಕೆ 'ಸಂತೋಷ' ವಿಘ್ನ

• ಎಸ್.ರವಿಪ್ರಕಾಶ್

ಸುದ್ದಿ ವಿಶ್ಲೇಷಣೆ

ಬೆಂಗಳೂರು: ವಿಧಾನಪರಿಷತ್‌ನ ಏಳು ಸ್ಥಾನಗಳ ಚುನಾವಣೆಗೆ ಅಭ್ಯರ್ಥಿಗಳ ಆಯ್ಕೆಯಲ್ಲಿ ಎರಡೂ ರಾಷ್ಟ್ರೀಯ ಪಕ್ಷಗಳ ಹೈಕಮಾಂಡ್‌ಗಳು ಪ್ರಾಬಲ್ಯ ಮೆರೆದಿವೆ.

ಸ್ಥಳೀಯ ನಾಯಕರ ಶಿಫಾರಸುಗಳಿಗೆ ಮಣೆ ಹಾಕದೇ ತಮ್ಮ ವಿವೇಚನೆಗೆ ಅನುಗುಣವಾಗಿ ಅಭ್ಯರ್ಥಿಗಳನ್ನು ಆಯ್ಕೆ ಮಾಡಿರುವುದು ಈ ಬಾರಿಯ ವಿಶೇಷ.

ರಾಜ್ಯದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದ ನಂತರ ಬಿ.ಎಸ್.ಯಡಿಯೂರಪ್ಪ ಅವರ 'ಪ್ರಭಾವ' ಮತ್ತು 'ಹಿಡಿತ'ವನ್ನು ತಗ್ಗಿಸುವ ಪ್ರಯತ್ನ ನಡೆಸುತ್ತಲೇ ಬಂದಿರುವ ಪಕ್ಷದ ರಾಷ್ಟ್ರೀಯ ಸಂಘಟನಾ ಪ್ರಧಾನ ಕಾರ್ಯದರ್ಶಿ ಬಿ.ಎಲ್.ಸಂತೋಷ್, ಈ ಹಿಂದೆ ರಾಜ್ಯಸಭೆ ಚುನಾವಣೆ ವೇಳೆಯೂ ಯಡಿಯೂರಪ್ಪ ಅವರ ಆಯ್ಕೆಗಳನ್ನು ತಿರಸ್ಕರಿಸಿದ್ದರು. ಈ ಬಾರಿಯೂ ಅಭ್ಯರ್ಥಿಗಳ ಆಯ್ಕೆಯಲ್ಲಿ ಸಂತೋಷ್ ಅವರೇ ಮೇಲುಗೈ ಸಾಧಿಸಿದ್ದಾರೆ.

ಬಿ.ಎಸ್ .ಯಡಿಯೂರಪ್ಪ ಅವರು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮೇಲೆ ಒತ್ತಡ ಹಾಕಿ ಅಭ್ಯರ್ಥಿಗಳ ಸಂಭಾವ್ಯ ಪಟ್ಟಿಯಲ್ಲಿ ತಮ್ಮ ಪುತ್ರ ಬಿ.ವೈ.ವಿಜಯೇಂದ್ರ ಅವರ ಹೆಸರು ಸೇರಿಸುವಲ್ಲಿ ಯಶಸ್ವಿಯಾಗಿದ್ದರೂ, ವರಿಷ್ಠರು ನಿರ್ದಾಕ್ಷಿಣ್ಯವಾಗಿ ಅವರ ಹೆಸರು ಕೈಬಿಟ್ಟಿದ್ದಾರೆ.

ಅದೇ ರೀತಿ ಕಾಂಗ್ರೆಸ್‌ನಲ್ಲಿ ಹೈಕಮಾಂಡ್ ಸಿದ್ದರಾಮಯ್ಯ ಮತ್ತು ಡಿ.ಕೆ.ಶಿವಕುಮಾರ್ ಅವರು ಶಿಫಾರಸು ಮಾಡಿದ್ದ ಹೆಸರುಗಳನ್ನು ಗಣನೆಗೆ ತೆಗೆದುಕೊಳ್ಳದೇ ಅಳೆದೂ ತೂಗಿ ಕೆ.ಅಬ್ದುಲ್ ಜಬ್ಬಾರ್ ಮತ್ತು ನಾಗರಾಜು ಯಾದವ್ ಅವರನ್ನು ಆಯ್ಕೆ ಮಾಡಿದೆ.

ಜೆಡಿಎಸ್‌ನಲ್ಲಿ ಟಿ.ಎ.ಶರವಣ ಅವರ ಹೆಸರನ್ನು ಖುದ್ದು ಎಚ್.ಡಿ. ದೇವೇಗೌಡ ಅವರೇ ಶಿಫಾರಸು ಮಾಡಿದ್ದಾರೆ.

ವಿಜಯೇಂದ್ರ ವೇಗಕ್ಕೆ ಕಡಿವಾಣ: ವಿಧಾನಪರಿಷತ್‌ಗೆ ಆಯ್ಕೆ ಆಗಿ ಸಚಿವರಾಗಬೇಕು ಎಂಬ ಕನಸು ಕಾಣುತ್ತಿದ್ದ ಬಿ.ವೈ.ವಿಜಯೇಂದ್ರ ಅವರ ವೇಗಕ್ಕೆ ಬಿಜೆಪಿ ವರಿಷ್ಠರು ಕಡಿವಾಣ ಹಾಕಿದ್ದಾರೆ. ಯಾವುದೇ ಕಾರಣಕ್ಕೂ ಕುಟುಂಬ ರಾಜಕಾರಣವನ್ನು ಪ್ರೋತ್ಸಾಹಿಸುವುದಿಲ್ಲ ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಹೇಳಿದ್ದು, ವಿಜಯೇಂದ್ರ ಅವರಿಗೆ ಟಿಕೆಟ್ ನಿರಾಕರಿಸಲು ಇದೇ ಮುಖ್ಯ ಕಾರಣ ಎಂದು ಬಿಜೆಪಿಯ ಕೆಲವು ನಾಯಕರು ಪ್ರತಿಪಾದಿಸಿದ್ದಾರೆ. ವಿಧಾನ ಸಭಾ ಚುನಾವಣೆಯಲ್ಲಿ ಸ್ಪರ್ಧಿಸಿ ಗೆಲ್ಲುವ ಸಾಮರ್ಥ್ಯ ಇರುವವರಿಗೆ ವಿಧಾನಪರಿಷತ್‌ಗೆ ಕಳುಹಿಸುವ ಅಗತ್ಯವಿಲ್ಲ ಎಂಬುದಾಗಿ ವರಿಷ್ಠರು ನಿಲುವು ತಳೆದಿದ್ದಾರೆ ಎಂದೂ ಬಿಜೆಪಿ ಮೂಲಗಳು ಹೇಳಿವೆ.

6ನೇ ಪುಟ ನೋಡಿ

ನಾಮಪತ್ರ ಸಲ್ಲಿಕೆಗೆ ಬೆಂಗಾವಲು ವಾಹನ!

ಬಿಜೆಪಿ ಅಭ್ಯರ್ಥಿ ಹೇಮಲತಾ ನಾಯಕ್ ಅವರು ನಾಮಪತ್ರ ಸಲ್ಲಿಸಲು ಸಮಯಾವಕಾಶ ಮೀರಲಿದೆ ಎಂಬ ಕಾರಣಕ್ಕೆ ವಿಧಾನಸೌಧದವರೆಗೆ ಪೊಲೀಸ್ ಬೆಂಗಾವಲು ನೀಡಲಾಯಿತು.

ಕೊನೆ ಕ್ಷಣದಲ್ಲಿ ಟಿಕೆಟ್ ಸಿಕ್ಕಿದ್ದರಿಂದ ನಾಮಪತ್ರ ಸಲ್ಲಿಸಲು ತಡವಾಗುತ್ತದೆ ಎಂಬ ಕಾರಣಕ್ಕೆ ಕೊಪ್ಪಳದಿಂದ ಅವರು ಹೆಲಿಕಾಪ್ಟರ್‌ನಲ್ಲಿ ಬೆಂಗಳೂರಿನ ಜಕ್ಕೂರು ಏರೋಡ್ರಂಗೆ ಬಂದರು. ಪಕ್ಷದ ವತಿಯಿಂದಲೇ ಹೆಲಿಕಾಪ್ಟರ್ ವ್ಯವಸ್ಥೆ ಮಾಡಲಾಗಿತ್ತು ಎಂದು ಮೂಲಗಳು ತಿಳಿಸಿವೆ.

ಈ ಬಗ್ಗೆ ಪ್ರತಿಕ್ರಿಯಿಸಿದ ಹೇಮಲತಾ, 'ನನ್ನ ಪಕ್ಷ ನಿಷ್ಠೆ ಮತ್ತು ವಾಲ್ಮೀಕಿ ಸಮುದಾಯದ ಮಹಿಳೆಯನ್ನು ಪರಿಗಣಿಸಿ ಪಕ್ಷ ಈ ಅವಕಾಶ ನೀಡಿದೆ. ನಾನು ಪಕ್ಷದ ಕಾರ್ಯದರ್ಶಿಯಾಗಿ ಕೆಲಸ ಮಾಡಿದ್ದೇನೆ. ಬೆಳಿಗ್ಗೆ ಈ ವಿಷಯ ಗೊತ್ತಾಯಿತು. ನಾಮಪತ್ರ ಸಲ್ಲಿಕೆಗೆ ತಡವಾಗಬಹುದು ಎಂಬ ಕಾರಣಕ್ಕೆ ಪಕ್ಷದಿಂದ ಬೆಂಗಾವಲು ವಾಹನ ಸೌಲಭ್ಯ ಒದಗಿಸಲಾಗಿತ್ತು' ಎಂದರು.

ಜಿ.ಪಂ, ತಾ.ಪಂ: ಮೀಸಲು ನಿಗದಿಗೆ 12 ವಾರ ಗಡುವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಿಲ್ಲಾ ಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯಿತಿ ಕ್ಷೇತ್ರ ಪುನರ್‌ವಿಂಗಡಣೆ ಮತ್ತು ಮೀಸಲಾತಿ ನಿಗದಿಗೆ ಹೈಕೋರ್ಟ್ 12 ವಾರಗಳ ಗಡುವು ವಿಧಿಸಿದ್ದು ಹೆಚ್ಚಿನ ಕಾಲಾವಕಾಶ ಕೇಳದಂತೆ ರಾಜ್ಯ ಸರ್ಕಾರಕ್ಕೆ ಕಟ್ಟುನಿಟ್ಟಿನ ತಾಕೀತು ಮಾಡಿದೆ.

ಈ ಸಂಬಂಧ ರಾಜ್ಯ ಚುನಾವಣಾ ಆಯೋಗ ಸಲ್ಲಿಸಿರುವ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಋತುರಾಜ್ ಅವಸ್ಥಿ ನೇತೃತ್ವದ ವಿಭಾಗೀಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು. ವಿಚಾರಣೆ ವೇಳೆ ರಾಜ್ಯ ಸರ್ಕಾರದ ಪರ ಅಡ್ವೊಕೇಟ್ ಜನರಲ್ ಪ್ರಭುಲಿಂಗ ಕೆ. ನಾವದಗಿ, 'ಮೀಸಲಾತಿ ನಿಗದಿಗೆ ನಿವೃತ್ತ ನ್ಯಾಯಮೂರ್ತಿ ನೇತೃತ್ವದಲ್ಲಿ ಆಯೋಗ ರಚಿಸಲಾಗಿದೆ' ಎಂದು ನ್ಯಾಯಪೀಠಕ್ಕೆ ಜ್ಞಾಪನಾ ಪತ್ರ (ಮೆಮೊ) ಸಲ್ಲಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ಆಯೋಗದ ಪರ ಹಿರಿಯ ವಕೀಲ ಕೆ.ಎನ್. ಫಣೀಂದ್ರ, 'ಕ್ಷೇತ್ರ ಮತ್ತು ಮೀಸಲು ನಿಗದಿಗೆ 8ರಿಂದ 12 ವಾರಗಳ ಕಾಲ ಸಾಕು. ರಾಜ್ಯ ಸರ್ಕಾರ ಮತ್ತೆ ಮತ್ತೆ ಹೆಚ್ಚಿನ ಸಮಯ ಕೇಳುವಂತಾಗಬಾರದು' ಎಂದರು.

8ನೇ ಪುಟ ನೋಡಿ

ಪಠ್ಯದಿಂದ 'ಎದೆಗೆ ಬಿದ್ದ ಅಕ್ಷರ' ಕೈಬಿಡಿ: ದೇವನೂರ

ಪ್ರಜಾವಾಣಿ ವಾರ್ತೆ

ಮೈಸೂರು: ಪಠ್ಯಪುಸ್ತಕ ಪರಿಷ್ಕರಣೆಗೆ ವಿರೋಧ ವ್ಯಕ್ತಪಡಿಸಿರುವ ಲೇಖಕ ದೇವನೂರ ಮಹಾದೇವ ತಮ್ಮ ಪಾಠ ಸೇರ್ಪಡೆಗೆ ಅನುಮತಿ ನಿರಾಕರಿಸಿದ್ದಾರೆ. ತಮ್ಮ ಪಾಠ 'ಸೇರಿದ್ದರೆ' ಕೂಡಲೇ ಕೈಬಿಡಬೇಕು ಎಂದು ಒತ್ತಾಯಿಸಿದ್ದಾರೆ.

'ಈ ಹಿಂದಿನ ಪಠ್ಯದಲ್ಲಿದ್ದ ಎಲ್.ಬಸವರಾಜು, ಎ.ಎನ್. ಮೂರ್ತಿ ರಾವ್, ಪಿ.ಲಂಕೇಶ್, ಸಾರಾ ಅಬೂಬಕ್ಕರ್ ಮೊದಲಾದವರ ಕತೆ, ಲೇಖನಗಳನ್ನು ಕೈಬಿಟ್ಟವರಿಗೆ ಕನ್ನಡ ನಾಡು, ನುಡಿ, ಸಂಸ್ಕೃತಿ ಕುರಿತು ಏನೇನೂ ತಿಳಿದಿಲ್ಲ ಎಂದೇ ಅರ್ಥ' ಎಂದು ಖಂಡಿಸಿದ್ದಾರೆ.

6ನೇ ಪುಟ ನೋಡಿ

ನನ್ನ ಸಮ್ಮತಿಯಿಲ್ಲ: ಜಿ. ರಾಮಕೃಷ್ಣ



ಬೆಂಗಳೂರು: 'ಶಿಕ್ಷಣವನ್ನು ಕೆಟ್ಟ ರಾಜಕೀಯಕ್ಕೆ ಗುರಿ ಮಾಡಲಾಗುತ್ತಿರುವುದು ಸರ್ವಥಾ ಕ್ಷಮಾರ್ಹವಲ್ಲ. ನನ್ನ ಬರಹವನ್ನು ಪಠ್ಯಪುಸ್ತಕದ ಪರಿಧಿಯಿಂದ ಹೊರಗಿಡುವುದು ಸೂಕ್ತವೆಂದು ಭಾವಿಸಿದ್ದೇನೆ. ನನ್ನ ಯಾವುದಾದರೂ ಬರಹವನ್ನು ಆಯ್ಕೆ ಮಾಡಿಕೊಂಡಿದ್ದರೆ ಅದಕ್ಕೆ ನನ್ನ ಸಮ್ಮತಿ ಇರುವುದಿಲ್ಲ' ಎಂದು ಸಾಹಿತಿ ಜಿ. ರಾಮಕೃಷ್ಣ ತಿಳಿಸಿದ್ದಾರೆ.

'ಪಠ್ಯಪುಸ್ತಕಗಳ ಪರಿಷ್ಕರಣೆಯು ತೀರಾ ಅಪಮಾರ್ಗದಲ್ಲಿ ಸಾಗುತ್ತಿರುವುದು ಜಗಜ್ಜಾಹೀರಾಗಿದೆ. ಮಕ್ಕಳಿಗೆ ವಿಷ ಉಣಿಸುವುದು ಬೌದ್ಧಿಕ ಕ್ಷೇತ್ರದ ದುರಂತ' ಎಂದು ಅವರು ಹೇಳಿದ್ದಾರೆ.



ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ನೈಋತ್ಯ ರೈಲ್ವೆ

ಟೆಂಡರ್ ಸೂಚನೆ ಸಂ. BLGA_YARD_MODIFICATION ದಿನಾಂಕ: 20.05.2022

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕಾಮಗಾರಿಯ ಹೆಸರು	ಅಂದಾಜು ಮೌಲ್ಯ
ಮೈಸೂರು ವಿಭಾಗದ ಮೈಸೂರು–ಅರಸಿಕೆರೆ ವಿಭಾಗದ ಬೆಳಗುಳ ನಿಲ್ದಾಣದಲ್ಲಿ ಯಾರ್ಡ್‌ನ ಮಾರ್ಪಾಡಿಗೆ ಸಂಬಂಧಿಸಿದಂತೆ ಹೊರಾಂಗಣ ಸಿಗ್ನಲಿಂಗ್ ವ್ಯವಸ್ಥೆಗಳು ಮತ್ತು ಟೆಲಿಕಾಂ ವ್ಯವಸ್ಥೆಗಳೊಂದಿಗೆ ಎಲೆಕ್ಟ್ರಾನಿಕ್ ಇಂಟರ್‌ಲಾಕಿಂಗ್ ಅನ್ನು ಒದಗಿಸುವುದು.	ರೂ. 4,10,17,356.50

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 14–06–2022, 11:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ಉಪ ಮುಖ್ಯ ಸಿಗ್ನಲ್ ಮತ್ತು ಟೆಲಿಕಾಂ ಇಂಜಿನೀಯರ್ ನಿರ್ಮಾಣ / ಬೆಂಗಳೂರು ಕಂಟೋನ್ಮೆಂಟ್

PUB/106/AAV/PRB/SWR/2022-23

S.W.Railways SWRRLY SWRRLY

ಸರ್ಕಾರದ ಸ್ಥಿರತೆ: ಮಿತ್ತಲ್–ಸಿಎಂ ಬೊಮ್ಮಾಯಿ ಚರ್ಚೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕದಲ್ಲಿ ಬಿಜೆಪಿ ಹೇಗೆ ಅಧಿಕಾರಕ್ಕೆ ಬಂದಿತು ಎಂಬ ಸಂದರ್ಭವನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ವಿಶ್ವ ಆರ್ಥಿಕ ಸಮಾವೇಶದಲ್ಲಿ ಉಕ್ಕು ತಯಾರಿಕಾ ಕಂಪನಿ ಅರ್ಸೆಲರ್ ಮಿತ್ತಲ್‌ನ ಅಧ್ಯಕ್ಷ ಲಕ್ಷ್ಮಿ ಮಿತ್ತಲ್ ಅವರೊಂದಿಗೆ ಔಪಚಾರಿಕವಾಗಿ ಹಂಚಿಕೊಂಡಿದ್ದಾರೆ.

ಕರ್ನಾಟಕ ಪೆವಿಲಿಯನ್‌ನಲ್ಲಿ ಸೋಮವಾರ ಮಿತ್ತಲ್ ಮತ್ತು ಬೊಮ್ಮಾಯಿ ಅವರು ಮಾತನಾಡಿರುವ ಕೆಲ ಕ್ಷಣಗಳ ವಿಡಿಯೊ ತುಣುಕೊಂದನ್ನು ಮುಖ್ಯಮಂತ್ರಿಗಳ ಕಚೇರಿ ಬಿಡುಗಡೆ ಮಾಡಿದೆ.

ಲಕ್ಷ್ಮಿ ಮಿತ್ತಲ್

ಈ ವಿಡಿಯೊದಲ್ಲಿ ಮಿತ್ತಲ್, 'ವಿಧಾನಸಭೆಯ 224ರಲ್ಲಿ ನಿಮ್ಮ ಸಂಖ್ಯೆ ಎಷ್ಟಿದೆ' ಎಂದು ಕೇಳುತ್ತಾರೆ. ಅದಕ್ಕೆ ಸ್ವಲ್ಪ ತಡೆದು ಉತ್ತರಿಸುವ ಬೊಮ್ಮಾಯಿ, 'ಮೊದಲಿಗೆ ನಾವು 104 ಇದ್ದೆವು. ಪ್ರತಿಪಕ್ಷದ 17 ಶಾಸಕರು ರಾಜೀನಾಮೆ ಕೊಟ್ಟು ನಮ್ಮ ಪಕ್ಷ ಸೇರಿದರು. ಅದರಲ್ಲಿ 15 ಜನ ಪುನಃ ಆಯ್ಕೆಯಾಗಿ ಬಂದರು. ಈಗ 119 ಸಂಖ್ಯೆ ಇದೆ. ನಾವು ಸ್ಥಿರವಾಗಿದ್ದೇವೆ. ಇಬ್ಬರು ಮೂವರು ಬಿಟ್ಟು ಹೋದರೂ, ಸರ್ಕಾರ ಸ್ಥಿರತೆಗೆ ತೊಂದರೆ ಇಲ್ಲ' ಎಂದು ವಿವರಿಸಿದ್ದಾರೆ.

ಇದೇ ವೇಳೆ ಕೈಗಾರಿಕಾ ಸಚಿವ ಮುರುಗೇಶ್ ನಿರಾಣಿ, 'ಮಿತ್ತಲ್ ಅವರ ಜೊತೆಗಿನ ಭೇಟಿ ಅಪೂರ್ವವಾದುದು' ಎಂದು ಬಣ್ಣಿಸಿದ್ದಾರೆ.

2019 ರಲ್ಲಿ ಕಾಂಗ್ರೆಸ್-ಜೆಡಿಎಸ್ ಸಮ್ಮಿಶ್ರ ಸರ್ಕಾರದ 17 ಶಾಸಕರು ತಂತಮ್ಮ ಪಕ್ಷಗಳನ್ನು ತೊರೆದು ಬಿಜೆಪಿ ಸರ್ಕಾರ ರಚಿಸಲು ನೆರವಾಗಿದ್ದನ್ನು ಇಲ್ಲಿ ಸ್ಮರಿಸಬಹುದು.

ಕೋವಿಡ್ ಸಾಂಕ್ರಾಮಿಕ ಕ್ಷೀಣಿಸಿದ ಬಳಿಕ ಪ್ರಯಾಣಿಕರ ಸಂಖ್ಯೆಯಲ್ಲಿ ಕ್ರಮೇಣ ಏರಿಕೆ

'ನಮ್ಮ ಮೆಟ್ರೊ' ವರಮಾನ ಹೆಚ್ಚಳ

• ಜಿ.ಶಿವಕುಮಾರ

ಬೆಂಗಳೂರು: ಕೋವಿಡ್‌ನಿಂದಾಗಿ ಪ್ರಯಾಣಿಕರ ಸಂಖ್ಯೆ ಕ್ಷೀಣಿಸಿದ್ದರಿಂದ ಆರ್ಥಿಕ ಸಂಕಷ್ಟ ಎದುರಿಸಿದ್ದ 'ನಮ್ಮ ಮೆಟ್ರೊ' ಈಗ ನಿಧಾನವಾಗಿ ಚೇತರಿಸಿಕೊಳ್ಳುತ್ತಿದೆ.

ಪ್ರಯಾಣಿಕರ ಸಂಖ್ಯೆ ದಿನೇ ದಿನೇ ಏರುತ್ತಿರುವುದರಿಂದ ಬೆಂಗಳೂರು ಮೆಟ್ರೊ ರೈಲು ನಿಗಮ ನಿಯಮಿತದ (ಬಿಎಂಆರ್‌ಸಿಎಲ್) ವರಮಾನವೂ ಹೆಚ್ಚಳವಾಗುತ್ತಿದೆ.

ಕೋವಿಡ್ ಪೂರ್ವದಲ್ಲಿ ಮೆಟ್ರೊ ಪ್ರಯಾಣಿಕರ ಸಂಖ್ಯೆ ಅಧಿಕವಾಗಿತ್ತು. 2020ರ ಜನವರಿ ಹಾಗೂ ಫೆಬ್ರುವರಿಯಲ್ಲಿ ಕ್ರಮವಾಗಿ 1.29 ಕೋಟಿ ಹಾಗೂ 1.18 ಕೋಟಿ ಮಂದಿ ನೇರಳೆ ಹಾಗೂ ಹಸಿರು ಮಾರ್ಗಗಳಲ್ಲಿ ಸಂಚರಿಸಿದ್ದರು. ಮಾರ್ಚ್‌ನಲ್ಲಿ ಈ ಸಂಖ್ಯೆ 66.52 ಲಕ್ಷಕ್ಕೆ ಇಳಿದಿತ್ತು. ಆದರೆ, ಡಿಸೆಂಬರ್ ವೇಳೆಗೆ 28.87 ಲಕ್ಷಕ್ಕೆ ಕುಸಿದಿತ್ತು. ನಿಲ್ದಾಣಗಳಲ್ಲಿನ ವಾಹನ ನಿಲುಗಡೆಯಿಂದ ಬರುತ್ತಿದ್ದ ಆದಾಯವೂ ಕಡಿಮೆಯಾಗಿದ್ದರಿಂದ ಬಿಎಂಆರ್‌ಸಿಎಲ್‌ಗೆ ಗಾಯದ ಮೇಲೆ ಬರೆ ಎಳೆದಂತಾಗಿತ್ತು.

ಈ ವರ್ಷದ ಜನವರಿ ಹಾಗೂ ಫೆಬ್ರುವರಿಯಲ್ಲಿ 85 ಲಕ್ಷಕ್ಕಿಂತ ಕಡಿಮೆ ಇದ್ದ ಪ್ರಯಾಣಿಕರ ಸಂಖ್ಯೆ, ಮಾರ್ಚ್‌ನಲ್ಲಿ ಗಣನೀಯ ಏರಿಕೆ ಕಂಡಿತ್ತು. 31 ದಿನಗಳಲ್ಲಿ ಒಟ್ಟು 1.09 ಕೋಟಿ ಮಂದಿ ಮೆಟ್ರೊ ಪ್ರಯಾಣ ಮಾಡಿದ್ದರು. ಹೀಗಾಗಿ ಬಿಎಂಆರ್‌ಸಿಎಲ್ ಒಟ್ಟು ₹98.36 ಲಕ್ಷ ವರಮಾನ ಗಳಿಸಿತ್ತು.

'ಈ ವರ್ಷ ಆರಂಭದ ಎರಡು ತಿಂಗಳಲ್ಲಿ ಸರಾಸರಿ 2.7 ಲಕ್ಷ ಮಂದಿ ಮೆಟ್ರೊದಲ್ಲಿ ಸಂಚರಿಸಿದ್ದರು. ಹೀಗಾಗಿ ವರಮಾನ ಕ್ಷೀಣಿಸಿತ್ತು. ಆದರೆ ಮಾರ್ಚ್ ತಿಂಗಳ ನಂತರ ಪರಿಸ್ಥಿತಿ ಸುಧಾರಿಸಿದೆ. ಹಿಂದಿನ ಮೂರು ದಿನಗಳಲ್ಲಿ ನಿತ್ಯ ಸರಾಸರಿ 4.4 ಲಕ್ಷ ಮಂದಿ ಪ್ರಯಾಣ ಮಾಡಿದ್ದಾರೆ. ಹೀಗಾಗಿ ವರಮಾನವೂ ಏರಿದೆ' ಎಂದು ಬಿಎಂಆರ್‌ಸಿಎಲ್ ವ್ಯವಸ್ಥಾಪಕ ನಿರ್ದೇಶಕ ಅಂಜುಮ್ ಪರ್ವೇಜ್ ಅವರು 'ಪ್ರಜಾವಾಣಿ'ಗೆ ತಿಳಿಸಿದರು.

'ಈಗ ಕೋವಿಡ್ ಕಡಿಮೆಯಾಗಿ ಜನಜೀವನ ಸಹಜ ಸ್ಥಿತಿಗೆ ಮರಳಿದೆ. ಮನೆಯಿಂದಲೇ ಕೆಲಸ ಮಾಡುತ್ತಿದ್ದ ಐಟಿ ಕಂಪನಿಗಳ ಬಹುಪಾಲು ನೌಕರರು ಕಚೇರಿಗಳಿಗೆ ಮರಳಿದ್ದಾರೆ. ಮುಂದಿನ ವಾರದಿಂದ ಮತ್ತಷ್ಟು ಮಂದಿ ಕಚೇರಿಯಿಂದಲೇ ಕಾರ್ಯನಿರ್ವಹಿಸುವ ನಿರೀಕ್ಷೆ ಇದೆ. ಮಳೆಗಾಲ ಮುಗಿದ ಮೇಲೆ ನಗರದಲ್ಲಿ ಮತ್ತಷ್ಟು ಚಟುವಟಿಕೆಗಳು ಗರಿಗೆದರಲಿದ್ದು ಮೆಟ್ರೊ ಪ್ರಯಾಣಿಕರ ಸಂಖ್ಯೆ ದ್ವಿಗುಣಗೊಳ್ಳಲಿದೆ' ಎಂದು ಭರವಸೆ ವ್ಯಕ್ತಪಡಿಸಿದರು.

'ಜಾಹೀರಾತು ಮೂಲಕ ಆದಾಯ ಸಂಗ್ರಹಿಸುವ ಉದ್ದೇಶದಿಂದ ಟೆಂಡರ್ ಕರೆಯಲಾಗಿತ್ತು. ಕೋವಿಡ್‌ನಿಂದಾಗಿ ಯಾವ ಕಂಪನಿಯೂ ಆಸಕ್ತಿ ತೋರಿರಲಿಲ್ಲ. ಈಗ ಮರು ಟೆಂಡರ್ ಆಹ್ವಾನಿಸಲು ನಿರ್ಧರಿಸಿದ್ದೇವೆ. ಪ್ರಯಾಣಿಕರ ಸಂಖ್ಯೆಗೆ ಅನುಗುಣವಾಗಿ ರೈಲುಗಳ ಸೇವೆ ವಿಸ್ತರಿಸುವ ಹಾಗೂ ರೈಲು ಗಾಡಿಗಳ ಸಂಚಾರ ಹೆಚ್ಚಿಸುವ ಆಲೋಚನೆಯೂ ಇದೆ' ಎಂದು ಹೇಳಿದರು.

ನಾಲ್ಕು ತಿಂಗಳ ವರಮಾನದ ವಿವರ

ತಿಂಗಳು	ಪ್ರಯಾಣಿಕರ ಸಂಖ್ಯೆ	ಒಟ್ಟು ಮೊತ್ತ (₹ ಕೋಟಿಗಳಲ್ಲಿ)
ಡಿಸೆಂಬರ್	96,50,368	23.12
ಜನವರಿ	66,81,156	16.29
ಫೆಬ್ರುವರಿ	83,29,732	19.99
ಮಾರ್ಚ್	1,08,08,940	25.67

ಪ್ರಯಾಣಿಕರ ಸೆಳೆಯಲು 5 ದಿನದ ಪಾಸ್

'ಪ್ರಯಾಣಿಕರನ್ನು ಸೆಳೆಯುವ ಉದ್ದೇಶದಿಂದ ರಿಯಾಯಿತಿ ದರದಲ್ಲಿ 5 ದಿನದ ಪಾಸ್ ವಿತರಿಸಲಾಗುತ್ತಿದೆ. ಎಲ್ಲಾ ನಿಲ್ದಾಣಗಳಲ್ಲೂ ಕಾರ್ಡ್ ಲಭ್ಯವಿರಲಿದ್ದು, ಆಸಕ್ತರು ₹550 ಮೊತ್ತ ಪಾವತಿಸಿ ಇದನ್ನು ಪಡೆಯಬಹುದು' ಎಂದು ಅಂಜುಮ್ ಪರ್ವೇಜ್ ಹೇಳಿದರು. 'ಪಾಸ್ ಖರೀದಿಸಿದ ದಿನದಿಂದ 5 ದಿನಗಳವರೆಗೆ ಪ್ರಯಾಣಿಕರು ಎಲ್ಲಿಂದ ಎಲ್ಲಿಗೆ ಬೇಕಾದರೂ ಅನಿಯಮಿತವಾಗಿ ಸಂಚಾರ ಮಾಡಬಹುದು. ಮಾತ್ರವಲ್ಲ [illegible] ಸ್ಮಾರ್ಟ್ ಕಾರ್ಡ್ ಅನ್ನು ಹಿಂತಿರುಗಿಸಿ ₹50 ಠೇವಣಿ ಶುಲ್ಕ ಹಿಂಪಡೆಯಬಹುದು' ಎಂದು ತಿಳಿಸಿದರು.

ಪ್ರಜಾವಾಣಿ ವಿಶೇಷ

ಅಂಕಿ-ಅಂಶಗಳು

30,20,463 ಈ ವರ್ಷದ ಮಾರ್ಚ್‌ನಲ್ಲಿ ಪ್ರಯಾಣಿಕರಿಗೆ ವಿತರಿಸಲಾದ ಟೋಕನ್

76,540 ಫೆಬ್ರುವರಿ ಮತ್ತು ಮಾರ್ಚ್‌ನಲ್ಲಿ ವಿತರಣೆಯಾದ ಸ್ಮಾರ್ಟ್ ಕಾರ್ಡ್

₹1.03 ಕೋಟಿ ಈ ವರ್ಷ ಒಂದೇ ದಿನದಲ್ಲಿ (ಜನವರಿ 3) ಸಂಗ್ರಹವಾದ ಗರಿಷ್ಠ ವರಮಾನ

ಬೆಂಗಳೂರು ವಿಶ್ವವಿದ್ಯಾಲಯ

ಜ್ಞಾನಭಾರತಿ, ಬೆಂಗಳೂರು–56., ದೂರವಾಣಿ: 080–22961039

ಸಂಖ್ಯೆ: ಎಸಿಎ–3:ಸಂ.ನ:2022–23 ದಿನಾಂಕ:23–05–2022

–:ಜಾಹೀರಾತು:–

ಬೆಂಗಳೂರು ವಿಶ್ವವಿದ್ಯಾಲಯವು, 2022–23ನೇ ಸಾಲಿಗೆ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ, ಅಂದರೆ, ಕರ್ನಾಟಕ ವಿಶ್ವವಿದ್ಯಾಲಯಗಳ ಅಧಿನಿಯಮ (ತಿದ್ದುಪಡಿ) 2015ರಲ್ಲಿ ನಿಗದಿಪಡಿಸಿರುವಂತೆ ಬೆಂಗಳೂರು ನಗರ ಜಿಲ್ಲೆಯ ವಿಧಾನ ಸಭಾ ಕ್ಷೇತ್ರಗಳಾದ, ವಿಜಯನಗರ, ಪದ್ಮನಾಭನಗರ, ಬೊಮ್ಮನಹಳ್ಳಿ, ಆನೇಕಲ್, ಬೆಂಗಳೂರು ದಕ್ಷಿಣ, ಯಶವಂತಪುರ, ರಾಜರಾಜೇಶ್ವರಿನಗರ, ದಾಸರಹಳ್ಳಿ, ಮಹಾಲಕ್ಷ್ಮೀ ಬಡಾವಣೆ, ಗೋವಿಂದರಾಜನಗರ, ಬೆಂಗಳೂರು ಗ್ರಾಮಾಂತರ ಜಿಲ್ಲೆಯ ವಿಧಾನ ಸಭಾ ಕ್ಷೇತ್ರ ನೆಲಮಂಗಲ, ರಾಮನಗರ ಜಿಲ್ಲೆಯ ಮಾಗಡಿ, ರಾಮನಗರ, ಕನಕಪುರ ಮತ್ತು ಚನ್ನಪಟ್ಟಣ ವಿಧಾನ ಸಭಾ ಕ್ಷೇತ್ರಗಳ ವ್ಯಾಪ್ತಿಯಲ್ಲಿರುವ ಕಾಲೇಜುಗಳಿಂದ ಮತ್ತು ಶಿಕ್ಷಣ ಸಂಸ್ಥೆಗಳಿಂದ ವಿವಿಧ ರೀತಿಯ ಸಂಯೋಜನೆಗೆ, ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000ದ ಪ್ರಕರಣ 59 ಮತ್ತು 62ರ ಅಡಿಯಲ್ಲಿ, ಅರ್ಜಿಗಳನ್ನು ಅಧಿಸೂಚನೆ ಸಂಖ್ಯೆ: ಸಂಖ್ಯೆ: ಎಸಿಎ–3:ಸಂನ:2022–23 ದಿನಾಂಕ: 23–05–2022ರ ಮೂಲಕ ಆಹ್ವಾನಿಸಿದೆ. ಈ ಅಧಿಸೂಚನೆಯು ವಿಶ್ವವಿದ್ಯಾಲಯದ ವೆಬ್‌ಸೈಟ್, www.bangaloreuniversity.ac.in.ನಲ್ಲಿ ಲಭ್ಯವಿರುತ್ತದೆ.

ಈ ಅಧಿಸೂಚನೆಯನ್ನು ಪರಾಮರ್ಶಿಸಿದ ನಂತರವೇ ಕಾಲೇಜುಗಳು/ಸಂಸ್ಥೆಗಳು ಸಂಯೋಜನಾ ಅರ್ಜಿಗಳನ್ನು ಸರ್ಕಾರದ ಆನ್–ಲೈನ್ ವೆಬ್‌ಸೈಟ್ https://www.onlineaffiliation.karnataka.gov.in/Affiliation22_23/Login.aspx' ಮಾತ್ರವೇ ಅರ್ಜಿಯನ್ನು ಸಲ್ಲಿಸತಕ್ಕದ್ದು.

ಅರ್ಜಿಗಳನ್ನು ದಂಡ ಶುಲ್ಕ ರಹಿತವಾಗಿ ದಿನಾಂಕ:10–06–2022 ಮತ್ತು ದಂಡಶುಲ್ಕ ರೂ.1,000/–ಗಳೊಂದಿಗೆ ದಿನಾಂಕ:15–06–2022ರ ಒಳಗಾಗಿ ಸಲ್ಲಿಸಬಹುದಾಗಿದೆ.

ಹೆಚ್ಚಿನ ಮಾಹಿತಿಯನ್ನು ವಿದ್ಯಾಕಾರ್ಯಶಾಖೆ–3, ಬೆಂಗಳೂರು ವಿಶ್ವವಿದ್ಯಾಲಯ, ಜ್ಞಾನಭಾರತಿ, ಬೆಂಗಳೂರು–56 (ದೂರವಾಣಿ:080–22961039) ಇಲ್ಲಿ ಪಡೆಯಬಹುದಾಗಿದೆ.

ಕುಲಸಚಿವರು

ಜೋಯಾಲುಕ್ಕಾಸ್‌ನಲ್ಲಿ ಫ್ಯಾಕ್ಟರಿ ಪ್ರೈಸ್ ಸೇಲ್

ಬೆಂಗಳೂರು: ಚಿನ್ನಾಭರಣ ಮಾರಾಟ ಕಂಪನಿ ಜೋಯಾಲುಕ್ಕಾಸ್ ತನ್ನ ಎಂ.ಜಿ. ರಸ್ತೆ ಹಾಗೂ ಜಯನಗರ ಮಳಿಗೆಗಳಲ್ಲಿ ಜೂನ್ 5ರವರೆಗೆ 'ಫ್ಯಾಕ್ಟರಿ ಪ್ರೈಸ್ ಸೇಲ್' ನಡೆಯಲಿದೆ ಎಂದು ತಿಳಿಸಿದೆ.

ಈ ಅವಧಿಯಲ್ಲಿ ಗ್ರಾಹಕರು ಚಿನ್ನದ ಬೆಲೆಗೆ ಚಿನ್ನದ ಆಭರಣಗಳನ್ನು ಖರೀದಿಸಬಹುದು. ಆಯ್ದ ವಿನ್ಯಾಸದ ಆಭರಣಗಳನ್ನು ಯಾವುದೇ ಮೇಕಿಂಗ್ ಚಾರ್ಜ್ ಇಲ್ಲದೆ ಕೊಳ್ಳಬಹುದು ಎಂದು ಕಂಪನಿ ತಿಳಿಸಿದೆ. ಈ ಕೊಡುಗೆಯ ಜೊತೆಗೆ, ಖರೀದಿ ಮಾಡಿದ ಎಲ್ಲ ಆಭರಣಗಳ ಮೇಲೆ ಒಂದು ವರ್ಷದ ಉಚಿತ ವಿಮೆ ಮತ್ತು ಜೀವಿತಾವಧಿ ಉಚಿತ ನಿರ್ವಹಣೆಯ ಕೊಡುಗೆಗಳೂ ಇರಲಿವೆ. ಹಾಗೆಯೇ, ಬೈಬ್ಯಾಕ್ ಗ್ಯಾರಂಟಿ ಸೌಲಭ್ಯವೂ ಇದೆ ಎಂದು ಹೇಳಿದೆ.

ಹಿಂದುಳಿದ ವರ್ಗ: ನಿವೃತ್ತ ನ್ಯಾ. ಎಚ್.ಎನ್. ನಾಗಮೋಹನ್ ದಾಸ್ ಸಲಹೆ

'ಮೀಸಲಾತಿ: ಜನಾಂದೋಲನ ಅಗತ್ಯ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಹಿಂದುಳಿದ ವರ್ಗಗಳಿಗೆ (ಒಬಿಸಿ) ರಾಜಕೀಯ ಮೀಸಲಾತಿ ಕಲ್ಪಿಸದೆ ಬಲಾಢ್ಯ ಸಮುದಾಯದೊಂದಿಗೆ ಸೇರಿಸಿ, ಸ್ಥಳೀಯ ಸಂಸ್ಥೆಗಳ ಚುನಾವಣೆ ನಡೆಸುವುದು ಸಂವಿಧಾನ ವಿರೋಧಿ ಕ್ರಮ' ಎಂದು ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನ್ ದಾಸ್ ತಿಳಿಸಿದರು.

ಮಾನವ ಬಂಧುತ್ವ ವೇದಿಕೆ ಕರ್ನಾಟಕ ನಗರದಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ ದುಂಡು ಮೇಜಿನ ಸಭೆಯಲ್ಲಿ 'ಒಬಿಸಿ ಮೀಸಲಾತಿ ರದ್ದುಗೊಳಿಸಿರುವ ಸುಪ್ರೀಂ ಕೋರ್ಟ್ ತೀರ್ಪು: ಸವಾಲುಗಳು–ಸಾಧ್ಯತೆಗಳು' ವಿಷಯದ ಬಗ್ಗೆ ಚರ್ಚಿಸಲಾಯಿತು.

'ಮೀಸಲಾತಿಯೇ ಅಪ್ರಸ್ತುತ ಎಂಬ ವಾತಾವರಣ ಸೃಷ್ಟಿಯಾಗಿದೆ. ಒಬಿಸಿ ಸಮುದಾಯಕ್ಕೆ ಮೀಸಲಾತಿ ಒದಗಿಸುವ ಬಗ್ಗೆ ರಾಜ್ಯದಾದ್ಯಂತ ಜನಾಂದೋಲನ ನಡೆಸಬೇಕು. ರಾಜ್ಯದಲ್ಲಿ ಶೇ 52 ರಷ್ಟು ಹಿಂದುಳಿದ ಸಮುದಾಯದವರಿದ್ದು, ಅವರಿಗೆ ಶೇ 32 ರಷ್ಟು ಶೈಕ್ಷಣಿಕ ಮತ್ತು ಔದ್ಯೋಗಿಕ ಮೀಸಲಾತಿ ಕಲ್ಪಿಸಲಾಗಿದೆ. ಸ್ಥಳೀಯ ಸಂಸ್ಥೆಗಳ ಚುನಾವಣೆಯ ಅಖಾಡದಲ್ಲಿಯೂ ಈ ಸಮುದಾಯದವರಿಗೆ ಮೀಸಲಾತಿ ಒದಗಿಸಬೇಕು' ಎಂದು ಎಚ್.ಎನ್. ನಾಗಮೋಹನ್ ದಾಸ್ ಹೇಳಿದರು.

'ಒಬಿಸಿ ಸಮುದಾಯಕ್ಕೆ ಮೀಸಲಾತಿ ಕಲ್ಪಿಸುವ ಬಗ್ಗೆ ಮಧ್ಯಪ್ರದೇಶ ಸರ್ಕಾರ ಜಾಣ ನಡೆ ಅನುಸರಿಸಿದೆ. ಅಲ್ಲಿ ಮೀಸಲಾತಿ ಕಲ್ಪಿಸುವ ಸಂಬಂಧ ಆಯೋಗ ರಚನೆ ಮಾಡಿ, ಸುಪ್ರೀಂ ಕೋರ್ಟ್‌ಗೆ ವರದಿ ಸಲ್ಲಿಸಲಾಗಿತ್ತು. ಅದೇ ಹಾದಿಯನ್ನು ರಾಜ್ಯ ಸರ್ಕಾರ ಅನುಸರಿಸಬೇಕು. ಈಗಾಗಲೇ ರಾಜ್ಯ ಸರ್ಕಾರಕ್ಕೆ ಹಿಂದುಳಿದ ವರ್ಗಗಳ ಶಾಶ್ವತ ಆಯೋಗವು ಹಿಂದುಳಿದ ವರ್ಗಗಳ ಬಗ್ಗೆ ಸಮೀಕ್ಷೆ ನಡೆಸಿ, ವರದಿ ನೀಡಿದೆ. ಈ ಆಧಾರದಲ್ಲಿ ಸರ್ಕಾರವು ರಾಜಕೀಯ ಮೀಸಲಾತಿ ಕಲ್ಪಿಸಿ, ಚುನಾವಣೆ ನಡೆಸಲಿ' ಎಂದು ಆಗ್ರಹಿಸಿದರು.

ಬೆಂಗಳೂರು ವಕೀಲರ ಸಂಘದ ಮಾಜಿ ಅಧ್ಯಕ್ಷ ಎ.ಪಿ. ರಂಗನಾಥ್, 'ವಾರ್ಡ್ ಪುನರ್ ವಿಂಗಡನೆ ಸಂಬಂಧ ಸರ್ಕಾರ ಭಕ್ತ ವತ್ಸಲಂ ಆಯೋಗ ರಚಿಸಿದೆ. ಆದರೆ, ಅದಕ್ಕೆ ಕಾಲಮಿತಿ ನೀಡಿಲ್ಲ. ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆ ನಡೆಸುವುದು ಸರ್ಕಾರಕ್ಕೆ ಬೇಕಾಗಿಲ್ಲ. ಒಬಿಸಿ ಮೀಸಲಾತಿಯ ಬಗ್ಗೆ ಮತ್ತಷ್ಟು ಜನಾಂದೋಲನ ರೂಪಿಸಬೇಕು' ಎಂದರು.

'ಮಂಡ್ಯ, ಮೈಸೂರು, ಚಾಮರಾಜ ನಗರ ಭಾಗಗಳಲ್ಲಿ ಮೀಸಲಾತಿ ಬಗ್ಗೆ ಜಾಗೃತಿ ಮೂಡಿಸಲಾಗಿದೆ. ಸ್ಥಳೀಯ ಜನಪ್ರತಿನಿಧಿಗಳು ಚುನಾವಣೆಯಲ್ಲಿ ರಾಜಕೀಯ ಮೀಸಲಾತಿ ಬಗ್ಗೆ ಕಾಳಜಿ ತೋರದೆ ಹೋದರೆ, ಮುಂದಿನ ದಿನಗಳಲ್ಲಿ ಶಾಸಕರ ಮತ್ತು ಸಂಸದರ ಮನೆ ಮುಂದೆ ಪ್ರತಿಭಟನೆ ನಡೆಸಲಾಗುವುದು' ಎಂದು ಹಿಂದುಳಿದ ವರ್ಗಗಳ ವೇದಿಕೆಯ ಶಿವರಾಮ್ ಎಚ್ಚರಿಕೆ ನೀಡಿದರು.

ದುಂಡು ಮೇಜಿನ ಸಭೆಯಲ್ಲಿ ಕರ್ನಾಟಕ ರಾಜ್ಯ ಅತಿ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ಅಧ್ಯಕ್ಷ ಎಂ.ಸಿ. ವೇಣುಗೋಪಾಲ್ ಅವರು ನ್ಯಾ.ಎಚ್.ಎನ್. ನಾಗಮೋಹನ್ ದಾಸ್ ಅವರನ್ನು ಸ್ವಾಗತಿಸಿದರು. ನಾಗರಾಜು, ಅನಂತ ನಾಯಕ್ ಎನ್, ಎ.ಪಿ. ರಂಗನಾಥ್ ಹಾಗೂ ಕೆ. ಶಿವರಾಮ್ ಇದ್ದಾರೆ —ಪ್ರಜಾವಾಣಿ ಚಿತ್ರ

ನೇಮಕ: ನಿಲುವು ತಿಳಿಸಲು ನಿರ್ದೇಶನ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೇಂದ್ರ ಸರ್ಕಾರಿ ಕೈಗಾರಿಕಾ ನ್ಯಾಯಮಂಡಳಿ ಮತ್ತು ಕಾರ್ಮಿಕ ನ್ಯಾಯಾಲಯದ ಬೆಂಗಳೂರು ಕೇಂದ್ರದಲ್ಲಿ ಖಾಲಿಯಿರುವ ಪೀಠಾಸೀನ ಅಧಿಕಾರಿ ನೇಮಕ ಕುರಿತಂತೆ ಎರಡು ವಾರಗಳ ಒಳಗೆ ನಿರ್ಧಾರ ತಿಳಿಸಿ' ಎಂದು ಕೇಂದ್ರ ಸರ್ಕಾರಕ್ಕೆ ಹೈಕೋರ್ಟ್ ನಿರ್ದೇಶಿಸಿದೆ.

ಈ ಕುರಿತಂತೆ 'ಇಂಡಸ್ಟ್ರಿಯಲ್ ಲಾ ಪ್ರಾಕ್ಟೀಷನರ್ಸ್ ಫೋರಂ' ಕಾರ್ಯದರ್ಶಿ ಕೆ.ಬಿ.ನಾರಾಯಣ ಸ್ವಾಮಿ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಋತುರಾಜ್ ಅವಸ್ಥಿ ಮತ್ತು ಅಶೋಕ್ ಎಸ್.ಕಿಣಗಿ ನೇತೃತ್ವದ ವಿಭಾಗೀಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಕೇಂದ್ರ ಸರ್ಕಾರದ ಪರ ವಕೀಲ ಎ.ವಿ. ನಿಶಾಂತ್ ಅವರು ಮಾತನಾಡಿ, 'ಕೇಂದ್ರ ಸರ್ಕಾರಿ ಕೈಗಾರಿಕಾ ನ್ಯಾಯಮಂಡಳಿ ಮತ್ತು ಕಾರ್ಮಿಕ ನ್ಯಾಯಾಲಯದ ಪೀಠಾಸೀನ ಅಧಿಕಾರಿಗಳ ನೇಮಕಕ್ಕೂ ಮುನ್ನ ಪರಿಶೀಲನೆ ಮತ್ತು ಆಯ್ಕೆ ಸಮಿತಿಯ ಅಧ್ಯಕ್ಷರಾದ ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿಗಳು ಸಭೆ ಸೇರಿ ತೀರ್ಮಾನ ಕೈಗೊಳ್ಳಬೇಕಿರುತ್ತದೆ. ಈ ನಿಟ್ಟಿನಲ್ಲಿ ನೇಮಕಾತಿ ಪ್ರಕ್ರಿಯೆ ಚಾಲ್ತಿಯಲ್ಲಿದೆ' ಎಂದು ನ್ಯಾಯ ಪೀಠಕ್ಕೆ ಹೇಳಿದರು.

ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಪೀಠ, 'ಎರಡು ವಾರಗಳಲ್ಲಿ ಈ ಕುರಿತಂತೆ ನಿಶ್ಚಿತವಾದ ನಿಮ್ಮ ನಿಲುವನ್ನು ತಿಳಿಸಿ' ಎಂದು ನಿರ್ದೇಶಿಸಿ ವಿಚಾರಣೆಯನ್ನು ಎರಡು ವಾರಗಳ ಕಾಲ ಮುಂದೂಡಿದೆ.

ಪ್ರಕರಣವೇನು?: ಈ ಮೊದಲು ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ರತ್ನಕಲಾ ಅವರು, ಕೇಂದ್ರ ಸರ್ಕಾರಿ ಕೈಗಾರಿಕಾ ನ್ಯಾಯಮಂಡಳಿ ಮತ್ತು ಕಾರ್ಮಿಕ ನ್ಯಾಯಾಲಯದ ಬೆಂಗಳೂರು ಕೇಂದ್ರದ ಪೀಠಾಸೀನ ಅಧಿಕಾರಿಯಾಗಿ ಕಾರ್ಯ ನಿರ್ವಹಿಸುತ್ತಿದ್ದರು. 2021ರ ಜನವರಿ 27ರಂದು ಅವರು ಅವಧಿ ಪೂರೈಸಿದ ಕಾರಣ ಅಲ್ಲಿಂದಲೂ ಆ ಹುದ್ದೆ ಖಾಲಿ ಇದೆ.

'ನ್ಯಾಯಮೂರ್ತಿ ರತ್ನಕಲಾ ಅವರು ಅವಧಿ ಪೂರೈಸಿದ ನಂತರ ಚೆನ್ನೈ ಕೇಂದ್ರದ ಪೀಠಾಸೀನ ಅಧಿಕಾರಿಗೆ ಹೆಚ್ಚುವರಿ ಜವಾಬ್ದಾರಿ ಹೊರಿಸಲಾಗಿದೆ. ಆದ್ದರಿಂದ, ಖಾಲಿ ಇರುವ ಹುದ್ದೆಯನ್ನು ಕೂಡಲೇ ಭರ್ತಿ ಮಾಡಲು ಕೇಂದ್ರ ಕಾರ್ಮಿಕ ಮತ್ತು ಉದ್ಯೋಗ ಸಚಿವಾಲಯಕ್ಕೆ ನಿರ್ದೇಶಿಸಬೇಕು' ಎಂದು ಅರ್ಜಿದಾರರು ಕೋರಿದ್ದಾರೆ.

ದಿ ನರ್ಸರಿಮೆನ್ ಕೋ-ಆಪರೇಟಿವ್ ಸೊಸೈಟಿ ಲಿ.,

(A Wing of Horticulture Dept.)

ಲಾಲ್‌ಬಾಗ್, ಬೆಂಗಳೂರು–04. ಫೋನ್: 080–26576733

ಚುನಾವಣಾ ಪ್ರಕಟಣೆ

ಇದರ ಆಡಳಿತ ಮಂಡಳಿ ಚುನಾವಣೆಯು **ದಿನಾಂಕ: 05.06.2022 ರಂದು ಭಾನುವಾರ ಬೆಳಿಗ್ಗೆ 9.00 ಗಂಟೆಯಿಂದ ಸಂಜೆ: 4.00 ಗಂಟೆಯವರೆಗೆ ಸಂಘದ ಕಚೇರಿಯಲ್ಲಿ ನಡೆಯಲಿದೆ.** ನಾಮಪತ್ರ ಸಲ್ಲಿಸಲು ದಿನಾಂಕ: 29.05.2022 ಕೊನೆಯ ದಿನಾಂಕವಾಗಿದ್ದು, ನಾಮಪತ್ರ ಪರಿಶೀಲನೆ ದಿನಾಂಕ: 30.05.2022 ಮತ್ತು ನಾಮಪತ್ರಗಳ ವಾಪಸಾತಿ ದಿನಾಂಕ: 31.05.2022 ರಂದು ನಡೆಯಲಿದೆ. ಮಾನ್ಯ ಸದಸ್ಯರ ವಿಳಾಸಕ್ಕೆ ಚುನಾವಣಾ ವೇಳಾಪಟ್ಟಿ / ಸೂಚನಾ ಪತ್ರಗಳನ್ನು ಈಗಾಗಲೇ ಅಂಚೆ ಮೂಲಕ ರವಾನಿಸಲಾಗಿದೆ.

ಒಂದು ವೇಳೆ ಸೂಚನಾ ಪತ್ರ ನಿಗದಿತ ಅವಧಿಯಲ್ಲಿ ತಲುಪದೆ ಇದ್ದಲ್ಲಿ, ಇದನ್ನೇ ಚುನಾವಣಾ ಸೂಚನಾ ಪತ್ರವೆಂದು ಪರಿಗಣಿಸಿ ಚುನಾವಣೆಯಲ್ಲಿ ಭಾಗವಹಿಸಲು ಕೋರಲಾಗಿದೆ.

ಸಹಿ/– ಕಾರ್ಯದರ್ಶಿ, ದಿ ನರ್ಸರಿಮೆನ್ ಕೋ–ಆಪರೇಟಿವ್ ಸೊಸೈಟಿ ಲಿ., ಲಾಲ್‌ಬಾಗ್, ಬೆಂಗಳೂರು–04

ಸಹಿ/– (ರಿಟರ್ನಿಂಗ್ ಆಫೀಸರ್), ದಿ ನರ್ಸರಿಮೆನ್ ಕೋ–ಆಪರೇಟಿವ್ ಸೊಸೈಟಿ ಲಿ., ಲಾಲ್‌ಬಾಗ್, ಬೆಂಗಳೂರು–04

ನಗರಸಭಾ ಕಾರ್ಯಾಲಯ ದೊಡ್ಡಬಳ್ಳಾಪುರ–561203

ಇಮೇಲ್: itstaff_ulb_doddaballapur@yahoo.com

ವೆಬ್‌ಸೈಟ್: www.doddaballapurcity.mrc.gov.in

ಸಂಖ್ಯೆ:ನಸದೊ/ತಾಂ.ವಿ/ಟಿ.ಎನ್.ನಂ.04/2022–23 ದಿನಾಂಕ: 16.05.2022

ಟೆಂಡರ್ ಪ್ರಕಟಣೆ

(ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಪೌರಾಯುಕ್ತರು, ನಗರಸಭೆ, ದೊಡ್ಡಬಳ್ಳಾಪುರ, ಬೆಂಗಳೂರು ಗ್ರಾಮಾಂತರ ಜಿಲ್ಲೆರವರು **2020–21ನೇ ಸಾಲಿನ 15ನೇ ಹಣಕಾಸು ಸಾಮಾನ್ಯ ಮೂಲ ಅನುದಾನ, 2021–22ನೇ ಸಾಲಿನ 15ನೇ ಹಣಕಾಸು ಸಾಮನ್ಯ ಮೂಲ ಅನುದಾನ ಮತ್ತು ನಗರಸಭಾ ನಿಧಿಯಡಿಯಲ್ಲಿ** ಈ ಕೆಳಕಂಡ ಕಾಮಗಾರಿಗಳಿಗಾಗಿ ಅರ್ಹ ಗುತ್ತಿಗೆದಾರರು / ಸರಬರಾಜುದಾರರಿಂದ ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ **ಕೆ.ಟಿ.ಪಿ.ಪಿ** ನಿಯಮಗಳನ್ವಯ ಟೆಂಡರ್‌ಗಳನ್ನು ಆಹ್ವಾನಿಸಿದೆ.

1. DMA/2022-23/WS/WORK_INDENT131806
2. DMA/2021-22/OW/WORK_INDENT124230
3. DMA/2021-22/WT/WORK_INDENT124223
4. DMA/2022-23/WS/WORK_INDENT132043
5. CMC/DBP/TS/TN/03/P1/Call-2

ಟೆಂಡರ್ ದಾಖಲೆಗಳನ್ನು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ (**www.eproc.karnataka.gov.in**) ಮುಖಾಂತರ **ಕ್ರಮ ಸಂಖ್ಯೆ.1 ರಿಂದ 3ರ** ಕಾಮಗಾರಿಗಳಿಗೆ ಟೆಂಡರ್ ಸಲ್ಲಿಸಲು ಕೊನೆಯ **ದಿನಾಂಕ: 30.05.2022ರ** 17.30 ಗಂಟೆಯವರೆಗೆ. ಟೆಂಡರ್ ತೆರೆಯುವ **ದಿನಾಂಕ: 31.05.2022** ರ 17.31 ಗಂಟೆಗೆ, **ಕ್ರಮ ಸಂಖ್ಯೆ–4ರ** ಕಾಮಗಾರಿಗೆ ಟೆಂಡರ್ ಸಲ್ಲಿಸಲು ಕೊನೆಯ **ದಿನಾಂಕ: 08.06.2022ರ** 17.30 ಗಂಟೆಯವರೆಗೆ. ಟೆಂಡರ್ ತೆರೆಯುವ **ದಿನಾಂಕ 09.06.2022ರ** 17.31 ಗಂಟೆಗೆ ಮತ್ತು **ಕ್ರಮ ಸಂಖ್ಯೆ 5ರ** ಕಾಮಗಾರಿಗೆ ಟೆಂಡರ್ ಸಲ್ಲಿಸಲು ಕೊನೆಯ **ದಿನಾಂಕ 05.06.2022ರ** 17.30 ಗಂಟೆಯವರೆಗೆ. ತಾಂತ್ರಿಕ ಬಿಡ್ ತೆರೆಯುವ **ದಿನಾಂಕ 06.06.2022ರ** 17.31 ಗಂಟೆಗೆ ಹಾಗೂ ಆರ್ಥಿಕ ಬಿಡ್ ತೆರೆಯುವ **ದಿನಾಂಕ 09.06.2022ರ** ಬೆಳಿಗ್ಗೆ 11.00 ಗಂಟೆಗೆ ಕಾಮಗಾರಿಗಳ ಕಾಲಾವಧಿ 90 ದಿನಗಳಾಗಿರುತ್ತದೆ. ಹೆಚ್ಚಿನ ವಿವರಗಳಿಗೆ ಕಛೇರಿಯ ತಾಂತ್ರಿಕ ಶಾಖೆಯನ್ನು ಸಂಪರ್ಕಿಸಿ ಪಡೆದು ತಿಳಿದುಕೊಳ್ಳುವುದು ಮತ್ತು ಯಾವುದೇ ತಿದ್ದುಪಡಿ ಮತ್ತು ಬದಲಾವಣೆಯಿದ್ದಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ ತಿಳಿಸಲಾಗುವುದು.

ಸಹಿ/– ಅಧ್ಯಕ್ಷರು, ನಗರಸಭೆ, ದೊಡ್ಡಬಳ್ಳಾಪುರ | ಸಹಿ/– ಉಪಾಧ್ಯಕ್ಷರು, ನಗರಸಭೆ, ದೊಡ್ಡಬಳ್ಳಾಪುರ | ಸಹಿ/– ಪೌರಾಯುಕ್ತರು, ನಗರಸಭೆ, ದೊಡ್ಡಬಳ್ಳಾಪುರ

DIPR/CP/KAVITA/635/2022-23

PUBLIC NOTICE

This is to bring to the notice of General Public that our clients proposes to transact for purchase of all that piece and parcel of immovable site together with 8 (Eight) residential flats constructed thereon and as detailed in the Schedule hereunder and hereinafter referred to as the **"Schedule Property"** from its present owners :

Mrs. Geetha Vijaya Kumar, wife of Mr. K Vijayakumar, residing at Villa No. 69, Prestige Augusta Golf Villagem Kada Agrahara Main Road, Opp. Sai Baba Temple, Virgonagar Post Bengaluru-560 049 (owner of Flat No. 67/3A on the ground floor facing 4th Cross bearing old Municipal No. 76-23-67/3/A);

Mrs. Sadhana Herur, daughter of Mr. Hirannia, residing at # 11-3, Hayes Cross Road, Bengaluru-560 056 (owner of Flat No. 67/3A-1 on the rear portion of the ground floor bearing old Municipal No.76-23-67/3A-1);

Mrs. Meenu Vashdev, wife of Mr. Vashdev Chatlani residing at # 67/5, Chatlani Mansion, 4th Cross, Lavelle Road, Bengaluru-560 001, (owner of Flat No. 67/5, being two amalgamated conjoint flats on the first floor bearing old Municipal No. 76-23-67/5);

Mrs. Maya P Chugani, wife of Premchand Chugani, residing at # 67/6, (owner of Flat No. 67/6, Chatlani Mansion, 4th Cross, Lavelle Road, Bengaluru-560 001, on the front portion of the Second floor bearing old Municipal No. 76-23-67/6);

Mrs. Asha Kishinchand, daughter of (Late) Mr. Kishinchand Sakhrani, residing at # 24, 2nd Floor, SNS Villa, Lavelle Road, Bengaluru-560 001,(owner of Flat No. 67/6 on the rear portion of the Second Floor bearing old Municipal No. 76-23-67/6/1);

Mr. M. Gautam Chand, son of Mangilal Bana, presently residing at # 26, Church Street, Behind Barton Center, Bengaluru 560 001, (owner of Flat No. 67/7 on the front portion of the third floor bearing old Municipal No. 76-23-67/7), and;

Mr. Mohammed Zaheer Hussain, son of Mr. Mohammed Jaffer Hussain, residing at No.67/-1, Chatlani Mansion, 4th Cross, Lavelle Road, Bengaluru-560001, (owner of Flat No. 67/7-1 on the rear portion of the third floor bearing old Municipal No. 76-23-67/7/1);

Hereinafter collectively referred to as Owners,

The Owners have represented to our Clients that they are the owners of the respective flats as set out hereinabove and are joint co-owners of the proportionate undivided interest in the Said Site as set out herein below in the Schedule Property having unrestricted rights of alienation over the same. The Owners have further represented to our Clients that the Schedule Property is their self-acquired property and free from all encumbrances, charge, lien, litigations and/ or any third party rights/ claims of any nature whatsoever.

Notice is hereby given to the general public that if any person/s, entity, company, firm, institution (corporate or otherwise) has or claims any right, title, interest, pending litigation, tenancy. mortgage, charge, lien or demand or any other interest of whatsoever nature in or upon the Schedule Property or any part thereof, the same may be brought to the notice of the undersigned in writing together with all details and documents in support of such claim within 10 (Ten) days from the date of this Notice, failing which, it shall be deemed that the aforesaid Owners have a clear and marketable title to the Schedule Property and that none else has any right, title, interest or claim whatsoever in respect of the Schedule Property; and our Clients would be at liberty to proceed to enter into and complete the intended transaction in respect of the Schedule Property. Any objections and/or claims received after the expiry of the period mentioned above shall neither be entertained nor be binding on our Clients.

SCHEDULE PROPERTY

All that piece and parcel of the immovable residential site No. 67/3A (old Site No. 67 (old No. 5) measuring East to West 50 Ft., and North to South 82 Ft, totally measuring 4100 sq., ft., (Said Site) situated at Lavelle Road, Bangalore 560 001, together with residential building - constructed thereon comprising of 8 (Eight) flats admeasuring. Sq., Ft., constructed as per renewed sanction plan bearing No. L. P. No. 2328/1981-82 dated 7.5.1982 issued by the Deputy Director, Planning Cell, Corporation of City of Bangalore known as CHATLANI MANSION House (Said Building) on the Said Site, inclusive of all and any open spaces, car parking spaces, common areas, common amenities, common facilities situated in the Said Land and Said Building, together with all rights appurtenances whatsoever whether underneath or above the surface and bounded as follows:

East by : Premises No. 67/3B measuring on that side 82 feet;
West by : Premises No. 67/3 measuring on that side 82 feet;
North by : Road (30 Ft., wide) and measuring on that side 50 feet; and
South by : Sri. M. Chandrashekar's Private Layout and measuring on that side 50 feet;

Bangalore
Date : 25.05.2022

Mrs. Kiran F Vora & Sandeep Lahiri,
ADVOCATES,
LAHIRI LAW CHAMBERS,
F-1, "Shalimar Galaxy". No. 139, 1st Main Road, Sheshadripuram, Bengaluru-560 020.
M: 9886891785, 8861249493, Off : 080 23469499

ಸ್ಥಾಪನೆ : 1907

ದಿ ಬೆಂಗಳೂರು ಸಿಟಿ ಕೋ–ಆಪರೇಟಿವ್ ಬ್ಯಾಂಕ್ ಲಿಮಿಟೆಡ್

ಆಡಳಿತ ಕಛೇರಿ: ನಂ. 3, ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು–18

ಕಛೇರಿ : 26678572 : 26600512 : 26609066.

ಈ–ಹರಾಜು ಮುಖಾಂತರ ಸ್ಥಿರಾಸ್ತಿ ಸ್ವತ್ತುಗಳ ಮಾರಾಟದ ಸೂಚನೆ

ಸೆಕ್ಯೂರಿಟೈಜೇಷನ್ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮಗಳು, 2002ರ ನಿಯಮ 8(6) ನಿಬಂಧನೆಗಳನ್ನು ಓದಿಕೊಂಡು ಸೆಕ್ಯೂರಿಟೈಜೇಷನ್ ಅಂಡ್ ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಷಿಯಲ್ ಅಸೆಟ್ಸ್ ಅಂಡ್ ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಇಂಟರೆಸ್ಟ್ ಆಕ್ಟ್, 2002ರ ಅಡಿಯಲ್ಲಿ ಸ್ಥಿರಾಸ್ತಿ ಸ್ವತ್ತುಗಳ ಮಾರಾಟ ಸೂಚನೆ (ಈ–ಹರಾಜು).

ಸಾರ್ವಜನಿಕರಿಗೆ ಸಾರ್ವಜನಿಕವಾಗಿ ಸೂಚನೆ ಮತ್ತು ನಿರ್ದಿಷ್ಟವಾಗಿ ಸಾಲಗಾರ(ರು)ರಿಗೆ ಮತ್ತು ಜಾಮೀನುದಾರ(ರು)ರಿಗೆ ಈ ಮೂಲಕ ತಿಳಿಸುದೇನೆಂದರೆ ಈ ಕೆಳಗೆ ತಿಳಿಸಿದ ಸ್ಥಿರಾಸ್ತಿ ಸ್ವತ್ತನ್ನು ಭದ್ರತಾ ಸಾಲಗಾರರಿಗೆ ಅಡಮಾನ / ಚಾರ್ಜ್ ಮಾಡಲಾಗಿದೆ. ದಿ ಬೆಂಗಳೂರು ಸಿಟಿ ಕೋ–ಆಪರೇಟಿವ್ ಬ್ಯಾಂಕ್ ಲಿಮಿಟೆಡ್‌ನ, ಅಧಿಕೃತ ಅಧಿಕಾರಿಯವರಿಂದ ಸಾಂಕೇತಿಕವಾಗಿ/ರಚನಾತ್ಮಕ/ಭೌತಿಕ ಸ್ವಾಧೀನತೆಯನ್ನು ತೆಗೆದುಕೊಳ್ಳಲಾಗಿದೆ. (ವಿವರಗಳನ್ನು ಈ ಕೆಳಗೆ ನೀಡಿರುವ ಕೋಷ್ಟಕದಲ್ಲಿ ತಿಳಿಸಲಾಗಿದೆ.) ಈ ಕೆಳಕಂಡ ಸಾಲಗಳ ವಸೂಲಾತಿಗಾಗಿ ಹಾಗೂ ಮುಂದಿನ ಬಡ್ಡಿ ಮತ್ತು ವೆಚ್ಚಗಳಿಗಾಗಿ ಈ ಕೆಳಗೆ ತಿಳಿಸಿದ ಸ್ಥಿರಾಸ್ತಿ ಸ್ವತ್ತನ್ನು **"ಎಲ್ಲಿ ಹೇಗಿದೆಯೋ ಹಾಗೆ", "ಎಲ್ಲಿ ಏನಿದೆಯೋ ಹಾಗೆ", ಮತ್ತು "ಅಲ್ಲಿ ಏನೇ ಇರಲಿ ಹಾಗೆ"** ಆಧಾರದ ಮೇಲೆ ದಿನಾಂಕ : **23.06.2022** ರಂದು ಈ ಕೆಳಗೆ ನೀಡಿರುವ ಸಮಯದಲ್ಲಿ ಮಾರಾಟ ಮಾಡಲಾಗುವುದು. ಮೀಸಲು ಬೆಲೆ ಮತ್ತು ಇಎಂಡಿ ಠೇವಣಿಗಳ ವಿವರಗಳು ಈ ಕೆಳಗಿನಂತಿವೆ : ಇಎಂಡಿ ಡೆಪಾಸಿಟ್ (ಆಯಾ ಸ್ವತ್ತುಗಳಿಗೆ ಅನ್ವಯಿಸುವಂತೆ) ದಿನಾಂಕ: **22.06.2022** ರಂದು ಸಂಜೆ **5:00** ಗಂಟೆಯ ಒಳಗೆ ಆನ್‌ಲೈನ್ ಮೂಲಕ (RTGS/NEFT) ಈ ಕೆಳಗೆ ನಮೂದಿಸಿರುವ ಖಾತೆಯ ಸಂಖ್ಯೆಗೆ ಪಾವತಿಸುವುದು ಅಥವಾ ದಿ ಬೆಂಗಳೂರು ಸಿಟಿ ಕೋ–ಆಪರೇಟಿವ್ ಬ್ಯಾಂಕ್ ಲಿಮಿಟೆಡ್ ಪರವಾಗಿ DD ಮೂಲಕ ಸಂದಾಯ ಮಾಡಬಹುದಾಗಿದೆ.

ಕ್ರ. ಸಂ.	ಸಾಲಗಾರರ ಹೆಸರು, ವಿಳಾಸ ಮತ್ತು ಶಾಖೆ	ಸ್ಥಿರಾಸ್ತಿಯ ವಿವರಗಳು ಎಲ್ಲೆ ಮತ್ತು ವಿಸ್ತೀರ್ಣ	ಕಾಯ್ದಿಟ್ಟ ಬೆಲೆ	ಇಡಗಂಟು ಠೇವಣಿ ಹಣ (ಇಎಂಡಿ)	ಬ್ಯಾಂಕಿಗೆ ಬರಬೇಕಾದ ಬಾಕಿ ಮೊಬಲಗು	ಹರಾಜು ಸಮಯ ಮತ್ತು ದಿನಾಂಕ
1.	ಶ್ರೀಮತಿ. ಟಿ. ಚಂದ್ರಕಲಾ ನಂ. 24, 2ನೇ 'ಬಿ' ಕ್ರಾಸ್, ಹೊಸಹಳ್ಳಿ ವಿಜಯನಗರ, ಬೆಂಗಳೂರು–40. ಶಾಖೆ : ವಿಜಯನಗರ	ನಂ.ನಂ. 24/1, 2ನೇ 'ಬಿ' ಕ್ರಾಸ್ ರಸ್ತೆ, ಹೊಸಹಳ್ಳಿ, ಎ.ಕೆ. ಕಾಲೋನಿ, ವಿಜಯನಗರ, ಬಿಬಿಎಂಪಿ ವಾರ್ಡ್ ನಂ. 34 ಆರ್.ಪಿ.ಸಿ ಲೇಔಟ್, ಪಿಐಡಿ ನಂ. 34–21–24/1, ಬೆಂಗಳೂರು. ಪೂರ್ವ–ಪಶ್ಚಿಮ : 18 ಅಡಿಗಳು ಮತ್ತು ಉತ್ತರ – ದಕ್ಷಿಣ : 40 ಅಡಿಗಳು ಪೂರ್ವಕ್ಕೆ : ಸೈಟ್ ನಂ. 24, ಪಶ್ಚಿಮಕ್ಕೆ : ಬೇರೆಯವರ ಸ್ವತ್ತು ಉತ್ತರಕ್ಕೆ : ಬೇರೆಯವರ ಸ್ವತ್ತು, ದಕ್ಷಿಣಕ್ಕೆ : 22ನೇ ಕ್ರಾಸ್ ರಸ್ತೆ	ರೂ.45,57,000/– (ನಲವತ್ತೈದು ಲಕ್ಷ & ಐವತ್ತೇಳು ಸಾವಿರ ಮಾತ್ರ)	ರೂ. 4,55,700/– (ನಾಲ್ಕು ಲಕ್ಷ ಐವತ್ತೈದು ಸಾವಿರದ ಏಳು ನೂರು ಮಾತ್ರ)	19.05.2022 ಕ್ಕೆ ರೂ. 12,16,223/– ನೋಟಿಸ್ ದಿನಾಂಕ: 19.05.2022	23.06.2022 ಬೆಳಿಗ್ಗೆ: 10:00 ರಿಂದ 11:00 ರವರೆಗೆ

ಇಎಂಡಿ ಠೇವಣಿ ಪಾವತಿಯ ಕೊನೆಯ ದಿನಾಂಕ : 22.06.2022 ಸಂಜೆ : 5: 00 ರ ವರೆಗೆ	ಬ್ಯಾಂಕಿನ ಹೆಸರು ಮತ್ತು ಖಾತೆಯ ವಿವರಗಳು (ಇಎಂಡಿ ಪಾವತಿಗಾಗಿ) IFSC ಕೋಡ್: ಬ್ಯಾಂಕಿನ ಹೆಸರು: ಇಂಡಸ್‌ಇಂಡ್ ಬ್ಯಾಂಕ್.
ತಪಾಸಣೆಯ ದಿನಾಂಕ ಮತ್ತು ಸಮಯ: 20.06.2022, ಬೆಳಿಗ್ಗೆ : 10.00 ರಿಂದ ಸಂಜೆ 5 : 00 ರ ವರೆಗೆ	ಶಾಖೆ ಹೆಸರು : ದಿ ಬೆಂಗಳೂರು ಸಿಟಿ ಕೋ–ಆಪರೇಟಿವ್ ಬ್ಯಾಂಕ್ ಲಿಮಿಟೆಡ್, ಪ್ರಧಾನ ಕಛೇರಿ ಶಾಖೆ : ಖಾತೆ ಸಂಖ್ಯೆ : 000220105013061.
ಬಿಡ್ ಗುಣಾಂಕ: ರೂ. 50,000/–	IFSC ಕೋಡ್ : INDB0BCCB02

ಸಾಲಗಾರರು/ ಅಡಮಾನದಾರರ ಗಮನಕ್ಕೆ ನಿಬಂಧನೆಗಳ ಉಪ–ವಿಭಾಗ (8) ರ ಸೆಕ್ಷನ್ 13ರ ಕಾಯಿದೆಯಲ್ಲಿ ಲಭ್ಯವಿರುವ ಸಮಯಕ್ಕೆ ಸಂಬಂಧಿಸಿದಂತೆ ಭದ್ರತಾ ಸ್ವತ್ತುಗಳನ್ನು ಬಿಡಿಸಿಕೊಳ್ಳಲು ತಿಳಿಸಲಾಗಿದೆ. (ಈ ಪ್ರಕಟಣೆಯನ್ನು ನಿಯಮ (8) ಉಪನಿಯಮ (6) ಸೆಕ್ಯೂರಿಟಿ ಇಂಟರೆಸ್ಟ್ ಎನ್‌ಫೋರ್ಸ್‌ಮೆಂಟ್ ನಿಯಮ 2002ರಡಿಯಲ್ಲಿ ಸಾಲಗಾರರಿಗೆ ನೀಡುವ ಪ್ರಕಟಣೆ ಎಂದು ಪರಿಗಣಿಸತಕ್ಕದ್ದು). ಮಾರಾಟದ ವಿವರವಾದ ನಿಯಮ ಮತ್ತು ನಿಬಂಧನೆಗಳಿಗೆ, ದಯವಿಟ್ಟು ದಿ ಬೆಂಗಳೂರು ಸಿಟಿ ಕೋ–ಆಪರೇಟಿವ್ ಬ್ಯಾಂಕ್ ಲಿಮಿಟೆಡ್ ವೆಬ್‌ಸೈಟ್ ನಲ್ಲಿನ ಲಿಂಕನ್ನು ನೋಡಿ ಅಂದರೆ, "ಅಡಮಾನ ಸ್ವತ್ತುಗಳ ಮಾರಾಟ" ಶೀರ್ಷಿಕೆಯ ಅಡಿಯಲ್ಲಿ www.bccbl.co.in, ಅನ್ನು ನೋಡಿ. ಈ– ಹರಾಜನ್ನು 05 ನಿಮಿಷಗಳ ಅನಿಯಮಿತ ವಿಸ್ತರಣೆಯೊಂದಿಗೆ ದಿನಾಂಕ: 23.06.2022 ರಂದು ಬೆಳಿಗ್ಗೆ : 10.00 ರಿಂದ 11.00 ರವರೆಗೆ https://bankauctions.in ಪೋರ್ಟಲ್ ಮೂಲಕ ನಡೆಸಲಾಗುವುದು. ಉದ್ದೇಶಿತ ಬಿಡ್‌ದಾರರು ತಮ್ಮ ಹೆಸರನ್ನು https://bankauctions.in ನಲ್ಲಿ ನೊಂದಾಯಿಸಿಕೊಂಡು ಯೂಸರ್ ಐಡಿ ಮತ್ತು ಪಾಸ್‌ವರ್ಡನ್ನು ಉಚಿತವಾಗಿ ಪಡೆಯಬಹುದು ಮತ್ತು *E-auction (tentatively on 22.06.2022)* from M/s 4 Closure, Mr. Prakash Reddy /Bhaskar (Asst. Manager), No.22, 5th Cross, Gurumahal Extension, Opp. Indian Hotel, K.G. Halli, Jalahalli (West), Bengaluru-560015, Mobile No: 9515160061/9515160062, E-mail: prakash@bankauctions.in & bhaskar@bankauctions.in. ಹೆಚ್ಚಿನ ಮಾಹಿತಿಗಾಗಿ : bccbrec2021@gmail.com Mobile Number : 080-26600512, 26609066 & 9342781425..

ದಿನಾಂಕ : 24.05.2022
ಸ್ಥಳ : ಬೆಂಗಳೂರು

ಸಹಿ/– ಅಧಿಕೃತ ಅಧಿಕಾರಿ
ದಿ ಬೆಂಗಳೂರು ಸಿಟಿ ಕೋ–ಆಪರೇಟಿವ್ ಬ್ಯಾಂಕ್ ಲಿಮಿಟೆಡ್

ನಗರದಲ್ಲಿ ಇಂದು

ಚಿತ್ರಕಲಾ ಶಿಕ್ಷಣ ಹಾಗೂ ವೃತ್ತಿ ಕೌಶಲ ಕಾರ್ಯಾಗಾರ: ಉದ್ಘಾಟನೆ–ವಿ.ಸುನಿಲ್‌ಕುಮಾರ್, ಮುಖ್ಯ ಅತಿಥಿ–ಬಿ.ಸಿ.ನಾಗೇಶ್, ಲಲಿತಾ ಚಂದ್ರಶೇಖರ್, ಎಂ.ಕೆ.ಶ್ರೀಧರ್, ಅಧ್ಯಕ್ಷತೆ– ಡಿ.ಮಹೇಂದ್ರ, ಆಯೋಜನೆ– ಕರ್ನಾಟಕ ಲಲಿತಕಲಾ ಅಕಾಡೆಮಿ, ಸ್ಥಳ–ಯುವಕ ಸಂಘ, ಜಯನಗರ–ಬೆಳಿಗ್ಗೆ 11

ಪಠ್ಯಪುಸ್ತಕ ರಚನೆ, ಪರಿಷ್ಕರಣೆ–ಮರು ಪರಿಷ್ಕರಣೆ ಕುರಿತು ಶಿಕ್ಷಣ ತಜ್ಞರು, **ಚಿಂತಕರ ಜೊತೆ ಸಮಾಲೋಚನೆ ಮತ್ತು ಚರ್ಚೆ:** ಅಧ್ಯಕ್ಷತೆ–ಕೆ.ಮರುಳಸಿದ್ದಪ್ಪ, ವಿಷಯ ಮಂಡನೆ–ಪಿ.ವಿ. ನಿರಂಜನಾರಾಧ್ಯ, ಭಾಗವಹಿಸುವವರು–ರಾಜೇಂದ್ರ ಚೆನ್ನಿ, ಟಿ.ಆರ್.ಚಂದ್ರಶೇಖರ್, ಇಂದೂಧರ ಹೊನ್ನಾಪುರ, ಎಲ್. ಹನುಮಂತಯ್ಯ, ಬಂಜಗೆರೆ ಜಯಪ್ರಕಾಶ್, ಆಯೋಜನೆ–ಜಾಗೃತ ನಾಗರಿಕರು ಕರ್ನಾಟಕ, ಸ್ಥಳ–ಗಾಂಧಿ ಭವನ, ಕುಮಾರಪಾರ್ಕ್ –ಬೆಳಿಗ್ಗೆ 11

ಪುನರ್ ಪ್ರತಿಷ್ಠಾಪನೆ ಹಾಗೂ ಮಹಾ ಕುಂಬಾಭಿಷೇಕ ಮಹೋತ್ಸವ: ಕುಂಬಾಭಿಷೇಕ–ವಿಧುಶೇಖರ ಭಾರತೀ ಸನ್ನಿಧಾನಂ, ಆಯೋಜನೆ–ವಲ್ಲೀದೇವಸೇನಾ ಸಮೇತ ಶ್ರೀ ಸುಬ್ರಹ್ಮಣ್ಯೇಶ್ವರ ಸ್ವಾಮಿ ದೇವಸ್ಥಾನ, ಸ್ಥಳ–ಕುಮಾರ ಪಾರ್ಕ್ ಪಶ್ಚಿಮ ಬಡಾವಣೆ–ಬೆಳಿಗ್ಗೆ 11.30

ಡಾ.ಬಿ.ಆರ್.ಅಂಬೇಡ್ಕರ್ ಅವರ 131ನೇ ಜಯಂತಿ: ಅಧ್ಯಕ್ಷತೆ–ವಿ.ಪೊನ್ನುರಾಜ್, ಮುಖ್ಯಅತಿಥಿ–ಗೃಹ ರಕ್ಷಕ ದಳದ ಎಡಿಜಿಪಿ ಎಂ.ನಂಜುಂಡಸ್ವಾಮಿ, ನರೇಂದ್ರಕುಮಾರ್, ಆರ್.ನಾಗರಾಜ, ಕೃಷ್ಣಗೌಡ ತಾಯಣ್ಣವರ, ಆಯೋಜನೆ–ಕರ್ನಾಟಕ ವಿದ್ಯುತ್ ನಿಗಮ ನಿಯಮಿತ ಹಾಗೂ ಕೆಪಿಟಿಸಿಎಲ್ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ನೌಕರರ ಸಂಘ, ಸ್ಥಳ–ಕೆ.ಇ.ಬಿ ಎಂಜಿನಿಯರ್ಸ್ ಅಸೋಸಿಯೇಷನ್ ಸಭಾಂಗಣ, ರೇಸ್‌ಕೋರ್ಸ್ ಅಡ್ಡರಸ್ತೆ–ಮಧ್ಯಾಹ್ನ 2.30

ಸುನೀತಾ ಅನಂತಸ್ವಾಮಿ ಅವರಿಂದ 'ಸುನೀತ ಸಂಜೆ' ಭಾವಗೀತೆ ಗಾಯನ ಕಾರ್ಯಕ್ರಮ: ಭಾಗವಹಿಸುವವರು–ಎಂ.ವಿ.ರೇವಣಸಿದ್ದಯ್ಯ, ಬಿ.ಆರ್. ಲಕ್ಷ್ಮಣರಾವ್, ಜೋಗಿ, ಆಯೋಜನೆ–ಸುಚಿತ್ರಾ, ಲಹರಿ ಮ್ಯೂಸಿಕ್, ಹಾಫ್ ಸರ್ಕಲ್, ಸ್ಥಳ–ಸುಚಿತ್ರಾ ಸಿನಿಮಾ ಮತ್ತು ಸಾಂಸ್ಕೃತಿಕ ಅಕಾಡೆಮಿ, ಬನಶಂಕರಿ–ಸಂಜೆ 5.30

47ನೇ ವಾರ್ಷಿಕ ಆರ್ಯಭಟ ಅಂತರರಾಷ್ಟ್ರೀಯ ಪ್ರಶಸ್ತಿ ಪ್ರದಾನ ಸಮಾರಂಭ: ಉದ್ಘಾಟನೆ–ಅರಳಿ ನಾಗರಾಜ್, ಮುಖ್ಯ ಅತಿಥಿ–ಮಹೇಶ ಜೋಶಿ, ಭಾರತಿ ವಿಷ್ಣುವರ್ಧನ್, ಅಧ್ಯಕ್ಷತೆ–ಎಚ್.ಎಲ್.ಎನ್.ರಾವ್, ಆಯೋಜನೆ–ಆರ್ಯಭಟ ಸಾಂಸ್ಕೃತಿಕ ಸಂಸ್ಥೆ, ಸ್ಥಳ–ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ–ಸಂಜೆ 6.30

ವಿದ್ಯುತ್ ವ್ಯತ್ಯಯ ಇಂದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿದ್ಯುತ್ ಕೇಂದ್ರದಲ್ಲಿ ತುರ್ತು ಕಾರ್ಯನಿರ್ವಹಣೆ ಕೈಗೆತ್ತಿಕೊಂಡಿರುವುದರಿಂದ ಇದೇ 25ರಂದು ನಗರದ ಜಾಲಹಳ್ಳಿ ವಿಭಾಗದ ಹಲವೆಡೆ ಬೆಳಿಗ್ಗೆ 10 ರಿಂದ ಮಧ್ಯಾಹ್ನ 3ರವರೆಗೆ ವಿದ್ಯುತ್ ವ್ಯತ್ಯಯ ಆಗಲಿದೆ ಎಂದು ಬೆಸ್ಕಾಂ ಪ್ರಕಟಣೆ ತಿಳಿಸಿದೆ.

ವ್ಯತ್ಯಯವಾಗುವ ಸ್ಥಳಗಳು: ಮುನೇಶ್ವರಸ್ವಾಮಿ ಲೇಔಟ್, ಕೊಲತ್ತೂರು ಲೇಔಟ್, ಡಿಬಿ ಸಂದ್ರ, ಗಾಣಿಗರಹಳ್ಳಿ, ಕೆರೆಗುಡ್ಡದಹಳ್ಳಿ, ಕೆಬ್ಬೆಪಾಳ್ಯ, ಗುಣಿಅಗ್ರಹಾರ, ಸೋಮಶೆಟ್ಟಿಹಳ್ಳಿ, ವಿದ್ಯಾರಣ್ಯಪುರ, ವಿದ್ಯಾರಣ್ಯಪುರ ಮುಖ್ಯರಸ್ತೆ, ಎ.ಎಂ.ಎಸ್. ಲೇಔಟ್, ತರಬನಹಳ್ಳಿ, ಹುರುಳಿಚಿಕ್ಕನಹಳ್ಳಿ, ಕೊಡಗಿತಿರುಮಲಪುರ, ಐಐಎಚ್‌ಆರ್, ಕಂದಾಪುರ, ಮಟ್ಕೂರ್, ಲಿಂಗನಹಳ್ಳಿ, ಸೀತಾಕೆಂಪನಹಳ್ಳಿ, ಮಾದಪ್ಪನಹಳ್ಳಿ ಮತ್ತು ಸುತ್ತಲಿನ ಪ್ರದೇಶ.

ಮ್ಯಾಂಚೆಸ್ಟರ್ ಸಿಟಿ ಐದು ವರ್ಷಗಳಲ್ಲಿ ನಾಲ್ಕು ಪ್ರೀಮಿಯರ್ ಲೀಗ್ ಟ್ರೋಫಿಗಳನ್ನು ಜಯಿಸಿದೆ!

ಆಕಾಶ್ ಬೈಜೂಸ್ ಸಂಸ್ಥೆ ಹೊಸ ಕೇಂದ್ರ ಆರಂಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವೈದ್ಯಕೀಯ ಮತ್ತು ಐಐಟಿಗಳಲ್ಲಿ ಓದಬೇಕೆಂದು ಸಾವಿರಾರು ವಿದ್ಯಾರ್ಥಿಗಳ ಕನಸನ್ನು ನನಸು ಮಾಡುವ ಪರೀಕ್ಷಾ ಪೂರ್ವ ತರಬೇತಿ ನೀಡಲು ಆಕಾಶ್ ಬೈಜೂಸ್ ತನ್ನ ಜಾಲ ವಿಸ್ತರಣೆ ಮಾಡಿದೆ.

ವೈಟ್‌ಫೀಲ್ಡ್–ಹೊಸಕೋಟೆ ಮುಖ್ಯ ರಸ್ತೆಯ ಸೀಗೇಹಳ್ಳಿಯಲ್ಲಿ ತನ್ನ ಕೇಂದ್ರವನ್ನು ಆರಂಭ ಮಾಡಿದೆ. ಇಲ್ಲಿ 10 ತರಗತಿಗಳನ್ನು ನಡೆಸಲು ಸಾಧ್ಯವಾಗುವಷ್ಟು ಕೊಠಡಿಗಳಿದ್ದು, 800 ವಿದ್ಯಾರ್ಥಿಗಳು ಅಭ್ಯಾಸ ಮಾಡಲು ಅವಕಾಶ ಇದೆ. ಇದು ಬೆಂಗಳೂರಿನಲ್ಲಿ ಆಕಾಶ್ ಬೈಜೂಸ್ ತೆರೆದಿರುವ 11ನೇ ಕೇಂದ್ರವಾಗಿದೆ.

ಈ ಕೇಂದ್ರವನ್ನು ಆಕಾಶ್ ಬೈಜೂಸ್‌ನ ಪ್ರಾದೇಶಿಕ ನಿರ್ದೇಶಕ ಧೀರಜ್‌ಕುಮಾರ್ ಮಿಶ್ರಾ ಉದ್ಘಾಟನೆ ಮಾಡಿದರು. 'ವೈದ್ಯಕೀಯ ಮತ್ತು ಎಂಜಿನಿಯರಿಂಗ್ ಪ್ರವೇಶ ಪರೀಕ್ಷೆಗಳಿಗೆ ಸಿದ್ಧತೆ ನಡೆಸುವ ವಿದ್ಯಾರ್ಥಿಗಳಿಗೆ ಇಲ್ಲಿ ಫೌಂಡೇಷನ್ ಮಟ್ಟದ ಕೋರ್ಸ್‌ಗಳ ಸಹಿತ ತರಬೇತಿ ನೀಡಲಾಗುತ್ತದೆ. ವಿದ್ಯಾರ್ಥಿಗಳ ಭವಿಷ್ಯಕ್ಕೆ ಈ ಕೇಂದ್ರ ಮೆಟ್ಟಿಲಾಗಲಿದೆ' ಎಂದು ಅವರು ಹೇಳಿದರು.

ಈ ಕೇಂದ್ರಕ್ಕೆ ಪ್ರವೇಶ ಪಡೆಯಲು ಬಯಸುವ ವಿದ್ಯಾರ್ಥಿಗಳು ಪ್ರವೇಶ ವೇತನ ಪರೀಕ್ಷೆ(ಐಎಸಿಎಸ್‌ಟಿ) ಅಥವಾ ಎಎನ್‌ಟಿಎಚ್‌ಇ(ಆಕಾಶ್ ನ್ಯಾಷನಲ್ ಟ್ಯಾಲೆಂಟ್ ಹಂಟ್ ಎಕ್ಸಾಂ)ಗೆ ನೋಂದಣಿ ಮಾಡಿಕೊಳ್ಳ ಬಹುದಾಗಿದೆ ಎಂದು ಮಾಹಿತಿ ನೀಡಿದರು.

ಸೀಗೇಹಳ್ಳಿಯಲ್ಲಿ ಆಕಾಶ್ ಬೈಜೂಸ್ ಹೊಸ ಕೇಂದ್ರವನ್ನು ಸಂಸ್ಥೆಯ ಪ್ರಾದೇಶಿಕ ನಿರ್ದೇಶಕ ಧೀರಜ್‌ಕುಮಾರ್ ಮಿಶ್ರಾ ಉದ್ಘಾಟಿಸಿದರು. ಸಂಸ್ಥೆಯ ಅಧಿಕಾರಿಗಳು ಇದ್ದರು

ಬೆಸ್ಕಾಂ: ವಾಟ್ಸ್‌ಆ್ಯಪ್ ಸಹಾಯವಾಣಿ

ಬೆಂಗಳೂರು: ವಿದ್ಯುತ್ ವ್ಯತ್ಯಯ ಮತ್ತು ವಿದ್ಯುತ್ ಸಂಬಂಧಿತ ಕುಂದು– ಕೊರತೆ ಶೀಘ್ರ ಬಗೆಹರಿಸಲು 'ವಾಟ್ಸ್‌ಆ್ಯಪ್ ಸಹಾಯವಾಣಿ' ಸಂಖ್ಯೆಗಳನ್ನು ಬೆಸ್ಕಾಂ ಬಿಡುಗಡೆ ಮಾಡಿದೆ.

'ಮಳೆಗಾಲ ಹಾಗೂ ತುರ್ತು ಸಂದರ್ಭಗಳಲ್ಲಿ ಬೆಸ್ಕಾಂನ ಸಹಾಯವಾಣಿ ಸಂಖ್ಯೆ 1912ಗೆ ಸಾವಿರಾರು ಕರೆಗಳು ಬರುತ್ತಿದ್ದು, ನಿರಂತರ ಕಾರ್ಯನಿರ್ವಹಣೆ ಮಾಡಲಾಗುತ್ತಿದೆ. ಈ ಸಂದರ್ಭಗಳಲ್ಲಿ ಸಾರ್ವಜನಿಕರಿಗೆ ಸಹಾಯವಾಣಿ ಕರೆ ಲಭ್ಯವಾಗದೆ ತೊಂದರೆ ಆಗುತ್ತಿರುವುದರಿಂದ ಪ್ರತಿ ಜಿಲ್ಲೆಗೂ ವಾಟ್ಸ್‌ಆ್ಯಪ್ ಸಂಖ್ಯೆ ನೀಡಲಾಗುತ್ತಿದೆ' ಎಂದು ಸಹಾಯವಾಣಿ ಬಿಡುಗಡೆ ಮಾಡಿದ ಸಚಿವ ವಿ.ಸುನಿಲ್‌ಕುಮಾರ್ ತಿಳಿಸಿದರು.

'ಬೆಸ್ಕಾಂ ವ್ಯಾಪ್ತಿಯ 8 ಜಿಲ್ಲೆಗಳಿಗೆ 11 ವಾಟ್ಸ್‌ಆ್ಯಪ್ ಸಹಾಯವಾಣಿ ಸಂಖ್ಯೆ ಬಿಡುಗಡೆ ಮಾಡಲಾಗಿದೆ. ಮುಂದೆ ಎಲ್ಲ ಜಿಲ್ಲೆಗಳಿಗೂ ಸಹಾಯವಾಣಿ ನೀಡಲಾಗುವುದು' ಎಂದರು.

ಬೆಸ್ಕಾಂ ಸಹಾಯವಾಣಿ ವಿವರ

ವೃತ್ತ/ಜಿಲ್ಲೆ	ವಾಟ್ಸ್‌ಆ್ಯಪ್ ಸಂಖ್ಯೆ
ದಕ್ಷಿಣ ವೃತ್ತ	8277884011
ಪಶ್ಚಿಮ ವೃತ್ತ	8277884012
ಪೂರ್ವ ವೃತ್ತ	8277884013
ಉತ್ತರ ವೃತ್ತ	8277884014
ಕೋಲಾರ	8277884015
ಚಿಕ್ಕಬಳ್ಳಾಪುರ	8277884016
ಬೆಂಗಳೂರು ಗ್ರಾಮಾಂತರ	8277884017
ರಾಮನಗರ	8277884018
ತುಮಕೂರು	8277884019
ಚಿತ್ರದುರ್ಗ	8277884020
ದಾವಣಗೆರೆ	8277884021

ಅಪಘಾತ: ಶಾಸಕ ಟಿ.ರಘುಮೂರ್ತಿ ಪಾರು

ಹಿರಿಯೂರು: ತಾಲ್ಲೂಕಿನ ಬಬ್ಬೂರು ಗ್ರಾಮದ ಬಳಿ ಚಳ್ಳಕೆರೆ ಶಾಸಕ ಟಿ. ರಘುಮೂರ್ತಿ ಕಾರು ಅಪಘಾತವಾಗಿದೆ. ಶಾಸಕರು ಅಪಾಯದಿಂದ ಪಾರಾಗಿದ್ದಾರೆ.

ಶಾಸಕರು ಮಂಗಳವಾರ ರಾತ್ರಿ ಚಳ್ಳಕೆರೆ ಕಡೆಯಿಂದ ಮಸ್ಕಲ್ ಗೊಲ್ಲರಹಟ್ಟಿ ಕಡೆಗೆ ತೆರಳುತ್ತಿದ್ದರು. ಮಸ್ಕಲ್ ಗ್ರಾಮದಿಂದ ಮದುವೆಗೆ ಹೊರಟಿದ್ದ ಮಹೀಂದ್ರಾ ಜೈಲೋ ಹಾಗೂ ಶಾಸಕರ ಇನ್ನೋವಾ ಕಾರಿನ ನಡುವೆ ಡಿಕ್ಕಿ ಸಂಭವಿಸಿದೆ.

ಅಪಘಾತದಲ್ಲಿ ಎರಡೂ ಕಾರುಗಳು ಜಖಂಗೊಂಡಿವೆ. ಏರ್ ಬ್ಯಾಗ್ ತೆರೆದುಕೊಂಡಿದ್ದು, ಶಾಸಕರಿಗೆ ಯಾವುದೇ ಗಾಯಗಳಾಗಿಲ್ಲ. ಎಂದು ಹಿರಿಯೂರು ಗ್ರಾಮಾಂತರ ಠಾಣೆಯ ಪೊಲೀಸರು ತಿಳಿಸಿದ್ದಾರೆ.

ಪ್ರಯಾಣಿಕ ಮಹಿಳೆ ಮೇಲೆ ಹಲ್ಲೆ: ಕೆಎಸ್‌ಆರ್‌ಟಿಸಿ ನಿರ್ವಾಹಕ ಅಮಾನತು

ಬೆಂಗಳೂರು: ಬಸ್ಸಿನಲ್ಲಿ ಪ್ರಯಾಣಿಸುತ್ತಿದ್ದ ಮಹಿಳೆ ಜೊತೆ ಜಗಳ ತೆಗೆದು ಹಲ್ಲೆ ಮಾಡಿದ್ದ ಆರೋಪದಡಿ ಕೆಎಸ್‌ಆರ್‌ಟಿಸಿ ನಿರ್ವಾಹಕ ಎಚ್. ರವಿಕುಮಾರ್ ಎಂಬುವರನ್ನ ಸೇವೆಯಿಂದ ಅಮಾನತು ಮಾಡಿ ನಿಗಮ ಆದೇಶ ಹೊರಡಿಸಿದೆ.

ಬೆಂಗಳೂರು ಕೇಂದ್ರೀಯ ವಿಭಾಗದ ಘಟಕ-1ರಲ್ಲಿ ರವಿಕುಮಾರ್ ನಿರ್ವಾಹಕರಾಗಿ ಕೆಲಸ ಮಾಡುತ್ತಿದ್ದರು. ಶೃಂಗೇರಿ–ಬೆಂಗಳೂರು ಮಾರ್ಗದ ಎ.ಸಿ ಸ್ಲೀಪರ್ ಬಸ್‌ನಲ್ಲಿ ಕೆಲಸಕ್ಕೆ ನಿಯೋಜಿಸಲಾಗಿತ್ತು. ಅದೇ ಬಸ್ಸಿನಲ್ಲಿ ಕೊಪ್ಪದಿಂದ ಬೆಂಗಳೂರಿಗೆ ಬಂದಿದ್ದ ಮಹಿಳೆ, ಟಿ. ದಾಸರಹಳ್ಳಿ ಬಳಿ ಇಳಿದಿದ್ದರು. ಅವರ ಮಕ್ಕಳು ಇಳಿಯಲು ತಡವಾಗಿತ್ತು. ಅಷ್ಟಕ್ಕೆ ರವಿಕುಮಾರ್ ಜಗಳ ತೆಗೆದು, ಹಲ್ಲೆ ಮಾಡಿದ್ದರು ಎನ್ನಲಾಗಿದೆ.

ಘಟನೆ ಬಗ್ಗೆ ಬಾಗಲಗುಂಟೆ ಠಾಣೆಗೆ ಮಹಿಳೆ ದೂರು ನೀಡಿದ್ದರು. ಚಾಲಕನನ್ನು ಪೊಲೀಸರು ವಶಕ್ಕೆ ಪಡೆದು ವಿಚಾರಣೆ ನಡೆಸುತ್ತಿದ್ದಾರೆ. ಪ್ರಕರಣ ದಾಖಲಾದ ಮಾಹಿತಿ ಪಡೆದ ನಿಗಮ, ನಿರ್ವಾಹಕನನ್ನು ಅಮಾನತು ಮಾಡಿದೆ.

'ಮಹಿಳಾ ಪ್ರಯಾಣಿಕರ ಸುರಕ್ಷತೆ ನಿಗಮದ ಕರ್ತವ್ಯ. ಮಹಿಳಾ ಪ್ರಯಾಣಿಕರಿಗೆ ಉಂಟಾದ ತೊಂದರೆಗೆ ಸಂಸ್ಥೆಯು ವಿಷಾದ ವ್ಯಕ್ತಪಡಿಸುತ್ತದೆ. ಸಂಸ್ಥೆಯ ಪರವಾಗಿ ಹಿರಿಯ ಅಧಿಕಾರಿಗಳು ಮಹಿಳೆಯನ್ನು ಭೇಟಿ ಮಾಡಿ ಕ್ಷಮೆ ಕೇಳಿದ್ದಾರೆ' ಎಂದೂ ಕೆಎಸ್‌ಆರ್‌ಟಿಸಿ ತಿಳಿಸಿದೆ.

ಅಪಘಾತ: ಶಿಕ್ಷಕ ದಂಪತಿ ಸಾವು

ಚಿಂತಾಮಣಿ: ಚಿಂತಾಮಣಿ-ಶ್ರೀನಿವಾಸಪುರ ರಸ್ತೆಯ ದೊಡ್ಡಗಂಜೂರು ಬಳಿ ಮಂಗಳವಾರ ದ್ವಿಚಕ್ರವಾಹನಕ್ಕೆ ಗೂಡ್ಸ್ ವಾಹನ ಡಿಕ್ಕಿ ಹೊಡೆದ ಪರಿಣಾಮ ದ್ವಿಚಕ್ರ ವಾಹನದಲ್ಲಿದ್ದ ಶಿಕ್ಷಕ ದಂಪತಿ ದಯಾನಂದಬಾಬು (49) ಹಾಗೂ ಎಸ್.ರಾಜೇಶ್ವರಿ (45) ಅವರು ಸ್ಥಳದಲ್ಲೇ ಮೃತಪಟ್ಟಿದ್ದಾರೆ.

900 ಚೀಲ ರಸಗೊಬ್ಬರ ಕಳವು

ಪ್ರಜಾವಾಣಿ ವಾರ್ತೆ

ಬೆಳಗಾವಿ: ತಾಲ್ಲೂಕಿನ ದೇಸೂರ ಗ್ರಾಮದ ರೈಲ್ವೆ ಇಲಾಖೆ ಗೋದಾಮಿನಲ್ಲಿದ್ದ ತಲಾ 50 ಕೆ.ಜಿ ತೂಕದ 900 ಚೀಲ ರಸಗೊಬ್ಬರ ಕಳುವಾಗಿದೆ. 'ಮೇ 18ರಂದು ₹12.15 ಲಕ್ಷ ಮೌಲ್ಯದ ಡಿಎಪಿ ಕಂಪನಿಯ ರಸಗೊಬ್ಬರ ಕಳುವಾಗಿದೆ' ಎಂದು ಸಾಗರ ಟ್ರಾನ್ಸ್‌ಪೋರ್ಟ್ ವ್ಯವಸ್ಥಾಪಕ ಶಿವಾಜಿ ಆನಂದಾಚೆ ಎನ್ನುವವರು ಗ್ರಾಮೀಣ ಪೊಲೀಸ್ ಠಾಣೆಗೆ ಸೋಮವಾರ ದೂರು ನೀಡಿದ್ದಾರೆ.

'ಪ್ರಕರಣದ ಮಾಹಿತಿ ಕಲೆ ಹಾಕುತ್ತಿದ್ದೇವೆ. ಕಳ್ಳತನ ಮಾಡಿದ ಆರೋಪಿಗಳ ಬಂಧನಕ್ಕೆ ಜಾಲ ಬೀಸಿದ್ದೇವೆ' ಗ್ರಾಮೀಣ ಪೊಲೀಸ್ ಠಾಣೆಯ ಪೊಲೀಸರು ತಿಳಿಸಿದ್ದಾರೆ.

ಹುದ್ದೆಗಳ ಭರ್ತಿಗೆ ಕೆಪಿಎಸ್‌ಸಿ ನೇಮಕ • ರಾಜ್ಯ ಸರ್ಕಾರಕ್ಕೆ ಹೈ ಕೋರ್ಟ್ ಆದೇಶ

'ಶಾಶ್ವತ ವೈದ್ಯಕೀಯ ಮಂಡಳಿ ರಚಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕರ್ನಾಟಕ ಲೋಕಸೇವಾ ಆಯೋಗದ (ಕೆಪಿಎಸ್‌ಸಿ) ಮೂಲಕ ನಡೆಯುವ ಸರ್ಕಾರಿ ಹುದ್ದೆಗಳ ನೇಮಕಾತಿಯಲ್ಲಿ ಅಭ್ಯರ್ಥಿಗಳಿಗೆ ವೈದ್ಯಕೀಯ ಪ್ರಮಾಣಪತ್ರ ನೀಡುವ ವಿಚಾರದಲ್ಲಿ ಪಾರದರ್ಶಕತೆ ಕಾಯ್ದುಕೊಳ್ಳಲು ಶಾಶ್ವತ ವೈದ್ಯಕೀಯ ಮಂಡಳಿ ನೇಮಿಸಿ' ಎಂದು ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ನಿರ್ದೇಶಿಸಿದೆ.

ಈ ಕುರಿತಂತೆ ಹಾಸನದ ಬಿ.ಎನ್. ಶಿವನಂಜೇಗೌಡ ಸಲ್ಲಿಸಿದ್ದ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಬಿ.ವೀರಪ್ಪ ಅವರಿದ್ದ ಏಕಸದಸ್ಯ ನ್ಯಾಯಪೀಠ ವಿಚಾರಣೆ ನಡೆಸಿ ಈ ಕುರಿತಂತೆ ಆದೇಶಿಸಿದೆ.

'ಅರ್ಹತೆ ಹೊಂದಿರುವ ಅಭ್ಯರ್ಥಿಗಳು ಸರ್ಕಾರಿ ಹುದ್ದೆ ಪಡೆಯುವುದರಿಂದ ವಂಚಿತರಾಗಬಾರದು. ಪ್ರತಿಯೊಬ್ಬರಿಗೂ ನ್ಯಾಯ ದೊರೆಯಬೇಕು. ಹಾಗಾಗಿ ರಾಜ್ಯ ಸರ್ಕಾರ ನೇಮಕಾತಿಯಲ್ಲಿ ಪಾರದರ್ಶಕತೆ ಕಾಯ್ದುಕೊಳ್ಳಲು ಶಾಶ್ವತವಾದ ವೈದ್ಯಕೀಯ ಮಂಡಳಿಯನ್ನು ನೇಮಕ ಮಾಡಬೇಕು. ವೈದ್ಯಕೀಯ ಮಂಡಳಿ ಮತ್ತು ಪರಿಣತರನ್ನು ನೇಮಕ ಮಾಡಲು ಕೆಪಿಎಸ್‌ಸಿಗೆ ಮುಕ್ತ ಅವಕಾಶ ಕಲ್ಪಿಸಬಾರದು' ಎಂದು ಆದೇಶದಲ್ಲಿ ವಿವರಿಸಿದೆ.

ಪ್ರಕರಣವೇನು?: ಅರ್ಜಿದಾರ ಶಿವನಂಜೇಗೌಡ ಮೋಟಾರು ವಾಹನ ಇನ್ಸ್‌ಪೆಕ್ಟರ್ ಹುದ್ದೆಗೆ 2019ರಲ್ಲಿ ಅರ್ಜಿ ಸಲ್ಲಿಸಿದ್ದರು. ಅವರ ದೇಹದಾರ್ಢ್ಯ ಪರೀಕ್ಷೆ ನಡೆಸಿದ್ದ ಬೌರಿಂಗ್ ಮತ್ತು ಲೇಡಿ ಕರ್ಜನ್ ಆಸ್ಪತ್ರೆಯ ವೈದ್ಯ ಜಿ.ನಂದಕುಮಾರ್ ಪ್ರಮಾಣ ಪತ್ರ ನೀಡಿ, 'ಶಿವನಂಜೇಗೌಡ ಅವರಿಗೆ ಬಣ್ಣಗಳ ದೃಷ್ಟಿ ದೋಷವಿದೆ. ನಿಗದಿತ ಎತ್ತರಕ್ಕಿಂತ ಅರ್ಧ ಸೆಂಟಿಮೀಟರ್ ಕಡಿಮೆ ಇದ್ದಾರೆ' ಎಂದು ದೃಢೀಕರಿಸಿದ್ದರು.

ಈ ಪ್ರಮಾಣಪತ್ರವನ್ನು ಆಧರಿಸಿ ಕೆಪಿಎಸ್‌ಸಿ ಶಿವನಂಜೇಗೌಡ ಅವರ ಅರ್ಜಿ ತಿರಸ್ಕರಿಸಿತ್ತು. ಇದನ್ನು ಪ್ರಶ್ನಿಸಿ ಶಿವನಂಜೇಗೌಡ ಕರ್ನಾಟಕ ಆಡಳಿತಾತ್ಮಕ ನ್ಯಾಯಮಂಡಳಿ (ಕೆಎಟಿ) ಮೆಟ್ಟಿಲೇರಿದ್ದರು. ಕೆಎಟಿ ಈ ಅರ್ಜಿಯನ್ನು ವಜಾಗೊಳಿಸಿತ್ತು. ಇದನ್ನು ಪ್ರಶ್ನಿಸಿ ಶಿವನಂಜೇಗೌಡ ಹೈಕೋರ್ಟ್ ಮೆಟ್ಟಿಲೇರಿದ್ದರು.

ಅರ್ಜಿ ವಿಚಾರಣೆ ನಡೆಸಿದ್ದ ಹೈಕೋರ್ಟ್, 'ಮಿಂಟೊ ಆಸ್ಪತ್ರೆಯಲ್ಲಿ ಶಿವನಂಜೇಗೌಡ ಅವರ ದೇಹದಾರ್ಢ್ಯ ಪರೀಕ್ಷೆ ನಡೆಸಿ ವರದಿ ಸಲ್ಲಿಸುವಂತೆ 2022 ರ ಏಪ್ರಿಲ್ 18 ರಂದು ಆದೇಶಿಸಿತ್ತು. ಇದರನ್ವಯ ಮಿಂಟೊ ಆಸ್ಪತ್ರೆ ವೈದ್ಯರು ಅರ್ಜಿದಾರರ ದೇಹದಾರ್ಢ್ಯ ಪರೀಕ್ಷೆ ನಡೆಸಿ ವರದಿ ಸಲ್ಲಿಸಿದ್ದರು. 'ಶಿವನಂಜೇಗೌಡ ಅವರಿಗೆ ಬಣ್ಣದ ದೃಷ್ಟಿದೋಷ ಇಲ್ಲ ಮತ್ತು ಮೋಟಾರು ವಾಹನ ಇನ್ಸ್‌ಪೆಕ್ಟರ್ ಹುದ್ದೆಗೆ ಅರ್ಹರಾಗಿದ್ದಾರೆ' ಎಂದು ದೃಢೀಕರಿಸಿ ಪ್ರಮಾಣೀಕರಿಸಿದ ವರದಿ ನೀಡಿದ್ದರು.

ಈ ವರದಿಯನ್ನು ಒಪ್ಪಿರುವ ಹೈಕೋರ್ಟ್, 'ಅರ್ಜಿದಾರರು ಅರ್ಹರಾಗಿದ್ದರೂ ಬೌರಿಂಗ್ ಆಸ್ಪತ್ರೆಯ ವೈದ್ಯರು ನೀಡಿದ ದೇಹದಾರ್ಢ್ಯ ಪರೀಕ್ಷೆಯ ತಪ್ಪು ಪ್ರಮಾಣ ಪತ್ರದಿಂದಾಗಿ ಹುದ್ದೆ ಕಳೆದುಕೊಂಡಿರುವುದು ದುರದೃಷ್ಟಕರ. ಆದ್ದರಿಂದ, ಅರ್ಜಿದಾರರ ಅರ್ಜಿಯನ್ನು ತಿರಸ್ಕರಿಸಿರುವ ಕರ್ನಾಟಕ ಲೋಕಸೇವಾ ಆಯೋಗದ ಆದೇಶವನ್ನು ರದ್ದುಪಡಿಸಲಾಗಿದೆ. ಅವರನ್ನು ಮೋಟಾರು ವಾಹನ ಇನ್ಸ್‌ಪೆಕ್ಟರ್ ಹುದ್ದೆಗೆ ಪುನರ್ ಪರಿಗಣಿಸಬೇಕು' ಎಂದು ಹೈಕೋರ್ಟ್ ಆದೇಶಿಸಿದೆ.

ಸುದ್ದಿ 2 ನಿಮಿಷ

ರಾಮನ ಹೆಸರಿನಲ್ಲಿ ಮಾನಸಿಕ ಭ್ರಷ್ಟತೆ: ಮಹದೇವಪ್ಪ ಟೀಕೆ

ಬೆಂಗಳೂರು: 'ಪ್ರಧಾನಿ ನರೇಂದ್ರ ಮೋದಿ ನಮ್ಮ ದೇಶದೊಳಗೆ ರಾಮ ಎಂದು ಹೇಳಿ, ಹೊರ ದೇಶದಲ್ಲಿ ಬುದ್ಧ ಎನ್ನುವುದು ಯಾವ ಕಾರಣಕ್ಕೆ' ಎಂದು ಕಾಂಗ್ರೆಸ್ ನಾಯಕ ಎಚ್.ಸಿ.ಮಹದೇವಪ್ಪ ಪ್ರಶ್ನಿಸಿದ್ದಾರೆ.

ತಮ್ಮ ದುರಾಡಳಿತ ಮತ್ತು ದ್ವೇಷದ ಮೂಲಕ ರಾಮ ಮತ್ತು ಬುದ್ಧನ ಮರ್ಯಾದೆ ಕಳೆದಿರುವ ಬಿಜೆಪಿಯ ಕೋಮುವಾದಿಗಳು ಮೊದಲು ಸಹಜ ಮನುಷ್ಯರಾಗಬೇಕು. ಜಪಾನ್‌ಗೆ ಹೋಗಿ ಬುದ್ಧನ ಮಾರ್ಗ ಅನುಸರಿಸುವ ಅಗತ್ಯವಿದೆ ಎನ್ನುತ್ತಿರುವ ಪ್ರಧಾನಿಯವರು ಆ ಅಗತ್ಯ ಮೊದಲು ತಮಗಿದೆ ಎನ್ನುವುದನ್ನು ಮನಗಾಣಬೇಕು ಎಂದು ಹೇಳಿದ್ದಾರೆ.

ದೇಶದ ಒಳಗೆ ಯುದ್ಧ, ದೇಶದ ಹೊರಗೆ ಬುದ್ಧ ಎನ್ನುವ ಆತ್ಮದ್ರೋಹದ ಮಾತುಗಳು ನಿಲ್ಲಬೇಕು. ಪುರಾಣದ ಪುಸ್ತಕದೊಳಗಿರುವ ರಾಮ ಏನೂ ಮಾಡಲಾರ ಮತ್ತು ಕೇಳಲಾರ ಎಂಬ ಸ್ಪಷ್ಟತೆ ಇವರಿಗೆ ಇರುವುದರಿಂದಲೇ ರಾಮನ ಹೆಸರಿನಲ್ಲಿ ಮಾನಸಿಕ ಭ್ರಷ್ಟರಾಗಿ ರಾಮನ ಮಾನ ಕಳೆಯುತ್ತಿದ್ದಾರೆ. ಒಂದು ವೇಳೆ ಪುಸ್ತಕದ ರಾಮ ಜೀವವಿದ್ದಿದ್ದರೆ ಬಿಜೆಪಿಗರ ಮೇಲೆ ಮಾನನಷ್ಟ ಹೂಡುತ್ತಿದ್ದ ಎಂದು ಮಹದೇವಪ್ಪ ಹೇಳಿದ್ದಾರೆ.

ಶಾಲೆ ಮೆಟ್ಟಿಲು, ಗೋಡೆ ಮೇಲೆ 'ಸಾರಿ'

ಬೆಂಗಳೂರು: ಸುಂಕದಕಟ್ಟೆಯ ಶಾಂತಿಧಾಮ ವಿದ್ಯಾಸಂಸ್ಥೆ ಶಾಲೆಯ ಮೆಟ್ಟಿಲು, ಗೋಡೆ ಹಾಗೂ ರಸ್ತೆ ಮೇಲೆ 'ಸಾರಿ (ಕ್ಷಮಿಸಿ)' ಎಂಬುದಾಗಿ 100ಕ್ಕೂ ಹೆಚ್ಚು ಬಾರಿ ಬರೆಯಲಾಗಿದ್ದು, ಈ ರೀತಿ ಮಾಡಿರುವ ಕಿಡಿಗೇಡಿಗಳಿಗಾಗಿ ಪೊಲೀಸರು ಹುಡುಕಾಟ ನಡೆಸುತ್ತಿದ್ದಾರೆ.

'ಶಾಲೆ ಬಳಿ ತಡರಾತ್ರಿ ಬಂದು ಹೋಗಿರುವ ಕಿಡಿಗೇಡಿಗಳು, 'ಸಾರಿ' ಎಂಬುದಾಗಿ ಬರೆದಿದ್ದಾರೆ. ನಸುಕಿನಲ್ಲಿ ವಾಯುವಿಹಾರಕ್ಕೆ ಹೊರಟಿದ್ದ ಸಾರ್ವಜನಿಕರು, ಬರಹಗಳನ್ನು ನೋಡಿ ಶಾಲೆ ಶಿಕ್ಷಕರು ಹಾಗೂ ಠಾಣೆಗೆ ಮಾಹಿತಿ ನೀಡಿದ್ದರು' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

'ಸಾರಿ' ಎಂಬುದನ್ನು 100ಕ್ಕೂ ಹೆಚ್ಚು ಬಾರಿ ಇಂಗ್ಲಿಷ್‌ನಲ್ಲಿ ದೊಡ್ಡ ಅಕ್ಷರಗಳಲ್ಲಿ ಬರೆಯಲಾಗಿದೆ. ಜೊತೆಗೆ, ಪ್ರೀತಿಯ ಸಂಕೇತವಾದ ಹೃದಯದ ಚಿತ್ರವನ್ನೂ ಕೆಲವೆಡೆ ಬಿಡಿಸಲಾಗಿದೆ. ಯಾರೋ ಪ್ರೇಮಿ ಈ ರೀತಿ ಮಾಡಿರುವ ಅನುಮಾನವಿದೆ. ಆತನ ಪತ್ತೆಗಾಗಿ ಸಿ.ಸಿ.ಟಿ.ವಿ ಕ್ಯಾಮೆರಾ ಪರಿಶೀಲನೆ ನಡೆಸಲಾಗುತ್ತಿದೆ' ಎಂದೂ ತಿಳಿಸಿದರು.

ರಸ್ತೆಯಲ್ಲಿ ಚೆಲ್ಲಿದ ದ್ರವ: 5 ವಿದ್ಯಾರ್ಥಿಗಳು ಅಸ್ವಸ್ಥ

ಮಡಿಕೇರಿ: ವಿರಾಜಪೇಟೆ ಹಾಗೂ ಸಿದ್ದಾಪುರದ ರಸ್ತೆಯಲ್ಲಿ ಮಂಗಳವಾರ ಲಾರಿಯಿಂದ ದ್ರವ ಚೆಲ್ಲಿದ್ದರ ಪರಿಣಾಮ ಆರು ವಿದ್ಯಾರ್ಥಿಗಳು ಸೇರಿದಂತೆ ಸಾರ್ವಜನಿಕರು ಅಸ್ವಸ್ಥಗೊಂಡು ಆತಂಕದ ವಾತಾವರಣ ನಿರ್ಮಾಣವಾಗಿತ್ತು.

ಕುಶಾಲನಗರದಿಂದ ಸಿದ್ದಾಪುರ ಮಾರ್ಗವಾಗಿ ಲಾರಿಯು ಕೇರಳಕ್ಕೆ ತೆರಳುತ್ತಿತ್ತು. 'ಕೆಂಪು ಬಣ್ಣ'ದ ದ್ರವವು ಈ ಮಾರ್ಗದಲ್ಲಿ ಚೆಲ್ಲಿದೆ. ಶಾಲೆಗೆ ತೆರಳುತ್ತಿದ್ದ ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರಿಗೆ ಶೀತ, ಕೆಮ್ಮು, ಮೈ ಹಾಗೂ ಮೂಗಿನಲ್ಲಿ ಉರಿ ಕಾಣಿಸಿಕೊಂಡಿತ್ತು. 'ರಾಸಾಯನಿಕ ಸೋರಿಕೆಯಾಗಿದೆ' ಎಂದು ವದಂತಿ ಹಬ್ಬಿ, ಆತಂಕ ನೆಲೆಸಿತ್ತು. ಜನರೂ ಪಟ್ಟಣಕ್ಕೆ ಬರಲು ಹಿಂದೇಟು ಹಾಕಿದರು. ಮಧ್ಯಾಹ್ನದ ತನಕವು ಅಂಗಡಿಗಳನ್ನು ಬಂದ್ ಮಾಡಲಾಗಿತ್ತು.

ಅಸ್ವಸ್ಥರಾದ ವಿರಾಜಪೇಟೆ ರಸ್ತೆಯ ಸೇಂಟ್ ಆನ್ಸ್ ಶಾಲೆಯ ವಿದ್ಯಾರ್ಥಿಗಳಿಗೆ ಸಿದ್ದಾಪುರದ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಚಿಕಿತ್ಸೆ ನೀಡಲಾಯಿತು. ಉಸಿರಾಟದ ತೊಂದರೆ ಕಾಣಿಸಿಕೊಂಡ ವಿದ್ಯಾರ್ಥಿಗಳಿಗೆ ಆಮ್ಲಜನಕ ಪೂರೈಸಲಾಯಿತು. ಸಾರ್ವಜನಿಕರೂ ಭೀತಿಗೆ ಒಳಗಾಗಿ ಆಸ್ಪತ್ರೆ ಬಂದು ಚಿಕಿತ್ಸೆ ಪಡೆದುಕೊಂಡರು. ಎಲ್ಲರೂ ಚೇತರಿಸಿಕೊಂಡಿದ್ದಾರೆ.

ಲಾರಿಯನ್ನು ಮಾಕುಟ್ಟ ಚೆಕ್‌ಪೋಸ್ಟ್‌ನಲ್ಲಿ ಪೊಲೀಸರು ತಡೆದು ವಶಕ್ಕೆ ಪಡೆದಿದ್ದಾರೆ. 'ಕೇರಳಕ್ಕೆ ಮೆಣಸಿನ ಕಡು ರಸವನ್ನು ಸಾಗಿಸುತ್ತಿದ್ದ ಲಾರಿಯಿಂದ ಮೆಣಸಿನ ರಸ ಸೋರಿಕೆಯಾಗಿದೆ' ಎಂದು ಚಾಲಕರು ತಿಳಿಸಿದ್ದಾರೆ.

'ಗುಂಡಿ ಮುಚ್ಚುವ ಕಾರ್ಯ ಪ್ರಗತಿಯಲ್ಲಿ'

'ಫಿಕ್ಸ್ ಮೈ ಸ್ಟ್ರೀಟ್' ಆ್ಯಪ್‌ನಲ್ಲಿ ದೂರು ದಾಖಲು • 5,119ಗುಂಡಿಗಳ ಗುರುತು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಫಿಕ್ಸ್ ಮೈ ಸ್ಟ್ರೀಟ್' ಆ್ಯಪ್‌ನಲ್ಲಿ ದಾಖಲಾದ ದೂರುಗಳ ಆಧಾರದಲ್ಲಿ ನಗರದ ರಸ್ತೆಗಳಲ್ಲಿ 11,092 ಗುಂಡಿಗಳಿರುವುದನ್ನು ಗುರುತಿಸಲಾಗಿದ್ದು, 5,119 ಗುಂಡಿಗಳನ್ನು ಮುಚ್ಚುವ ಕೆಲಸ ಪ್ರಗತಿಯಲ್ಲಿದೆ' ಎಂದು ಬಿಬಿಎಂಪಿಯ ವಿಶೇಷ ಆಯುಕ್ತ ರವೀಂದ್ರ (ಯೋಜನೆ) ಮಾಹಿತಿ ನೀಡಿದರು.

ಮಂಗಳವಾರ ಮಾತನಾಡಿದ ಅವರು, 'ಫಿಕ್ಸ್ ಮೈ ಆ್ಯಪ್‌ನಲ್ಲಿ ದಾಖಲಾಗುವ ದೂರುಗಳನ್ನು ಆಯಾ ವಾರ್ಡ್‌ನ ಸಹಾಯಕ ಎಂಜಿನಿಯರ್ (ಎ.ಇ), ಸಹಾಯಕ ಕಾರ್ಯ ಪಾಲಕ ಎಂಜಿನಿಯರ್ (ಎಇಇ)

ಪರಿಶೀಲಿಸುತ್ತಾರೆ. ದೂರು ದಾಖಲಾದ ವಾರದೊಳಗೆ ಗುಂಡಿ ಮುಚ್ಚಬೇಕು ಎಂದು ಮುಖ್ಯ ಆಯುಕ್ತರು ಸೂಚಿಸಿದ್ದಾರೆ' ಎಂದು ರವೀಂದ್ರ ತಿಳಿಸಿದರು.

ಮಳೆಗಾಲದಲ್ಲಿ ಅನಾಹುತ ಸಂಭವಿಸದಂತೆ ತಡೆಯಲು ಕೈಗೊಂಡ ಕ್ರಮಗಳ ಬಗ್ಗೆ ವಿವರಿಸಿದ ಅವರು,'ದಿಢೀರ್ ಪ್ರವಾಹ ಉಂಟಾದರೆ, ಸಂತ್ರಸ್ತರಿಗೆ ತಾತ್ಕಾಲಿಕ ಆಶ್ರಯ ಕಲ್ಪಿಸಲು ಪ್ರತಿ ವಿಧಾನಸಭಾ ಕ್ಷೇತ್ರಲ್ಲಿ ತಲಾ ಒಂದು ಆಶ್ರಯತಾಣ ಗುರುತಿಸುತ್ತಿದ್ದೇವೆ' ಎಂದರು.

'ರಾಜಕಾಲುವೆ ದುರಸ್ತಿಗೆ ಪ್ರತಿ ವಲಯಕ್ಕೆ ಅನುದಾನ ಬಿಡುಗಡೆ ಆಗಿದೆ. ರಾಜಕಾಲುವೆ ಹೂಳನ್ನು ತೆರವುಗೊಳಿಸಲು ವಿಧಾನಸಭಾ ಕ್ಷೇತ್ರವಾರು ಅಲ್ಪಾವಧಿ ಟೆಂಡರ್ ಕರೆದಿದ್ದೇವೆ. ಪ್ರತಿ ವಲಯಕ್ಕೂ 30 ಎಚ್‌ಪಿ ಸಾಮರ್ಥ್ಯದ ಪಂಪ್ ಖರೀದಿಸಲು ಆದೇಶ ಮಾಡಲಾಗಿದೆ. ಕಟ್ಟಡದ ತಳಮಹಡಿ ಕಟ್ಟಡ ಮಾಲೀಕರು ಪಂಪ್ ಇಟ್ಟುಕೊಳ್ಳುವ ಮೂಲಕ ಪ್ರವಾಹ ಎದುರಿಸಲು ಸನ್ನದ್ಧರಾಗಿ' ಎಂದರು.

'ಭೌಗೋಳಿಕ ಮಾಹಿತಿ ಆಧರಿಸಿ ತಳ ಮಹಡಿಯ ವಾಹನ ನಿಲುಗಡೆ ತಾಣಗಳು ಕನಿಷ್ಠ ಇಂತಿಷ್ಟು ಮಟ್ಟಕ್ಕಿಂತ ಮೇಲಿರಬೇಕು ಎಂಬ ಮಾನದಂಡ ನಿಗದಿಪಡಿಸುವ ಚಿಂತನೆ ಇದೆ' ಎಂದರು.

'ಸ್ಮಾರ್ಟ್‌ಸಿಟಿ ಯೋಜನೆ ಅಡಿ ಅಭಿವೃದ್ಧಿಪಡಿಸಲು ಕೈಗೆತ್ತಿಕೊಂಡ 32 ಕಾಮಗಾರಿಗಳಲ್ಲಿ 28 ಪೂರ್ಣಗೊಂಡಿವೆ. ಅವೆನ್ಯೂ ರಸ್ತೆ, ಎಚ್‌ಕೆಪಿ ರಸ್ತೆ, ಸೇಂಟ್ ಜಾನ್ಸ್ ಚರ್ಚ್ ರಸ್ತೆ ಹಾಗೂ ಮಿಲ್ಲರ್ಸ್ ರಸ್ತೆಯ ವಿಸ್ತರಿತ ಭಾಗದ ಡಾಂಬರೀಕರಣ ಶೀಘ್ರ ಪೂರ್ಣಗೊಳ್ಳಲಿದೆ' ಎಂದರು.

'ರಾಜಕಾಲುವೆ ಹೂಳೆತ್ತಿದ ವಿವರ ಇಲ್ಲ'

'ರಾಜಕಾಲುವೆಯಲ್ಲಿ ಎಷ್ಟು ಹೂಳೆತ್ತಲಾಗಿದೆ ಎಂಬುದನ್ನು ಅಳೆಯುತ್ತಿಲ್ಲ. ಹೂಳು ತೆರವುಗೊಳಿಸಿದ ಬಳಿ ನೀರು ಸರಾಗವಾಗಿ ಹರಿಯುವಂತಿರಬೇಕು ಎಂದು ಟೆಂಡರ್‌ನಲ್ಲಿ ಷರತ್ತು ವಿಧಿಸಲಾಗುತ್ತದೆ. ತೆರವುಗೊಳಿಸಲಾದ ಹೂಳನ್ನು ಅಂಜನಾಪುರ, ಬೆಳ್ಳಹಳ್ಳಿಯಲ್ಲಿ ವಿಲೇಮಾಡಲಾಗಿದೆ' ಎಂದು ರವೀಂದ್ರ ತಿಳಿಸಿದರು.

ಬಿಜೆಪಿ ಮುಖಂಡ ಆತ್ಮಹತ್ಯೆ: ಪತ್ನಿ ವಿಚಾರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೆರೋಹಳ್ಳಿ ವಾರ್ಡ್‌ನ ಬಿಜೆಪಿ ಮುಖಂಡ ಬಿ.ಪಿ. ಅನಂತರಾಜು (46) ಆತ್ಮಹತ್ಯೆ ಪ್ರಕರಣದ ತನಿಖೆ ನಡೆಸುತ್ತಿರುವ ಬ್ಯಾಡರಹಳ್ಳಿ ಪೊಲೀಸರು, ಅನಂತ ರಾಜು ಪತ್ನಿ ಬಿ.ಕೆ. ಸುಮಾ ಅವರನ್ನು ಮಂಗಳವಾರ ವಿಚಾರಣೆ ನಡೆಸಿದರು.

'ಹನಿಟ್ರ್ಯಾಪ್ ಜಾಲಕ್ಕೆ ಸಿಲುಕಿ ಪತಿ ಅನಂತರಾಜು ಮೇ 12ರಂದು ಆತ್ಮಹತ್ಯೆ ಮಾಡಿಕೊಂಡಿದ್ದಾರೆ' ಎಂದು ಆರೋಪಿಸಿ ಪತ್ನಿ ಇತ್ತೀಚೆಗೆ ದೂರು ನೀಡಿದ್ದರು. ಎಫ್‌ಐಆರ್ ದಾಖಲಿಸಿಕೊಂಡಿದ್ದ ಪೊಲೀಸರು, ಕೆ.ಆರ್.ಪುರದ ನಿವಾಸಿ ರೇಖಾ ಎಂಬುವರನ್ನು ವಶಕ್ಕೆ ಪಡೆದಿದ್ದರು.

'ಪತಿಗೆ ಕಿರುಕುಳ ನೀಡಿ, ನಾನೇ ಸಾಯಿಸುತ್ತೇನೆ' ಎಂಬುದಾಗಿ ಪತ್ನಿ ಸುಮಾ ಹೇಳಿರುವುದಾಗಿ ಆರೋಪಿ ರೇಖಾ ಹೇಳಿಕೆ ನೀಡಿದ್ದರು. ಅದಕ್ಕೆ ಸಂಬಂಧಪಟ್ಟ ಸಂಭಾಷಣೆ ಆಡಿಯೊ ಹಾಜರುಪಡಿಸಿದ್ದರು. ಇದರಿಂದಾಗಿ ಪ್ರಕರಣ ತಿರುವು ಪಡೆದುಕೊಂಡಿದ್ದು, ಪತ್ನಿ ಮೇಲೆಯೇ ಪೊಲೀಸರಿಗೆ ಅನುಮಾನ ಬಂದಿದೆ.

'ಅನಂತರಾಜು ಅವರದ್ದು ಆತ್ಮಹತ್ಯೆಯೋ ಅಥವಾ ಕೊಲೆಯೋ ಎಂಬ ಅನುಮಾನ ಶುರುವಾಗಿದೆ. ಎಲ್ಲ ಆಯಾಮದಲ್ಲಿ ತನಿಖೆ ನಡೆಸಲಾಗುತ್ತಿದ್ದು, ಸದ್ಯಕ್ಕೆ ಸಾವಿಗೆ ನಿಖರ ಕಾರಣ ಗೊತ್ತಾಗಿಲ್ಲ. ಅನಂತರಾಜು ಬರೆದಿದ್ದಾರೆ ಎನ್ನಲಾದ ಮರಣ ಪತ್ರವನ್ನು ಪತ್ನಿ ನೀಡಿದ್ದರು. ಅದನ್ನು ಈಗಾಗಲೇ ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಲಾಗಿದೆ. ಸಾವಿನ ಬಗ್ಗೆ ಕೆಲ ಮಾಹಿತಿ ಬೇಕಾಗಿತ್ತು. ಹೀಗಾಗಿ, ಪತ್ನಿ ಸುಮಾ ವಿಚಾರಣೆ ಮಾಡಲಾಗಿದೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಸಂಜೆ 4 ಗಂಟೆಗೆ ಠಾಣೆಗೆ ಬಂದಿದ್ದ ಸುಮಾ ಅವರಿಂದ ಹೇಳಿಕೆ ಪಡೆದು, ವಾಪಸು ಕಳುಹಿಸಲಾಗಿದೆ' ಎಂದೂ ಮೂಲಗಳು ಹೇಳಿವೆ.

ವಾಹನ ಕದ್ದು ತಮಿಳುನಾಡಿನಲ್ಲಿ ಮಾರಾಟ

ಅಪರಾಧ ಸುದ್ದಿ

ಬೆಂಗಳೂರು: ನಗರದಲ್ಲಿ ದ್ವಿಚಕ್ರ ವಾಹನಗಳನ್ನು ಕದ್ದು ತಮಿಳುನಾಡಿನಲ್ಲಿ ಮಾರಾಟ ಮಾಡಿ ಹಣ ಸಂಪಾದಿಸುತ್ತಿದ್ದ ಆರೋಪದಡಿ ಎನ್.ಲಕ್ಷ್ಮಿಪತಿ (24) ಎಂಬುವರನ್ನು ಭಾರತಿನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಆಂಧ್ರಪ್ರದೇಶ ಕುಪ್ಪಂನ ಲಕ್ಷ್ಮಿಪತಿ, ಕರ್ನಾಟಕ ಹಾಗೂ ತಮಿಳುನಾಡು ಎರಡೂ ರಾಜ್ಯಗಳಲ್ಲೂ ಕಳ್ಳತನ ಮಾಡುತ್ತಿದ್ದ. ಈತನನ್ನು ಬಂಧಿಸಿ, ₹ 4 ಲಕ್ಷ ಮೌಲ್ಯದ 10 ದ್ವಿಚಕ್ರ ವಾಹನ ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ಬೆಂಗಳೂರಿಗೆ ಆಗಾಗ ಬರುತ್ತಿದ್ದ ಆರೋಪಿ, ಸಾರ್ವಜನಿಕ ಸ್ಥಳ ಹಾಗೂ ಮನೆ ಮುಂದೆ ನಿಲ್ಲಿಸುತ್ತಿದ್ದ ದ್ವಿಚಕ್ರ ವಾಹನಗಳ ಲಾಕ್ ಮುರಿದು ಕದಿಯುತ್ತಿದ್ದ. ಅವುಗಳನ್ನು ತಮಿಳುನಾಡಿಗೆ ತೆಗೆದುಕೊಂಡು ಹೋಗುತ್ತಿದ್ದ. ಕಾರ್ಮಿಕನ ಸೋಗಿನಲ್ಲಿ ಹಣದ ಅವಶ್ಯಕತೆ ಇರುವುದಾಗಿ ಹೇಳಿ ಮಾರಾಟ ಮಾಡುತ್ತಿದ್ದ.'

'ತಮಿಳುನಾಡಿನಲ್ಲೂ ದ್ವಿಚಕ್ರ ವಾಹನ ಕದಿಯುತ್ತಿದ್ದ ಆರೋಪಿ, ಅವುಗಳನ್ನು ಕರ್ನಾಟಕಕ್ಕೆ ತಂದು ನೋಂದಣಿ ಫಲಕ ಬದಲಾಯಿಸಿ ಮಾರುತ್ತಿದ್ದ. ನಂತರ, ಆಂಧ್ರಪ್ರದೇಶಕ್ಕೆ ಹೋಗಿ ಐಷಾರಾಮಿ ಜೀವನ ನಡೆಸುತ್ತಿದ್ದ' ಎಂದೂ ತಿಳಿಸಿದರು.

ಉದ್ಯಮಿ ಮಗನ ಮನೆ ಮೇಲೆ ಎನ್‌ಸಿಬಿ ದಾಳಿ

ಬೆಂಗಳೂರು: ಸದಾಶಿವನಗರದಲ್ಲಿರುವ ಉದ್ಯಮಿಯೊಬ್ಬರ ಮಗನ ಮನೆ ಮೇಲೆ ರಾಷ್ಟ್ರೀಯ ಮಾದಕ ವಸ್ತು ನಿಯಂತ್ರಣ ಘಟಕದ (ಎನ್‌ಸಿಬಿ) ಅಧಿಕಾರಿಗಳು ಮಂಗಳವಾರ ದಾಳಿ ಮಾಡಿದ್ದು, ಕೆಲವರನ್ನು ವಶಕ್ಕೆ ಪಡೆದಿದ್ದಾರೆ. 'ಉದ್ಯಮಿಯ ಮಗ, ಡ್ರಗ್ಸ್ ಸಂಗ್ರಹಿಸಿಟ್ಟುಕೊಂಡಿದ್ದ ಮಾಹಿತಿ ಎನ್‌ಸಿಬಿ ಅಧಿಕಾರಿಗಳಿಗೆ ಸಿಕ್ಕಿತ್ತು. ಅದರನ್ವಯ ಅಧಿಕಾರಿಗಳು ದಾಳಿ ಮಾಡಿ ಡ್ರಗ್ಸ್ ಜಪ್ತಿ ಮಾಡಿದ್ದಾರೆ' ಎಂದು ಮೂಲಗಳು ಹೇಳಿವೆ. ದಾಳಿ ಬಗ್ಗೆ ಎನ್‌ಸಿಬಿ ಅಧಿಕಾರಿಗಳು ಸದ್ಯಕ್ಕೆ ಹೆಚ್ಚಿನ ಮಾಹಿತಿ ನೀಡಿಲ್ಲ.

ಸ್ಪಾ ಮೇಲೆ ಸಿಸಿಬಿ ದಾಳಿ: ಯುವತಿಯರ ರಕ್ಷಣೆ

ಬೆಂಗಳೂರು: ಮಾರತ್ತಹಳ್ಳಿ ಠಾಣೆ ವ್ಯಾಪ್ತಿಯ ವರ್ತೂರು ರಸ್ತೆಯಲ್ಲಿರುವ 'ಝಿನ್ ಗ್ಲೋ ಸಲೂನ್ ಸ್ಪಾ ಆ್ಯಂಡ್ ವೆಲ್‌ನೆಸ್' ಮಳಿಗೆ ಮೇಲೆ ಸಿಸಿಬಿ ಪೊಲೀಸರು ದಾಳಿ ಮಾಡಿದ್ದಾರೆ.

'ಮಳಿಗೆಯಲ್ಲಿ ವೇಶ್ಯಾವಾಟಿಕೆ ನಡೆಯುತ್ತಿದ್ದ ಬಗ್ಗೆ ಮಾಹಿತಿ ಬಂದಿತ್ತು. ದಾಳಿ ಮಾಡಿ, ಮೂವರು ಯುವತಿಯರನ್ನು ರಕ್ಷಿಸಲಾಗಿದೆ. ಗ್ರಾಹಕರನ್ನು ಮಳಿಗೆ ಕರೆಸಲಾಗುತ್ತಿತ್ತು. ಉದ್ಯೋಗ ಹಾಗೂ ಹಣದ ಆಮಿಷವೊಡ್ಡಿ ಯುವತಿಯರನ್ನು ವೇಶ್ಯಾವಾಟಿಕೆಗೆ ಬಳಸಿಕೊಳ್ಳಲಾಗುತ್ತಿತ್ತು. ದಾಳಿ ವೇಳೆ ಕೆಲವರನ್ನು ವಶಕ್ಕೆ ಪಡೆಯಲಾಗಿದೆ. ರಕ್ಷಿಸಲಾದ ಯುವತಿಯರಿಗೆ ಪುನರ್ವಸತಿ ಕಲ್ಪಿಸಲು ಕ್ರಮ ಕೈಗೊಳ್ಳಲಾಗಿದೆ' ' ಎಂದು ಸಿಸಿಬಿ ಪೊಲೀಸರು ಹೇಳಿದರು.

₹1 ಕೋಟಿ ವಂಚನೆ: ವ್ಯಕ್ತಿ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಸ್ಕೆಟ್ ಮಾರಾಟ ಏಜೆನ್ಸಿಯಲ್ಲಿ ಪಾಲುದಾರಿಕೆ ನೀಡುವುದಾಗಿ ಹೇಳಿ ಜನರಿಂದ ಹಣ ಪಡೆದು ವಂಚಿಸುತ್ತಿದ್ದ ಆರೋಪದಡಿ ಮನೋಜ್ ಎಂಬುವರನ್ನು ಕೆಂಪೇಗೌಡ ನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಚಾಮರಾಜಪೇಟೆಯ ನಂಜಾಂಬಾ ಅಗ್ರಹಾರ ನಿವಾಸಿ ಮನೋಜ್, ಎಂ.ಕಾಂ ಪದವೀಧರ. ಈತನ ವಿರುದ್ಧ ಐದು ಎಫ್‌ಐಆರ್ ದಾಖಲಾಗಿದ್ದವು. ತಲೆಮರೆಸಿಕೊಂಡಿದ್ದ ಆರೋಪಿ, ಹೊರ ರಾಜ್ಯಗಳಲ್ಲಿ ಸುತ್ತಾಡುತ್ತಿದ್ದ. ವಿಳಾಸ ಪತ್ತೆ ಮಾಡಿ ಇತ್ತೀಚೆಗೆ ಬಂಧಿಸಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಪ್ರತಿಷ್ಠಿತ ಕಂಪನಿಗಳ ಬಿಸ್ಕೆಟ್ ಮಾರಾಟ ಏಜೆನ್ಸಿ ನಡೆಸುತ್ತಿರುವುದಾಗಿ ಆರೋಪಿ ಹೇಳುತ್ತಿದ್ದ. ವ್ಯವಹಾರ ವೃದ್ಧಿಸಲು ಹಣಕಾಸಿನ ನೆರವು ನೀಡಿದರೆ, ಏಜೆನ್ಸಿಯಲ್ಲಿ ಸಮ ಪಾಲುದಾರಿಕೆ ಕೊಡುವುದಾಗಿ ತಿಳಿಸುತ್ತಿದ್ದ. ಆತನ ಮಾತು ನಂಬಿ ಐವರು, ₹ 1 ಕೋಟಿ ನೀಡಿದ್ದರು. ಹಣ ಪಡೆದಿದ್ದ ಆರೋಪಿ, ನೀಡದೇ ನಾಪತ್ತೆಯಾಗಿದ್ದ' ಎಂದೂ ತಿಳಿಸಿವೆ.

'ಆರೋಪಿಯ ತಂದೆ, ಕೆಎಸ್‌ಆರ್‌ಟಿಸಿ ನೌಕರರಾಗಿದ್ದರು. ಅವರು ತೀರಿಕೊಂಡ ಬಳಿಕ ಅನುಕಂಪದ ಆಧಾರದಲ್ಲಿ ಮಗನಿಗೆ ಕೆಲಸ ಸಿಕ್ಕಿತ್ತು. ಕೆಲಸಕ್ಕೆ ಹೋಗದ ಆರೋಪಿ, ಬಿಸ್ಕೆಟ್ ಮಾರಾಟ ಏಜೆನ್ಸಿ ಹೆಸರಿನಲ್ಲಿ ಜನರನ್ನು ವಂಚಿಸಲಾರಂಭಿಸಿದ್ದ.

ಸದ್ಯ ಐವರು ಮಾತ್ರ ದೂರು ನೀಡಿದ್ದು, ಬೇರೆ ಯಾರಾದರೂ ವಂಚನೆಗೀಡಾಗಿದ್ದರೆ, ದೂರು ನೀಡಬಹುದು' ಎಂದೂ ಮೂಲಗಳು ಹೇಳಿವೆ.

ಕೋಮು ಸಾಮರಸ್ಯ

ಆರ್.ಟಿ.ನಗರ ಈದ್ಗಾ ಸಮಿತಿ ಆಯೋಜಿಸಿದ್ದ ಕೋಮು ಸಾಮರಸ್ಯ ಸಭೆಯಲ್ಲಿ (ಎಡದಿಂದ) ಮುಖಂಡ ವಿ.ಆನಂದ್, ಮೌಲಾನಾ ಮಕ್ಸೂದ್ ಇಮ್ರಾನ್ ಸಾಹೇಬ್, ಹೆಬ್ಬಾಳದ ಬೆತೆಲ್ ಎ.ಜಿ ಚರ್ಚ್‌ನ ಜಾನ್ಸನ್ ವರ್ಗೀಸ್, ಕಾಂಗ್ರೆಸ್ ಮುಖಂಡ ಅಬ್ದುಲ್ ವಾಜಿದ್, ದ್ರೌಪದಿ ಆದಿ ಪರಾಶಕ್ತಿ ಮಹಾಸಂಸ್ಥಾನ ಪೀಠದ ಸಾಯಿ ಮಂಜುನಾಥಸ್ವಾಮೀಜಿ, ಶಾಸಕ ಬೈರತಿ ಸುರೇಶ್, ಪತ್ರಕರ್ತ ಸಮಿವುಲ್ಲ, ಯುನೈಟೆಡ್ ಕ್ರಿಶ್ಚಿಯನ್ ಫೋರಂನ ಕಾರ್ಯದರ್ಶಿ ಫಾದರ್ ಗೇಬ್ರಿಯಲ್ ಲೋಬೊ ಪಾಲ್ಗೊಂಡಿದ್ದರು –ಪ್ರಜಾವಾಣಿ ಚಿತ್ರ

4ನೇ ಬಾರಿಗೂ ಪರೀಕ್ಷೆ ಮುಂದೂಡಿದ ಕುವೆಂಪು ವಿ.ವಿ

ದೂರ ಶಿಕ್ಷಣ ಪರೀಕ್ಷೆ ಮುಂದೂಡಿಕೆ

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: ಮೇ 26ರಿಂದ ನಡೆಯಬೇಕಿದ್ದ ಕುವೆಂಪು ವಿಶ್ವವಿದ್ಯಾಲಯದ ದೂರ ಶಿಕ್ಷಣ ವಿಭಾಗದ ಸ್ನಾತಕ ಹಾಗೂ ಸ್ನಾತಕೋತ್ತರ ಪರೀಕ್ಷೆಯನ್ನು ಮುಂದೂಡಿ ಕುಲಸಚಿವರು ಸುತ್ತೋಲೆ ಹೊರಡಿಸಿದ್ದಾರೆ.

ಆಂತರಿಕ ಮೌಲ್ಯಮಾಪನ ಆಧರಿಸಿ ಪ್ರಮೋಟ್ ಮಾಡಿದ್ದ ದೂರ ಶಿಕ್ಷಣ ವಿಭಾಗದ ಸ್ನಾತಕ ಹಾಗೂ ಸ್ನಾತಕೋತ್ತರ ವಿದ್ಯಾರ್ಥಿಗಳ ಫಲಿತಾಂಶ ರದ್ದುಪಡಿಸಿ, ಪರೀಕ್ಷೆ ನಡೆಸುವ ಕುವೆಂಪು ವಿವಿ ನಿರ್ಧಾರಕ್ಕೆ ಹೈಕೋರ್ಟ್ ನೀಡಿದ್ದ ಮಧ್ಯಂತರ ತಡೆಯಾಜ್ಞೆ ಇದುವರೆಗೆ ತೆರವಾಗದ ಕಾರಣ ಮತ್ತೆ ಪರೀಕ್ಷೆಯನ್ನು ಮುಂದೂಡಲಾಗಿದೆ.

ಪರೀಕ್ಷೆ ಮುಂದೂಡಲಾಗಿದೆ ಎಂದು ಕುಲಸಚಿವ (ಮೌಲ್ಯಮಾಪನ) ನವೀನ್ ಕುಮಾರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಆದರೆ, ಮುಂದಿನ ಪರೀಕ್ಷೆಯ ದಿನಾಂಕವನ್ನು ಇನ್ನೂ ನಿಗದಿಪಡಿಸಿಲ್ಲ. ಪ್ರಮೋಟ್ ಮಾಡಿ ಹೊರಡಿಸಿದ್ದ ಆದೇಶ ರದ್ದುಪಡಿಸಿ ಪರೀಕ್ಷೆ ನಡೆಸುವ ವಿವಿ ನಿರ್ಧಾರವನ್ನು ಕೆಲ ವಿದ್ಯಾರ್ಥಿಗಳು ಹೈಕೋರ್ಟ್‌ನಲ್ಲಿ ಪ್ರಶ್ನೆ ಮಾಡಿ ಪರೀಕ್ಷೆಗೆ ತಡೆಯಾಜ್ಞೆ ಕೋರಿದ್ದರು. ಅರ್ಜಿ ವಿಚಾರಣೆಗೆ ಅಂಗೀಕರಿಸಿದ ಹೈಕೋರ್ಟ್ ಮಧ್ಯಂತರ ತಡೆಯಾಜ್ಞೆ ನೀಡಿ ತಕರಾರು ಅರ್ಜಿ ಸಲ್ಲಿಸಲು ಕುವೆಂಪು ವಿವಿಗೆ 4 ವಾರಗಳ ಕಾಲಾವಕಾಶ ನೀಡಿತ್ತು.

ವಿದ್ಯಾರ್ಥಿಗಳ ನಂತರ ಕೆಲ ಕೇಂದ್ರಗಳು ಪರೀಕ್ಷೆಗೆ ತಡೆಯಾಜ್ಞೆ ಕೋರಿ ಹೈಕೋರ್ಟ್ ಮೊರೆಹೋಗಿವೆ. ಹೀಗಾಗಿ ಹೈಕೋರ್ಟ್ ಪರೀಕ್ಷೆಗೆ ತಾತ್ಕಾಲಿಕ ತಡೆಯಾಜ್ಞೆ ನೀಡಿದ್ದು, ಇನ್ನೂ ಅಂತಿಮ ತೀರ್ಪು ನೀಡಿಲ್ಲ. ಹೀಗಾಗಿ ಮತ್ತೆ ಪರೀಕ್ಷೆ ಮುಂದೂಡಲಾಗಿದೆ. ಇದುವರೆಗೆ ಒಟ್ಟು ನಾಲ್ಕು ಬಾರಿ ಪರೀಕ್ಷೆ ಮುಂದೂಡಿದ್ದು, 2019 ಮತ್ತು 2020ರಲ್ಲಿ ಪ್ರವೇಶ ಪಡೆದಿದ್ದ ವಿದ್ಯಾರ್ಥಿಗಳಿಗೆ ಪದವಿ ಪ್ರಮಾಣಪತ್ರದ ಕನಸು ಇನ್ನೂ ಮರೀಚಿಕೆಯಾಗಿದೆ.

₹10 ಕೋಟಿ ವೆಚ್ಚದ ರಾಜಕಾಲುವೆ ಕಾಮಗಾರಿ

ಸಾರುವೆ ಕುಸಿತ: ಕಾರ್ಮಿಕರಿಗೆ ಗಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶ್ರೀನಗರದ ಕಾಳಿದಾಸ ಬಸ್‌ನಿಲ್ದಾಣದ ಬಳಿ ರಾಜಕಾಲುವೆ ಮೇಲ್ಭಾಗದಲ್ಲಿ ಕಾಂಕ್ರೀಟ್ ಕಾಮಗಾರಿ ಸಂದರ್ಭ ಸಾರುವೆ ಕುಸಿದು ನಾಲ್ವರು ಕಾರ್ಮಿಕರು ಮಂಗಳವಾರ ಗಾಯಗೊಂಡಿದ್ದಾರೆ

ಗಾಯಾಳುಗಳನ್ನು ಮೀರ್ ಖಾಸಿಂ (24), ಆಸಿಬುಲ್ (24), ಶಿವಪ್ರಸಾದ್ (33), ರೆಹಮಾನ್ ಗಾಯಗೊಂಡವರು. ₹ 10 ಕೋಟಿ ವೆಚ್ಚದಲ್ಲಿ ಇಲ್ಲಿ ರಾಜಕಾಲುವೆ ಪಕ್ಕಾ ಕಾಂಕ್ರೀಟ್ ಕಾಮಗಾರಿ ನಡೆಸಲಾಗುತ್ತಿತ್ತು. ಆರ್‌ಎಂಐ ಇನ್ಫ್ರಾಸ್ಟ್ರಕ್ಚರ್ ಕಾಮಗಾರಿಯ ಗುತ್ತಿಗೆ ವಹಿಸಿಕೊಂಡಿತ್ತು. ಕಳಪೆ ಕಾಮಗಾರಿಯೇ ಈ ಕುಸಿತಕ್ಕೆ ಕಾರಣ ಎಂದು ಸ್ಥಳೀಯರು ದೂರಿದ್ದಾರೆ.

ಬಸವನಗುಡಿ ಕ್ಷೇತ್ರದ ಶಾಸಕ ಎಲ್.ಎ. ರವಿ ಸುಬ್ರಹ್ಮಣ್ಯ ಹಾಗೂ ಪಶ್ಚಿಮ ವಲಯದ ವಲಯ ಆಯುಕ್ತರಾದ ತುಳಸಿ ಮದ್ದಿನೇನಿ ಅವರು ದುರ್ಘಟನೆ ನಡೆದ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದರು.

'ಕಾಮಗಾರಿ ನಡೆಸುವಾಗ ಒಮ್ಮೆಲೆ ಹೆಚ್ಚು ಕಾಂಕ್ರೀಟ್ ಸುರಿದಿದ್ದರಿಂದ ಸಾರುವೆ ಕುಸಿದಿದೆ. ಕಾರ್ಮಿಕರಿಗೂ ಗಾಯಗಳಾಗಿವೆ. ಈ ಬಗ್ಗೆ ಬಿಬಿಎಂಪಿಯ ಟಿವಿಸಿಸಿಯಿಂದ ತನಿಖೆ ನಡೆಸಿ ವರದಿ ನೀಡುವಂತೆ ಸೂಚನೆ ನೀಡಿದ್ದೇನೆ. ಕಾಮಗಾರಿಗೆ ಬಳಸಿದ ಕಾಂಕ್ರೀಟ್‌ನ

ಶ್ರೀನಗರ ಕಾಳಿದಾಸ ಬಡಾವಣೆಯಲ್ಲಿ ನಿರ್ಮಾಣ ಹಂತದಲ್ಲಿ ಸಾರುವೆ ಕುಸಿದಿರುವುದು –ಪ್ರಜಾವಾಣಿ ಚಿತ್ರ

ಮುಖ್ಯಾಂಶಗಳು

- ಕಾಮಗಾರಿಯ ಗುತ್ತಿಗೆ ಪಡೆದಿದ್ದ ಆರ್‌ಎಂಐ ಇನ್ಫ್ರಾಸ್ಟ್ರಕ್ಚರ್
- ಶಾಸಕ ಎಲ್.ಎ. ರವಿ ಸುಬ್ರಹ್ಮಣ್ಯ ಸ್ಥಳಕ್ಕೆ ಭೇಟಿ

ಮಾದರಿಯ ಗುಣಮಟ್ಟವನ್ನೂ ಪರಿಶೀಲಿಸುವಂತೆ ನಿರ್ದೇಶನ ನೀಡಿದ್ದೇನೆ' ಎಂದು ರವಿ ಸುಬ್ರಹ್ಮಣ್ಯ ಅವರು 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದರು.

'ಸ್ವಲ್ಪ ಪ್ರಮಾಣದಲ್ಲಿ ಕಾಂಕ್ರೀಟ್ ಸುರಿದು ಎಚ್ಚರಿಕೆಯಿಂದ ಕೆಲಸ ನಿರ್ವಹಿಸುತ್ತಿದ್ದರೆ ಸಾರುವೆ ಕುಸಿಯುವುದನ್ನು ತಪ್ಪಿಸಬಹುದಿತ್ತು. ಮಳೆಗಾಲ ಆರಂಭವಾಗುವವರೆಗೆ ಕಾಯದೇ ಕಾಮಗಾರಿಗಳನ್ನು ಬೇಗನೇ ಪೂರ್ಣಗೊಳಿಸಬೇಕು' ಎಂದರು.

ಈ ಘಟನೆ ಕುರಿತು ಪ್ರತಿಕ್ರಿಯಿಸಿದ ಬಿಬಿಎಂಪಿ ರಾಜಕಾಲುವೆ ವಿಭಾಗದ ಮುಖ್ಯ ಎಂಜಿನಿಯರ್ ಎಂ. ಲೋಕೇಶ್, 'ಕಾರ್ಮಿಕರೊಬ್ಬರಿಗೆ ಗಾಯವಾಗಿದೆ. ಇನ್ನುಳಿದ ಮೂವರು ಪ್ರಥಮ ಚಿಕಿತ್ಸೆ ಪಡೆದು ಮರಳಿದ್ದಾರೆ. ಕಾಮಗಾರಿ ಸಂದರ್ಭದಲ್ಲಿ ಹೆಚ್ಚಿನ ಸುರಕ್ಷತಾ ಕ್ರಮಗಳನ್ನು ವಹಿಸುವಂತೆ ಸೂಚನೆ ನೀಡಿದ್ದೇನೆ' ಎಂದರು.

ವ್ಯಕ್ತಿ ಮೇಲೆ ಕಾರು ಹರಿಸಿದ್ದ ವೈದ್ಯೆ ಬಂಧನ

ಬೆಂಗಳೂರು: ನಾಗರಬಾವಿ ಬಳಿಯ ಕೆ.ಕೆ. ಬಡಾವಣೆ ಮುಖ್ಯರಸ್ತೆಯಲ್ಲಿ ದ್ವಿಚಕ್ರ ವಾಹನ ಸವಾರರೊಬ್ಬರ ಮೇಲೆ ಕಾರು ಹರಿಸಿ ಗಾಯಗೊಳಿಸಿದ್ದ ಆರೋಪದಡಿ ದಂತವೈದ್ಯೆ ಡಾ. ಲಕ್ಷ್ಮಿ ಅವರನ್ನು ಕಾಮಾಕ್ಷಿಪಾಳ್ಯ ಸಂಚಾರ ಪೊಲೀಸರು ಬಂಧಿಸಿದ್ದು, ಅವರಿಗೆ ನ್ಯಾಯಾಲಯ ಜಾಮೀನು ಮಂಜೂರು ಮಾಡಿದೆ.

'ಮೇ 21ರಂದು ಬೆಳಿಗ್ಗೆ ನಡೆದಿದ್ದ ಅಪಘಾತ ಸಂಬಂಧ ಗಾಯಾಳು ಪಾಪರೆಡ್ಡಿಪಾಳ್ಯದ ಪ್ರಭಾಕರ್ (52) ಅವರು ದೂರು ನೀಡಿದ್ದರು. ಸಾರ್ವಜನಿಕ ರಸ್ತೆಯಲ್ಲಿ ಅಪಾಯಕಾರಿ ಚಾಲನೆ (ಐಪಿಸಿ 279) ಹಾಗೂ ನಿರ್ಲಕ್ಷ್ಯದಿಂದ ಗಂಭೀರವಾಗಿ ಗಾಯಗೊಳಿಸಿದ (ಐಪಿಸಿ 338) ಆರೋಪದಡಿ ವೈದ್ಯೆ ವಿರುದ್ಧ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿತ್ತು' ಎಂದು ಕಾಮಾಕ್ಷಿಪಾಳ್ಯ ಸಂಚಾರ ಪೊಲೀಸರು ಹೇಳಿದರು.

'ವೈದ್ಯೆ ಲಕ್ಷ್ಮಿ ಅವರನ್ನು ಬಂಧಿಸಿ, ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿತ್ತು. ಅವರಿಗೆ ಜಾಮೀನು ಮಂಜೂರಾಗಿದ್ದರಿಂದ, ಬಿಡುಗಡೆ ಮಾಡಲಾಗಿದೆ. ಕಾರು ಜಪ್ತಿ ಮಾಡಲಾಗಿದೆ' ಎಂದೂ ತಿಳಿಸಿದರು.

ಅಪಘಾತದ ವಿವರ: 'ಕೆ.ಕೆ. ಮುಖ್ಯರಸ್ತೆಯಲ್ಲಿ ದೀಪಾ ಕಾಂಪ್ಲೆಕ್ಸ್ ಕಡೆಯಿಂದ ಪಾಪರೆಡ್ಡಿಪಾಳ್ಯ ಕಡೆ ದ್ವಿಚಕ್ರ ವಾಹನದಲ್ಲಿ ಹೊರಟಿದ್ದೆ. ಇದೇ ವೇಳೆ ಅತೀ ವೇಗವಾಗಿ ಬಂದ ಕಾರು (ಕೆಎ 05 ಎನ್‌ಡಿ 9391), ದ್ವಿಚಕ್ರ ವಾಹನಕ್ಕೆ ಗುದ್ದಿತ್ತು. ಕೆಳಗೆ ಬಿದ್ದ ನನ್ನ ಮೇಲೆಯೇ



ನಾಗರಬಾವಿ ಕೆ.ಕೆ. ಬಡಾವಣೆ ಮುಖ್ಯರಸ್ತೆಯಲ್ಲಿ ಬೈಕ್ ಸವಾರ ಮೇಲೆ ಹರಿದ ಕಾರು

ಕಾರಿನ ಚಕ್ರ ಹರಿಯಿತು' ಎಂದು ದೂರಿನಲ್ಲಿ ಪ್ರಭಾಕರ್ ಹೇಳಿದ್ದಾರೆ.

'ಮಗ ಹಾಗೂ ಸಾರ್ವಜನಿಕರು ನನ್ನನ್ನು ಯೂನಿಟಿ ಲೈಫ್ ಆಸ್ಪತ್ರೆಗೆ ದಾಖಲಿಸಿ, ಚಿಕಿತ್ಸೆ ಕೊಡಿಸಿದ್ದಾರೆ. ಅಪಘಾತದಿಂದಾಗಿ ನನ್ನ ಬಲಗಾಲು ಹಾಗೂ ತೊಡೆಗೆ ತೀವ್ರ ಪೆಟ್ಟು ಬಿದ್ದಿದೆ. ನಿರ್ಲಕ್ಷ್ಯದಿಂದ ಚಾಲನೆ ಮಾಡಿ ಅಪಘಾತವನ್ನುಂಟು ಮಾಡಿರುವ ಕಾರಿನ ಚಾಲಕಿ ಡಾ. ಲಕ್ಷ್ಮಿ ವಿರುದ್ಧ ಕಾನೂನು ಕ್ರಮ ಕೈಗೊಳ್ಳಿ' ಎಂದಿದ್ದಾರೆ.

'ಅಪಘಾತದ ದೃಶ್ಯ ಸಿ.ಸಿ.ಟಿ.ವಿ ಕ್ಯಾಮೆರಾದಲ್ಲಿ ಸೆರೆಯಾಗಿದೆ. ಇಷ್ಟಾದರೂ ಏನು ಆಗಿಲ್ಲವೆಂಬಂತೆ ವೈದ್ಯೆ ಹಾಗೂ ಅವರ ಪತಿ ವಾದಿಸುತ್ತಿದ್ದಾರೆ' ಎಂದೂ ಪ್ರಭಾಕರ್ ದೂರಿದ್ದಾರೆ.

ಸಂಧಾನಕ್ಕೆ ಯತ್ನಿಸಿದ್ದ ವೈದ್ಯೆ: ಗಾಯಾಳು ಜೊತೆ ಸಂಧಾನ ಮಾಡಿಸಿ ಠಾಣೆಯಲ್ಲೇ ಪ್ರಕರಣ ಇತ್ಯರ್ಥಪಡಿಸುವಂತೆ ವೈದ್ಯೆ, ಪೊಲೀಸರ ಮೊರೆ ಹೋಗಿದ್ದರು. ಆದರೆ, ಗಾಯಾಳು ಪ್ರಭಾಕರ್ ಸಂಧಾನಕ್ಕೆ ಒಪ್ಪದೇ ಪ್ರಕರಣ ದಾಖಲಿಸಿರುವುದಾಗಿ ಗೊತ್ತಾಗಿದೆ.

ಡಬ್ಲ್ಯುಎಚ್‌ಒ ಸಮಿತಿ ಅಧ್ಯಕ್ಷರಾಗಿ ರಾಜೇಶ್ ಭೂಷಣ್

ನವದೆಹಲಿ (ಪಿಟಿಐ): ಕೇಂದ್ರ ಆರೋಗ್ಯ ಕಾರ್ಯದರ್ಶಿ ರಾಜೇಶ್ ಭೂಷಣ್ ಅವರನ್ನು 75 ನೇ ವಿಶ್ವ ಆರೋಗ್ಯ ಅಧಿವೇಶನದ ಪ್ರಮುಖ ಸಮಿತಿಯ ಅಧ್ಯಕ್ಷರನ್ನಾಗಿ ನೇಮಿಸಲಾಗಿದೆ.

ವಿಶ್ವ ಆರೋಗ್ಯ ಅಧಿವೇಶನವು ಸಮಿತಿ–ಎ, ಸಮಿತಿ–ಬಿ ಎಂಬ ಎರಡು ಸಮಿತಿಗಳ ಮೂಲಕ ಕಾರ್ಯನಿರ್ವಹಿಸುತ್ತದೆ. ಭೂಷಣ್ ಅವರು ಸಮಿತಿ– ಬಿ ಅಧ್ಯಕ್ಷರಾಗಿ ನೇಮಕಗೊಂಡಿದ್ದಾರೆ ಎಂದು ಡಬ್ಲ್ಯುಎಚ್‌ಒ ಟ್ವೀಟ್ ಮಾಡಿದೆ.

ಸಮಿತಿ– ಎ ವಿಶ್ವ ಆರೋಗ್ಯ ಸಂಸ್ಥೆಯ (ಡಬ್ಲ್ಯುಎಚ್‌ಒ) ತಾಂತ್ರಿಕ ಮತ್ತು ಆರೋಗ್ಯ ವಿಷಯಗಳ ಬಗ್ಗೆ ಹಾಗೂ ಸಮಿತಿ– ಬಿ ಪ್ರಾಥಮಿಕವಾಗಿ ಸಂಸ್ಥೆಯ ಆಡಳಿತಾತ್ಮಕ ಮತ್ತು ಹಣಕಾಸಿನ ವಿಷಯಗಳ ಕುರಿತು ಚರ್ಚಿಸುತ್ತದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

194 ಸದಸ್ಯ ರಾಷ್ಟ್ರಗಳು ಭಾಗವಹಿಸಿರುವ ಡಬ್ಲ್ಯುಎಚ್‌ಒ ಅಧಿವೇಶನವು ಸ್ವಿಟ್ಜರ್ಲೆಂಡ್‌ನ ಜಿನೀವಾದಲ್ಲಿ ಮೇ 22 ರಿಂದ ಆರಂಭವಾಗಿದ್ದು, ಮೇ 28 ರವರೆಗೆ ನಡೆಯಲಿದೆ. ಪ್ರತಿ ವರ್ಷ ಅಧಿವೇಶನದಲ್ಲಿ ಆರೋಗ್ಯ ವಿಷಯ ಕುರಿತ ಸವಾಲುಗಳು ಮತ್ತು ಜವಾಬ್ದಾರಿಗಳ ಬಗ್ಗೆ ಪರಿಶೀಲನೆ ನಡೆಯುತ್ತದೆ.

ಎಚ್. ಏಕಾಂತಯ್ಯಗೆ ಗೌರವ ಡಾಕ್ಟರೇಟ್

ಬಾಗಲಕೋಟೆ: ಇಲ್ಲಿನ ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದಿಂದ ಇದೇ ಮೊದಲ ಬಾರಿಗೆ ಗೌರವ ಡಾಕ್ಟರೇಟ್ ಪ್ರದಾನ ಮಾಡಲಾಗುತ್ತಿದೆ. ಮಾಜಿ ಸಚಿವ, ಚಿತ್ರದುರ್ಗ ಜಿಲ್ಲೆ ಹಿರಿಯೂರಿನ ಎಚ್.ಏಕಾಂತಯ್ಯ ಈ ಗೌರವಕ್ಕೆ ಭಾಜನರಾಗಿದ್ದಾರೆ.

'ಏಕಾಂತಯ್ಯ ಸ್ವತಃ ಪ್ರಗತಿಪರ ರೈತ ಆಗಿದ್ದು, ತೋಟಗಾರಿಕೆ ಕ್ಷೇತ್ರದಲ್ಲಿ ಮಾಡಿರುವ ಸಾಧನೆ ಪರಿಗಣಿಸಿ ಆಯ್ಕೆ ಮಾಡಲಾಗಿದೆ. ಮೇ 25ರಂದು ಬಾಗಲಕೋಟೆ ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದ ಆವರಣದಲ್ಲಿ ನಡೆಯಲಿರುವ 11ನೇ ಘಟಿಕೋತ್ಸವದಲ್ಲಿ ರಾಜ್ಯಪಾಲ ಥಾವರ್‌ಚಂದ್ ಗೆಹಲೋತ್ ಗೌರವ ಡಾಕ್ಟರೇಟ್ ಪ್ರದಾನ ಮಾಡಲಿದ್ದಾರೆ' ಎಂದು ಕುಲಪತಿ ಡಾ.ಕೆ. ಎಂ.ಇಂದಿರೇಶ ತಿಳಿಸಿದ್ದಾರೆ.

ಮೈಸೂರು ರೇಸ್

ಎಟರ್ನಲ್ ಪ್ರಿನ್ಸೆಸ್ ಗೆಲ್ಲುವ ನಿರೀಕ್ಷೆ

ಮೈಸೂರು ಜುವೆನೈಲ್ ಮಿಲಿಯನ್ ಬುಧವಾರದ ಮೈಸೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಎಟರ್ನಲ್ ಪ್ರಿನ್ಸೆಸ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆ ಇದೆ. ಮಧ್ಯಾಹ್ನ 1.30ಕ್ಕೆ ಪ್ರಾರಂಭವಾಗಲಿರುವ ದಿನದ ಒಂಬತ್ತು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ

1ನೇ ರೇಸ್: ಕಂಟ್ರೀಸ್ ಡಿಲೈಟ್ 5, ಬ್ಲಡ್ 3, ಕಂಟ್ರೀಸ್ ಸಾಂಗ್ 8
2ನೇ ರೇಸ್: ರಾಜ್‌ವೀರ್ 12, ವೈಲ್ಡ್ ಸ್ಪೆಲ್ 1, ಅನ್‌ಇಮಾಜಿನೆಬಲ್ 2
3ನೇ ರೇಸ್: ಡಾಲ್‌ಹೌಸಿ 4, ಸ್ಕಾರ್ಲೆಟ್ ಪ್ರಿನ್ಸೆಸ್ 11, ಶಿವಾಲಿಕ್ ಸ್ಟೈಲ್ 10
4ನೇ ರೇಸ್: ಸಾಂತೋರಿನಿ 5, ಸೇಂಟ್ ಲೂಸಿಯಾ 12, ಕೂರ್ಗ್ ಜನರಲ್ 3
5ನೇ ರೇಸ್: ಬಯೋಮೆಟ್ರಿಕ್ 10, ಕ್ರೆಸೆಂಡೊ 7, ಗಿಂಟೋಕಿ 3
6ನೇ ರೇಸ್: ಗ್ಯಾಲರಿ ಕ್ವೀನ್ 4, ಮಿಲೋಸ್ 7, ಎಗೆನ್ಸ್ಟ್ ಆಲ್ ಆಡ್ಸ್ 1
7ನೇ ರೇಸ್: ಎಟರ್ನಲ್ ಪ್ರಿನ್ಸೆಸ್ 6, ಓ ಕನ್ಹಯ್ಯ 4, ಫನಂಬುಲಿಸ್ಟ್ 7
8ನೇ ರೇಸ್: ವಚನ್ 1, ಮೇಕ್ ಮೈ ವೇ 4, ಸೆಗರ 3
9ನೇ ರೇಸ್: ಮ್ಯುಟಂಟ್ 12, ಟ್ರೇಸರ್ ಬುಲ್ಲೆಟ್ 11, ಕೋಸ್ಟಲ್ ಕ್ರೂಝ್ 1

ಉತ್ತಮ ಬೆಟ್: ಸಾಂತೋರಿನಿ

ಜಾಕ್‌ಪಾಟ್	ಮಿನಿ ಜಾಕ್‌ಪಾಟ್	1ನೇ ಟ್ರಿಬಲ್
5,6,7,8,9	6,7,8,9	1,2,3

2ನೇ ಟ್ರಿಬಲ್	3ನೇ ಟ್ರಿಬಲ್
4,5,6	7,8,9

28ರಂದು ಏಕಕಾಲದಲ್ಲಿ ಚಾಲನೆ: ಹೋರಾಟದ ನೆಲದಲ್ಲಿ ಒಂದು ದಿನ

‘ಅಮೃತ ಭಾರತಿಗೆ ಕನ್ನಡದಾರತಿ’ ಅಭಿಯಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಭಾರತ ಸ್ವಾತಂತ್ರ್ಯದ ಅಮೃತಮಹೋತ್ಸವದ ಅಂಗವಾಗಿ ‘ಅಮೃತ ಭಾರತಿಗೆ ಕನ್ನಡದಾರತಿ’ ರಾಷ್ಟ್ರಭಕ್ತಿ ಅಭಿಯಾನ ಮೇ 28ರಿಂದ ಆರಂಭವಾಗಲಿದೆ. ಸ್ವಾತಂತ್ರ್ಯ ಹೋರಾಟ ನಡೆದ ರಾಜ್ಯದ 75 ಸ್ಥಳಗಳಲ್ಲಿ ಈ ಕಾರ್ಯಕ್ರಮ ಏಕಕಾಲದಲ್ಲಿ ಚಾಲನೆ ನೀಡಲಿದ್ದೇವೆ’ ಎಂದು ಕನ್ನಡ ಮತ್ತು ಸಂಸ್ಕೃತಿ ಸಚಿವ ವಿ.ಸುನಿಲ್ ಕುಮಾರ್ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಂಗಳವಾರ ಕಾರ್ಯಕ್ರಮದ ವಿವರ ನೀಡಿದ ಅವರು, ‘ಸ್ವಾತಂತ್ರ್ಯ ಹೋರಾಟಕ್ಕೆ ಕನ್ನಡದ ವೀರಭೂಮಿ ನೀಡಿದ ಕೊಡುಗೆಯನ್ನು ಸ್ಮರಿಸುವುದು ಮತ್ತು ಹೊಸ ಪೀಳಿಗೆಗೆ ವಿಷಯ ತಿಳಿಸುವುದು ಕಾರ್ಯಕ್ರಮದ ಆಶಯ’ ಎಂದರು.

ಮೂರು ಹಂತಗಳಲ್ಲಿ ‘ಅಮೃತ ಭಾರತಿಗೆ ಕನ್ನಡದಾರತಿ’ ಅಭಿಯಾನ ಮೂರು ತಿಂಗಳು ಕಾಲ ನಡೆಯಲಿದೆ. ಮೇ 28ರಂದು ಬೆಂಗಳೂರಿನಲ್ಲಿ ನಡೆಯುವ ಕಾರ್ಯಕ್ರಮಕ್ಕೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಚಾಲನೆ ನೀಡಲಿದ್ದಾರೆ. ದಕ್ಷಿಣ ಭಾರತದ ಜಲಿಯನ್ ವಾಲಾಭಾಗ್ ಎಂದೇ ಕರೆಯಲ್ಪಡುವ ವಿದುರಾಶ್ವತ್ಥದಲ್ಲಿ ನಡೆಯುವ ಕಾರ್ಯಕ್ರಮವನ್ನು ವಿಧಾನಸಭೆ ಸ್ಪೀಕರ್ ವಿಶ್ವೇಶ್ವರ ಹೆಗಡೆ ಕಾಗೇರಿ ಉದ್ಘಾಟಿಸುವರು ಎಂದು ಮಾಹಿತಿ ನೀಡಿದರು.

‘ಪೋರ್ಚುಗೀಸರ ವಿರುದ್ಧ ಮೊದಲ ಹೋರಾಟ ನಡೆದ ಮಂಗಳೂರಿನ ಉಳ್ಳಾಲ, ಬೀದರ್‌ನ ಗೋರಟಾ ಸೇರಿ ನೂರಾರು ಸ್ಥಳಗಳು ಸ್ವಾತಂತ್ರ್ಯ ಚಳವಳಿಗೆ ಸಾಕ್ಷಿಯಾಗಿವೆ. ಎಲ್ಲ ಕಡೆ ಕಾರ್ಯಕ್ರಮ ನಡೆಸಲು ಸಾಧ್ಯವಾಗುತ್ತಿಲ್ಲ. 75 ಸ್ಥಳಗಳನ್ನು ಗುರುತಿಸಿ ಒಂದೇ ದಿನ ಕಾರ್ಯಕ್ರಮ ನಡೆಸುವ ಉದ್ದೇಶ ಇತ್ತು. ಆದರೆ, ಚುನಾವಣೆ ನೀತಿ ಸಂಹಿತೆ ಇರುವುದರಿಂದ ಮೊದಲ ಹಂತದಲ್ಲಿ 45 ಕಡೆ ಕಾರ್ಯಕ್ರಮಗಳು ನಡೆಯಲಿವೆ. ಉಳಿದೆಡೆ ಜೂನ್ 25ರಂದು ಕಾರ್ಯಕ್ರಮ ನಡೆಯಲಿವೆ. ಹೋರಾಟದ ನೆಲದಲ್ಲಿ ಶಿಲಾಫಲಕ ಅಳವಡಿಸಲಾಗುತ್ತದೆ’ ಎಂದು ಹೇಳಿದರು.

‘ಒಂದೊಂದು ಕಾರ್ಯಕ್ರಮದಲ್ಲಿ 3 ಸಾವಿರದಿಂದ 5 ಸಾವಿರ ಜನ ಸೇರುವ ನಿರೀಕ್ಷೆ ಇದೆ. ಇದು ಇಲಾಖೆ ಕಾರ್ಯಕ್ರಮವಷ್ಟೇ ಆಗದೆ ಸಮಾಜದ ಕಾರ್ಯಕ್ರಮ ಆಗಬೇಕು. ಹಾಗಾಗಿ ಸಂಘ–ಸಂಸ್ಥೆಗಳ ಸಹಕಾರ ಕೇಳಿದ್ದೇವೆ. ಕಾರ್ಯಕ್ರಮವನ್ನು ಅರ್ಥಪೂರ್ಣವಾಗಿ ನಡೆಸಲು ಎಲ್ಲಾ ಜಿಲ್ಲಾಧಿಕಾರಿಗಳ ಖಾತೆಗೆ ತಲಾ ₹1.50 ಲಕ್ಷ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕರ ಖಾತೆಗೆ ₹1.80 ಲಕ್ಷ ನೀಡಲಾಗುತ್ತಿದೆ’ ಎಂದು ವಿವರಿಸಿದರು.

‘ಆ.9ರಿಂದ ಎಲ್ಲರ ಮನೆ ಮೇಲೆ ರಾಷ್ಟ್ರಧ್ವಜ’

‘ಅಮೃತಮಹೋತ್ಸವದ ಅಂಗವಾಗಿ ಆಗಸ್ಟ್ 1ರಿಂದ 8ರವರೆಗೆ ರಥಯಾತ್ರೆಗಳು ನಡೆಯಲಿವೆ. ಕಂದಾಯ ಜಿಲ್ಲೆಗಳಿಂದ ಆರಂಭವಾಗಿ ಎಲ್ಲ ಜಿಲ್ಲೆಗಳನ್ನು ಹಾಯ್ದು ಆ.9ರಂದು ಬೆಂಗಳೂರಿಗೆ ಬಂದು ಸಮಾರೋಪಗೊಳ್ಳಲಿವೆ’ ಎಂದು ಸುನಿಲ್‌ಕುಮಾರ್ ಹೇಳಿದರು.

‘ಆ.9ರಿಂದಲೇ ರಾಜ್ಯದ ಎಲ್ಲರ ಮನೆಗಳ ಮೇಲೆ ರಾಷ್ಟ್ರಧ್ವಜ ಹಾರಿಸಲು ಚಿಂತನೆ ನಡೆಸಲಾಗಿದೆ. ಈ ಸಂಬಂಧ ಜನರಲ್ಲಿ ಮನವಿ ಮಾಡಲಾಗುತ್ತಿದೆ. ಆಗಸ್ಟ್ 15ರಂದೂ ಎಲ್ಲರ ಮನೆ ಮೇಲೆ ರಾಷ್ಟ್ರಧ್ವಜ ಹಾರಿಸುವಂತೆ ಕೋರಲಾಗುವುದು’ ಎಂದರು.

‘ಬ್ರಿಟಿಷರ ವಿರುದ್ಧ ಹೋರಾಟ: ಟಿಪ್ಪು ಸುಲ್ತಾನ್ ಹೆಸರಿಲ್ಲ’

ಅಮೃತ ಮಹೋತ್ಸವದ ಅಂಗವಾಗಿ ನಡೆಯುತ್ತಿರುವ ‘ಅಮೃತ ಭಾರತಿಗೆ ಕನ್ನಡದಾರತಿ’ ಅಭಿಯಾನದ ಅಂಗವಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ 30 ನಿಮಿಷದ ಸಾಕ್ಷ್ಯಚಿತ್ರ ಬಿಡುಗಡೆ ಮಾಡಿದ್ದು, ಅದರಲ್ಲಿ ಟಿಪ್ಪು ಸುಲ್ತಾನ್ ಹೊರತಾಗಿ ಬಹುತೇಕ ಪ್ರಮುಖರ ಹೆಸರು ಉಲ್ಲೇಖವಾಗಿದೆ.

ಉಳ್ಳಾಲದ ರಾಣಿ ಅಬ್ಬಕ್ಕ, ಗೇರುಸೊಪ್ಪೆಯ ರಾಣಿ ಚನ್ನಭೈರಾದೇವಿ, ಸೋಂದೆಯ ರಾಜರು, ದೋಂಡಿಯಾ ವಾಘ್, ಹಲಗಲಿಯ ಬೇಡರು, ವೆಂಕಟಪ್ಪನಾಯ್ಕ, ವಿದುರಾಶ್ವತ್ಥದ ಹತ್ಯಾಕಾಂಡ, ಸುರಪುರದ ಹೋರಾಟ, ಶಿವಮೊಗ್ಗ ಜಿಲ್ಲೆಯ ಈಸೂರು, ಬೀದರ್‌ನ ಗೋರಟಾ ಹೋರಾಟಗಳ ಬಗ್ಗೆ ಹೇಳಲಾಗಿದೆ. ಗಾಂಧೀಜಿ ರಾಜ್ಯದಲ್ಲಿ ನಡೆಸಿದ ಪ್ರವಾಸದ ಕುರಿತು ಕಿರುಚಿತ್ರದಲ್ಲಿ ವಿವರಿಸಲಾಗಿದೆ.

ಬ್ರಿಟಿಷರ ವಿರುದ್ಧ ಪ್ರಬಲವಾಗಿ ಹೋರಾಟ ನಡೆಸಿದ ದೋಂಡಿಯಾ ವಾಘ್ ಕುರಿತು ಹೇಳುವಾಗ ಟಿಪ್ಪು ಹೆಸರು ಉಲ್ಲೇಖವಾಗುತ್ತದೆ. ‘ದೋಂಡಿಯಾ ವಾಘ್‌ನನ್ನು ಟಿಪ್ಪು ಸೆರೆಮನೆಯಲ್ಲಿ ಇರಿಸದೇ ಇದ್ದಿದ್ದರೆ ಬ್ರಿಟಿಷರ ವಿರುದ್ಧ ಹೋರಾಟ ಇನ್ನಷ್ಟು ತೀವ್ರಗೊಳ್ಳುತ್ತಿತ್ತು’ ಎಂದು ವಿವರಿಸಲು ಟಿಪ್ಪು ಹೆಸರು ಬಳಕೆಯಾಗಿದೆ.

ಆಂಗ್ಲೊ ಮೈಸೂರು ಯುದ್ಧದ ಬಗ್ಗೆ ಮಾಹಿತಿಯನ್ನೇ ಈ ಚಿತ್ರ ನೀಡುವುದಿಲ್ಲ. ಈ ಬಗ್ಗೆ ಪ್ರತಿಕ್ರಿಯಿಸಿದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನೋಡಲ್ ಅಧಿಕಾರಿ ಸುದರ್ಶನ್, ‘ಟಿಪ್ಪು ವಿಷಯ ಪ್ರಸ್ತಾಪಿಸದಂತೆ ಸರ್ಕಾರದಿಂದ ಯಾವುದೇ ಸೂಚನೆ ಇಲ್ಲ. 30 ನಿಮಿಷದ ಮಿತಿಯಲ್ಲಿ ಕೆಲವು ವಿಷಯಗಳನ್ನಷ್ಟೇ ಪ್ರಸ್ತಾಪಿಸಲು ಸಾಧ್ಯವಾಗಿದೆ. ಮುಂದಿನ ದಿನಗಳಲ್ಲಿ ಸಾಕ್ಷ್ಯಚಿತ್ರವನ್ನು ವಿಸ್ತರಿಸುವ ಪ್ರಸ್ತಾಪ ಬಂದರೆ ಎಲ್ಲವನ್ನೂ ಒಳಗೊಳ್ಳಲು ಸಾಧ್ಯವಾಗುತ್ತದೆ’ ಎಂದರು.

ಸೂರ್ಯಸಿಟಿ 4ನೇ ಹಂತದ ವಸತಿ ಯೋಜನೆ

ರೈತರಿಗೆ ತ್ವರಿತ ಪರಿಹಾರಕ್ಕೆ ಸೂಚನೆ

ಪ್ರಜಾವಾಣಿ ವಾರ್ತೆ

ಆನೇಕಲ್ ತಾಲ್ಲೂಕಿನ ಸೂರ್ಯಸಿಟಿ 4ನೇ ಹಂತದ ಯೋಜನಾ ಪ್ರದೇಶದ ಭೂಮಾಲೀಕರು ಮತ್ತು ಅಧಿಕಾರಿಗಳ ಸಭೆಯನ್ನುದ್ದೇಶಿಸಿ ವಸತಿ ಸಚಿವ ವಿ.ಸೋಮಣ್ಣ ಮಾತನಾಡಿದರು

ಆನೇಕಲ್: ತಾಲ್ಲೂಕಿನ ಸೂರ್ಯಸಿಟಿ 4ನೇ ಹಂತದ ಯೋಜನಾ ಪ್ರದೇಶದ ಭೂ ಮಾಲೀಕರು ಮತ್ತು ಅಧಿಕಾರಿಗಳ ಸಭೆಯು ವಸತಿ ಸಚಿವ ವಿ. ಸೋಮಣ್ಣ ನೇತೃತ್ವದಲ್ಲಿ ಜಿಗಣಿಯ ಯೋಗ ವಿಶ್ವವಿದ್ಯಾಲಯ ಪ್ರಶಾಂತಿ ಕುಟೀರದಲ್ಲಿ ಮಂಗಳವಾರ ನಡೆಯಿತು.

ಸಚಿವ ಸೋಮಣ್ಣ ಮಾತನಾಡಿ, ‘ವಸತಿ ಯೋಜನೆಗಾಗಿ ಭೂಸ್ವಾಧೀನ ಪಡಿಸಿಕೊಂಡ ರೈತರಿಗೆ ದೊರೆಯ ಬೇಕಾದ ಪರಿಹಾರವನ್ನು ತ್ವರಿತವಾಗಿ ನೀಡುವಂತೆ ಅಧಿಕಾರಿಗಳಿಗೆ ಸೂಚಿಸಲಾಗಿದೆ’ ಎಂದು ತಿಳಿಸಿದರು.

ಕೆಲವು ದಾಖಲೆ ಪತ್ರಗಳು ಸಮರ್ಪಕವಾಗಿಲ್ಲ ಎಂಬ ಕಾರಣ ನೀಡಿ ಪರಿಹಾರ ನೀಡಲು ಅಧಿಕಾರಿಗಳು ವಿಳಂಬ ಮಾಡುತ್ತಿದ್ದಾರೆ ಎಂದು ರೈತರು ತಿಳಿಸಿದ್ದಾರೆ. ಕಂದಾಯ ಮತ್ತು ವಸತಿ ಇಲಾಖೆ ಅಧಿಕಾರಿಗಳು ಗ್ರಾಮಗಳಿಗೆ ತೆರಳಿ ಸ್ಥಳ ಪರಿಶೀಲನೆ ಮಾಡಿ ಅರ್ಹ ರೈತರಿಗೆ ಪರಿಹಾರ ನೀಡಲು ಕ್ರಮಕೈಗೊಳ್ಳಬೇಕು ಎಂದು ಸೂಚಿಸಿದರು.

ಇಂಡ್ಲವಾಡಿ, ಬೊಮ್ಮಂಡಹಳ್ಳಿ, ಕಾಡುಜಕ್ಕನಹಳ್ಳಿ, ಬಗ್ಗನದೊಡ್ಡಿ, ಕೋನಸಂದ್ರ ಗ್ರಾಮಗಳ ಸುಮಾರು 1,938 ಎಕರೆ ಜಮೀನನ್ನು ವಸತಿ ಯೋಜನೆಗೆ ಸ್ವಾಧೀನಪಡಿಸಿಕೊಳ್ಳಲಾಗಿದೆ. ಜಮೀನು ನೀಡಿರುವುದರಿಂದ ಈ ಐದು ಗ್ರಾಮಗಳಲ್ಲಿಯೂ ಮೂಲಸೌಲಭ್ಯ ಕಲ್ಪಿಸಲು ಕರ್ನಾಟಕ ಗೃಹ ಮಂಡಳಿ ಕ್ರಮ ಕೈಗೊಳ್ಳಬೇಕು ಎಂದರು.

ಕೆಲವು ರೈತರು ನಮೂನೆ 50, 53 ಅರ್ಜಿಗಳನ್ನು ಸಲ್ಲಿಸಿ ಭೂ ಮಂಜೂರಾತಿಗೆ ಕಾಯುತ್ತಿದ್ದಾರೆ. ಅವರು ಹಲವು ವರ್ಷಗಳಿಂದ ಸಾಗುವಳಿ ಮಾಡುತ್ತಾ ಬಂದಿದ್ದಾರೆ. ನ್ಯಾಯಬದ್ಧವಾಗಿ ಅವರಿಗೆ ದೊರೆಯುವ ಸೌಲಭ್ಯಗಳನ್ನು ಅಧಿಕಾರಿಗಳು ಪರಿಶೀಲಿಸಿ ನೀಡುವಂತೆ ಸೂಚಿಸಲಾಗಿದೆ ಎಂದರು.

‘1,938 ಎಕರೆ ಭೂಮಿ ಸ್ವಾಧೀನ’

‘ಸೂರ್ಯಸಿಟಿ 4ನೇ ಹಂತದ ಯೋಜನೆಗೆ 1,938 ಎಕರೆ ಜಮೀನನ್ನು ಸ್ವಾಧೀನಪಡಿಸಿಕೊಳ್ಳಲಾಗಿದೆ. ಈ ಪೈಕಿ 514 ಎಕರೆ ಜಮೀನು ಸರ್ಕಾರಿ ಜಮೀನಾಗಿದೆ’ ಎಂದು ಜಿಲ್ಲಾಧಿಕಾರಿ ಜೆ. ಮಂಜುನಾಥ್ ತಿಳಿಸಿದರು.

ಸಭೆಯಲ್ಲಿ ಮಾತನಾಡಿದ ಅವರು, ಐದು ಗ್ರಾಮಗಳು 11 ಸರ್ವೆ ನಂಬರ್‌ಗಳಲ್ಲಿ ಭೂಸ್ವಾಧೀನ ಮಾಡಲಾಗಿದೆ. ಪಹಣಿಗಳಲ್ಲಿ ಕೆಲವು ದಾಖಲೆಗಳು ಹೊಂದಾಣಿಕೆಯಾಗುತ್ತಿಲ್ಲ. ಇವುಗಳನ್ನು ಸರಿಪಡಿಸಿ ಪರಿಹಾರ ನೀಡುವಂತೆ ಸಚಿವರು ಸೂಚಿಸಿದ್ದಾರೆ. ಈ ನಿಟ್ಟಿನಲ್ಲಿ ಜೂನ್ 2ರಂದು ಉಪ ವಿಭಾಗಾಧಿಕಾರಿ ಅವರು ಗ್ರಾಮಗಳಲ್ಲಿ ವಾಸ್ತವ್ಯ ಹೂಡಿ ಖುದ್ದು ಪರಿಶೀಲಿಸಿ ಸಮಸ್ಯೆ ಪರಿಹರಿಸಲು ಕ್ರಮ ಕೈಗೊಳ್ಳಲಿದ್ದಾರೆ ಎಂದು ವಿವರಿಸಿದರು.

ರಸ್ತೆ ಗುಂಡಿ; ಮುಖ್ಯಮಂತ್ರಿ ಅಂಗಳಕ್ಕೆ!

ಪ್ರಜಾವಾಣಿ ವಾರ್ತೆ

ಮೈಸೂರು: ‘ಮೈಸೂರು ನಗರದಲ್ಲಿನ ರಸ್ತೆ ಗುಂಡಿಗಳ ವಿಷಯವನ್ನು ಮುಖ್ಯಮಂತ್ರಿ ಗಮನಕ್ಕೆ ತರಲಾಗಿದೆ’ ಎಂದು ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಇಲ್ಲಿ ಮಂಗಳವಾರ ತಿಳಿಸಿದರು.

ಜೂನ್ 21ರಂದು ವಿಶ್ವ ಯೋಗ ದಿನಾಚರಣೆಯಲ್ಲಿ ಭಾಗವಹಿಸಲು ನಗರಕ್ಕೆ ಬರಲಿರುವ ಪ್ರಧಾನಿ ನರೇಂದ್ರ ಮೋದಿ ಅವರಿಗೆ ರಸ್ತೆ ಗುಂಡಿಗಳೇ ಸ್ವಾಗತ ಕೋರುತ್ತಿವೆಯೆಲ್ಲ ಎಂಬ ಪ್ರಶ್ನೆಗೆ ಸುದ್ದಿಗೋಷ್ಠಿಯಲ್ಲಿ ಈ ರೀತಿ ಪ್ರತಿಕ್ರಿಯಿಸಿದರು.

‘ಮೇ 28 ಇಲ್ಲವೇ 29ರಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮೈಸೂರಿಗೆ ಬಂದು ಈ ಸಂಬಂಧ ಸಭೆ ನಡೆಸುವ ಸಾಧ್ಯತೆ ಇದೆ. ಆಗಲೂ ಮತ್ತೊಮ್ಮೆ ಪ್ರಸ್ತಾಪಿಸಲಾಗುವುದು’ ಎಂದು ಅವರು ಹೇಳಿದರು.

‘ಪಟ್ಲ ಪ್ರಶಸ್ತಿ’ಗೆ ಸುಬ್ರಹ್ಮಣ್ಯ ಭಟ್ ಆಯ್ಕೆ

ಮಾಂಬಾಡಿ ಸುಬ್ರಹ್ಮಣ್ಯ ಭಟ್

ಮಂಗಳೂರು: ಯಕ್ಷಧ್ರುವ ಪಟ್ಲ ಫೌಂಡೇಷನ್ ಟ್ರಸ್ಟ್‌ನ 2022ನೇ ಸಾಲಿನ ‘ಪಟ್ಲ ಪ್ರಶಸ್ತಿ’ಗೆ ಯಕ್ಷಗುರು ಮಾಂಬಾಡಿ ಸುಬ್ರಹ್ಮಣ್ಯ ಭಟ್ ಆಯ್ಕೆಯಾಗಿದ್ದಾರೆ. ಪ್ರಶಸ್ತಿಯು ₹1 ಲಕ್ಷ ಗೌರವಧನ ಒಳಗೊಂಡಿದೆ ಎಂದು ಸತೀಶ್ ಶೆಟ್ಟಿ ಪಟ್ಲ ತಿಳಿಸಿದರು.

ಯಕ್ಷಗಾನ ಕ್ಷೇತ್ರದ 10 ಸಾಧಕರಿಗೆ ‘ಯಕ್ಷಧ್ರುವ ಕಲಾ ಗೌರವ’ವನ್ನು ₹20 ಸಾವಿರ ನಗದಿನೊಂದಿಗೆ ಪ್ರದಾನ ಮಾಡಲಾಗುತ್ತದೆ. ಪದ್ಮನಾಭ ಉಪಾಧ್ಯ, ಸದಾಶಿವ ಶೆಟ್ಟಿಗಾರ್ ಸಿದ್ದಕಟ್ಟೆ, ಅಜ್ರಿ ಗೋಪಾಲ ಗಾಣಿಗ, ಯೋಗಾಕ್ಷಿ ಗಣೇಶ್ ಗುಜರನ್, ಮಾಧವ ಭಂಡಾರಿ ಕುಳಾಯಿ, ಕಲ್ಲುಗುಂಡಿ ಕೊರಗಪ್ಪ ಮಣಿಯಾಣಿ, ಉಜಿರೆ ನಾರಾಯಣ ಪೂಜಾರಿ, ವಿಜಯಕುಮಾರ್ ಶೆಟ್ಟಿ ಮೈಲೊಟ್ಟು, ಅರೆಹೊಳೆ ಸಂಜೀವ ಶೆಟ್ಟಿ, ಮಧುಕುಮಾರ್ ಬೋಳೂರು ಈ ಗೌರವಕ್ಕೆ ಆಯ್ಕೆಯಾಗಿದ್ದಾರೆ’ ಎಂದು ಮಾಹಿತಿ ನೀಡಿದರು.

‘ಯಕ್ಷಗಾನ ಕ್ಷೇತ್ರದಲ್ಲಿ ವೃತ್ತಿಪರ ಕಲಾವಿದರಾಗಿ ಸೇವೆ ಸಲ್ಲಿಸುತ್ತಿರುವ ಅಶಕ್ತ ಕಲಾವಿದರ ಬದುಕಿನಲ್ಲಿ ಭರವಸೆಯ ಬೆಳಕನ್ನು ಮೂಡಿಸುವ ನಿಟ್ಟಿನಲ್ಲಿ 6 ವರ್ಷಗಳ ಹಿಂದೆ ಆರಂಭವಾದ ಟ್ರಸ್ಟ್ ಮೂಲಕ ಈ ತನಕ ₹7.5 ಕೋಟಿಗೂ ಅಧಿಕ ಮೊತ್ತದ ಸೇವಾ ಯೋಜನೆಗಳನ್ನು ಅನುಷ್ಠಾನಗೊಳಿಸಿದೆ’ ಎಂದು ಹೇಳಿದರು.

ಎಸ್ಸೆಸ್ಸೆಲ್ಸಿ: ರಾಷ್ಟ್ರೋತ್ಥಾನ ವಿದ್ಯಾರ್ಥಿಗಳ ಸಾಧನೆ

ಬೆಂಗಳೂರು: ರಾಷ್ಟ್ರೋತ್ಥಾನ ಟ್ರಸ್ಟ್‌ನ ‘ಟೆಂತ್ ಶ್ಯೂರ್ ಪಾಸ್’ ಕಾರ್ಯಕ್ರಮದ ಅಡಿಯಲ್ಲಿ ತರಬೇತಿ ಪಡೆದಿದ್ದ ವಿದ್ಯಾರ್ಥಿಗಳು ಈ ಬಾರಿಯ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಉತ್ತಮ ಸಾಧನೆ ಮಾಡಿದ್ದಾರೆ.

‘ಪರೀಕ್ಷೆ ಬರೆದಿದ್ದ 341 ಮಂದಿ ಪೈಕಿ 249 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದು, ಶೇ 73ರಷ್ಟು ಫಲಿತಾಂಶ ಲಭಿಸಿದೆ. ಕುಂತೀಗ್ರಾಮ ಸೇವಾವಸತಿಯಲ್ಲಿ ವ್ಯಾಸಂಗ ಮಾಡಿದ್ದ ನರಸಿಂಹ 619 ಅಂಕ ಗಳಿಸಿದ್ದಾರೆ. ಐದು ಜನ 600ಕ್ಕಿಂತಲೂ ಅಧಿಕ, 32 ಮಂದಿ ಡಿಸ್ಟಿಂಕ್ಷನ್ ಹಾಗೂ 155 ಜನ ಪ್ರಥಮ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ. ಉತ್ತೀರ್ಣರಾದವರಲ್ಲಿ 145 ಬಾಲಕಿಯರು ಹಾಗೂ 104 ಬಾಲಕರು ಸೇರಿದ್ದಾರೆ’ ಎಂದು ಪ್ರಕಟಣೆ ತಿಳಿಸಿದೆ.

‘ಕೋವಿಡ್‌ನಿಂದಾಗಿ ಸರ್ಕಾರಿ, ಅನುದಾನಿತ ಹಾಗೂ ಬಿಬಿಎಂಪಿ ಶಾಲೆಯ ವಿದ್ಯಾರ್ಥಿಗಳು ಭೌತಿಕ ಹಾಗೂ ಆನ್‌ಲೈನ್ ತರಗತಿಗಳಿಂದ ವಂಚಿತರಾಗಿದ್ದರು. ಈ ಮಕ್ಕಳಿಗೆ ಟ್ರಸ್ಟ್‌ನಿಂದ ‘ಟೆಂತ್ ಶ್ಯೂರ್ ಪಾಸ್’ ಕಾರ್ಯಕ್ರಮದ ಅಡಿಯಲ್ಲಿ ಉಚಿತವಾಗಿ ತರಬೇತಿ ನೀಡಲಾಗಿತ್ತು. ಈ ವರ್ಷದ ಜನವರಿಯಿಂದ ಮಾರ್ಚ್‌ವರೆಗೂ ಒಟ್ಟು 12 ಸೇವಾವಸತಿಗಳಲ್ಲಿ ಈ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ‘2022–23ನೇ ಸಾಲಿನಲ್ಲಿ 20 ಸೇವಾವಸತಿಗಳಲ್ಲಿ ಒಟ್ಟು 500ಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಈ ತರಬೇತಿ ನೀಡಲು ನಿರ್ಧರಿಸಲಾಗಿದೆ’ ಎಂದು ಹೇಳಿದೆ.

ಪ್ರಜಾವಾಣಿ ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

REAL ESTATE BUYING

Agricultural Land Converted

North

RESIDENTIAL CONVERTED Land 1/2 Acre to 2 Acres Wanted in Bangalore North or East within BDA Limits. Call 9035146978

REAL ESTATE SELLING

Commerical

Mysore

PRIME COMMERCIAL PROPERTY 2.1 ACRES IS FOR SALE NEAR TO MYSORE ON EXPRESS HIGHWAY NEAR TO EXIT POINT AND UNDERPASS CONTACT OWNER 7676770503 / 9741019028

Flat

Basavanagudi

SALE 2 BHK flat 1025 sft SBA, GF, all General amenities. Call: 9886019240.

EDUCATIONAL

Admission

JOIN BEFORE 31-5-2022. MOST INNOVATIVE UGC NAAC 'A' GRADE Government Recognised South Indian University. Examinations November 2022. MBA (20 Specialisations) MCA/M.Sc/ MA/ M.Com/BA/B.Com/BBA/ BCA/B.Sc. 100% Pass. LOWEST FEE EVER. Asha Academy, Bangalore. Ph: 9448460103/ 7093438248

OTHERS

Furniture & Furnishings

BUSINESS

Business to Business

Consultants

NEED RODETP/MEIS/ ROSCTL SCRIPS & Consultancy /Retainership services for Pre & Post Export benefit (DGFT)/ IMPORT-EXPORT PRAKASH N 9448017478

Finance

WE ARRANGE Mortgage, House Purchase, Construction, Site Purchase and Mortgage Loans from Banks. Contact: 9353705002

Business Offers

Finance

NRI'S INVESTMENT And Finance Available On Low Interest Against Properties, Land& Building,Sites,Flats, Converted& Agriculture Lands Call: 7411265189

WANTED BUSINESS Partner Non Veg Hotel 10 Lakhs Investment Monthly Income 1 Lakhs: 9606701007/ 8892501007

General

FREE CONSULTATION for banking problems seized properties contact for time 9845203777

PERSONAL

Change of Name

I, GEETHA R. W/o Ravikumar T R/a #824/29 Arkavathi Nagara, Giddenahalli Road, Seegehalli Gate, Magadi Main Road, Bangalore-562130 Have Changed My Minor Daughter's Name From ABHILASHA. R to THRISHAA. R (DOB 16-09-2007) Vide Affidavit Dated 12-5-2022 Before Notary H.R Karunakara Bengaluru

I YASEER MOHMAD LONE residing at no.618, 9th cross, 1st main, 1st stage, V Block, near Arabic College, HBR layout, Bangalore-43, have amended my given name YASEER MOHMAD and surname as LONE, vide affidavit dated 24-05-2022, before notary UDAY KUMAR. K Bangalore.

PUBLIC NOTICE

ಸಾರ್ವಜನಿಕ ಸೂಚನೆ

ನಾನು, ಎನ್. ಹೇಮಚಂದ್ರ, ಈ ಪ್ರಕಟಣೆ ಮೂಲಕ ತಿಳಿಯಪಡಿಸುವುದೇನಂದರೆ, ನನ್ನ ಪತ್ನಿ ಅನಿತಾ ಆರ್. ಹೇಮಚಂದ್ರ, ಸರ್ವೇ ನಂ. 2/2, ಬಿ.ಬಿ.ಎಂ.ಪಿ. ಖಾತಾ ಸಂಖ್ಯೆ 232, 233 ಮತ್ತು 234 ಕ್ಯಾಲಸನಹಳ್ಳಿ, ಬೆಂಗಳೂರು - 560077, ಹೊಂದಿರುವ 20 ಗುಂಟೆ ವಿಸ್ತೀರ್ಣದ ಆಸ್ತಿಯ ನ್ಯಾಯ ಸಮ್ಮತವಾದ ಮತ್ತು ಸ್ವಾಧೀನತೆ ಹೊಂದಿರುವ ಮಾಲೀಕರಾಗಿರುತ್ತಾರೆ. ಮುಖ್ಯವಾಗಿ, ಯಶೋಧರ ಜಯಕರನ್ ಅಲಿಯಾಸ್ ಯಶೋಧರ ರಾಜನ್, ರಿಷ್ಯ ರಾಮನಾಥನ್ ಅಲಿಯಾಸ್ ರಿಷ್ಯ ರಾಧಿಯಾ ಶರೀಫ್ ಅಲಿಯಾಸ್ ರಾಧಿಯಾ, ಪೃಥ್ವಿ ಜಯಕರನ್, ಕೆ. ತ್ಯಾಗರಾಜನ್, ಸೆಂದಿಲ್ ಕುಮಾರ ವಿವೇಕಾನಂದ H. J. ಇತ್ಯಾದಿ ಹೆಸರಿನವರು ನನ್ನ ಪತ್ನಿ, ಪುತ್ರಿಯರು ಮತ್ತು ಸಂಬಂಧಿಕರು ಎಂದು ಸುಳ್ಳು ಹೇಳಿಕೊಂಡು ನಕಲಿ ದಾಖಲೆಗಳ ಮೂಲಕ ಮಾಲಿಕರು / ಮಾಲೀಕರ ಸಂಬಂಧಿಕರೆಂದು ಕಾನೂನು ಬಾಹಿರವಾಗಿ ಜಮೀನನ್ನು ಮಾರಾಟ ಮಾಡಲು ಪ್ರಯತ್ನಿಸುತ್ತಿದ್ದಾರೆ. ಇವರು ಹಲವಾರು ಬಿಲ್ಡರಗಳು ಮತ್ತು ಖರೀದಿದಾರರೊಂದಿಗೆ ಒಪ್ಪಂದ ಮಾಡಿಕೊಂಡಿದ್ದಾರೆ. ಇದು ನನ್ನ ಗಮನಕ್ಕೆ ಬಂದು ನಾನು ಇವರುಗಳ ವಿರುದ್ಧ ಪೊಲೀಸ್ ಠಾಣೆಯಲ್ಲಿ ದೂರುಗಳನ್ನು ಮತ್ತು ನ್ಯಾಯಾಲಯದ ಪ್ರಕರಣಗಳನ್ನು ದಾಖಲಿಸಿರುತ್ತೇನೆ. ಇವರುಗಳೆಲ್ಲರು ಯುಶ್‌ಬ್ಯಾನ್ಸ ಸೇರಿದವರಾಗಿದ್ದರೆ. ಈಗಾಗಲೇ, ಇವರುಗಳ ವಿರುದ್ಧ ಹಲವಾರು ಸಿವಿಲ್/ ಕ್ರಿಮಿನಲ್ ಪ್ರಕರಣಗಳು ದಾಖಲಾಗಿರುತ್ತವೆ. ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನಂದರೆ, ಇವರುಗಳೊಂದಿಗೆ ವ್ಯವಹಾರಿಸಬಾರದು. ಒಂದು ವೇಳೆ ವ್ಯವಹರಿಸಿದಲ್ಲಿ ಅವರದೇ ಖರ್ಚು ಮತ್ತು ಹೊಣೆಗಾರಿಕೆಯಲ್ಲಿ ವ್ಯವಹರಿಸಬೇಕಾಗುತ್ತದೆ. ಈ ವ್ಯಕ್ತಿಗಳಿಂದ ಈಗಾಗಲೇ ಮೋಸ ಹೋಗಿರುವವರು ಠಾಣೆಯಲ್ಲಿ ದೂರು ದಾಖಲಿಸಲು ಸಲಹೆ ನೀಡಲಾಗುತ್ತಿದೆ. ಈ ವಂಚಕರೊಂದಿಗೆ ನಾನು ಯಾವುದೇ ಸಂಬಂಧ ಹೊಂದಿರುವುದಿಲ್ಲ. ಇವರುಗಳು ನನ್ನ ಕುಟುಂಬದವರು ಹಾಗೂ ವಾರಸುದಾರರು ಆಗಿರುವುದಿಲ್ಲ. **ಆಸ್ತಿಯ ವಿವರ** : ಹೆಮ್ಸ್ ಪ್ಲೇಸ್, ಸರ್ವೇ ನಂ. 2/2, ಬಿ.ಬಿ.ಎಂ.ಪಿ.ಖಾತಾ ಸಂಖ್ಯೆಗಳು 232, 233 ಮತ್ತು 234 ಕ್ಯಾಲಸನಹಳ್ಳಿ, ಕೆ.ಆರ್.ಪುರಂ ಹೋಬಳಿ, ಬಿ.ಬಿ.ಎಂ.ಪಿ. ವಾರ್ಡ್ 25, ಬೆಂಗಳೂರು -560077 ರಲ್ಲಿ 20ಗುಂಟೆ (ಸುಮಾರು 21,780ಚ.ಅಡಿ) ವಿಸ್ತೀರ್ಣದ ಆಸ್ತಿಯಲ್ಲಿ ಒಂದು ಕೊಳವೆ ಬಾವಿ, ಪಂಪಹೌಸ್ ಆರ್.ಸಿ.ಸಿ ಮೇಲ್ಛಾವಣಿಯ ನೆಲಮಹಡಿ +2 ಮಹಡಿಗಳ ಕಟ್ಟಡದೊಂದಿಗೆ ಚಕಬಂದಿ : **ಪೂರ್ವ** : ಬಿ.ಬಿ.ಎಂ.ಪಿ. ಖಾತಾ ನಂ. 231; ಭೂ.ಪರಿವರ್ತನೆ ಸಂಖ್ಯೆ 73/2/2 ಯಶೋಧರ ಜಮೀನು, **ಪಶ್ಚಿಮ** : ಸರ್ಕಾರಿ ಕಾಲುವೆ, **ಉತ್ತರ** : ಸೈ.ನಂ.2/1 ಶ್ರೀ.ಗುಂಡಪ್ಪನವರ ಜಮೀನು, **ದಕ್ಷಿಣ:** ಆವಲಹಳ್ಳಿ ರಸ್ತೆ

Sd/- ಎನ್. ಹೇಮಚಂದ್ರ
ದಿನಾಂಕ: 22-5-2022
ಸ್ಥಳ : ಬೆಂಗಳೂರು

PUBLIC NOTICE

PUBLIC NOTICE

The General Public is hereby informed that my client Smt.M.Suneetha W/o Late M.V. Krishna Reddy, Aged 46 Years, Occupation House Wife R/o of "0" Main Road, Anantha Sagaram, Nellore, Andhra Pradesh - 524302, Is taking steps to cancel the Registered General Power of Attorney Vide Doc No: 197/2016 Dtd: 01.08.2016 executed at Bangalore by her in favour of Smt.B.M.Sudha Reddy D/o B.Raju in respect of Schedule Property bearing Sy No: 119/3, Mesuring 1 Acre-10 guntas situated at S.Medahalli Village, Sarjapura Hobli, Anekal Taluk, Bangalore which is related to partnership firm "Mayur Daffodils"
The General Public is herbey cautioned not to deal and do any transaction with Smt.B.M.Sudha Reddy in respect of above property. Persons transacting with Sudha Reddy would be doing so at their own risk and my client is not responsible for the costs and consequences. If any peron/s having any interest in the matter can approach the undersigned within (15) days from the date of this notification.

(P.Mohan Rao)
Advocate, Supreme Court of India.
Off: 5A, AP Housing Board, Opp: Haindavi College, Barkatpura Cross Rod, Hyderabad-27
Mob: 9290019986

CAUTION NOTICE

Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.

GM-Advertisement

CONNECT

ಕ್ಲಾಸಿಫೈಡ್ಸ್ EDUCATION CORNER



RAMAN POLYTECHNIC
12, Magadi Main Road, Kamakshipalya, (Near Sumanahalli Bus Stop) Bengaluru-560079
Mobile: 080-23488623, 23284817, 80500 66771, 63609 03500
Website: www.ramaneducation.org
♦ Civil ♦ Mechanical ♦ Electrical ♦ Electronics ♦ Computer Science ♦ Automobile
RAMAN P.U. COLLEGE
Science ♦ Commerce | CONTACT: 6360127984
RAMAN I.T.I. COLLEGE
♦ Fitter ♦ Electronic Mechanic ♦ Electrician
CALIFORNIA PUBLIC SCHOOL
ICSE & State Syllabus. Nursery to X std | CONTACT: 9481305504
RMN-22302

NEW LIGHT INTERNATIONAL SCHOOL
ADMISSION OPEN for 2022-23
Nursery to 5th Std. (ICSE Syllabus)
Address: #46, Landson Infrastructure, Ferns Aspen Heights, 90 mtrs. International Airport Cargo Road, B.K. Halli (Bagalur)-562 149.
Mobile: 81519 13535, 88613 23887, 93423 09285

RAJIV GANDHI MEMORIAL POLYTECHNIC
Near Dr. Ambedkar Institute of Technology, Kengunte Circle, Malathahally, Nagarabhavi, Bengaluru-560056
Phone: 23213282, 29773282
ADMISSION OPEN - COURSES OFFERED
♦ Computer Science & Engg ♦ Electronics & Commn Engg ♦ Mechanical Engineering ♦ Electrical & Electronics Engg ♦ Civil Engineering ♦ Apparel Design & Fashion Technology
For details contact Mobile: 8553344666, 9448865597
RGMP-22301

ಇಂಪ್ಯಾಕ್ಟ್ ಪಾಲಿಟೆಕ್ನಿಕ್ (ಸರ್ಕಾರಿ ಅನುದಾನಿತ)
ಕೊಡಿಗೆಹಳ್ಳಿ, ಸಹಕಾರನಗರ, ಬೆಂಗಳೂರು-560092
2022-23ನೇ ಸಾಲಿನ ಸರ್ಕಾರಿ ಕೋಟಾದಲ್ಲಿ ಡಿಪ್ಲೋಮಾ ಪ್ರವೇಶಗಳು ಪ್ರಾರಂಭ “ಮೊದಲು ಬಂದವರಿಗೆ ಮೊದಲ ಆದ್ಯತೆ”ಮೂಲಕ ದಾಖಲಾತಿ
ಕರ್ನಾಟಕ ರಾಜ್ಯದ ವಿದ್ಯಾರ್ಥಿಗಳಿಗಾಗಿ 1ನೇ ಸೆಮಿಸ್ಟರ್‌ಗೆ ದಾಖಲಾತಿ ಆರಂಭವಾಗಿದೆ
ಕೋರ್ಸುಗಳು: ಆರ್ಕಿಟೆಕ್ಚರ್, ಆಟೋಮೊಬೈಲ್, ಮೆಕ್ಯಾನಿಕಲ್, ಸಿವಿಲ್, ಇಲೆಕ್ಟ್ರಿಕಲ್ & ಇಲೆಕ್ಟ್ರಾನಿಕ್ಸ್, ಇಲೆಕ್ಟ್ರಾನಿಕ್ಸ್ & ಕಮ್ಯುನಿಕೇಶನ್, ಮತ್ತು ಕಂಪ್ಯೂಟರ್ ಸೈನ್ಸ್
ವಿದ್ಯಾರ್ಹತೆ: ಎಸ್.ಎಸ್.ಎಲ್.ಸಿ ಯಲ್ಲಿ ಕನಿಷ್ಠ ಶೇ. 35% ಅಂಕ ಪಡೆದಿರಬೇಕು.
ಐಟಿಐ/ಪಿಯುಸಿ ವಿಜ್ಞಾನದಲ್ಲಿ ಪಾಸಾದ ವಿದ್ಯಾರ್ಥಿಗಳಿಗೆ ನೇರವಾಗಿ 3ನೇ ಸೆಮಿಸ್ಟರ್‌ನಲ್ಲಿ ಪ್ರವೇಶ ಲಭ್ಯವಿರುತ್ತದೆ.
ಅರ್ಜಿಗಳು ಕಾಲೇಜಿನ ಕಚೇರಿಯಲ್ಲಿ ದೊರೆಯುವುದು
Website: impactptbangalore.ac.in; Email: impactpolytechnic@gmail.com
ದಾಖಲಾತಿ ಮತ್ತು ಹೆಚ್ಚಿನ ಮಾಹಿತಿಗಾಗಿ ಇಲ್ಲಿಗೆ ಸಂಪರ್ಕಿಸಿ: 080-23334101, 94487 48297, 94487 96091
IMP-22303

R.E.S. POLYTECHNIC
Recognised by Govt. of Karnataka & Approved by AICTE
Inst. Code: 450 Estd: 1986
ADMISSIONS STARTED FOR
10th PASS - 3 Yrs Diploma
PUC / ITI PASS - 2 Yrs Diploma
FREE In-plant training to all students
New NEP syllabus with industry interaction to all
CS | IS | EC | EE | Civil | Mech | Auto | CP | FT
5, Sunkadakatte, Magadi Main Road, Hegganahalli Cross, B'lore-91 Phone: 080-23484814, 99166 46466, 99166 39466
RES-22302

‘ಪಠ್ಯಪುಸ್ತಕ ಪರಿಷ್ಕರಣೆ: ಮಕ್ಕಳ ಸಮಾಲೋಚನೆ ನಡೆಸಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಠ್ಯಪುಸ್ತಕಗಳಲ್ಲಿನ ಪಾಠಗಳ ಆಯ್ಕೆಗಾಗಿ ಮಕ್ಕಳ ಸಮಾಲೋಚನೆ ಏರ್ಪಡಿಸುವಂತೆ ಮಕ್ಕಳ ಹಕ್ಕುಗಳ ಕಾರ್ಯಕರ್ತ ನಾಗಸಿಂಹ ಜಿ.ರಾವ್, ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವ ಬಿ.ಸಿ.ನಾಗೇಶ್ ಅವರಿಗೆ ಪತ್ರದ ಮೂಲಕ ಒತ್ತಾಯಿಸಿದ್ದಾರೆ.

‘ಪಠ್ಯಕ್ರಮದ ಕುರಿತು ರಾಜ್ಯದಲ್ಲಿ ದೊಡ್ಡಮಟ್ಟದ ಚರ್ಚೆ ನಡೆಯುತ್ತಿದೆ. ಮಕ್ಕಳು ಯಾವ ಪಾಠಗಳನ್ನು ಓದಬೇಕು ಎಂಬುದನ್ನು ಹಿರಿಯರೇ ನಿರ್ಧರಿಸುವುದು ಮೊದಲಿನಿಂದಲೂ ಬೆಳೆದುಬಂದಿದೆ. ಪಠ್ಯಪುಸ್ತಕ ಸಿದ್ಧಪಡಿಸುವ ಸಮಿತಿಯಲ್ಲೂ ಮಕ್ಕಳ ಪ್ರತಿನಿಧಿಗಳು ಇಲ್ಲ. ಇದರಿಂದಾಗಿ ಮಕ್ಕಳ ಭಾಗವಹಿಸುವಿಕೆಯ ಹಕ್ಕು ಕಸಿದಂತಾಗಿದೆ’ ಎಂದು ಅವರು ತಿಳಿಸಿದ್ದಾರೆ.

‘ತಾವು ಏನನ್ನು ಓದಬೇಕು ಎಂಬುದನ್ನು ನಿರ್ಧರಿಸುವ ಸಾಮರ್ಥ್ಯ ರಾಜ್ಯದ ಮಕ್ಕಳಲ್ಲಿ ಇದೆ. ರಾಜ್ಯದ ಎಲ್ಲಾ ಜಿಲ್ಲೆಗಳಿಂದಲೂ ಮಕ್ಕಳ ಪ್ರತಿನಿಧಿಗಳನ್ನು ಆಯ್ಕೆ ಮಾಡಿ ಅವರೊಂದಿಗೆ ಪಠ್ಯಪುಸ್ತಕ ಹಾಗೂ ಅದರೊಳಗೆ ಸೇರ್ಪಡೆ ಮಾಡುವ ವಿಚಾರದ ಆಯ್ಕೆಯ ಬಗ್ಗೆ ಸಮಾಲೋಚನೆ ನಡೆಸಬೇಕು. ಮಕ್ಕಳು ನೀಡುವ ಶಿಫಾರಸ್ಸುಗಳನ್ನು ಶಿಕ್ಷಣ ತಜ್ಞರೊಂದಿಗೆ ಹಂಚಿಕೊಂಡು ಪಠ್ಯರಚನೆಯ ಪ್ರಕ್ರಿಯೆ ಪ್ರಾರಂಭಿಸಬೇಕು.

ಪಠ್ಯಗಳ ಬಗ್ಗೆ ನಡೆಯುತ್ತಿರುವ ಚರ್ಚೆಗೆ ಸೂಕ್ತ ವೇದಿಕೆ ನಿರ್ಮಿಸಿ ಮಕ್ಕಳ ಮನದ ಗೊಂದಲ ನಿವಾರಿಸುವ ಕೆಲಸವನ್ನು ತಕ್ಷಣವೇ ಮಾಡಬೇಕು. ಪಠ್ಯದಲ್ಲಿ ಮಕ್ಕಳ ಹಕ್ಕು, ಮಕ್ಕಳ ರಕ್ಷಣೆಗೆ ಸಂಬಂಧಿಸಿದ ವಿಚಾರಗಳನ್ನು ಸೇರ್ಪಡೆ ಮಾಡಬೇಕು’ ಎಂದು ಆಗ್ರಹಿಸಿದ್ದಾರೆ.

ಶಿಕ್ಷಣ ಸಚಿವ ಬಿ.ಸಿ.ನಾಗೇಶ್ ಆರೋಪಕ್ಕೆ ಬರಗೂರು ಸ್ಪಷ್ಟನೆ

ಮಹನೀಯರ ಪಠ್ಯವಿಷಯ ಕೈಬಿಟ್ಟಿರಲಿಲ್ಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕುವೆಂಪು, ಗಾಂಧಿ, ಅಂಬೇಡ್ಕರ್, ಕಿತ್ತೂರು ರಾಣಿ ಚನ್ನಮ್ಮ ಸೇರಿದಂತೆ ವಿವಿಧ ಮಹನೀಯರ ಬಗೆಗಿನ ಪಠ್ಯವಿಷಯಗಳನ್ನು ಕೈಬಿಟ್ಟಿರಲಿಲ್ಲ. ಬೇರೆ ಬೇರೆ ತರಗತಿಯ ಪಠ್ಯಪುಸ್ತಕದಲ್ಲಿ ಅವರ ಬಗೆಗಿನ ಪಾಠಗಳಿವೆ’ ಎಂದು ಸಾಹಿತಿ ಹಾಗೂ ಪಠ್ಯಪುಸ್ತಕ ಪರಿಷ್ಕರಣೆ ಸಮಿತಿಯ ನಿಕಟಪೂರ್ವ ಅಧ್ಯಕ್ಷ ಬರಗೂರು ರಾಮಚಂದ್ರಪ್ಪ ತಿಳಿಸಿದ್ದಾರೆ.

‘ಬರಗೂರು ರಾಮಚಂದ್ರಪ್ಪ ಅಧ್ಯಕ್ಷತೆಯ ಸಮಿತಿ ಕೆಲ ಮಹನೀಯರ ಪಠ್ಯಗಳನ್ನು ಕೈಬಿಟ್ಟಿದೆ’ ಎಂಬ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಬಿ.ಸಿ.ನಾಗೇಶ್ ಅವರ ಆರೋಪಕ್ಕೆ ಸ್ಪಷ್ಟನೆ ನೀಡಿರುವ ಅವರು, ‘ಸಚಿವರು ಹೇಳಿರುವುದು ಅಪ್ಪಟ ತಪ್ಪು ಮಾಹಿತಿ. ಕುವೆಂಪು ಅವರ ರಚನೆಗಳು 10 ಮತ್ತು 7ನೇ ತರಗತಿಯ ಕನ್ನಡ ಪಠ್ಯಪುಸ್ತಕಗಳಲ್ಲಿವೆ. ಪ್ರೌಢಶಾಲೆ ಹಂತದಲ್ಲಿದ್ದ ಕುವೆಂಪು ಅವರ ‘ಭರತ ಭೂಮಿ ನಮ್ಮ ತಾಯಿ’ ಪದ್ಯವನ್ನು 7ನೇ ತರಗತಿಗೆ ಅಳವಡಿಸಲು ಸೂಚಿಸಿದ್ದೆವು. 7ನೇ ತರಗತಿಯ 2ನೇ ಭಾಗ ಮತ್ತು 10ನೇ ತರಗತಿಯ 2ನೇ ಭಾಗದ ಸಮಾಜ ವಿಜ್ಞಾನ ಪಠ್ಯಪುಸ್ತಕಗಳಲ್ಲಿ ಗಾಂಧಿಯವರ ಕುರಿತು ಸಾಕಷ್ಟು ವಿವರಗಳಿವೆ’ ಎಂದು ಹೇಳಿದ್ದಾರೆ.

ಎಲ್ಲ ಪಠ್ಯಪುಸ್ತಕಗಳನ್ನು ನಾನೊಬ್ಬನೇ ಬರೆದಂತೆ ಬಿಂಬಿಸಿ, ವೈಯಕ್ತಿಕ ಟೀಕೆ ಮಾಡಲಾಗುತ್ತಿದೆ. ಆಗ 27 ಸಮಿತಿಗಳಿದ್ದವು. 172 ತಜ್ಞರು, ಅಧ್ಯಾಪಕರು ಸಮಿತಿಯಲ್ಲಿದ್ದರು
ಬರಗೂರು ರಾಮಚಂದ್ರಪ್ಪ, ಸಾಹಿತಿ

‘8ನೇ ತರಗತಿಯ ಸಮಾಜ ವಿಜ್ಞಾನದ ಭಾಗ-1 ಮತ್ತು 10ನೇ ತರಗತಿಯ ಭಾಗ-2 ರಲ್ಲಿ ಅಂಬೇಡ್ಕರ್ ಅವರ ಬಗ್ಗೆ ಪಾಠಗಳಿವೆ. 9ನೇ ತರಗತಿಯ ಪಠ್ಯದಲ್ಲಿ ‘ನಮ್ಮ ಸಂವಿಧಾನ’ ಎಂಬ ಪಾಠವಿದ್ದು, ಅಲ್ಲಿಯೂ ಅಂಬೇಡ್ಕರ್ ಅವರ ಕುರಿತು ವಿವರಗಳಿವೆ. ಕಿತ್ತೂರು ರಾಣಿ ಚನ್ನಮ್ಮ ಮತ್ತು ಸಂಗೊಳ್ಳಿ ರಾಯಣ್ಣ ಅವರ ಬಗ್ಗೆ 6ನೇ ತರಗತಿಯ ಸಮಾಜ ವಿಜ್ಞಾನದ ಭಾಗ-2 ಮತ್ತು 10ನೇ ತರಗತಿಯ ಭಾಗ-1 ರಲ್ಲಿ ಪಾಠಗಳಿವೆ. ಸಂಗೊಳ್ಳಿ ರಾಯಣ್ಣ ಅವರ ಬಗ್ಗೆ 5ನೇ ತರಗತಿಯ ಕನ್ನಡ ಪಠ್ಯಪುಸ್ತಕದಲ್ಲಿ ಹೊಸದಾಗಿ ಒಂದು ಪಾಠವನ್ನು ಸೇರಿಸಲಾಗಿದೆ. ಮದಕರಿನಾಯಕರ ಬಗ್ಗೆ ಪಾಠ ಕೈಬಿಟ್ಟಿರಲಿಲ್ಲ. ಸುರಪುರ ಸಂಸ್ಥಾನದ ಬಗ್ಗೆಯೂ ಬರೆಸಿ, ಸೇರಿಸಲಾಗಿದೆ’ ಎಂದು ತಿಳಿಸಿದ್ದಾರೆ.

‘ಬೆಂಗಳೂರು ನಿರ್ಮಾಪಕ ಕೆಂಪೇಗೌಡರ ಬಗ್ಗೆ ವಿವರಗಳಿಲ್ಲ ಎನ್ನುವುದು ಕೂಡ ತಪ್ಪು ಮಾಹಿತಿ. ಯಲಹಂಕ ನಾಡಪ್ರಭುಗಳ ಬಗ್ಗೆ ಪ್ರತ್ಯೇಕ ವಿವರಗಳಿದ್ದು, ಇಮ್ಮಡಿ ಕೆಂಪೇಗೌಡರ ಬಗ್ಗೆ 7ನೇ ತರಗತಿಯ ಸಮಾಜ ವಿಜ್ಞಾನದ ಭಾಗ–1ರ ಪಠ್ಯಪುಸ್ತಕದಲ್ಲಿ ವಿವರವಿದೆ. ‘ಮೈಸೂರು ಒಡೆಯರು’ ಎಂಬ ಪ್ರತ್ಯೇಕ ಅಧ್ಯಾಯವೂ ಇದೆ. ಇದೇ ಪಠ್ಯಪುಸ್ತಕದ ಭಾಗ–2ರಲ್ಲಿ ರಾಣಿ ಅಬ್ಬಕ್ಕ ಕುರಿತ ಮಾಹಿತಿಯಿದೆ. ಇಲ್ಲಿನ ವಿವರಗಳು ಕಡಿಮೆ ಎನ್ನಿಸಿದ್ದರೆ ಮರುಪರಿಷ್ಕರಣೆಯಲ್ಲಿ ವಿಸ್ತರಿಸಬಹುದಾಗಿತ್ತು’ ಎಂದು ಸ್ಪಷ್ಟಪಡಿಸಿದ್ದಾರೆ.

‘ಟಿಪ್ಪು, ಸಾವರ್ಕರ್ ಒಳಗೊಂಡಂತೆ ಯಾರ ಬಗ್ಗೆಯೂ ನಕಾರಾತ್ಮಕ ವಿಷಯಗಳನ್ನು ಹೇಳದೆ, ನಡೆದ ಘಟನೆಗಳ ವಾಸ್ತವದ ಮಾಹಿತಿಯನ್ನು ಕೊಡಲಾಗಿದೆ’ ಎಂದು ತಿಳಿಸಿದ್ದಾರೆ.

ಪ್ರಜಾವಾಣಿ ಶೈಕ್ಷಣಿಕ ನೆರವು ನಿಧಿ

ಬಡ ವಿದ್ಯಾರ್ಥಿಗಳಿಗೆ ಉದಾರ ಕೊಡುಗೆ ನೀಡಿ

ಪ್ರಜಾವಾಣಿ- ಡೆಕ್ಕನ್ ಹೆರಾಲ್ಡ್ ಮಾತೃ ಸಂಸ್ಥೆ ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿಮಿಟೆಡ್ ಸ್ಥಾಪಿಸಿರುವ ಟ್ರಸ್ಟ್ ಎಸ್‌ಎಸ್‌ಎಲ್‌ಸಿಯಲ್ಲಿ ಉತ್ತೀರ್ಣರಾದ ಅರ್ಹ ಬಡ ವಿದ್ಯಾರ್ಥಿಗಳಿಗೆ ಮುಂದಿನ ಶಿಕ್ಷಣಕ್ಕಾಗಿ ಧನ ಸಹಾಯ ಮಾಡುತ್ತಾ ಬಂದಿದೆ. ಸಾರ್ವಜನಿಕರು ಮತ್ತು ದಾನಿಗಳು ಸಂಸ್ಥೆಯ ಈ ಉದ್ದೇಶಕ್ಕೆ ನೆರವಾಗಬೇಕೆಂದು ಕೋರುತ್ತೇವೆ. ಚೆಕ್ ಅಥವಾ ಡಿ.ಡಿ. ರೂಪದಲ್ಲಿ ಹಣವನ್ನು **‘Deccan Herald-Prajavani Relief Trust’** ಹೆಸರಿಗೆ ಕಳುಹಿಸಬಹುದು. ಹಣ ಸಂದಾಯ ಮಾಡಿದ ವಿವರ, ಹೆಸರು, ವಿಳಾಸ ಮತ್ತು ಮೊಬೈಲ್ ಸಂಖ್ಯೆಯನ್ನು **dept.finc@printersmysore.co.in** ಮೇಲ್ ಮುಖಾಂತರ ತಿಳಿಸಿ.

ಆನ್‌ಲೈನ್ ಅಥವಾ ಚೆಕ್ ಮೂಲಕವೂ ಹಣ ವರ್ಗಾಯಿಸುವ ಸೌಲಭ್ಯ ಇದೆ. (ವಿವರ ಕೆಳಗೆ ಕೊಡಲಾಗಿದೆ) ಒಂದು ಸಾವಿರ ರೂಪಾಯಿಗಿಂತ ಹೆಚ್ಚು ಹಣ ನೀಡುವವರ ಹೆಸರನ್ನು ಪ್ರಜಾವಾಣಿ ಮತ್ತು ಡೆಕ್ಕನ್ ಹೆರಾಲ್ಡ್ ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದು. ಈ ದೇಣಿಗೆಗೆ ಆದಾಯ ತೆರಿಗೆ ಸೆಕ್ಷನ್ 80 ಜಿ ಅನ್ವಯ ಶೇ 50 ರಷ್ಟು ಆದಾಯ ತೆರಿಗೆ ವಿನಾಯಿತಿ ಇದೆ.

ಆನ್‌ಲೈನ್‌ನಲ್ಲಿ ಹಣ ಸಂದಾಯ ಮಾಡುವವರು ಕೆಳಗಿನ ಕೋಡ್ ಸ್ಕ್ಯಾನ್ ಮಾಡಿ ಅಥವಾ ಲಿಂಕ್ ಬಳಸಿ

https://bit.ly/3xFpoz4

ಬ್ಯಾಂಕ್‌ಗೆ ನೇರವಾಗಿ ಹಣ ಸಂದಾಯ ಮಾಡುವವರು ಕೆಳಗಿನ ವಿವರ ಬಳಸಿ

‘Deccan Herald-Prajavani Relief Trust’
Canara Bank, Cantonment Branch
A/c no. - **0404101200385**
IFSC code - **CNRB0000404**
MICR Code - **560015009**

ಸೂಚನೆ
ದೇಣಿಗೆ ನೀಡುವವರು ಲಕೋಟೆ ಮೇಲೆ ‘ಶೈಕ್ಷಣಿಕ ನೆರವಿಗೆ ಕೊಡುಗೆ’ ಎಂದು ನಮೂದಿಸಲು ಮನವಿ.

ವಿಳಾಸ
ಮ್ಯಾನೇಜರ್, ಡೆಕ್ಕನ್ ಹೆರಾಲ್ಡ್–ಪ್ರಜಾವಾಣಿ ಪರಿಹಾರ ಟ್ರಸ್ಟ್, ನಂ. 75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು – 560001

ಅರ್ಹ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನ

2022ರ ಸಾಲಿನ ಎಸ್‌ಎಸ್‌ಎಲ್‌ಸಿಯಲ್ಲಿ ಅಧಿಕ ಅಂಕ ಗಳಿಸಿದ ಸಾಮಾಜಿಕ ಮತ್ತು ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿ–ವಿದ್ಯಾರ್ಥಿನಿಯರು ಮಾತ್ರ ಈ ನೆರವು ಕೋರಿ ಮೇಲ್ಕಂಡ ವಿಳಾಸಕ್ಕೆ ಅರ್ಜಿ ಸಲ್ಲಿಸಬಹುದು. ಅರ್ಜಿಯಲ್ಲಿ ವಿಳಾಸ, ಮೊಬೈಲ್ ಸಂಖ್ಯೆ ಮತ್ತಿತರ ವಿವರಗಳಿರಬೇಕು. ಲಕೋಟೆ ಮೇಲೆ ‘ಶೈಕ್ಷಣಿಕ ನೆರವಿಗೆ ಅರ್ಜಿ’ ಎಂದು ಬರೆಯಬೇಕು. ಅರ್ಜಿಯ ಜೊತೆ ಖಾತೆ ಸಂಖ್ಯೆ, ಐಎಫ್‌ಎಸ್‌ಸಿ ನಂಬರ್ ಉಳ್ಳ ಬ್ಯಾಂಕ್ ಪಾಸ್‌ಬುಕ್ ಪುಟದ ಪ್ರತಿಯನ್ನು ಸಲ್ಲಿಸಬೇಕು.

ಹುಲಿಗೆಮ್ಮದೇವಿ ರಥೋತ್ಸವ

ಕೊಪ್ಪಳ ಜಿಲ್ಲೆ ಹುಲಿಗಿಯ ಹುಲಿಗೆಮ್ಮದೇವಿ ರಥೋತ್ಸವ ಮಂಗಳವಾರ ಭಕ್ತರ ಸಮ್ಮುಖದಲ್ಲಿ ವಿಜೃಂಭಣೆಯಿಂದ ಜರುಗಿತು –ಪ್ರಜಾವಾಣಿ ಚಿತ್ರ/ ಭರತ್ ಕಂದಕೂರ

‘ಹಳೆಯ ಪಠ್ಯಪುಸ್ತಕಗಳನ್ನೆ ಶಾಲೆಗಳಿಗೆ ನೀಡಿ’

ಬೆಂಗಳೂರು: ‘ರೋಹಿತ್ ಚಕ್ರತೀರ್ಥ ಅಧ್ಯಕ್ಷತೆ ಸಮಿತಿ ಮಾಡಿರುವ ಎಲ್ಲ ಪಠ್ಯ ಪರಿಷ್ಕರಣೆಯನ್ನೂ ಸರ್ಕಾರ ಕೂಡಲೇ ತಿರಸ್ಕರಿಸಬೇಕು. ಈಗಾಗಲೇ ಮುದ್ರಿಸಿರುವ ಹಳೆಯ ಪಠ್ಯಪುಸ್ತಕಗಳನ್ನೇ ಶಾಲೆಗಳಿಗೆ ನೀಡಬೇಕು’ ಎಂದು ಕರ್ನಾಟಕ ರಕ್ಷಣಾ ವೇದಿಕೆ (ಕರವೇ) ರಾಜ್ಯ ಘಟಕದ ಅಧ್ಯಕ್ಷ ಟಿ.ಎ. ನಾರಾಯಣಗೌಡ ಆಗ್ರಹಿಸಿದ್ದಾರೆ.

ಪಠ್ಯಪುಸ್ತಕ ಪರಿಷ್ಕರಣೆ ವಿವಾದಕ್ಕೆ ಸಂಬಂಧಿಸಿದಂತೆ ಪ್ರತಿಕ್ರಿಯಿಸಿರುವ ಅವರು, ‘ಈಗಾಗಲೇ ಶಾಲೆಗಳು ಆರಂಭವಾಗಿರುವುದರಿಂದ ವಿದ್ಯಾರ್ಥಿಗಳಿಗೆ ಹಳೆಯ ಪಠ್ಯ ಪುಸ್ತಕಗಳನ್ನೇ ಒದಗಿಸಬೇಕು. ಇಷ್ಟೆಲ್ಲ ಅವಾಂತರಕ್ಕೆ ಕಾರಣವಾದ ಹಾಲಿ ಪರಿಷ್ಕರಣಾ ಸಮಿತಿಯನ್ನು ಕೂಡಲೇ ವಿಸರ್ಜಿಸಬೇಕು. ಪಠ್ಯಪುಸ್ತಕ ಪುನರ್ ಪರಿಶೀಲನೆಗಾಗಿ ಸಮಿತಿ ನೇಮಕ ಮಾಡಿದಾಗಲೇ ಸರ್ಕಾರ ಎಡವಿದೆ. ಸಮಿತಿಗೆ ಬಲಪಂಥೀಯ ವಿದ್ವಾಂಸರು, ಶಿಕ್ಷಣ ತಜ್ಞರು ಬೇಕು ಎಂದಿದ್ದರೆ ಹಲವಾರು ಮಂದಿ ಸಜ್ಜನರು, ಎದೆಯಲ್ಲಿ ನಂಜು ಇಟ್ಟುಕೊಳ್ಳದೆ ಕಾರ್ಯ ನಿರ್ವಹಿಸುವವರು ಲಭ್ಯವಿದ್ದರು. ಆದರೆ, ಸರ್ಕಾರ ಇಂಥವರನ್ನು ನೇಮಕ ಮಾಡದೆ ತಪ್ಪೆಸಗಿದೆ’ ಎಂದು ತಿಳಿಸಿದ್ದಾರೆ.

‘ಕನ್ನಡದ ಮೇರು ಸಾಹಿತಿ ದೇವನೂರು ಮಹಾದೇವ ಅವರು ಹತ್ತನೇ ತರಗತಿಯ ಪಠ್ಯಕ್ಕೆ ನೀಡಿದ್ದ ‘ಎದೆಗೆ ಬಿದ್ದ ಅಕ್ಷರ’ ಲೇಖನ ಹಿಂದಕ್ಕೆ ಪಡೆದಿರುವುದು ಆಘಾತಕಾರಿ. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಮಧ್ಯೆ ಪ್ರವೇಶಿಸಿ, ಬಿಕ್ಕಟ್ಟನ್ನು ಬಗೆಹರಿಸಬೇಕು’ ಎಂದು ಆಗ್ರಹಿಸಿದ್ದಾರೆ.

ಕುವೆಂಪು ಅವಮಾನಿಸಿದವರನ್ನು ಒದ್ದು ಒಳಗೆ ಹಾಕಿ- ಎಚ್‌ಡಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಾಡಗೀತೆ ಮತ್ತು ಕುವೆಂಪು ಅವರನ್ನು ಅಪಮಾನಿಸಿದ ವ್ಯಕ್ತಿಯನ್ನು ಮೊದಲು ಒದ್ದು ಒಳಗೆ ಹಾಕಬೇಕು' ಎಂದು ಪಠ್ಯಪುಸ್ತಕ ಪರಿಷ್ಕರಣೆ ಸಮಿತಿಯ ಅಧ್ಯಕ್ಷ ರೋಹಿತ್ ಚಕ್ರತೀರ್ಥ ಹೆಸರು ಹೇಳದೆ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ. ಕುಮಾರಸ್ವಾಮಿ ಆಕ್ರೋಶ ವ್ಯಕ್ತಪಡಿಸಿದರು.

ಸುದ್ದಿಗಾರರ ಜೊತೆ ಮಂಗಳವಾರ ಮಾತನಾಡಿದ ಅವರು, 'ನಾಡಗೀತೆ ಬಗ್ಗೆ ಸಾಮಾಜಿಕ ಜಾಲತಾಣದಲ್ಲಿ ಈ ಹಿಂದೆ ಅವಹೇಳನಕಾರಿ ಪೋಸ್ಟ್ ಹಾಕಿದ್ದ ವ್ಯಕ್ತಿಯನ್ನು ಸಮಿತಿ ಅಧ್ಯಕ್ಷನನ್ನಾಗಿ ಮಾಡಿರುವುದೇ ತಪ್ಪು. ಕುವೆಂಪು ಮತ್ತು ನಾಡಗೀತೆಗೆ ಅಪಮಾನ ಮಾಡಿದರೆ ಸುಮ್ಮನಿರುವುದಿಲ್ಲ' ಎಂದು ಎಚ್ಚರಿಕೆ ನೀಡಿದರು.

'ಯಾವುದೋ ಒಂದು ವಿಷಯಕ್ಕೆ ಟ್ವೀಟ್ ಮಾಡುವವರನ್ನು ಜೈಲಿಗೆ ಹಾಕುತ್ತೀರಿ. ಆದರೆ, ಮಹಾನ್ ಕವಿಯ ಬಗ್ಗೆ ಅವಹೇಳನ ಮಾಡಿದವನನ್ನು ಸುಮ್ಮನೆ ಬಿಟ್ಟಿದ್ದೀರಿ. ಕುವೆಂಪು ಅನೇಕರ ಪ್ರೋತ್ಸಾಹದಿಂದ ಕವಿ ಆದರಂತೆ. ಈ ರೀತಿ ಹೇಳಿದವನ ಹಿನ್ನೆಲೆ ಏನು?' ಎಂದು ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಬಿಎಸ್‌ವೈ ‘ವಿಜಯ’ಕ್ಕೆ ‘ಸಂತೋಷ’ ವಿಘ್ನ

ಒಂದನೇ ಪುಟದಿಂದ...

ಯಡಿಯೂರಪ್ಪ ಅವರು ಪುತ್ರನ ಹೆಸರು ಪಟ್ಟಿಯಲ್ಲಿ ಸೇರಿಸಲು ಒತ್ತಡ ಹೇರಿದಾಗ ಬೊಮ್ಮಾಯಿ ಈ ವಿಷಯವನ್ನು ವರಿಷ್ಠರ ಗಮನಕ್ಕೆ ತಂದಿದ್ದರು. ಪಟ್ಟಿಯಲ್ಲಿ ಸೇರಿಸಿ ಉಳಿದದ್ದು ನಮಗೆ ಬಿಡಿ ಎಂಬ ಸೂಚನೆ ನೀಡಿದ್ದರು. ಆದರೆ, ವಿಜಯೇಂದ್ರ ಅವರಿಗೆ ಟಿಕೆಟ್ ನೀಡುವುದಿಲ್ಲ ಎಂಬ ವಿಷಯವನ್ನು ಕೆಲವು ದಿನಗಳ ಹಿಂದೆಯೇ ಅವರ ಗಮನಕ್ಕೆ ತರಲಾಗಿತ್ತು ಎಂದು ಮೂಲಗಳು ತಿಳಿಸಿವೆ.

ಅಥಣಿ ವಿಧಾನಸಭಾ ಚುನಾವಣೆಯಲ್ಲಿ ಸೋತಿದ್ದ ಲಕ್ಷ್ಮಣ ಸವದಿ ಅವರಿಗೆ ಎರಡನೇ ಬಾರಿ ವಿಧಾನಪರಿಷತ್‌ಗೆ ಆಯ್ಕೆ ಮಾಡಲಾಗುತ್ತಿದೆ. ಹಿಂದೆ ಉಪಮುಖ್ಯಮಂತ್ರಿಯನ್ನೂ ಮಾಡಲಾಗಿತ್ತು. ಲಿಂಗಾಯತ ಗಾಣಿಗ ಸಮುದಾಯಕ್ಕೆ ಸೇರಿದ ಸವದಿ ಅವರನ್ನು ಆಯ್ಕೆ ಮಾಡಿದರೆ ಮುಂಬರುವ ವಿಧಾನ ಪರಿಷತ್ತಿನ ಶಿಕ್ಷಕರ ಮತ್ತು ಪದವೀಧರ ಕ್ಷೇತ್ರಗಳ ಚುನಾವಣೆಯಲ್ಲಿ ಪಕ್ಷಕ್ಕೆ ಅನುಕೂಲ ಆಗುತ್ತದೆ ಎಂಬ ಲೆಕ್ಕಾಚಾರವಿದೆ.

ಉಳಿದಂತೆ ಸಂಘಟನೆಗೆ ದುಡಿದ ಎಸ್. ಕೇಶವ ಪ್ರಸಾದ್(ನೇಕಾರ), ಕಳೆದ ವಿಧಾನಸಭಾ ಚುನಾವಣೆ ವೇಳೆ ಕಾಂಗ್ರೆಸ್‌ನಿಂದ ಬಿಜೆಪಿಗೆ ಬಂದು ಎಸ್‌ಸಿ ಮೋರ್ಚಾ ಅಧ್ಯಕ್ಷರಾದ ಛಲವಾದಿ ನಾರಾಯಣಸ್ವಾಮಿ (ಬಲಗೈ) ಮತ್ತು ಪಕ್ಷದ ಕಾರ್ಯದರ್ಶಿ ಹೇಮಲತಾ ನಾಯಕ್ (ವಾಲ್ಮೀಕಿ) ಅವರ ಆಯ್ಕೆ ಪಕ್ಷದ ವಲಯದಲ್ಲಿ ಅಚ್ಚರಿ ಮೂಡಿಸಿದೆ. ಯಡಿಯೂರಪ್ಪ ಪಕ್ಷದ ಅಧ್ಯಕ್ಷರಾಗಿದ್ದಾಗ ಕಚೇರಿ ಕಾರ್ಯದರ್ಶಿ ಸ್ಥಾನದಿಂದ ಕೇಶವ ಪ್ರಸಾದ್ ಅವರನ್ನು ಉಚ್ಚಾಟಿಸಲಾಗಿತ್ತು. ಇವರು ಸಂತೋಷ್ ಬಣದಲ್ಲಿ ಗುರುತಿಸಿಕೊಂಡಿದ್ದರು. ಮಂಜುಳಾ ಅವರ ಹೆಸರು ಕೊನೆಯವರೆಗೂ ಪಟ್ಟಿಯಲ್ಲಿತ್ತು. ಅಂತಿಮ ಕ್ಷಣದಲ್ಲಿ ಹೇಮಲತಾ ನಾಯಕ್ ಅವರ ಹೆಸರನ್ನು ಸೇರ್ಪಡೆ ಮಾಡಲಾಯಿತು.

ಹೊರಟ್ಟಿ ನಾಮಪತ್ರ ಸಲ್ಲಿಕೆ

ಧಾರವಾಡ: ಪಶ್ಚಿಮ ಶಿಕ್ಷಕರ ಕ್ಷೇತ್ರಕ್ಕೆ ಬಿಜೆಪಿಯಿಂದ ಸ್ಪರ್ಧಿಸುತ್ತಿರುವ ಬಸವರಾಜ ಹೊರಟ್ಟಿ ತಮ್ಮ ಅದೃಷ್ಟದ ಅಂಬಾಸೆಡರ್ ಕಾರಿನಲ್ಲಿ ಬಂದು ಮಂಗಳವಾರ ನಾಮಪತ್ರ ಸಲ್ಲಿಸಿದರು.

ಬಿಜೆಪಿ ಪರ ಪರಿಶಿಷ್ಟ ಜಾತಿಯ ಎಡಗೈ ಸಮುದಾಯ ಗಟ್ಟಿಯಾಗಿ ನಿಂತಿದ್ದು, ಬಲಗೈ ಸಮುದಾಯದ ವಿಶ್ವಾಸ ಪಡೆಯಲು ನಾರಾಯಣಸ್ವಾಮಿ ಆಯ್ಕೆ ಅನುಕೂಲ ಆಗಬಹುದು ಎಂಬ ಲೆಕ್ಕಾಚಾರ ಬಿಜೆಪಿಯದು.

ಕಾಂಗ್ರೆಸ್‌ನಲ್ಲಿ ಖರ್ಗೆ ಮಾತಿಗೆ ಮಣೆ: ಕಾಂಗ್ರೆಸ್‌ನಲ್ಲಿ ಕೆ.ಅಬ್ದುಲ್ ಜಬ್ಬಾರ್, ನಾಗರಾಜು ಯಾದವ್ ಅವರ ಆಯ್ಕೆಯಲ್ಲಿ ಪಕ್ಷದ ಹಿರಿಯ ನಾಯಕ ಮಲ್ಲಿಕಾರ್ಜುನ ಖರ್ಗೆ ಅವರ ಪ್ರಭಾವ ನಡೆದಿದೆ ಎಂದು ಕಾಂಗ್ರೆಸ್ ಮೂಲಗಳು ತಿಳಿಸಿವೆ.

ಕ್ರೈಸ್ತ ಸಮುದಾಯಕ್ಕೆ ಪ್ರಾತಿನಿಧ್ಯ ನೀಡಬೇಕು ಎಂದು ಸಿದ್ದರಾಮಯ್ಯ ಅವರು ಐವನ್ ಡಿಸೋಜಾ ಹೆಸರು ಸೂಚಿಸಿದ್ದರು. ಹಿಂದುಳಿದ ವರ್ಗದಿಂದ ಎಂ.ಆರ್.ಸೀತಾರಾಂ ಅವರ ಹೆಸರನ್ನೂ ಸೂಚಿಸಿದ್ದರು. ಆದರೆ, ಡಿ.ಕೆ. ಶಿವಕುಮಾರ್ ಅವರು ಕ್ರೈಸ್ತರ ಅಭ್ಯರ್ಥಿ ಬದಲು ಮುಸ್ಲಿಂ ಅಭ್ಯರ್ಥಿಯನ್ನು ಕಣಕ್ಕಿಳಿಸುವ ಬಗ್ಗೆ ಒಲವು ತೋರಿದ್ದರು. ರಾಜ್ಯದಲ್ಲಿ ಎಸ್‌ಡಿಪಿಐ ಪ್ರಭಾವ ತಗ್ಗಿಸಲು ಇದರಿಂದ ಅನುಕೂಲವಾಗುತ್ತದೆ ಎಂಬ ವಾದ ಮಂಡಿಸಿದ್ದರು. ಲಿಂಗಾಯತ ಸಮುದಾಯದ ಎಸ್.ಆರ್.ಪಾಟೀಲ ಅವರ ಹೆಸರನ್ನೂ ಮುಂದಿಟ್ಟಿದ್ದರೂ ಹೈಕಮಾಂಡ್ ಇಬ್ಬರ ಶಿಫಾರಸನ್ನು ತಿರಸ್ಕರಿಸಿ, ಖರ್ಗೆಯವರ ಸಲಹೆಯನ್ನು ಪರಿಗಣಿಸಿದೆ. ಜೆಡಿಎಸ್‌ನಲ್ಲಿ ಟಿ.ಎ.ಶರವಣ ಅವರ ಆಯ್ಕೆಯನ್ನು ಎಚ್. ಡಿ.ದೇವೇಗೌಡ ಅಂತಿಮಗೊಳಿಸಿದ್ದಾರೆ.

ಅವಿರೋಧ ಆಯ್ಕೆ ಖಚಿತ

ವಿಧಾನಸಭೆಯಿಂದ ವಿಧಾನಪರಿಷತ್‌ನ ಒಟ್ಟು ಏಳು ಸ್ಥಾನಗಳಿಗೆ ಜೂನ್ 3ರಂದು ನಡೆಯಲಿರುವ ಚುನಾವಣೆಗೆ ಬಿಜೆಪಿಯಿಂದ ನಾಲ್ವರು, ಕಾಂಗ್ರೆಸ್ಸಿನಿಂದ ಇಬ್ಬರು, ಜೆಡಿಎಸ್‌ನಿಂದ ಒಬ್ಬ ಅಭ್ಯರ್ಥಿ ಮಂಗಳವಾರ ನಾಮಪತ್ರ ಸಲ್ಲಿಸಿದರು.

ಬಿಜೆಪಿಯ ಲಕ್ಷ್ಮಣ ಸವದಿ, ಛಲವಾದಿ ನಾರಾಯಣಸ್ವಾಮಿ, ಎಸ್. ಕೇಶವಪ್ರಸಾದ್, ಹೇಮಲತಾ ನಾಯಕ್, ಕಾಂಗ್ರೆಸ್‌ನಿಂದ ಅಬ್ದುಲ್ ಜಬ್ಬಾರ್, ನಾಗರಾಜು ಯಾದವ್, ಜೆಡಿಎಸ್‌ನ ಟಿ.ಎ.ಶರವಣ ಅವರು ಚುನಾವಣಾಧಿಕಾರಿಯೂ ಆಗಿರುವ ವಿಧಾನಸಭೆಯ ಕಾರ್ಯದರ್ಶಿ ವಿಶಾಲಾಕ್ಷಿ ಅವರಿಗೆ ನಾಮಪತ್ರ ಸಲ್ಲಿಸಿದರು. ಪಕ್ಷಗಳ ಬಲಾಬಲ ಆಧಾರದಲ್ಲಿ ಬಿಜೆಪಿ ನಾಲ್ಕು, ಕಾಂಗ್ರೆಸ್ ಎರಡು, ಜೆಡಿಎಸ್ ಒಂದು ಸ್ಥಾನ ಗೆಲ್ಲುವುದು ಖಚಿತವಾಗಿದ್ದು, ಎಲ್ಲ ಅಭ್ಯರ್ಥಿಗಳ ಅವಿರೋಧ ಆಯ್ಕೆಯಾಗುವುದು ನಿಶ್ಚಿತವಾಗಿದೆ. ನಾಮಪತ್ರಗಳ ಪರಿಶೀಲನೆ ಬುಧವಾರ ನಡೆಯಲಿದ್ದು, ಹಿಂತೆಗೆದುಕೊಳ್ಳಲು ಇದೇ 27 ಕೊನೆ ದಿನ.

ಎಸ್ಸೆಸ್ಸೆಲ್ಸಿ ಪ್ರಶ್ನೆಪತ್ರಿಕೆ ಸೋರಿಕೆ: ಬಂಧನ

ರಾಮನಗರ: ಎಸ್ಸೆಸ್ಸೆಲ್ಸಿ ಪ್ರಶ್ನೆಪತ್ರಿಕೆ ಸೋರಿಕೆ ಮಾಡಿದ ಆರೋಪದ ಮೇರೆಗೆ ಮಾಗಡಿಯ ಕೆಂಪೇಗೌಡ ಖಾಸಗಿ ಪ್ರೌಢಶಾಲೆಯ ಕ್ಲರ್ಕ್ ರಂಗೇಗೌಡ ಪೊಲೀಸರು ಮಂಗಳವಾರ ಬಂಧಿಸಿದ್ದಾರೆ.

ಏಪ್ರಿಲ್‌ನಲ್ಲಿ ನಡೆದ ಎಸ್ಸೆಸ್ಸೆಲ್ಸಿ ಪರೀಕ್ಷೆಯ ವಿಜ್ಞಾನ ವಿಷಯದ ಪ್ರಶ್ನೆಪತ್ರಿಕೆಯನ್ನು ಆರೋಪಿಯು ಅವಧಿಗೆ ಮುನ್ನವೇ ವಾಟ್ಸ್‌ಆ್ಯಪ್ ಮೂಲಕ ಶಿಕ್ಷಕರು ಇರುವ ಗುಂಪೊಂದಕ್ಕೆ ಹಾಕಿದ್ದ. ಬಳಿಕ ಅದನ್ನು ಡಿಲಿಟ್ ಸಹ ಮಾಡಿದ್ದ ಎನ್ನಲಾಗಿದೆ. ಮತ್ತೊಬ್ಬ ಶಿಕ್ಷಕರು ಇದನ್ನು ಗಮನಿಸಿದ್ದು, ನಂತರದಲ್ಲಿ ಇದೇ ವಿಚಾರವಾಗಿ ಶಿಕ್ಷಕ ಹಾಗೂ ಸ್ಥಳೀಯ ಪತ್ರಕರ್ತರೊಬ್ಬರು ಆತನನ್ನು ಬ್ಲಾಕ್‌ಮೇಲ್ ಮಾಡಿ ಹಣ ಸಹ ವಸೂಲಿ ಮಾಡಿದ್ದರು ಎನ್ನಲಾಗಿದೆ. ಈ ವಿಷಯ ಪೊಲೀಸರ ಗಮನಕ್ಕೆ ಬಂದಿದ್ದು, ಸೋಮವಾರ ಆರೋಪಿಯನ್ನು ವಶಕ್ಕೆ ಪಡೆದು ವಿಚಾರಣೆಗೆ ಒಳಪಡಿಸಿದ್ದಾರೆ.

‘ಇಲಾಖೆಯನ್ನೂ ವೋಟ್ ಬ್ಯಾಂಕ್‌ಗೆ ಬಳಸಿದ್ರು’

ಪ್ರಜಾವಾಣಿ ವಾರ್ತೆ

ಮೈಸೂರು: ‘1ನೇ ತರಗತಿಯಲ್ಲಿ ದೇಶದ ಧ್ವಜದ ಬಗ್ಗೆ ‘ಏರುತಿಹುದು, ಹಾರುತಿಹುದು ನೋಡು ನಮ್ಮ ಬಾವುಟ’ ಎಂಬ ಪಾಠವಿತ್ತು. ಅದನ್ನು ಏಕೆ ಕಾಂಗ್ರೆಸ್ ಸರ್ಕಾರ ತೆಗೆದು ಹಾಕಿತು? ಬಾವುಟ ಏರುವುದನ್ನು, ಭಾರತ ಏರುವುದನ್ನು ಸಹಿಸಲು ಅವರಿಗೆ ಆಗಲಿಲ್ಲವೇ? ಯಾವ ನೈತಿಕತೆ ಇಟ್ಟುಕೊಂಡು ಸಿದ್ದರಾಮಯ್ಯ ಇನ್ನೊಬ್ಬರ ಬಗ್ಗೆ ಮಾತನಾಡುತ್ತಾರೆ’ ಎಂದು ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವ ಬಿ.ಸಿ.ನಾಗೇಶ್ ಗುಡುಗಿದರು.

ಮಂಗಳವಾರ ಇಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, ‘ಬರೀ ತಪ್ಪು ಹಾಗೂ ಏಕಮುಖ ವಿಚಾರವನ್ನು ಪಠ್ಯದಲ್ಲಿ ಮುದ್ರಿಸಿದರೆ ಶಿಕ್ಷಣ ವ್ಯವಸ್ಥೆ ಬಗ್ಗೆ ಮಕ್ಕಳಿಗೆ ಅಸೂಯೆ ಬರುತ್ತದೆ, ನಂಬಿಕೆ ಕಳೆದುಕೊಳ್ಳುತ್ತಾರೆ. 65 ವರ್ಷ ಆಡಳಿತ ನಡೆಸಿದ ಕಾಂಗ್ರೆಸ್‌ನವರು ಶಿಕ್ಷಣ ಇಲಾಖೆಯನ್ನೂ ವೋಟ್ ಬ್ಯಾಂಕ್ ರಾಜಕೀಯಕ್ಕೆ ಬಳಸಿಕೊಂಡಿದ್ದಾರೆ. ಹೀಗಾಗಿ, ಅನೇಕ ತಪ್ಪುಗಳು ಪಠ್ಯದಲ್ಲಿ ಉಳಿದುಕೊಂಡಿವೆ’ ಎಂದರು.



ಬಿ.ಸಿ.ನಾಗೇಶ್

‘ಪಠ್ಯದಲ್ಲಿದ್ದ ಕುವೆಂಪು ಅವರ ನಾಲ್ಕು ಪಾಠವನ್ನು ತೆಗೆದು ಹಾಕಿದ್ದಾರೆ. ನಾವು ಸೇರಿಸುವ ಪ್ರಯತ್ನ ಮಾಡಿದ್ದೇವೆ. ಆದರೆ, ಈಗ ಬಿಜೆಪಿ ಸರ್ಕಾರದ ವಿರುದ್ಧ ಸುಳ್ಳು ಹಬ್ಬಿಸುತ್ತಿದ್ದಾರೆ. ಈ ಬಗ್ಗೆ ಸಿದ್ದರಾಮಯ್ಯ ಕ್ಷಮೆಯಾಚಿಸಬೇಕು’ ಎಂದು ಆಗ್ರಹಿಸಿದರು.

‘ಟಿಪ್ಪು ಸುಲ್ತಾನ್ ಬಗ್ಗೆ ಪಠ್ಯದಲ್ಲಿ ಹಾಕಿದ್ದಾರೆ. ಈ ದೇಶದಲ್ಲಿ ಬ್ರಿಟಿಷರ ವಿರುದ್ಧ ಹೋರಾಡಿದವನು ಅವನೊಬ್ಬನೇನಾ? ಕಿತ್ತೂರು ರಾಣಿ ಚನ್ನಮ್ಮ, ಸಂಗೊಳ್ಳಿ ರಾಯಣ್ಣ ಹೋರಾಡಲಿಲ್ಲವೇ? ಹೈದರಾಲಿ, ಟಿಪ್ಪು ಸುಲ್ತಾನ್‌ನಿಂದ ಮೈಸೂರು ಮಹಾರಾಜರಿಗೆ ಹಾಗೂ ಕನ್ನಡ ಭಾಷೆಗೆ ಅನ್ಯಾಯವಾಗಿದೆ. ಆ ವಿಚಾರ ಏಕೆ ಪಠ್ಯದಲ್ಲಿ ಇಲ್ಲ’ ಎಂದು ಪ್ರಶ್ನಿಸಿದರು.

ರೋಹಿತ್ ಚಕ್ರತೀರ್ಥ ನಾಡಗೀತೆಗೆ ಅವಮಾನ ಮಾಡಿರುವ ಬಗ್ಗೆ, ‘ಸಿದ್ದರಾಮಯ್ಯ ಹಾಕಿರುವ ಟ್ವೀಟ್ ಓದಿ. 2016ರಲ್ಲಿ ನಡೆದಿರುವ ಘಟನೆ ಇದು. ಕಾಂಗ್ರೆಸ್ ಸರ್ಕಾರವೇ ಪ್ರಕರಣ ದಾಖಲಿಸಿ ಆಮೇಲೆ ‘ಬಿ’ ವರದಿ ನೀಡಿತ್ತು. ತಪ್ಪಾಗಿದ್ದರೂ ಏಕೆ ಕಾನೂನು ಕ್ರಮ ಕೈಗೊಳ್ಳಲಿಲ್ಲ? ಏಕೆ ಈಗ ಈ ವಿಚಾರ ಪ್ರಸ್ತಾಪಿಸುತ್ತಿದ್ದಾರೆ? ವಾಟ್ಸ್‌ಆ್ಯಪ್‌ನಲ್ಲಿ ಬಂದಿರುವುದನ್ನು ಫಾರ್ವರ್ಡ್ ಮಾಡಿರುವುದಾಗಿ ರೋಹಿತ್ ಚಕ್ರತೀರ್ಥ ಸ್ಪಷ್ಟವಾಗಿ ಹೇಳಿದ್ದಾರೆ. ಹೀಗಾಗಿ, ಪ್ರಕರಣ ಗಟ್ಟಿಯಾಗಿ ನಿಲ್ಲಲಿಲ್ಲ’ ಎಂದರು.

‘ತಾನು ಮಾಡಿದ್ದೇ ಸರಿ, ತನಗೆ ಮಾತ್ರ ಗೊತ್ತಿರೋದು ಎನ್ನುವ ವ್ಯಕ್ತಿ ಇನ್ನೊಬ್ಬ ವ್ಯಕ್ತಿಗೆ ಗೌರವ ಕೊಡುವುದಿಲ್ಲ. ಅದು ವ್ಯಕ್ತಿಯ ದುರಹಂಕಾರ ತೋರಿಸುತ್ತದೆ. ಸುಳ್ಳುಗಳ ಕಥೆ ಕಟ್ಟಿ ಸಿದ್ದರಾಮಯ್ಯ ತಲೆಗೆ ತುಂಬುವ ಕೆಲ ವ್ಯಕ್ತಿಗಳು ಅವರ ಜೊತೆಗಿದ್ದಾರೆ’ ಎಂದು ವಾಗ್ದಾಳಿ ನಡೆಸಿದರು.

‘ಪಠ್ಯ ಪುಸ್ತಕ ಪರಿಷ್ಕರಣೆ ಜವಾಬ್ದಾರಿಯನ್ನು ನಮ್ಮ ಸರ್ಕಾರ ಒಬ್ಬ ವ್ಯಕ್ತಿ ಕೈಗೆ ಕೊಟ್ಟಿಲ್ಲ. ಪುಸ್ತಕ ಮುದ್ರಣಗೊಂಡಿದ್ದು, ಪರಿಷ್ಕರಣೆ ಮಾತೇ ಇಲ್ಲ’ ಎಂದರು.

‘ಚಕ್ರತೀರ್ಥ ಸಮಿತಿ ರದ್ದುಗೊಳಿಸಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಶಾಲಾ ಪಠ್ಯಪುಸ್ತಕ ಪರಿಷ್ಕರಣೆಗೆ ಸಂಬಂಧಿಸಿದಂತೆ ರೋಹಿತ್ ಚಕ್ರತೀರ್ಥ ಅಧ್ಯಕ್ಷತೆಯ ಸಮಿತಿ ರದ್ದುಗೊಳಿಸಿ, ವರದಿಯನ್ನು ತಿರಸ್ಕರಿಸಬೇಕು’ ಎಂದು ಬಿಜೆಪಿಯ ವಿಧಾನ ಪರಿಷತ್ ಸದಸ್ಯ ಎಚ್. ವಿಶ್ವನಾಥ್ ಆಗ್ರಹಿಸಿದರು.

ಇಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಪ್ರಾಥಮಿಕ ಶಿಕ್ಷಣ ಪ್ರಜಾಪ್ರಭುತ್ವೀಕರಣ ಆಗಿರಬೇಕು. ಕೇಸರೀಕರಣ ಆಗಬಾರದು. ಮಕ್ಕಳ ವಿಚಾರದಲ್ಲಿ ಮನಸ್ಸಿಗೆ ಬಂದ ಹಾಗೆ ಮಾಡಲು ಬರುವುದಿಲ್ಲ. ಜಾತಿ, ಪಕ್ಷ, ಧರ್ಮದ ಆಧಾರದಲ್ಲಿ ಪಠ್ಯಪುಸ್ತಕ ಪರಿಷ್ಕರಣೆ ಮಾಡಬಾರದು’ ಎಂದು ಹೇಳಿದರು.

‘ದೇವರು, ಧರ್ಮ, ಪೂಜೆ, ಯಜ್ಞದ ಬಗ್ಗೆ ತಂದೆ-ತಾಯಿ ಮನೆಯಲ್ಲಿ ಹೇಳಿಕೊಡಬೇಕು. ಸರ್ಕಾರ ಈ ಕೆಲಸ ಮಾಡಬಾರದು. ಪಠ್ಯಪುಸ್ತಕದ ಮೂಲಕ ಮಕ್ಕಳ ಮನಸ್ಸನ್ನು ಎಲ್ಲಿಯೋ ತೆಗೆದುಕೊಂಡು ಹೋಗಲಾಗುತ್ತಿದೆ. ಹೀಗೆ ಮಾಡಿದರೆ ಪಕ್ಷದ ಪ್ರಣಾಳಿಕೆಯನ್ನೂ ಪಠ್ಯಪುಸ್ತಕ ಮಾಡಬಹುದು’ ಎಂದರು.

‘ಹಾಲಿ ಪಠ್ಯಪುಸ್ತಕ ಪರಿಷ್ಕರಣೆ ಸಮಿತಿಯಲ್ಲಿ ವಿಷಯ ತಜ್ಞರಿಲ್ಲ. ಶಿಕ್ಷಕರನ್ನೂ ವಿಶ್ವಾಸಕ್ಕೆ ತೆಗೆದುಕೊಂಡಿಲ್ಲ. ಹೀಗಾಗಿ, ಎಲ್ಲ ಧರ್ಮ, ವರ್ಗಗಳನ್ನು ಪ್ರತಿನಿಧಿಸುವ ತಜ್ಞರನ್ನು ಒಳಗೊಂಡ ಸಮಿತಿಯನ್ನು ಹೊಸದಾಗಿ ರಚಿಸಬೇಕು. ಟಿಪ್ಪು ಸುಲ್ತಾನ್, ನಾರಾಯಣಗುರು ಅವರನ್ನು ಲಘುವಾಗಿ ಪರಿಗಣಿಸಬಾರದು. ಈ ನೆಲದ ಬಗ್ಗೆ ಮಕ್ಕಳಿಗೆ ತಿಳಿಸುವ ಕೆಲಸವಾಗಬೇಕು. ಶಾಲೆಗಳಲ್ಲಿ ವಿದ್ಯಾರ್ಥಿಗಳು ಜ್ಞಾನಪೀಠ ಪ್ರಶಸ್ತಿ ಪಡೆದವರನ್ನು ಓದಬೇಕೇ, ಸೂಲಿಬೆಲೆ ಅವರನ್ನು ಓದಬೇಕೆ’ ಎಂದು ಪ್ರಶ್ನಿಸಿದರು.

‘ಪುಸ್ತಕ ಪರಿಷ್ಕರಣೆಯಲ್ಲಿ ಕುವೆಂಪು ಅವರನ್ನು ಗೇಲಿ ಮಾಡಿ ಪರಿಚಯ ಮಾಡಲಾಗಿದೆ. ಅದೇ ಬನ್ನಂಜೆ ಗೋವಿಂದಾಚಾರ್ಯ ಅವರ ಬಗ್ಗೆ ದೀರ್ಘ ಪರಿಚಯವಿದೆ. ರಾಜ್ಯದಲ್ಲಿ 35 ವಿಶ್ವವಿದ್ಯಾಲಗಳಿದ್ದರೂ ಯಾವುದೇ ವಿಶ್ವವಿದ್ಯಾಲಯ ಇದಕ್ಕೆ ಆಕ್ಷೇಪ ವ್ಯಕ್ತಪಡಿಸದಿರುವುದು ವಿಪರ್ಯಾಸ. ಕೆಲವು ಸಾಹಿತಿಗಳು, ಚಿಂತಕರು, ವಿಮರ್ಶಕರು ಈ ಬಗ್ಗೆ ಸುಮ್ಮನಿದ್ದಾರೆ. ಮಠಾಧಿಪತಿಗಳು ಮಾತನಾಡುತ್ತಿಲ್ಲ’ ಎಂದು ಬೇಸರ ವ್ಯಕ್ತಪಡಿಸಿದರು.

‘ನಾರಾಯಣ ಗುರು ವಿಚಾರ ಪಠ್ಯಕ್ಕೆ ಸೇರ್ಪಡೆ ಕಣ್ಣೊರೆಸುವ ತಂತ್ರ’

ಮಂಗಳೂರು: ‘10ನೇ ತರಗತಿ ಸಮಾಜವಿಜ್ಞಾನ ಪಠ್ಯಪುಸ್ತಕದಿಂದ ನಾರಾಯಣ ಗುರು ಹಾಗೂ ಪೆರಿಯಾರ್ ವಿಚಾರಗಳನ್ನು ಕೈಬಿಟ್ಟು, ಅವಸರದಲ್ಲಿ ಅದನ್ನು ಪ್ರಥಮ ಭಾಷೆ ಕನ್ನಡ ಪಠ್ಯಪುಸ್ತಕದೊಳಗೆ ಸೇರಿಸಿರುವುದು ಗಾಯಕ್ಕೆ ಉಪ್ಪು ಸವರಿದಂತಾಗಿದೆ’ ಎಂದು ಕುದ್ರೋಳಿ ಗೋಕರ್ಣನಾಥ ಕ್ಷೇತ್ರದ ಕೋಶಾಧಿಕಾರಿ, ಬಿಲ್ಲವ ಮುಖಂಡ ಪದ್ಮರಾಜ್ ಆರ್. ಆರೋಪಿಸಿದ್ದಾರೆ.

‘ಐಚ್ಛಿಕ ವಿಷಯವಾಗಿರುವ ಕನ್ನಡ ಪ್ರಥಮ ಭಾಷಾ ಪಠ್ಯದಲ್ಲಿ ನಾರಾಯಣ ಗುರು, ಇತರ ಸಮಾಜ ಸುಧಾರಕರ ಕುರಿತಾದ 8 ಪುಟಗಳ ಪಠ್ಯವನ್ನು ಅವಸರದಿಂದ ತುರುಕಿ, ಇಲಾಖೆಯ ಅಧಿಕೃತ ವೆಬ್‌ಸೈಟ್‌ನಲ್ಲಿ ಬಿಡುಗಡೆಗೊಳಿಸಿದೆ. ಇದು ನಾರಾಯಣ ಗುರು ಅನುಯಾಯಿಗಳ ಕಣ್ಣೊರೆಸುವ ತಂತ್ರ’ ಎಂದಿದ್ದಾರೆ.

‘ವಿದ್ಯಾರ್ಥಿಗಳು ಅವಶ್ಯವಾಗಿ ಕಲಿಯಬೇಕಾದ ಸಮಾಜವಿಜ್ಞಾನ ಪಠ್ಯದ ಪ್ರಮುಖ ಅಂಗವಾದ ‘ಆಧುನಿಕ ಭಾರತದ ಸಮಾಜ ಸುಧಾರಕರ ವಿಭಾಗ’ದಲ್ಲಿ ನಾರಾಯಣ ಗುರುಗಳ ವಿಚಾರ ಕೈ ಬಿಟ್ಟು, ಐಚ್ಛಿಕವಾದ ಪಠ್ಯದಲ್ಲಿ ಅದನ್ನು ಅವಸರವಾಗಿ ಅಳವಡಿಸಿರುವುದು ಮೊಣಕೈಗೆ ಬೆಲ್ಲ ಸವರಿದಂತೆ’ ಎಂದು ಬಿಲ್ಲವ ಮುಖಂಡ ರಾಜೇಂದ್ರ ಚಿಲಿಂಬಿ ಟೀಕಿಸಿದ್ದಾರೆ.

‘ಕುವೆಂಪು ಪಠ್ಯ ಪರಿಷ್ಕರಣೆ ಮಾಡಿಲ್ಲ’

ಬೆಂಗಳೂರು: ‘ರೋಹಿತ್ ಚಕ್ರತೀರ್ಥ ಅಧ್ಯಕ್ಷತೆಯ ಸಮಿತಿಯು 4ನೇ ತರಗತಿಯ ಪರಿಸರ ಅಧ್ಯಯನ ಅಭ್ಯಾಸ ಸಹಿತ ಪಠ್ಯಪುಸ್ತಕದಲ್ಲಿ ಕುವೆಂಪು ಅವರ ಪಠ್ಯವನ್ನು ಪರಿಷ್ಕರಣೆ ಮಾಡಿಲ್ಲ’ ಎಂದು ಕರ್ನಾಟಕ ಪಠ್ಯ ಪುಸ್ತಕ ಸಂಘ ಸ್ಪಷ್ಟಪಡಿಸಿದೆ.

‘ಕುವೆಂಪು ಅವರ ಬಗ್ಗೆ ಇದ್ದ ವಿಷಯವನ್ನು ಕೈಬಿಡಲಾಗಿದೆ ಎಂಬ ಸುದ್ದಿಗಳು ಪ್ರಕಟವಾಗುತ್ತಿವೆ. ಬರಗೂರು ರಾಮಚಂದ್ರಪ್ಪ ಅವರ ಸಮಿತಿಯು 2017–18ನೇ ಸಾಲಿನಲ್ಲಿ ಪರಿಷ್ಕರಿಸಿದ್ದ ಪಠ್ಯಪುಸ್ತಕದಲ್ಲಿ ‘ಪ್ರತಿಯೊಬ್ಬರೂ ವಿಶಿಷ್ಟ’ ಎಂಬ ಪಾಠದಲ್ಲಿ ‘ಕುಪ್ಪಳ್ಳಿ ವೆಂಕಟಪ್ಪ ಪುಟ್ಟಪ್ಪ’ ಶೀರ್ಷಿಕೆಯಡಿ ಇದ್ದ 9 ಸಾಲುಗಳ ವಿಷಯಾಂಶವನ್ನು ಪರಿಸರ ಅಧ್ಯಯನ ಪಠ್ಯಪುಸ್ತಕದಲ್ಲೂ ಯಾವುದೇ ಬದಲಾವಣೆ ಇಲ್ಲದೆ ಮುಂದುವರಿಸಲಾಗಿದೆ’ ಎಂದು ಸಂಘ ತಿಳಿಸಿದೆ.

‘ಬೌದ್ಧಿಕ ದಾರಿದ್ರ್ಯದ ಪ್ರತೀಕ’

ಬೆಂಗಳೂರು: ‘ಪಠ್ಯಪುಸ್ತಕಗಳಲ್ಲಿ ಒಂದೇ ಜಾತಿಯ ಲೇಖಕರ ಲೇಖನಗಳನ್ನು ಸೇರಿಸಿರುವುದು ಸರ್ವಥಾ ಸರಿಯಲ್ಲ. ಆ ಕಾರಣಕ್ಕಾಗಿ ಇಡೀ ಪಠ್ಯವನ್ನು ಬ್ರಾಹ್ಮಣ ಪಠ್ಯ, ಆರೆಸ್ಸೆಸ್ ಪಠ್ಯ ಎನ್ನುತ್ತಿರುವುದು ಬೌದ್ಧಿಕ ದಾರಿದ್ರ್ಯದ ಪ್ರತೀಕ’ ಎಂದು ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಬಿ.ವಿ. ವಸಂತಕುಮಾರ್ ತಿಳಿಸಿದ್ದಾರೆ.

ಪಠ್ಯಪುಸ್ತಕ ಪರಿಷ್ಕರಣೆ ವಿವಾದಕ್ಕೆ ಸಂಬಂಧಿಸಿದಂತೆ ಪ್ರತಿಕ್ರಿಯಿಸಿರುವ ಅವರು, ‘ನಮಗಿಂದು ಬೇಕಾಗಿರುವುದು ಬ್ರಾಹ್ಮಣವಾದವೂ ಅಲ್ಲ, ಬ್ರಾಹ್ಮಣ ದ್ವೇಷವೂ ಅಲ್ಲ. ದಲಿತ ಮತ್ತು ಮಾನವ ಪ್ರೀತಿ ಬೇಕಾಗಿದೆ. ಸಮಾಜವನ್ನು ಸಹೃದಯಿಗೊಳಿಸುವ, ಮಕ್ಕಳನ್ನು ಜ್ಞಾನಮಯಿ ಮತ್ತು ತೇಜೋಮಯಿಗಳನ್ನಾಗಿಸುವ ಪಠ್ಯ ಅಗತ್ಯ. ’ ಎಂದು ಹೇಳಿದ್ದಾರೆ.

ಪಠ್ಯಪುಸ್ತಕ ಪರಿಷ್ಕರಣೆ: ಪ್ರತಿಭಟನೆಯ ಎಚ್ಚರಿಕೆ

ಬೆಂಗಳೂರು: ‘ರೋಹಿತ್ ಚಕ್ರತೀರ್ಥ ಅಧ್ಯಕ್ಷತೆಯ ಸಮಿತಿ ಪರಿಷ್ಕರಣೆಗೊಳಿಸಿರುವ ಪಠ್ಯಪುಸ್ತಕವನ್ನು ಹಿಂದಕ್ಕೆ ಪಡೆದು, ಈ ಮೊದಲಿನ ಪಠ್ಯ ಮುಂದುವರೆಸಬೇಕು. ಇಲ್ಲವಾದಲ್ಲಿ ಸಾಮಾಜಿಕ ನ್ಯಾಯ ವಿರೋಧಿ ಮರು ಪರಿಷ್ಕರಣೆ ವಿರುದ್ಧ ಪ್ರತಿಭಟನೆ ನಡೆಸಲಾಗುವುದು’ ಎಂದು ದಲಿತ ಸಂಘಟನೆಗಳ ರಾಜ್ಯ ಸಮಿತಿ ಎಚ್ಚರಿಸಿದೆ.

ಇಲ್ಲಿ ಮಂಗಳವಾರ ದಲಿತ ಹಕ್ಕುಗಳ ಸಮಿತಿಯ (ಡಿಎಚ್‌ಎಸ್) ಬಿ. ರಾಜಶೇಖರಮೂರ್ತಿ ಮಾತನಾಡಿ, ‘ಪಠ್ಯಪುಸ್ತಕ ಪರಿಷ್ಕರಣೆಯಲ್ಲಿ ಸಾಮಾಜಿಕ ನ್ಯಾಯವನ್ನು ಕಡೆಗಣಿಸಲಾಗಿದೆ. ಜಾತಿವಾದಿ ಹಾಗೂ ಮೂಲಭೂತವಾದಿ ನಿಲುವು ಕಂಡುಬರುತ್ತಿದೆ. ಈ ಹಿಂದೆ ಪಠ್ಯಪುಸ್ತಕ ಪರಿಷ್ಕರಣೆಗೆ ಒಟ್ಟು 27 ಸಮಿತಿಗಳಿದ್ದವು. ಪ್ರತಿ ಸಮಿತಿಗೂ ಒಬ್ಬಬ್ಬರು ಅಧ್ಯಕ್ಷರಿದ್ದರು. ಬರಗೂರು ರಾಮಚಂದ್ರಪ್ಪ ಒಬ್ಬರೇ ಪರಿಷ್ಕರಣೆ ಮಾಡಿರಲಿಲ್ಲ. ಸಮಿತಿಯಲ್ಲಿ 170ಕ್ಕೂ ಅಧಿಕ ಸದಸ್ಯರಿದ್ದರು. 27 ಸಮಿತಿಯಲ್ಲಿಯೂ ವಿಷಯ ತಜ್ಞರು, ಅಧ್ಯಾಪಕರು ಮತ್ತು ವಿವಿಧ ಸಮುದಾಯಕ್ಕೆ ಸೇರಿದವರು ಇದ್ದರು. ಆದರೆ, ಈಗ ಪರಿಷ್ಕರಣೆಗೆ ಒಂದೇ ಸಮಿತಿ ರಚಿಸಿದ್ದು, ಅದು ಸಾಮಾಜಿಕ ಸಮತೋಲನದಿಂದ ಕೂಡಿಲ್ಲ’ ಎಂದರು.

ದಲಿತ ಸಂಘರ್ಷ ಸಮಿತಿಯ (ಡಿಎಸ್‌ಎಸ್–ಭೀಮವಾದ) ಮೋಹನ್ ರಾಜು ಆರ್., ‘ಸಮಾಜ ಸುಧಾರಕರಾದ ನಾರಾಯಣಗುರು ಮತ್ತು ಪೆರಿಯಾರ್ ಅವರ ಪಾಠಗಳನ್ನು 10ನೇ ತರಗತಿ ಪಠ್ಯದಿಂದ ಕೈಬಿಡಲಾಗಿದೆ. ಹೊಸದಾಗಿ ಸೇರಿಸಿದ ಪಾಠಗಳು ಜನವಿರೋಧಿಯಾಗಿವೆ’ ಎಂದು ಹೇಳಿದರು.

ವಿದ್ಯಾರ್ಥಿಗಳ ಅನಿಸಿಕೆ

ಶುಲ್ಕ ಕಟ್ಟದೆ, ಪುಸ್ತಕ ಖರೀದಿಸಿದೆ

‘ಪ್ರಜಾವಾಣಿ’ ನೀಡಿದ ಶಿಷ್ಯವೇತನದಿಂದ ಪುಸ್ತಕ ಖರೀದಿಸಿದೆ. ಜೊತೆಗೆ ಕಾಲೇಜು ಶುಲ್ಕ ಕಟ್ಟಲು ಸಹ ಸಾಧ್ಯವಾಯಿತು. ಎನ್‌ಸಿಇಆರ್‌ಟಿ ಪುಸ್ತಕಗಳನ್ನು ಖರೀದಿಸಿದ್ದು, ಇದರಿಂದ ತುಂಬಾ ಅನುಕೂಲವಾಗಿದೆ. ಸಂಕಷ್ಟದಲ್ಲಿದ್ದ ನನಗೆ ದೊರೆತ ನೆರವು ಎಂದಿಗೂ ಮರೆಯುವುದಿಲ್ಲ. ‘ಪ್ರಜಾವಾಣಿ’ ಬಳಗಕ್ಕೆ ಧನ್ಯವಾದ.

ಜಗತ್ ಸರಡಗಿ, ಯಾದಗಿರಿ

ಸ್ಪರ್ಧಾತ್ಮಕ ಪರೀಕ್ಷೆಗೆ ನೆರವಾಯಿತು

‘ಪ್ರಜಾವಾಣಿ’ಯಿಂದ ಸಿಕ್ಕ ಶಿಷ್ಯವೇತನದಿಂದ ಸ್ಪರ್ಧಾತ್ಮಕ ಪರೀಕ್ಷೆಗೆ ಸಂಬಂಧಿಸಿದ ಪುಸ್ತಕಗಳನ್ನು ಖರೀದಿಸಿದೆ. ಸ್ಪರ್ಧಾತ್ಮಕ ಪರೀಕ್ಷೆಗೆ ಸಿದ್ಧತೆ ನಡೆಸಲು ನನಗೆ ನೆರವಾಯಿತು. ಪುಸ್ತಕಗಳು ತುಂಬಾ ಪ್ರಯೋಜನಕಾರಿಯಾಗಿದ್ದು, ಅವುಗಳನ್ನು ಖರೀದಿಸಲು ಪ್ರಜಾವಾಣಿ ನೀಡಿದ ನೆರವನ್ನು ಎಂದಿಗೂ ಮರೆಯಲಾಗದು.

ವೆಂಕಟೇಶ ಪ್ರಸಾದ ಕಡಬೂರ, ಯಾದಗಿರಿ ಜಿಲ್ಲೆ

ಪಠ್ಯದಿಂದ ‘ಎದೆಗೆ ಬಿದ್ದ ಅಕ್ಷರ’ ಕೈಬಿಡಿ: ದೇವನೂರ

ಒಂದನೇ ಪುಟದಿಂದ...

‘ಚಾತುರ್ವರ್ಣ ಹಿಂದೂ ಪ್ರಭೇದದ ಆರ್‌ಎಸ್‌ಎಸ್ ಸಂತಾನ ವಾದ ಬಿಜೆಪಿ ತನ್ನ ಆಳ್ವಿಕೆಯಲ್ಲಿ ಮೊದಲು ಕೈ ಹಾಕುವುದೇ ಶಿಕ್ಷಣ ಮತ್ತು ಇತಿಹಾಸದ ಕುತ್ತಿಗೆಗೆ. ನೂತನ ಪಠ್ಯ ಪರಿಷ್ಕರಣೆಯಲ್ಲಿ ಯೂ ಇದೇ ಆಗಿದೆ’ ಎಂದು ಆರೋಪಿಸಿದ್ದಾರೆ.

‘ಪಠ್ಯಪುಸ್ತಕ ಪರಿಷ್ಕರಣೆ ಸಮಿತಿ ಅಧ್ಯಕ್ಷ ರೋಹಿತ್ ಚಕ್ರತೀರ್ಥ, ತನಗೆ ಲೇಖಕರ ಜಾತಿ ತಿಳಿದಿಲ್ಲ ಎಂದು ಹೇಳುತ್ತಾರೆ. ಪ್ರಜ್ಞಾಪೂರ್ವಕ ವಾಗಿ ಜಾತಿಯನ್ನು ಗುರುತಿಸದಿದ್ದರೆ ಅಲ್ಲಿ ಸಹಜವಾಗಿ ಶೇ 90ರಷ್ಟು ಅವರ ಜಾತಿಯವರೇ ತುಂಬಿಕೊಳ್ಳುತ್ತಾರೆ. ಭಾರತದ ಬಹುತ್ವ, ಪ್ರಜಾಪ್ರಭುತ್ವದಲ್ಲಿ ಭಾಗವಹಿಸುವಿಕೆ ಕಣ್ಮರೆಯಾಗುತ್ತಿವೆ’ ಎಂದು ಆತಂಕ ವ್ಯಕ್ತಪಡಿಸಿದ್ದಾರೆ.

‘ಹತ್ತನೇ ತರಗತಿ ಕನ್ನಡ ಪಠ್ಯಪುಸ್ತಕದಲ್ಲಿ ನನ್ನದೂ ಒಂದು ಕಥನ ಸೇರಿದೆ ಎನ್ನಲಾಗುತ್ತಿದೆ. ಸೇರಿಸುವುದು, ಕೈಬಿಡುವುದು ಗಳಿಗೆ ಗಳಿಗೆಗೂ ನಡೆಯುತ್ತಿದೆ. ಒಂದು ವೇಳೆ ನನ್ನ ಕಥನದ ಭಾಗವನ್ನು ಪಠ್ಯದಲ್ಲಿ ಸೇರಿಸಿರದಿದ್ದರೆ ನನಗೆ ಹೆಚ್ಚು ಸಂತಸವಾಗುತ್ತದೆ. ಸೇರಿದ್ದರೆ ಅದಕ್ಕೆ ನನ್ನ ಒಪ್ಪಿಗೆ ಇಲ್ಲ. ಈ ಹಿಂದೆ ಹಳೇ ಪಠ್ಯಕ್ಕೆ ನೀಡಿದ್ದ ಅನುಮತಿಯನ್ನು ಹಿಂತೆಗೆದುಕೊಂಡಿದ್ದೇನೆ’ ಎಂದಿದ್ದಾರೆ.

‘ಪರಿಷ್ಕೃತ ಪಠ್ಯ ಪ್ರಕಟಗೊಂಡ ಮೇಲೆ ಅವುಗಳನ್ನು ಪರಿಶೀಲಿಸಿ, ಅವುಗಳ ಕೊರತೆಗಳನ್ನು ತುಂಬಲು, ಶಾಲಾ ಮಕ್ಕಳಿಗೆ ಪರ್ಯಾಯ ಪಾಠಗಳು, ಪೂರಕ ವಿಷಯಗಳು, ಸಂವಿಧಾನವನ್ನು ವಾಟ್ಸ್‌ಆ್ಯಪ್, ಇ–ಮೇಲ್, ಆನ್‌ಲೈನ್ ತರಗತಿ ಮೂಲಕ ಬಿತ್ತರಿಸಲು ಆಲೋಚಿಸುತ್ತಿರುವ ಆರೋಗ್ಯವಂತ ಮನಸ್ಸುಗಳ ಜತೆ ನಾನಿರಲು ಬಯಸುವೆ’ ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅಪಘಾತ: 8 ಜನರ ಸಾವು

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ಧಾರವಾಡದ ಬಾಡ ಕ್ರಾಸ್‌ನಲ್ಲಿ ನಡೆದ ಅಪಘಾತದ ನೆನಪು ಮಾಸುವ ಮುನ್ನವೇ, ಹುಬ್ಬಳ್ಳಿ ಹೊರವಲಯದ ಬೈಪಾಸ್ ರಸ್ತೆಯ ರೇವಡಿಹಾಳ ಸೇತುವೆ ಬಳಿ ಸೋಮವಾರ ಮಧ್ಯರಾತ್ರಿ ಬಸ್ ಮತ್ತು ಲಾರಿ ನಡುವೆ ಮತ್ತೊಂದು ಅಪಘಾತ ಸಂಭವಿಸಿದೆ. ಘಟನೆಯಲ್ಲಿ 8 ಮಂದಿ ಮೃತಪಟ್ಟಿದ್ದು, 27 ಜನ ಗಾಯಗೊಂಡಿದ್ದಾರೆ.

ಬಸ್ ಚಾಲಕರಾದ ಬೆಂಗಳೂರಿನ ಬ್ಯಾಡರಹಳ್ಳಿಯ ನಾಗರಾಜ ಆಚಾರ್ (56) ಹಾಗೂ ನಾಗಮಂಗಲದ ಅತಾವುಲ್ಲಾ ಖಾನ್ (40), ಲಾರಿ ಚಾಲಕ ಮಹಾರಾಷ್ಟ್ರದ ಕೊಲ್ಹಾಪುರದ ಅಕ್ಷಯ್ ಪಿಕಳೆ (28), ಮೈಸೂರಿನ ಮಂಡಿ ಮೊಹಲ್ಲಾದ ವಿದ್ಯಾರ್ಥಿ ಮೊಹಮ್ಮದ್ ದಯಾನ್ ಬೇಗ್ (17), ಇಚಲಕರಂಜಿಯ ಬಾಬಾಸೊ ಚೌಗಲೆ (59), ಉತ್ತರಪ್ರದೇಶದ ಲಖನೌನ ಅಕಿಫ್ (40), ಅಫಾಕ್ (40), ಆಂಧ್ರಪ್ರದೇಶದ ಚಿತ್ತೂರಿನ ಎಸ್. ಗೌಸ್ ಬಾಷಾ(50) ಮೃತರು.

ಗಾಯಾಳುಗಳ ಪೈಕಿ ಮಹಾರಾಷ್ಟ್ರದ 18 ಪ್ರಯಾಣಿಕರು, ನೇಪಾಳದ 5, ಕರ್ನಾಟಕದ ಮೂವರು ಹಾಗೂ ತಮಿಳುನಾಡಿನ ಒಬ್ಬರು ಇದ್ದಾರೆ. ಎಲ್ಲರೂ ಕಿಮ್ಸ್‌ನಲ್ಲಿ ಚಿಕಿತ್ಸೆ ಪಡೆದು ಹೋಗಿದ್ದಾರೆ.

ರಾತ್ರಿ 12 ಗಂಟೆ ಸುಮಾರಿಗೆ ಘಟನೆ ನಡೆದಿದೆ. ಬೆಂಗಳೂರಿನ ನ್ಯಾಷನಲ್ ಟ್ರಾವೆಲ್ಸ್‌ಗೆ ಸೇರಿದ ಬಸ್ 30 ಪ್ರಯಾಣಿಕರೊಂದಿಗೆ ಮಹಾರಾಷ್ಟ್ರದ ಕೊಲ್ಹಾಪುರದ ಇಚಲಕರಂಜಿಯಿಂದ ಬೆಂಗಳೂರಿಗೆ ಹೊರಟಿತ್ತು. ಕಿರಿದಾದ ಬೈಪಾಸ್ ರಸ್ತೆಯಲ್ಲಿ ಬಸ್ ಚಾಲಕ ನಾಗರಾಜ, ಮುಂದೆ ಹೋಗುತ್ತಿದ್ದ ಟ್ರಾಕ್ಟರ್ ಹಿಂದಿಕ್ಕಲು ಬಸ್ ಅನ್ನು ಬಲಕ್ಕೆ ತಿರುಗಿಸಿದ್ದಾರೆ. ಆಗ ಎದುರಿಗೆ ಬಂದ ಲಾರಿ ಡಿಕ್ಕಿ ಹೊಡೆದಿದೆ. ಡಿಕ್ಕಿಯ ರಭಸಕ್ಕೆ ಆರು ಮಂದಿ ಸ್ಥಳದಲ್ಲೇ ಮೃತಪಟ್ಟಿದ್ದು, ಉಳಿದಿಬ್ಬರು ಆಸ್ಪತ್ರೆಯಲ್ಲಿ ಕೊನೆಯುಸಿರೆಳೆದಿದ್ದಾರೆ ಎಂದು ಉತ್ತರ ಸಂಚಾರ ಠಾಣೆ ಪೊಲೀಸರು ತಿಳಿಸಿದರು.

ಹುಬ್ಬಳ್ಳಿ ಹೊರವಲಯದ ರೇವಡಿಹಾಳ ಬ್ರಿಡ್ಜ್ ಬಳಿ ನಡೆದ ಅಪಘಾತದಲ್ಲಿ ನಜ್ಜುಗುಜ್ಜಾಗಿರುವ ಬಸ್

ಮಹಾರಾಷ್ಟ್ರದ ಲಾರಿಯು ದಾವಣಗೆರೆಯಿಂದ ಪುಣೆಗೆ ಅಕ್ಕಿ ಚೀಲಗಳನ್ನು ತುಂಬಿಕೊಂಡು ಹೊರಟಿತ್ತು. ಲಾರಿ ಮಾಲೀಕ ಅಕ್ಷಯ್ ಅವರೇ ಲಾರಿ ಚಾಲನೆ ಮಾಡುತ್ತಿದ್ದರು. ಘಟನೆಯಲ್ಲಿ ಟ್ರಾಕ್ಟರ್‌ನಲ್ಲಿದ್ದ ನಾಲ್ವರು ಅಚ್ಚರಿಯ ರೀತಿಯಲ್ಲಿ ಪಾರಾಗಿದ್ದಾರೆ ಎಂದು ಹೇಳಿದರು.

ಕ್ವಾಡ್ ಕೂಟದ ನಾಯಕರ ಸಭೆ: ಚೀನಾ ವಿರುದ್ಧ ಪರೋಕ್ಷ ಹೇಳಿಕೆ

ಯಥಾಸ್ಥಿತಿ ಬದಲಿಗೆ ಬಲ ಪ್ರಯೋಗ: ಎಚ್ಚರ

ಟೋಕಿಯೊ (ಎಎಫ್‌ಪಿ): ಯಥಾಸ್ಥಿತಿಯನ್ನು ಬಲಪ್ರಯೋಗಿಸಿ ಬದಲಾಯಿಸುವ ಪ್ರಯತ್ನದ ವಿರುದ್ಧ ಕ್ವಾಡ್ ನಾಯಕರು ಮಂಗಳವಾರ ಎಚ್ಚರಿಕೆ ನೀಡಿದ್ದಾರೆ. ಚೀನಾವು ತೈವಾನ್ ಮೇಲೆ ಯುದ್ಧ ಸಾರುವ ಭೀತಿ ಎದುರಾಗಿರುವ ಸಂದರ್ಭದಲ್ಲಿ ಕ್ವಾಡ್ ನಾಯಕರು ಈ ಎಚ್ಚರಿಕೆ ನೀಡಿದ್ದಾರೆ.

ಟೋಕಿಯೊದಲ್ಲಿ ನಡೆದ ಕ್ವಾಡ್ ಕೂಟದ ಶೃಂಗಸಭೆಯ ಜಂಟಿ ಹೇಳಿಕೆಯಲ್ಲಿ ಚೀನಾವನ್ನು ನೇರವಾಗಿ ಎಲ್ಲಿಯೂ ಹೆಸರಿಸಿಲ್ಲ. ಆದರೆ, ಚೀನಾವನ್ನು ಉದ್ದೇಶಿಸಿಯೇ ಈ ಎಚ್ಚರಿಕೆ ನೀಡಲಾಗಿದೆ ಎಂಬುದು ಅತ್ಯಂತ ಸ್ಪಷ್ಟವಾಗಿದೆ.

ಅತ್ಯಂತ ಎಚ್ಚರಿಕೆಯಿಂದ ಬರೆಯಲಾಗಿರುವ ಜಂಟಿ ಹೇಳಿಕೆಯಲ್ಲಿ ಉಕ್ರೇನ್ ಸಂಘರ್ಷದ ಬಗ್ಗೆಯೂ ಉಲ್ಲೇಖ ಇದೆ. ಆದರೆ. ರಷ್ಯಾದ ನಡೆಯನ್ನು ಎಲ್ಲಿಯೂ ಖಂಡಿಸಲಾಗಿಲ್ಲ. ರಷ್ಯಾ–ಉಕ್ರೇನ್ ಸಂಘರ್ಷದಲ್ಲಿ ರಷ್ಯಾವನ್ನು ಖಂಡಿಸಲು ಭಾರತ ನಿರಾಕರಿಸಿದೆ. ಕ್ವಾಡ್‌ನ ಇತರ ರಾಷ್ಟ್ರಗಳಿಗಿಂತ ಭಿನ್ನವಾದ ನಿಲುವನ್ನು ಭಾರತ ತಳೆದಿದೆ. ತನ್ನ ನಿಲುವನ್ನು ಕ್ವಾಡ್‌ನ ಇತರ ರಾಷ್ಟ್ರಗಳು ಅರ್ಥ ಮಾಡಿಕೊಂಡಿವೆ ಎಂದು ಭಾರತ ಹೇಳಿದೆ.

‘ಉಕ್ರೇನ್ ಮೇಲೆ ರಷ್ಯಾದ ಆಕ್ರಮಣವು ಅಂತರರಾಷ್ಟ್ರೀಯ ವ್ಯವಸ್ಥೆಯ ಮೂಲಭೂತ ತತ್ವಗಳನ್ನೇ ಅಲುಗಾಡುವಂತೆ ಮಾಡಿದೆ. ಯಥಾಸ್ಥಿತಿಯನ್ನು ಬಲಪ್ರಯೋಗಿಸಿ ಬದಲಾಯಿಸುವ ಯತ್ನವನ್ನು ಎಲ್ಲಿಯೂ ಸಹಿಸಲಾಗದು ಮತ್ತು ವಿಶೇಷವಾಗಿ ಇಂಡೊ–ಪೆಸಿಫಿಕ್ ಪ್ರದೇಶದಲ್ಲಿಯೂ ಅದನ್ನು ಸಹಿಸುವುದಿಲ್ಲ ಎಂದು ನಾವು ದೃಢಪಡಿಸುತ್ತಿದ್ದೇವೆ’ ಎಂದು ಜಂಟಿ ಹೇಳಿಕೆಯಲ್ಲಿ ಘೋಷಿಸಲಾಗಿದೆ.

ತೈವಾನ್ ಮೇಲೆ ಚೀನಾವು ದಾಳಿ ನಡೆಸಲು ಸಜ್ಜಾಗಿದೆ ಎಂಬ ವರದಿಗಳು ಸೋಮವಾರ ಪ್ರಕಟವಾಗಿದ್ದವು. ಚೀನಾ ದಾಳಿ ನಡೆಸಿದರೆ ಮಧ್ಯಪ್ರವೇಶಕ್ಕೆ ಸಿದ್ಧ ಎಂದು ಅಮೆರಿಕ ಅಧ್ಯಕ್ಷ ಜೋ ಬೈಡನ್ ಹೇಳಿದ್ದರು. ಅದರ ಮರು ದಿನವೇ ಕ್ವಾಡ್ ನಾಯಕರ ಸಭೆ ನಡೆದಿದೆ.

ಕ್ವಾಡ್ ಕೂಟದ ಸಭೆಯಲ್ಲಿ ಭಾಗವಹಿಸಲು ಬಂದ ಭಾರತದ ಪ್ರಧಾನಿ ನರೇಂದ್ರ ಮೋದಿ, ಜಪಾನ್ ಪ್ರಧಾನಿ ಫುಮಿಯೊ ಕಿಶಿಡಾ, ಅಮೆರಿಕ ಅಧ್ಯಕ್ಷ ಜೋ ಬೈಡನ್ ಮತ್ತು ಆಸ್ಟ್ರೇಲಿಯಾ ಪ್ರಧಾನಿ ಆ್ಯಂಟನಿ ಅಲ್ಬನೀಸ್ ಪಿಟಿಐ ಚಿತ್ರ

ರಷ್ಯಾ ಮತ್ತು ಚೀನಾದ ಯುದ್ಧ ವಿಮಾನಗಳು ಜಪಾನ್ ಸಮುದ್ರ ಮತ್ತು ಪೂರ್ವ ಚೀನಾ ಸಮುದ್ರದ ಮೇಲೆ ಜತೆಯಾಗಿ ಹಾರಾಟ ನಡೆಸಿವೆ ಎಂದು ಕ್ವಾಡ್ ಸಭೆಯ ಕೆಲ ತಾಸುಗಳ ಬಳಿಕ ಜಪಾನ್ ಹೇಳಿದೆ. ಇದು ‘ಪ್ರಚೋದನಕಾರಿ’ ಎಂದು ಜಪಾನ್‌ನ ರಕ್ಷಣಾ ಸಚಿವ ಹೇಳಿದ್ದಾರೆ.

ಹಾರಾಟ ನಡೆಸಿದ್ದನ್ನು ಚೀನಾ ದೃಢಪಡಿಸಿದೆ. ಇದು ಚೀನಾ–ರಷ್ಯಾ ನಡುವಣ ‘ವಾರ್ಷಿಕ ಸೇನಾ ಸಹಕಾರ ಯೋಜನೆ’ಯ ಭಾಗ ಎಂದು ಹೇಳಿದೆ.

ಮೂರು ದೇಶಗಳ ಮುಖ್ಯಸ್ಥರ ಜೊತೆ ಮೋದಿ ಮಾತುಕತೆ: ಜಪಾನ್‌ನಲ್ಲಿ ನಡೆಯುತ್ತಿರುವ ಕ್ವಾಡ್ ಶೃಂಗಸಭೆಯಲ್ಲಿ ಅಮೆರಿಕ ಅಧ್ಯಕ್ಷ ಜೋ ಬೈಡನ್, ಜಪಾನ್ ಪ್ರಧಾನಿ ಫುಮಿಯೊ ಕಿಶಿಡಾ ಹಾಗೂ ಆಸ್ಟ್ರೇಲಿಯಾ ನೂತನ ಪ್ರಧಾನಿ ಅಲ್ಬನೀಸ್ ಅವರ ಜತೆ ಪ್ರಧಾನಿ ನರೇಂದ್ರ ಮೋದಿ ಅವರು ಮಂಗಳವಾರ ಪ್ರತ್ಯೇಕವಾಗಿ ಫಲಪ್ರದ ಮಾತುಕತೆ ನಡೆಸಿದರು ಎಂದು ವಿದೇಶಾಂಗ ಸಚಿವಾಲಯ ತಿಳಿಸಿದೆ.

ವ್ಯಾಪಾರ, ತಂತ್ರಜ್ಞಾನ ಹಾಗೂ ರಕ್ಷಣಾ ಪಾಲುದಾರಿಕೆ ವಿಚಾರದಲ್ಲಿ ಬೈಡನ್ ಹಾಗೂ ಪ್ರಧಾನಿ ಮೋದಿ ಮಾತುಕತೆ ನಡೆಸಿದರು. ಉಭಯ ದೇಶಗಳ ಭದ್ರತಾ ಸಂಸ್ಥೆಗಳ ಮಹತ್ವದ ಹಾಗೂ ತಂತ್ರಜ್ಞಾನ ಪಾಲುದಾರಿಕೆಯನ್ನು ಹೆಚ್ಚಿಸುವ ನಿರ್ಧಾರಕ್ಕೆ ಬರಲಾಗಿದೆ. ಹೂಡಿಕೆ ಹೆಚ್ಚಿಸುವ ಮಾರ್ಗಗಳ ಬಗ್ಗೆ ಚರ್ಚೆ ನಡೆಯಿತು ಎಂದು ವಿದೇಶಾಂಗ ಸಚಿವಾಲಯದ ವಕ್ತಾರ ಅರಿಂದಮ್ ಬಾಗ್ಚಿ ಟ್ವೀಟ್ ಮಾಡಿದ್ದಾರೆ.

ಅಮೆರಿಕದ ಉದ್ಯಮಿಗಳ ಜೊತೆ ಸಂವಾದ ನಡೆಸಿದ ಪ್ರಧಾನಿ, ಭಾರತದಲ್ಲಿ ಹೂಡಿಕೆ ಮಾಡುವಂತೆ ಆಹ್ವಾನಿಸಿದರು. ಭಾರತದಲ್ಲಿ ಹೂಡಿಕೆಗೆ ಇರುವ ಅವಕಾಶಗಳನ್ನು ಅವರು ವಿವರಿಸಿದರು. ಉಕ್ರೇನ್ ಯುದ್ಧದ ಪರಿಣಾಮಗಳ ಬಗ್ಗೆ ಮೋದಿ ಅವರಿಗೆ ವಿವರಿಸಿದ್ದಾಗಿ ಬೈಡನ್ ಹೇಳಿದ್ದಾರೆ. ಆದರೆ ಮೋದಿ ಅವರು ಯುದ್ಧದ ಉಲ್ಲೇಖವನ್ನು ಮಾಡಿಲ್ಲ.

ರಕ್ಷಣಾ ಉತ್ಪಾದನೆ ಸೇರಿದಂತೆ ರಕ್ಷಣಾ ಸಹಕಾರ ಕ್ಷೇತ್ರದಲ್ಲಿ ಜಪಾನ್ ಹಾಗೂ ಭಾರತ ದ್ವಿಪಕ್ಷೀಯ ಸಂಬಂಧವನ್ನು ಇನ್ನಷ್ಟು ವಿಸ್ತರಿಸಲು ನಿರ್ಧರಿಸಿವೆ. 2 + 2 ವಿದೇಶಾಂಗ ಹಾಗೂ ರಕ್ಷಣಾ ಸಚಿವರ ಮಟ್ಟದ ಮಾತುಕತೆಯನ್ನು ಜಪಾನ್‌ನಲ್ಲಿ ಶೀಘ್ರದಲ್ಲೇ ನಡೆಸಲು ಒಪ್ಪಿಗೆ ಸೂಚಿಸಲಾಯಿತು.

ಮುಂಬೈ – ಅಹಮದಾಬಾದ್ ಹೈಸ್ಪೀಡ್ ರೈಲು ಯೋಜನೆ (ಎಂಎ-ಎಚ್‌ಎಸ್‌ಆರ್) ಅನುಷ್ಠಾನ ಪ್ರಗತಿ, ಸೆಮಿಕಂಡಕ್ಟರ್, 5ಜಿಯಂತಹ ತಂತ್ರಜ್ಞಾನಗಳಲ್ಲಿ ಪಾಲುದಾರಿಕೆಯ ಸಾಧ್ಯತೆಗಳ ಬಗ್ಗೆ ಮೋದಿ ಮತ್ತು ಕಿಶಿಡಾ ಸಮಾಲೋಚನೆ ನಡೆಸಿದರು. ಕೋವ್ಯಾಕ್ಸಿನ್ ಹಾಗೂ ಕೋವಿಶೀಲ್ಡ್ ಲಸಿಕೆ ಹಾಕಿಸಿಕೊಂಡ ಭಾರತೀಯರಿಗೆ ಜಪಾನ್‌ಗೆ ಭೇಟಿ ಪ್ರಕ್ರಿಯೆಯನ್ನು ಸರಳಗೊಳಿಸುವ ವಿಚಾರವನ್ನು ಮೋದಿ ಪ್ರಸ್ತಾಪಿಸಿದರು. ಪ್ರಾದೇಶಿಕ ಹಾಗೂ ಜಾಗತಿಕ ವಿದ್ಯಮಾನಗಳ ಬಗ್ಗೆ ಮೋದಿ–ಕಿಶಿಡಾ ಚರ್ಚೆ ನಡೆಸಿದರು ಎಂದು ವಿದೇಶಾಂಗ ಇಲಾಖೆ ತಿಳಿಸಿದೆ.

ಕೌಶಲ ಅಭಿವೃದ್ಧಿ, ಪಾಲುದಾರಿಕೆ, ವ್ಯಾಪಾರ, ತಂತ್ರಜ್ಞಾನ, ಪ್ರಾದೇಶಿಕ ಸರಕು ಪೂರೈಕೆ ಸರಪಳಿ ಮೊದಲಾದ ವಿಚಾರಗಳಲ್ಲಿ ಉಭಯ ನಾಯಕರು ಫಲಪ್ರದ ಮಾತುಕತೆ ನಡೆಸಿದರು ಎಂದು ವಿದೇಶಾಂಗ ಕಾರ್ಯದರ್ಶಿ ವಿನಯ್ ಕ್ವಾತ್ರಾ ತಿಳಿಸಿದ್ದಾರೆ.

ಹೊಸದಾಗಿ ಆಯ್ಕೆಯಾಗಿರುವ ಆಸ್ಟ್ರೇಲಿಯಾ ಪ್ರಧಾನಿ ಆ್ಯಂಟನಿ ಅಲ್ಬನೀಸ್ ಅವರ ಜೊತೆಗಿನ ಮಾತುಕತೆಯೂ ಯಶಸ್ವಿಯಾಗಿದೆ ಎಂದು ವಿದೇಶಾಂಗ ಸಚಿವಾಲಯ ತಿಳಿಸಿದೆ.

ದಿನದ ವಿದ್ಯಮಾನಗಳು

- ಕ್ವಾಡ್ ದೇಶಗಳಲ್ಲಿ ಹೊಸ ತಲೆಮಾರಿನ ವಿಜ್ಞಾನಿಗಳು ಹಾಗೂ ತಂತ್ರಜ್ಞಾನಿಗಳಿಗೆ ಉತ್ತೇಜನ ನೀಡುವ ಉದ್ದೇಶದಿಂದ ಇದೇ ಮೊದಲ ಬಾರಿಗೆ ಕ್ವಾಡ್ ಫೆಲೋಶಿಪ್ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು
- ಹಣಕಾಸು, ತಂತ್ರಜ್ಞಾನ ವಲಯಗಳಲ್ಲಿ ಪರಸ್ಪರ ಸಹಕಾರದ ಮೂಲಕ ಕ್ವಾಡ್ ದೇಶಗಳು ಜಾಗತಿಕ ಆರೋಗ್ಯ ಮೂಲಸೌಕರ್ಯ ರಚನೆಯಲ್ಲಿ ಮಹತ್ವದ ಪಾತ್ರ ವಹಿಸಲು ನಿರ್ಧರಿಸಿವೆ
- ವಿದೇಶಾಂಗ ಸಚಿವ ಜೈಶಂಕರ್ ಅವರು ಅಮೆರಿಕ ವಿದೇಶಾಂಗ ಕಾರ್ಯದರ್ಶಿ ಆ್ಯಂಟನಿ ಬ್ಲಿಂಕನ್ ಹಾಗೂ ಜಪಾನ್ ವಿದೇಶಾಂಗ ಸಚಿವ ಯೋಶಿಮಸಾ ಹಯಾಶಿ ಅವರ ಜೊತೆ ಮಾತುಕತೆ ನಡೆಸಿದರು. ಉಕ್ರೇನ್–ರಷ್ಯಾ ಯುದ್ಧದ ಪರಿಣಾಮಗಳ ಬಗ್ಗೆ ಚರ್ಚೆ ನಡೆಯಿತು
- ಪ್ರಧಾನಿ ಮೋದಿ ಅವರು ಜಪಾನ್ ಮಾಜಿ ಪ್ರಧಾನಿಗಳಾದ ಯೋಶಿಹಿದಾ ಸುಗಾ, ಯೋಶಿರೋ ಮೋರಿ ಹಾಗೂ ಶಿಂಜೊ ಅಬೆ ಜೊತೆ ಮಾತುಕತೆ ನಡೆಸಿದರು. ಉಭಯ ದೇಶಗಳ ಪಾಲುದಾರಿಕೆ ಬಲಗೊಳಿಸುವ ಬಗ್ಗೆ ಮಾತುಕತೆ ನಡೆಯಿತು. ಮೋರಿ ಅವರು ಜಪಾನ್–ಭಾರತ ಅಸೋಸಿಯೇಷನ್ ಮುಖ್ಯಸ್ಥರಾಗಿದ್ದು, ಅಬೆ ಅವರು ಸದ್ಯದಲ್ಲೇ ಈ ಹುದ್ದೆಯನ್ನು ವಹಿಸಿಕೊಳ್ಳಲಿದ್ದಾರೆ
- ಇಂಡೊ–ಪೆಸಿಫಿಕ್ ಪ್ರದೇಶದಲ್ಲಿ ಮೂಲಸೌಕರ್ಯಕ್ಕೆ ಮುಂದಿನ ಐದು ವರ್ಷಗಳಲ್ಲಿ 5,000 ಕೋಟಿ ಡಾಲರ್ (₹3.87 ಲಕ್ಷ ಕೋಟಿ) ಹೂಡಿಕೆ ಮಾಡಲು ನಿರ್ಧಾರ
- ಚೀನಾದ ಚಟುವಟಿಕೆಗಳ ಮೇಲೆ ನಿಗಾ ಇರಿಸಲು ಸಾಗರ ನಿಗಾ ವ್ಯವಸ್ಥೆಯ ಜಾಲ ರೂಪಿಸಲು ತೀರ್ಮಾನ
- ಚೀನಾದ ವಿದೇಶಾಂಗ ಸಚಿವ ವಾಂಗ್ ಯಿ ಅವರು ಪಪುವಾ ನ್ಯೂಗಿನಿ, ಫಿಜಿ, ಕಿರಿಬಾಟಿ ಸೇರಿದಂತೆ ಇಂಡೊ–ಪೆಸಿಫಿಕ್ ಪ್ರದೇಶದ ಎಂಟು ದೇಶಗಳಿಗೆ ಈ ವಾರ ಭೇಟಿ ಕೊಡಲಿದ್ದಾರೆ

‘ಸಾಮಾಜಿಕ ಜಾಲತಾಣಗಳಲ್ಲಿ ಔಷಧ ಚೀಟಿ ನೀಡುವುದನ್ನು ನಿಲ್ಲಿಸಿ’

ಪ್ರಜಾವಾಣಿ ವಾರ್ತೆ

ನವದೆಹಲಿ: ‘ಸಾಮಾಜಿಕ ಜಾಲತಾಣಗಳ ಮೂಲಕ ಸಮಾಲೋಚನೆ ನೀಡುವುದು ಮತ್ತು ಔಷಧ ಚೀಟಿ ನೀಡುವುದನ್ನು ವೈದ್ಯರು ನಿಲ್ಲಿಸಬೇಕು. ಜತೆಗೆ ಸಾಮಾಜಿಕ ಜಾಲತಾಣಗಳಲ್ಲಿ ತಮ್ಮ ಹೆಸರು ಆರಂಭಿಕ ಸ್ಥಾನದಲ್ಲಿ ಇರಲು ಹಣ ನೀಡುವ ಅಥವಾ ಲೈಕ್ ಮತ್ತು ಫಾಲೋವರ್‌ಗಳನ್ನು ಖರೀದಿಸುವ ಅಭ್ಯಾಸವನ್ನು ವೈದ್ಯರಹ ನಿಲ್ಲಿಸಬೇಕು’ ಎಂಬ ನಿಯಮವನ್ನು ಜಾರಿಗೆ ತರಲು ರಾಷ್ಟ್ರೀಯ ವೈದ್ಯಕೀಯ ಆಯೋಗವು ಮುಂದಾಗಿದೆ.

ಆಯೋಗವು ಈ ಸಂಬಂಧ ಕರಡು ನಿಯಮಾವಳಿಯನ್ನು ರಚಿಸಿದೆ. ಕರಡು ನಿಯಮಾವಳಿಯನ್ನು ಬಿಡುಗಡೆ ಮಾಡಿದ್ದು, ಆಕ್ಷೇಪಗಳಿದ್ದರೆ 30 ದಿನಗಳ ಒಳಗೆ ಸಲ್ಲಿಸಿ ಎಂದು ಆಹ್ವಾನ ನೀಡಿದೆ. ‘ವೈದ್ಯರು ಯಾವುದೇ ಔಷಧ ಕಂಪನಿ ಮತ್ತು ವೈದ್ಯಕೀಯ ಕ್ಷೇತ್ರದ ಕಂಪನಿಗಳಿಂದ ಕಳೆದ ಐದು ವರ್ಷದಲ್ಲಿ ಪಡೆದಿರುವ ಗಳಿಕೆ ಮತ್ತು ಇತರೆ ಲಾಭಗಳಿಗೆ ಸಂಬಂಧಿಸಿದ ಪ್ರಮಾಣ ಪತ್ರವನ್ನು ಸಲ್ಲಿಸಬೇಕು’ ಎಂದು ಕರಡು ನಿಯಮಾವಳಿಯಲ್ಲಿ ಹೇಳಲಾಗಿದೆ.

ಆದರೆ ವೈದ್ಯರು ಯಾವಾಗ ಪ್ರಮಾಣ ಪತ್ರ ಸಲ್ಲಿಸಬೇಕು, ನಿಯಮಿತವಾಗಿ ಇಂತಹ ಪ್ರಮಾಣ ಪತ್ರ ಸಲ್ಲಿಸಬೇಕೇ, ಈ ಪ್ರಮಾಣ ಪತ್ರಗಳನ್ನು ಪರಿಶೀಲಿಸುವ ಪ್ರಾಧಿಕಾರ ಯಾವುದು ಎಂಬುದರ ವಿವರಗಳು ಈ ಕರಡು ನಿಯಮಾವಳಿಯಲ್ಲಿ ಇಲ್ಲ. ಈಗ ಜಾರಿಯಲ್ಲಿರುವ ಕಾನೂನಿನಲ್ಲಿ ಈ ರೀತಿಯ ಪ್ರಮಾಣ ಪತ್ರ ಸಲ್ಲಿಸಲು ಅವಕಾಶವಿಲ್ಲ.

ಉದಯಪುರ ಚಿಂತನ ಶಿಬಿರ ನಂತರದ ಬೆಳವಣಿಗೆ

ಕಾಂಗ್ರೆಸ್: 3 ನಿರ್ಣಾಯಕ ಸಮಿತಿ ರಚನೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಉದಯಪುರ ಚಿಂತನ ಶಿಬಿರದಲ್ಲಿ ತೆಗೆದುಕೊಂಡಿರುವ ನಿರ್ಧಾರಗಳ ಮೇರೆಗೆ ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಅವರು ಮಂಗಳವಾರ ಮೂರು ನಿರ್ಣಾಯಕ ಸಮಿತಿಗಳನ್ನು ರಚಿಸಿದ್ದಾರೆ.

ರಾಜಕೀಯ ವ್ಯವಹಾರಗಳು, ಲೋಕಸಭೆ ಚುನಾವಣೆಗೆ ಕಾರ್ಯತಂತ್ರ ರೂಪಿಸಲು ಕಾರ್ಯಪಡೆ (ಟಾಸ್ಕ್ ಫೋರ್ಸ್)– 2024 ಮತ್ತು ಭಾರತ್ ಜೋಡೋ ಯಾತ್ರೆಗೆ ಯೋಜನಾ ಸಮಿತಿಗಳನ್ನು ರಚಿಸಲಾಗಿದೆ. ಚುನಾವಣಾ ಕಾರ್ಯತಂತ್ರಜ್ಞ ಸುನೀಲ್ ಕಾನುಗೋಲು ಅವರ ಸೇರ್ಪಡೆ ಅನಿರೀಕ್ಷಿತ ಬೆಳವಣಿಗೆಯಾಗಿದೆ.

ಮೂರೂ ಸಮಿತಿಗಳಲ್ಲಿ ಜಿ–23 ನಾಯಕರು, ಪಕ್ಷದಲ್ಲಿ ಬದಲಾವಣೆ ಬಯಸಿದ ನಾಯಕರು ಇದ್ದಾರೆ. ಸಮಿತಿಗಳಲ್ಲಿ ರಾಹುಲ್ ಗಾಂಧಿ, ಪ್ರಿಯಾಂಕಾ ಗಾಂಧಿ ವಾದ್ರಾ ಮತ್ತು ರಾಜಸ್ಥಾನದ ಮುಖ್ಯಮಂತ್ರಿ ಹುದ್ದೆಯ ಮೇಲೆ ಕಣ್ಣಿಟ್ಟಿರುವ ಸಚಿನ್ ಪೈಲಟ್ ಕೂಡ ಇದ್ದಾರೆ. ದಿಗ್ವಿಜಯ ಸಿಂಗ್ ಮತ್ತು ಕೆ.ಸಿ.ವೇಣುಗೋಪಾಲ್ ಅವರು ಎರಡು ಸಮಿತಿಗಳಲ್ಲಿದ್ದಾರೆ.

ಇತ್ತೀಚಿನ ವರ್ಷಗಳಲ್ಲಿ ಚುನಾವಣೆಗಳಲ್ಲಿ ಸೋಲು ಅನುಭವಿಸುತ್ತಿರುವ ಮತ್ತು ಸಾಂಸ್ಥಿಕ ದೌರ್ಬಲ್ಯದಿಂದ ಹೊರಬರಲು ಉದಯಪುರ ಚಿಂತನ ಶಿಬಿರದಲ್ಲಿ ತೆಗೆದುಕೊಂಡಿರುವ ನಿರ್ಣಯಗಳ ನಂತರ ಕಾಂಗ್ರೆಸ್ ಸಮಿತಿಗಳನ್ನು ರಚಿಸಿದೆ.

ಸೋನಿಯಾ ಗಾಂಧಿ ನೇತೃತ್ವದ ರಾಜಕೀಯ ವ್ಯವಹಾರಗಳ ಸಮಿತಿಗೆ ರಾಜ್ಯಸಭೆ ಪ್ರತಿಪಕ್ಷ ನಾಯಕ ಮಲ್ಲಿಕಾರ್ಜುನ ಖರ್ಗೆ, ಗುಲಾಂ ನಬಿ ಆಜಾದ್, ಅಂಬಿಕಾ ಸೋನಿ, ದಿಗ್ವಿಜಯ ಸಿಂಗ್, ಆನಂದ್ ಶರ್ಮಾ, ಕೆ.ಸಿ.ವೇಣುಗೋಪಾಲ್, ಜಿತೇಂದ್ರ ಸಿಂಗ್ ಹಾಗೂ ರಾಹುಲ್ ಗಾಂಧಿ ಸದಸ್ಯರಾಗಿದ್ದಾರೆ.

ಕಾರ್ಯಪಡೆ–2024 ಸಮಿತಿಯು ಲೋಕಸಭೆ ಮತ್ತು ವಿಧಾನಸಭೆ ಚುನಾವಣೆಗಳ ಚುನಾವಣಾ ಕಾರ್ಯತಂತ್ರವನ್ನು ನೋಡಿಕೊಳ್ಳುವುದು ಮಾತ್ರವಲ್ಲದೇ ಉದಯಪುರ ಘೋಷಣೆ ಮತ್ತು ಸಮಾವೇಶದಲ್ಲಿ ಸಮಸ್ಯೆಗಳ ಕುರಿತು ಚರ್ಚಿಸಿದ ಆರು ತಂಡಗಳ ವರದಿಗಳನ್ನು ಅನುಸರಿಸಲು ಮೇಲ್ವಿಚಾರಣಾ ಸಮಿತಿಯಂತೆ ಕಾರ್ಯನಿರ್ವಹಿಸಲಿದೆ ಎಂದು ಮೂಲಗಳು ತಿಳಿಸಿವೆ. ಈ ಸಮಿತಿಯಲ್ಲಿ ಪಿ.ಚಿದಂಬರಂ, ಮುಕುಲ್ ವಾಸ್ನಿಕ್, ಜೈರಾಮ್ ರಮೇಶ್, ಕೆ.ಸಿ. ವೇಣುಗೋಪಾಲ್, ಅಜಯ್ ಮಾಕನ್, ಪ್ರಿಯಾಂಕಾ ಗಾಂಧಿ ವಾದ್ರಾ, ರಣದೀಪ್ ಸುರ್ಜೇವಾಲಾ ಮತ್ತು ಸುನೀಲ್ ಕಾನುಗೋಲು ಇದ್ದಾರೆ.

ಭಾರತ್ ಜೋಡೋ ಯಾತ್ರೆಯ ಸಮನ್ವಯಕ್ಕಾಗಿ ಕೇಂದ್ರೀಯ ಯೋಜನಾ ಸಮಿತಿಯಲ್ಲಿ ದಿಗ್ವಿಜಯ ಸಿಂಗ್, ಸಚಿನ್ ಪೈಲಟ್, ಶಶಿ ತರೂರ್, ರವನೀತ್ ಬಿಟ್ಟು, ಕೆ.ಜೆ.ಜಾರ್ಜ್, ಜ್ಯೋತಿ ಮಣಿ, ಪ್ರದ್ಯುತ್ ಬರ್ದೋಲೋಯ್, ಜಿತು ಪಟ್ವಾರಿ ಮತ್ತು ಸಲೀಂ ಅಹ್ಮದ್ ಸದಸ್ಯರಾಗಿದ್ದಾರೆ. ಕಾರ್ಯಪಡೆಯ ಸದಸ್ಯರು ಮತ್ತು ಎಲ್ಲಾ ಸಮಿತಿಗಳ ಮುಖ್ಯಸ್ಥರು ಈ ಸಮಿತಿಯ ಪದನಿಮಿತ್ತ ಸದಸ್ಯರಾಗಿದ್ದಾರೆ.

‘ಕಾರ್ಯಪಡೆ– 2024 ರಚನೆಯಾದ ತಕ್ಷಣವೇ ತನ್ನ ಮೊದಲ ಸಭೆಯನ್ನು ನಡೆಸಿತು. ಪ್ರತಿ 48-72 ಗಂಟೆಗಳಿಗೊಮ್ಮೆ ಸಭೆ ಸೇರಲು ಸದಸ್ಯರು ನಿರ್ಧರಿಸಿದ್ದಾರೆ. ಪರಿಶೀಲನೆಗಾಗಿ ಗುರುತಿಸಲಾದ ಸಮಸ್ಯೆಗಳ ಬಗ್ಗೆ ನೀಲನಕ್ಷೆಯನ್ನು ಸೋನಿಯಾ ಗಾಂಧಿ ಅವರಿಗೆ ಸಲ್ಲಿಸಲಾಗುವುದು’ ಎಂದು ಕಾಂಗ್ರೆಸ್ ಮುಖ್ಯ ವಕ್ತಾರ ಸುರ್ಜೇವಾಲಾ ಸುದ್ದಿಗಾರರಿಗೆ ತಿಳಿಸಿದರು.

ಜ್ಞಾನವಾಪಿ ಮಸೀದಿ ಪ್ರಕರಣ: ಜಿಲ್ಲಾ ನ್ಯಾಯಾಲಯ ತೀರ್ಮಾನ

‘ಮಸೀದಿ ಸಮಿತಿ ಅರ್ಜಿ ವಿಚಾರಣೆ ಮೊದಲು’

ಪ್ರಜಾವಾಣಿ ವಾರ್ತೆ

ಲಖನೌ: ಜ್ಞಾನವಾಪಿ ಮಸೀದಿ ಪ್ರಕರಣ ಕುರಿತ ಅರ್ಜಿಗಳ ವಿಚಾರಣೆಗೆ ಸಂಬಂಧಿಸಿದಂತೆ, ಮೊದಲಿಗೆ ಮಸೀದಿ ಸಮಿತಿಯ ಪರ ವಕೀಲರ ವಾದವನ್ನು ಮೇ 26ರಂದು ಆಲಿಸಲಾಗುವುದು ಎಂದು ವಾರಾಣಸಿಯ ಜಿಲ್ಲಾ ನ್ಯಾಯಾಲಯ ಮಂಗಳವಾರ ಪ್ರಕಟಿಸಿತು.

ಅಲ್ಲದೇ, ಜ್ಞಾನವಾಪಿ ಮಸೀದಿ ಕುರಿತು ಅಡ್ವೋಕೇಟ್ ಕಮಿಷನರ್ ಅವರು ಕೋರ್ಟ್‌ಗೆ ಸಲ್ಲಿಸಿರುವ ಸಮೀಕ್ಷೆ ವರದಿ ಕುರಿತಂತೆ ಆಕ್ಷೇಪಗಳಿದ್ದಲ್ಲಿ ಒಂದು ವಾರದೊಳಗೆ ಸಲ್ಲಿಸಬೇಕು ಎಂದೂ ಇದೇ ಸಂದರ್ಭದಲ್ಲಿ ಹಿಂದೂ ಮತ್ತು ಮುಸ್ಲಿಂ ಅರ್ಜಿದಾರರಿಗೆ ಸೂಚಿಸಿತು.

ಮಸೀದಿಯ ಸ್ಥಳವು ಕಾಶಿ ವಿಶ್ವನಾಥ ದೇವಸ್ಥಾನಕ್ಕೆ ಸೇರಿದ್ದಾಗಿದೆ. ಮಸೀದಿ ತೆರವುಗೊಳಿಸಬೇಕು ಎಂದು ಕೋರಿ ಹಿಂದೂಪರ ಅರ್ಜಿದಾರರು ದಾಖಲಿಸಿರುವ ಸಿವಿಲ್ ದಾವೆಯನ್ನು ವಜಾ ಮಾಡಬೇಕು ಎಂದು ಮಸೀದಿ ಸಮಿತಿಯ ಪರವಾಗಿ ವಕೀಲರು ಅರ್ಜಿ ಸಲ್ಲಿಸಿದ್ದಾರೆ.

ಮಸೀದಿಯ ಒಳಾವರಣದಲ್ಲಿ ‘ಶಿವಲಿಂಗ’ ಇದೆ. ಹೀಗಾಗಿ, ಅಲ್ಲಿ ಪೂಜೆ ಸಲ್ಲಿಸಲು ಅವಕಾಶ ಕಲ್ಪಿಸಬೇಕು. ಇಲ್ಲದಿದ್ದರೆ, ಅದು ‘ಪ್ರಾರ್ಥನಾ ಸ್ಥಳಗಳ ಕಾಯ್ದೆ 1991’ರ ಉಲ್ಲಂಘನೆಯಾಗಲಿದೆ ಎಂದೂ ಹಿಂದೂ ಪರ ಅರ್ಜಿದಾರರು ವಾದಿಸಿದ್ದರು.

‘ವಿಚಾರಣೆ ಕುರಿತು ತೀರ್ಮಾನಿಸುವ ಮುನ್ನ ಮಸೀದಿಯಲ್ಲಿ ಈಚೆಗೆ ನಡೆದಿದ್ದ ವಿಡಿಯೊ ಸಮೀಕ್ಷೆಯ ವರದಿ ಗಮನಿಸಬೇಕು. ಮಸೀದಿಯಲ್ಲಿ ‘ಶಿವಲಿಂಗ’ ಪತ್ತೆಯಾಗಿದೆ. ಆ ನೀರನ್ನೇ ಮುಸ್ಲಿಂರು ‘ವುಜು’ಗಾಗಿ (ಪ್ರಾರ್ಥನೆಗೆ ಮುನ್ನ ಕಾಲು ತೊಳೆಯಲು) ಬಳಸುತ್ತಿದ್ದಾರೆ ಎಂದು ಕೋರಿದ್ದರು.

ಸೋಮವಾರ ಉಭಯ ಬಣಗಳ ಪರ ವಕೀಲರ ವಾದವನ್ನು ಆಲಿಸಿದ್ದ ಜಿಲ್ಲಾ ಕೋರ್ಟ್‌ನ ನ್ಯಾಯಾಧೀಶ ಅಜಯ್ ಕೃಷ್ಣ ವಿಶ್ವೇಶ್ ಅವರು ತೀರ್ಪು ಕಾಯ್ದಿರಿಸಿದ್ದರು. ಯಾರ ಅರ್ಜಿಯನ್ನು ಮೊದಲು ವಿಚಾರಣೆಗೆ ಪರಿಗಣಿಸಬೇಕು ಎಂಬುದನ್ನು ಗುರುವಾರ ಪ್ರಕಟಿಸಲಾಗುವುದು ಎಂದು ತಿಳಿಸಿದ್ದರು. ಈ ಮೊದಲು ಪ್ರಕರಣವನ್ನು ಜಿಲ್ಲಾ ಕೋರ್ಟ್‌ಗೆ ವರ್ಗಾಯಿಸಿದ್ದ ಸುಪ್ರೀಂ ಕೋರ್ಟ್, ಹಿರಿಯ ನ್ಯಾಯಾಧೀಶರು ವಿಚಾರಣೆ ನಡೆಸಬೇಕು ಎಂದು ತಿಳಿಸಿತ್ತು. ಅಲ್ಲದೆ, ಮಸೀದಿ ಒಳಗೆ ಪ್ರಾರ್ಥನೆ ಮಾಡಲು ಮುಸಲ್ಮಾನರಿಗೆ ಅವಕಾಶ ಕಲ್ಪಿಸಿತ್ತು.

ಕುತುಬ್ ಮಿನಾರ್ ಪೂಜಾ ಸ್ಥಳವಲ್ಲ: ಎಎಸ್‌ಐ ಪ್ರತಿಪಾದನೆ

ನವದೆಹಲಿ (ಪಿಟಿಐ): ‘ಕುತುಬ್ ಮಿನಾರ್ ಸಂಕೀರ್ಣವು ಪೂಜಾ ಸ್ಥಳವಲ್ಲ ಮತ್ತು ಸ್ಮಾರಕದ ಈಗಿನ ಸ್ಥಿತಿಯನ್ನು ಬದಲಾಯಿಸಲು ಆಗುವುದಿಲ್ಲ’ ಎಂದು ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆ (ಎಎಸ್‌ಐ) ಮಂಗಳವಾರ ದೆಹಲಿ ನ್ಯಾಯಾಲಯಕ್ಕೆ ತಿಳಿಸಿದೆ.

ಕುತುಬ್ ಮಿನಾರ್ ಸಂಕೀರ್ಣದ ಒಳಗೆ ಹಿಂದೂ ಮತ್ತು ಜೈನ ದೇವರುಗಳನ್ನು ಮರುಸ್ಥಾಪಿಸಲು ಕೋರಿ ದೆಹಲಿ ನ್ಯಾಯಾಲಯದಲ್ಲಿ ಸಲ್ಲಿಕೆಯಾಗಿರುವ ಅರ್ಜಿಗೆ ಎಎಸ್‌ಐ ವಿರೋಧ ವ್ಯಕ್ತಪಡಿಸಿದೆ.

‘ಸಂಕೀರ್ಣದ ಜಾಗದ ಈಗಿನ ಸ್ಥಿತಿಯನ್ನು ಬದಲಿಸುವ ಮೂಲಕ ಅರ್ಜಿದಾರರು ಮೂಲಭೂತ ಹಕ್ಕನ್ನು ಪಡೆಯಲಾಗದು’ ಎಂದು ಎಎಸ್‌ಐ ಪ್ರತಿಪಾದಿಸಿದೆ. ಎಎಸ್‌ಐ ವಾದವನ್ನು ಗಮನಿಸಿದ ಹೆಚ್ಚುವರಿ ಜಿಲ್ಲಾ ನ್ಯಾಯಾಧೀಶ ನಿಖಿಲ್ ಚೋಪ್ರಾ ಅವರು, ಅರ್ಜಿಯ ಆದೇಶವನ್ನು ಜೂನ್ 9ರವರೆಗೆ ಕಾಯ್ದಿರಿಸಿದರು.

ಮಹಮ್ಮದ್ ಘೋರಿಯ ಆಡಳಿತ ಅವಧಿಯಲ್ಲಿ ಸೇನಾ ನಾಯಕನಾಗಿದ್ದ ಕುತುಬುದ್ದೀನ್ ಐಬಕ್, 27 ದೇವಾಲಯಗಳನ್ನು ಭಾಗಶಃ ಧ್ವಂಸ ಮಾಡಿದ್ದನು. ಅಲ್ಲದೆ ಆ ಸಾಮಗ್ರಿಗಳನ್ನು ಮರುಬಳಕೆ ಮಾಡಿಕೊಂಡು ಕುವ್ವತ್ ಉಲ್ ಇಸ್ಲಾಂ ಮಸೀದಿಯನ್ನು ನಿರ್ಮಿಸಲಾಗಿದೆ ಎಂದು ವಕೀಲ ಹರಿಶಂಕರ್ ಜೈನ್ ಪ್ರತಿಪಾದಿಸಿ ಅರ್ಜಿ ಸಲ್ಲಿಸಿದ್ದಾರೆ.

ಅನಾದಿ ಕಾಲದಿಂದಲೂ ಈ ಆವರಣದಲ್ಲಿ ಎರಡು ಗಣೇಶನ ವಿಗ್ರಹಗಳು ನೆಲೆಗೊಂಡಿವೆ. ಅವುಗಳನ್ನು ಎಎಸ್‌ಐ ರಾಷ್ಟ್ರೀಯ ವಸ್ತುಸಂಗ್ರಹಾಲಯವೊಂದಕ್ಕೆ ಸಾಗಿಸುವ ಸಾಧ್ಯತೆಗಳಿವೆ ಎಂದು ಅವರು ಅರ್ಜಿಯಲ್ಲಿ ಆತಂಕ ವ್ಯಕ್ತಪಡಿಸಿದ್ದಾರೆ.

ಆಂಧ್ರ: ಹಿಂಸಾಚಾರ, ಸಚಿವ, ಶಾಸಕರ ಮನೆಗೆ ಬೆಂಕಿ

ಅಮರಾವತಿ (ಪಿಟಿಐ): ಆಂಧ್ರದ ನೂತನ ಕೋನಸೀಮ ಜಿಲ್ಲೆಗೆ ‘ಬಿ.ಆರ್.ಅಂಬೇಡ್ಕರ್ ಕೋನಸೀಮ ಜಿಲ್ಲೆ’ ಎಂದು ಹೆಸರು ಬದಲಿಸುವ ನಿರ್ಧಾರ ಖಂಡಿಸಿ, ಜಿಲ್ಲೆಯ ಅಮಲಾಪುರದಲ್ಲಿ ಮಂಗಳವಾರ ನಡೆದ ಪ್ರತಿಭಟನೆ ಹಿಂಸಾತ್ಮಕ ಕೃತ್ಯಗಳಿಗೆ ತಿರುಗಿದೆ.

ಉದ್ರಿಕ್ತರ ಗುಂಪು ಕಲ್ಲು ತೂರಾಟ ನಡೆಸಿ, ವಾಹನಗಳಿಗೆ ಬೆಂಕಿ ಹಚ್ಚಿದೆ. ಉದ್ರಿಕ್ತರು ಸಾರಿಗೆ ಸಚಿವ ಪಿನಿಪೇ ವಿಶ್ವರೂಪ್ ಅವರ ಮೇಲೂ ಹಲ್ಲೆಗೆ ಯತ್ನಿಸಿದ್ದಾರೆ. ವಿಶ್ವರೂಪ್, ವೈಎಸ್ ಆರ್‌ಸಿಪಿ ಶಾಸಕ ಪೊನ್ನಡ ಸತೀಶ್ ಅವರ ಮನೆಗೆ ಬೆಂಕಿ ಹಚ್ಚಲಾಗಿದೆ.

ಉದ್ರಿಕ್ತರ ಗುಂಪು ಚದುರಿಸಲು ಪೊಲೀಸರು ಲಘು ಲಾಠಿ ಪ್ರಹಾರ ನಡೆಸಿದರು. ಪೊಲೀಸ್, ಶಿಕ್ಷಣ ಸಂಸ್ಥೆಯೊಂದರ ವಾಹನ, ರಾಜ್ಯ ಸಾರಿಗೆ ಹಾಗೂ ಖಾಸಗಿ ಬಸ್ಸಿಗೆ ಬೆಂಕಿ ಹಚ್ಚಲಾಗಿದೆ. ಸುಮಾರು 20 ಮಂದಿ ಪೊಲೀಸರು ಗಾಯಗೊಂಡಿದ್ದಾರೆ.

ಜಾಗೃತಗೊಂಡ ಪೊಲೀಸರು ಕೂಡಲೇ ಸಚಿವರು, ಶಾಸಕ ಮತ್ತು ಅವರ ಕುಟುಂಬದ ಸದಸ್ಯರನ್ನು ಸುರಕ್ಷಿತ ಸ್ಥಳಕ್ಕೆ ಕರೆದೊಯ್ದಿದ್ದಾರೆ. ಮುಂಜಾಗ್ರತೆ ಕ್ರಮವಾಗಿ ಪಟ್ಟಣದಲ್ಲಿ ಐಪಿಸಿ ಸೆಕ್ಷನ್ 144 ಅನ್ವಯ ನಿಷೇಧಾಜ್ಞೆ ಜಾರಿಗೊಳಿಸಲಾಗಿದೆ.

‘ಕೆಲ ರಾಜಕೀಯ ಪಕ್ಷಗಳು, ಸಮಾಜವಿರೋಧಿ ಶಕ್ತಿಗಳು ಹಿಂಸೆಗೆ ಪ್ರಚೋದನೆ ನೀಡಿವೆ. ಹಿಂಸಾತ್ಮಕ ಘಟನೆ ಕುರಿತು ತನಿಖೆ ನಡೆಸಿ ತಪ್ಪಿತಸ್ಥರ ವಿರುದ್ಧ ಕ್ರಮ ಜರುಗಿಸಲಾಗುವುದು’ ಎಂದು ಗೃಹ ಸಚಿವೆ ತಾನೇಟಿ ವನಿತಾ ಹೇಳಿದ್ದಾರೆ.

ಎಲ್ಲರ ಜೊತೆಗೆ ಸಮಾಲೋಚಿಸಿಯೇ ಮರುನಾಮಕರಣ ನಿರ್ಧಾರ ತೆಗೆದುಕೊಳ್ಳಲಾಗಿತ್ತು. ವಿರೋಧಪಕ್ಷಗಳಾದ ಟಿಡಿಪಿ, ಬಿಜೆಪಿ, ಜನಸೇನಾ ಮತ್ತು ಇತರೆ ಪಕ್ಷಗಳು ಸಮ್ಮತಿಸಿದ್ದವು ಎಂದು ಸ್ಥಳೀಯ ಶಾಸಕರು ಆದ ಸಚಿವ ವಿಶ್ವರೂಪ್ ಪ್ರತಿಕ್ರಿಯಿಸಿದರು.

ಜಗನ್‌ಮೋಹನ್ ರೆಡ್ಡಿ ನೇತೃತ್ವದ ಸರ್ಕಾರ ಕೋನಸೀಮ ಸೇರಿ 13 ಜಿಲ್ಲೆಯನ್ನು ಕಳೆದ ಏ.9ರಂದು ರಚಿಸಿತ್ತು. ಪೂರ್ವ ಗೋದಾವರಿ ಜಿಲ್ಲೆ ವಿಭಜಿಸಿ ಕೋನಸೀಮ ಜಿಲ್ಲೆ ರಚಿಸಲಾಗಿತ್ತು. ಕಳೆದ ವಾರ ‘ಬಿ.ಆರ್.ಅಂಬೇಡ್ಕರ್ ಕೋನಸೀಮ ಜಿಲ್ಲೆ’ ಎಂದು ಮರುನಾಮಕರಣ ಕುರಿತ ಪ್ರಾಥಮಿಕ ಅಧಿಸೂಚನೆ ಹೊರಡಿಸಿದ್ದ ಸರ್ಕಾರ, ಈ ಸಂಬಂಧ ಆಕ್ಷೇಪಣೆಗಳನ್ನು ಆಹ್ವಾನಿಸಿತ್ತು.

ಕೋನಸೀಮ ಸಾಧನಾ ಸಮಿತಿಯು ಹೆಸರು ಬದಲಾವಣೆಗೆ ಆಕ್ಷೇಪ ವ್ಯಕ್ತಪಡಿಸಿದ್ದು, ಈಗಿನ ಹೆಸರನ್ನೇ ಉಳಿಸಬೇಕು ಎಂದು ಒತ್ತಾಯಿಸಿದೆ. ಈ ಬಗ್ಗೆ ಮನವಿ ಸಲ್ಲಿಸಲು ಮಂಗಳವಾರ ಪ್ರತಿಭಟನೆ ಆಯೋಜಿಸಿತ್ತು.

ಕಾವೇರಿ ಅಚ್ಚುಕಟ್ಟು ಪ್ರದೇಶದಲ್ಲಿ ಕುರುವೈ ಬೆಳೆ ಬೆಳೆಯಲು ಮೆಟ್ಟೂರಿನ ಸ್ಟ್ಯಾನ್ಲಿ ಜಲಾಶಯದಿಂದ ಮಂಗಳವಾರ ತಮಿಳುನಾಡು ಮುಖ್ಯ ಮಂತ್ರಿ ಎಂ.ಕೆ. ಸ್ಟಾಲಿನ್ ಅವರು ನೀರು ಬಿಡುಗಡೆಗೆ ಚಾಲನೆ ನೀಡಿ ಪೂಜೆ ಸಲ್ಲಿಸಿದರು

ಮೆಟ್ಟೂರು ಜಲಾಶಯದಿಂದ ಬೆಳೆಗಳಿಗೆ ನೀರು ಬಿಡುಗಡೆ

ಪ್ರಜಾವಾಣಿ ವಾರ್ತೆ

ಚೆನ್ನೈ: ಕಾವೇರಿ ಅಚ್ಚುಕಟ್ಟು ಪ್ರದೇಶದಲ್ಲಿ 5 ಲಕ್ಷಕ್ಕೂ ಹೆಚ್ಚು ಎಕರೆಯಲ್ಲಿ ಕುರುವೈ (ಅಲ್ಪಾವಧಿ ಬೆಳೆ) ಬೆಳೆ ಬೆಳೆಯಲು ಮೆಟ್ಟೂರಿನ ಸ್ಟ್ಯಾನ್ಲಿ ಜಲಾಶಯದಿಂದ ಮಂಗಳವಾರ ತಮಿಳುನಾಡು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಅವರು ನೀರು ಬಿಡುಗಡೆ ಮಾಡಿದರು.

ಬಳಿಕ ಜಲಾಶಯಕ್ಕೆ ಪುಷ್ಪವೃಷ್ಟಿ ಮಾಡಿದರು.

ಈ ಸಂದರ್ಭದಲ್ಲಿ ಸಚಿವರಾದ ದೊರೈ ಮುರುಗನ್, ಕೆ.ಎನ್. ನೆಹರು ಮತ್ತು ಇತರ ಅಧಿಕಾರಿಗಳು ಹಾಜರಿದ್ದರು.

ಕರ್ನಾಟಕದ ಕಾವೇರಿ ನದಿಯ ಜಲಾನಯನ ಪ್ರದೇಶಗಳಲ್ಲಿ ಅಕಾಲಿಕ ಮಳೆಯಿಂದಾಗಿ ಜಲಾಶಯಕ್ಕೆ ನಿರಂತರ ನೀರಿನ ಒಳಹರಿವು ಹೆಚ್ಚಾಗಿದ್ದು, ಜಲಾಶಯದ ಪೂರ್ಣ ಮಟ್ಟ 120 ಅಡಿ ತಲುಪುವ ಸಾಧ್ಯತೆ ಇದೆ. ಹಾಗಾಗಿ, ಈ ಹಿಂದೆ ನಿಗದಿಪಡಿಸಿದಂತೆ ಜೂನ್ 12ಕ್ಕೂ ಮುನ್ನವೇ ತಮಿಳುನಾಡು ಸರ್ಕಾರ ನೀರು ಬಿಡುಗಡೆ ಮಾಡಿದೆ.

ಬ್ರಿಟಿಷರು ನಿರ್ಮಿಸಿರುವ ಈ ಜಲಾಶಯದಿಂದ ಸ್ವಾತಂತ್ರ್ಯಾನಂತರ ನಿಗದಿತ ದಿನಾಂಕಕ್ಕೂ ಮುನ್ನವೇ ಮೇ ತಿಂಗಳಲ್ಲಿ ಇದೇ ಮೊದಲ ಬಾರಿಗೆ ನೀರನ್ನು ಹರಿಸಲಾಗುತ್ತಿದೆ.

ಸಂಕ್ಷಿಪ್ತ ಸುದ್ದಿ

ಉಗ್ರರ ದಾಳಿ: ಕಾನ್‌ಸ್ಟೆಬಲ್ ಸಾವು

ಶ್ರೀನಗರ: ಇಲ್ಲಿನ ಹೊರವಲಯದ ಸೌರಾ ನಗರದ ಅಂಚಾರ ಪ್ರದೇಶದಲ್ಲಿ ಮಂಗಳವಾರ ಉಗ್ರರು ನಡೆಸಿದ ಗುಂಡಿನ ದಾಳಿಗೆ ಪೊಲೀಸ್ ಕಾನ್‌ಸ್ಟೆಬಲ್‌ವೊಬ್ಬರು ಮೃತಪಟ್ಟಿದ್ದು,ಅವರ ಮಗಳು ಗಾಯಗೊಂಡಿದ್ದಾರೆ.

ಸೈಫುಲ್ಲಾ ಖಾದ್ರಿ ಹುತಾತ್ಮರಾದ ಕಾನ್‌ಸ್ಟೆಬಲ್. ‘ಕಾನ್‌ಸ್ಟೆಬಲ್ ಸೈಫುಲ್ಲಾ ಖಾದ್ರಿ ಅವರು ತಮ್ಮ ಮಗಳನ್ನು ಟ್ಯೂಷನ್‌ಗೆ ಕರೆದೊಯ್ಯುತ್ತಿದ್ದ ವೇಳೆ ಅವರ ಮನೆಯ ಸಮೀಪದಲ್ಲೇ ಉಗ್ರರು ಏಕಾಏಕಿ ಗುಂಡಿನ ದಾಳಿ ನಡೆಸಿದ್ದಾರೆ.

ವಿಸ್ಮಯಾ ಪ್ರಕರಣ: ಪತಿಗೆ 10 ವರ್ಷ ಜೈಲು

ಕೊಲ್ಲಂ, ಕೇರಳ (ಪಿಟಿಐ): ಇಲ್ಲಿನ ಆಯುರ್ವೇದ ವೈದ್ಯಕೀಯ ವಿದ್ಯಾರ್ಥಿನಿ ವಿಸ್ಮಯಾ ಆತ್ಮಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಪತಿ ಎಸ್.ಕಿರಣ್ ಕುಮಾರ್ ವಿರುದ್ಧ ವರದಕ್ಷಿಣೆ ಕಿರುಕುಳ ಹಾಗೂ ಆತ್ಮಹತ್ಯೆಗೆ ಪ್ರಚೋದನೆ ನೀಡಿದ ಆರೋಪ ಸಾಬೀತಾಗಿದ್ದು, ಆತನಿಗೆ 10 ವರ್ಷ ಜೈಲು ಶಿಕ್ಷೆ ವಿಧಿಸಿ ಕೇರಳದ ನ್ಯಾಯಾಲಯ ಮಂಗಳವಾರ ಆದೇಶ ನೀಡಿದೆ.

ಕಳೆದ ವರ್ಷ ಜೂನ್‌ನಲ್ಲಿ ಪತಿಯ ಮನೆಯಲ್ಲಿ ವಿಸ್ಮಯಾ ನೇಣು ಬಿಗಿದು ಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದರು. ಅಪರಾಧಿ ಕುಮಾರ್‌ಗೆ ಒಟ್ಟು ₹12,55,000 ದಂಡವನ್ನೂ ವಿಧಿಸಲಾಗಿದ್ದು, ಅದರಲ್ಲಿ ₹ 2 ಲಕ್ಷ ಸಂತ್ರಸ್ತೆಯ ಪೋಷಕರಿಗೆ ಪಾವತಿಸಲು ಕೋರ್ಟ್ ಸೂಚಿಸಿದೆ.

ಮಳೆ: ಕೇದಾರನಾಥ ಯಾತ್ರೆ ಸ್ಥಗಿತ

ಡೆಹ್ರಾಡೂನ್(ಪಿಟಿಐ): ಭಾರಿ ಮಳೆ ಮತ್ತು ಹಿಮಪಾತ ಉಂಟಾಗಿರುವ ಹಿನ್ನೆಲೆ ಯಲ್ಲಿ ಮುನ್ನೆಚ್ಚರಿಕೆ ಕ್ರಮವಾಗಿ ಕೇದಾರನಾಥ ಮತ್ತು ಯಮುನೋತ್ರಿ ಯಾತ್ರೆಯನ್ನು ತಾತ್ಕಾಲಿಕವಾಗಿ ಮಂಗಳವಾರ ಸ್ಥಗಿತಗೊಳಿಸಲಾಗಿದೆ.

ಸೋಮವಾರ ಯಾತ್ರೆ ಕೈಗೊಂಡಿದ್ದ ಭಕ್ತರು ಗೌರಿಕುಂಡ್ ಮತ್ತು ಕೇದಾರನಾಥ ಮಧ್ಯೆ ವಿವಿಧೆಡೆ ಶಿಬಿರಗಳಲ್ಲಿ ತಂಗಿದ್ದಾರೆ.

THE FEDERAL BANK LIMITED
Regd. Office: Aluva, Kerala.
ZONAL OFFICE: 1st Floor, Halcyon Complex, No.9, St Marks Road, Bangalore-560 001.e-mail:bgrr-cpc@federalbank.co.in
Phone: 080-22074610/604/613/624/625

BGRR/PvtSale/2022-23 NOTICE FOR PRIVATE SALE OF GOLD 24/05/2022

Notice is hereby given for the information of all concerned that Gold Ornaments pledged in the following Gold Loan accounts, with the under mentioned Branches of the Bank, which are overdue for redemption and which have not been regularized so far in spite of repeated notices, will be put for Private sale, in the respective Branches on any date after 15-06-2022 as shown below:

Br. Billapura: Sy. No.20, Thyvakanahally, Sarjapur - Attibele Road, Bangalore- 562 125 :- 21666400013481,21666400016955,21666400013663,21666400017557.
Br. Thirupalya: Near Electronic City, Hebgodi Post, Tirupalya, Bangalore Urban-560 099 Ph no. 080-27833335 :- 21126400037006,21126400033898,21126400033807,21126400033849.
Br. Davanagere: Raghavendra Plaza, No.200/1A & 200/1B, 3rd Main, 7th Cross,28th Ward, P J Extension, Davanagere- 577 002, Ph no. 08192-222511 :- 22976400006479,22976400009465,22976400009564,22976400009572,22976400009580,22976400009598,22976400009796.
Br. Bangalore/Krishnarajapuram: Vsr Complex, Old Madras Road, Krishnarajapuram, Bangalore- 560 036 Ph No. 080-25619070 :- 15616100142310,15616100142328,15616400006959,15616400007197,15616100151543,15616400005068,15616400006223,15616100157763,15616100152863,15616400005084,15616400006827,15616400005118,15616400005266,15616400005852,15616100140959,15616400005399,15616100151188,15616100163175,15616100150305,15616100150636,15616100153473,15616100157987,15616400005365,15616100153721,15616100157813,15616100158878,15616100144621.

Bangalore 24-05-2022 Vice President & Zonal Head

ಮಾಗಡಿರಸ್ತೆ: ವೀರೇಶ್ 4.ಆಟಗಳು
ಜೆಪಿ ನಗರ: ಸಿದ್ದೇಶ್ವರ (2-ಆಟ)
ಆವಲಹಳ್ಳಿ: ವೆಂಕಟೇಶ್ವರ (2-ಆಟ)
ಕತ್ರಿಗುಪ್ಪೆ: ಕಾಮಕ್ಯ (2-ಆಟ)
ಕಮಲಾನಗರ: ವೀರಭದ್ರೇಶ್ವರ (2-ಆಟ)
ಕೆಂಗೇರಿ: ರಾಬಿನ್ (2-ಆಟ)
ಸುಂಕದಕಟ್ಟೆ: ಮೋಹನ್ (2-ಆಟ)
ಗೊಲ್ಲರಹಟ್ಟಿ: ವೆಂಕಟೇಶ್ವರ (2-ಆಟ)
ಗೊಟ್ಟಿಗೆರೆ: ಲಕ್ಷ್ಮಿ (2-ಆಟ)
ಮಲ್ಲತ್ತಹಳ್ಳಿ: ವಿಆರ್.ಸಿನಿಮಾಸ್ (2-ಆಟ)
PVR CINEMAS: ORION MALL, GT WORLD MALL, MSR REGALIYA, VAISHNAVI SAPPHIRE, VR MALL, VEGA CITY MALL, SPIRIT MALL, CINEMAX 2 ARENA, ORION Uptown Mall
INOX: GARUDA MALL, SWAGATH MALL, MANTRI MALL, CENTRAL MALL, LIDO MALL, FORUM VALUE MALL
GOPALAN CINEMAS: INNOVATION, GRAND MALL, ARCH MALL, SIGNATURE MALL, LEGASY
Cinépolis: Royal Meenakshi Mall, ETA MALL, ORION EAST MALL, GRAND SIGMA
INOX: BROOKFIELD, RMZ MALL, GARUDA YELAHANKA
ROCKLINE mall & cinemas JALAHALLI
SPI CINEMAS
INNOVATIVE MARATHHALLI
CARNIVAL CINEMAS
KINO CINEMAS SEEGEHALLI
ದೊಡ್ಡಬಳ್ಳಾಪುರ: ರಾಜ್‌ಕಮಲ್ (2-ಆಟ)
ಮಾಗಡಿ: ಬಾಲಾಜಿ (4-ಆಟ)
ರಾಮನಗರ: ಶ್ರೀರಾಮ್ (2-ಆಟ)
ಚನ್ನಪಟಣ: ಶಿವಾನಂದ (4-ಆಟ)
ನೆಲಮಂಗಲ: ಶಾಂತಲ (4-ಆಟ)
ತುಮಕೂರು: ಗಾಯತ್ರಿ (4-ಆಟ)
ಸಿರಾ: ಸಪ್ತಗಿರಿ (4-ಆಟ)
ಕನಕಪುರ: ಅರ್ಕಾವತಿ (4-ಆಟ)
ಕುದೂರು: ಆದಿತ್ಯ (4-ಆಟ)
ಮೈಸೂರು: ಗಾಯತ್ರಿ (4-ಆಟ)
DRC CINEMAS, PVR CINEMAS, sathyam, MYSURU VISION CINEMAS
ಹಾಸನ: ಸಹ್ಯಾದ್ರಿ (4-ಆಟ)
ಕೆ.ಆರ್ ನಗರ: ವೆಂಕಟೇಶ್ವರ (4-ಆಟ)
ಗುಂಡ್ಲುಪೇಟೆ: ವೆಂಕಟೇಶ್ವರ (4-ಆಟ)
ಅರಸೀಕೆರೆ: ಸಾದನ (4-ಆಟ)
ಚಿಟಕೆರೆ: ಲಕ್ಷ್ಮಿ (4-ಆಟ)
ದಾವಣಗೆರೆ: ಗೀತಾಂಜಲಿ (4-ಆಟ)
ಧಾರವಾಡ: ಪದ್ಮ (4-ಆಟ)
ಗದಗ: ಕೃಷ್ಣ (4-ಆಟ)
ರಾಯಚೂರು: ಎಸ್.ಎನ್.ಟಿ (4-ಆಟ)
MUKTA A2 CINEMAS, SHETTY'S, MIRAJ CINEMAS
ಬೀದರ್: SAPNA MALL
ಗಂಗಾವತಿ: ಅಮರ್ (4-ಆಟ)
ಶಿವಮೊಗ್ಗ: ಹೆಚ್.ಬಿ.ಸಿ (4-ಆಟ)
ಭದ್ರಾವತಿ: ನೇತ್ರಾವತಿ (4-ಆಟ)
ಕಡೂರು: ವಿಜಯಲಕ್ಷ್ಮಿ (4-ಆಟ)
ಶಿಕಾರಿಪುರ: ಕಿರಣ್ (4-ಆಟ)
ಚನ್ನಗಿರಿ: ಲಕ್ಷ್ಮಿ (4-ಆಟ)
ಅನವೇರಿ: ಶ್ರೀದೇವಿ (4-ಆಟ)
ತೀರ್ಥಹಳ್ಳಿ: ವೆಂಕಟೇಶ್ವರ (4-ಆಟ)
ಅಜ್ಜಂಪುರ: ವೆಂಕಟೇಶ್ವರ (4-ಆಟ)
ಕುಂದಾಪುರ: Bharath Cinemas
ಮಂಗಳೂರು: Bharath Cinemas
ಮಂಗಳೂರು: PVR CINEMAS
ಮಂಗಳೂರು: Cinépolis
ಮಣಿಪಾಲ: INOX
ಮಣಿಪಾಲ: Bharath Cinemas
ಗುಲ್ಬರ್ಗ: PVR CINEMAS
ಹಾಗೂ ರಾಜ್ಯಾದ್ಯಂತ

ಡೋಂಗಿ ಜಾತ್ಯತೀತ ನಾಯಕರಿಗೆ ತಕ್ಕ ಪಾಠ: ಕುಮಾರಸ್ವಾಮಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕಾಂಗ್ರೆಸ್ ಪಕ್ಷದ ಡೋಂಗಿ ಜಾತ್ಯತೀತ ನಾಯಕರು ನಮ್ಮ ಪಕ್ಷದ ಬಗ್ಗೆ ಅರೆಬರೆ ವರ್ಷಗಳಿಂದ ಸುಳ್ಳು ಪ್ರಚಾರ ಮಾಡುತ್ತಿದ್ದಾರೆ. ಅವರಿಗೆ ತಕ್ಕ ಪಾಠ ಕಲಿಸುತ್ತೇವೆ' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಎಚ್ಚರಿಕೆ ನೀಡಿದರು.

ಸುದ್ದಿಗಾರರ ಜೊತೆ ಮಂಗಳವಾರ ಮಾತನಾಡಿ, 'ಜೆಡಿಎಸ್ ಪಕ್ಷವನ್ನು ಬಿಜೆಪಿಯ 'ಬಿ' ಟೀಂ ಎಂದು ಬಿಂಬಿಸಲು ಪ್ರಯತ್ನ ಮಾಡಿದ್ದಾರೆ. ಅದನ್ನು ಇನ್ನೂ ಮುಂದುವರಿಸುತ್ತಿದ್ದಾರೆ' ಎಂದರು.

'ಇತ್ತೀಚೆಗೆ ತುಮಕೂರಿನಲ್ಲೂ ಕಾಂಗ್ರೆಸ್ ನಾಯಕರು ನಮ್ಮ ಬಗ್ಗೆ ಲಘುವಾಗಿ ಮಾತನಾಡಿದ್ದಾರೆ. ಅವರೇ ಜಾತಿವಾರು ಸಮಾವೇಶ ಮಾಡಿಕೊಂಡು ನಾವು ಜಾತ್ಯತೀತರು ಎಂದು ಭಂಡತನ ಪ್ರದರ್ಶಿಸುತ್ತಿದ್ದಾರೆ. ಬಿಜೆಪಿ ಜತೆ ಸೇರಿ ನಾನು ಸರ್ಕಾರ ಮಾಡಿದಾಗಲೂ ಕೋಮು ಸಂಘರ್ಷಕ್ಕೆ ಅವಕಾಶ ಕೊಡಲಿಲ್ಲ. ಆದರೆ, ಈಗ ಏನಾಗಿದೆ? ಅನೇಕ ತಿಂಗಳುಗಳಿಂದ ಸಮಾಜವನ್ನು ಒಡೆಯುವ ಘಟನೆಗಳು ನಡೆಯುತ್ತಿವೆ. ಇದಕ್ಕೆ ಕಾರಣ ಯಾರು ಎನ್ನುವುದು ಜನರಿಗೆ ಗೊತ್ತಿದೆ' ಎಂದು ಕಾಂಗ್ರೆಸ್ ನಾಯಕರ ಮೇಲೆ ಟೀಕಾ ಪ್ರಹಾರ ನಡೆಸಿದರು.

'ಪಕ್ಷ ಉಳಿಸುವುದಕ್ಕೆ ನಾನು ಬಿಜೆಪಿ ಜತೆ ಸೇರಿ ಸರ್ಕಾರ ಮಾಡಿದೆ. ಅದೇ ರೀತಿ ಕಾಂಗ್ರೆಸ್ ಜತೆಯಲ್ಲೂ ಸೇರಿ ಸರ್ಕಾರ ಮಾಡಿದೆ. ಆದರೆ, ಹಿಂದೆ ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ಬಿಜೆಪಿ ಜತೆ ಸೇರಿ ಸರ್ಕಾರದಲ್ಲಿ ಮಂತ್ರಿ ಆಗಿದ್ದರು. ಈಗ ಕಾಂಗ್ರೆಸ್ ಪಕ್ಷದ ಜತೆ ಮಹಾರಾಷ್ಟ್ರದಲ್ಲಿ ಶಿವಸೇನಾ ಜತೆ ಸರ್ಕಾರ ಮಾಡಿದೆ. ಇದಕ್ಕೆ ಏನೆಂದು ಹೇಳಬೇಕು' ಎಂದು ಕುಮಾರಸ್ವಾಮಿ ಕುಟುಕಿದರು.

ರಾಜ್ಯಸಭೆ ಚುನಾವಣೆಗೂ ಕಣಕ್ಕೆ: 'ವಿಧಾನಸಭೆಯಿಂದ ರಾಜ್ಯಸಭೆಗೆ ನಾಲ್ಕನೇ ಅಭ್ಯರ್ಥಿ ಆಯ್ಕೆಗೆ ಮೂರು ಪಕ್ಷಗಳಿಗೂ ಸಂಖ್ಯಾ ಬಲ ಇಲ್ಲ. ಮೂರು ಪಕ್ಷಕ್ಕೆ ಹೋಲಿಸಿದರೆ ನಮ್ಮ ಮತಗಳು ಹೆಚ್ಚಿವೆ. ನಾವು ಅಭ್ಯರ್ಥಿಯನ್ನು ಕಣಕ್ಕೆ ಇಳಿಸುತ್ತೇವೆ' ಎಂದರು.

ಪಿಎಸ್ಐ ನೇಮಕಾತಿ ಅಕ್ರಮ ಪ್ರಕರಣ ● ಹೆಡ್ ಕಾನ್ಸ್‌ಟೆಬಲ್ ಬಳಿ ₹2.16 ಕೋಟಿ ಜಪ್ತಿ

ಅಕ್ರಮದ ಹಣದಲ್ಲಿ ಐಷಾರಾಮಿ ಬಂಗ್ಲೆ

■ ಸಂತೋಷ ಜಿಗಳಿಕೊಪ್ಪ

ತುಮಕೂರಿನ ಸ್ಫೂರ್ತಿ ಬಡಾವಣೆಯಲ್ಲಿ ಹೆಡ್ ಕಾನ್ಸ್‌ಟೆಬಲ್ ಶ್ರೀಧರ್ ಕಟ್ಟಿಸುತ್ತಿರುವ ಐಷಾರಾಮಿ ಬಂಗ್ಲೆ

ಪ್ರಜಾವಾಣಿ ವಿಶೇಷ

ಬೆಂಗಳೂರು: ಪಿಎಸ್ಐ ನೇಮಕಾತಿ ಅಕ್ರಮ ಪ್ರಕರಣದಲ್ಲಿ ಬಂಧನಕ್ಕೊಳಗಾಗಿರುವ ಹೆಡ್ ಕಾನ್ಸ್‌ಟೆಬಲ್ ಶ್ರೀಧರ್, ಅಕ್ರಮದಿಂದ ಬಂದಿದ್ದ ಹಣದಲ್ಲಿ ಐಷಾರಾಮಿ ಬಂಗ್ಲೆ ನಿರ್ಮಿಸುತ್ತಿದ್ದ ಸಂಗತಿ ಸಿಐಡಿ ಅಧಿಕಾರಿಗಳ ತನಿಖೆಯಿಂದ ಹೊರಬಿದ್ದಿದೆ.

'ನಗರ ಸಶಸ್ತ್ರ ಮೀಸಲು ಪಡೆಯ (ಸಿಎಆರ್) ಹೆಡ್ ಕಾನ್ಸ್‌ಟೆಬಲ್ ಶ್ರೀಧರ್‌ನನ್ನು ನಿಯೋಜನೆ ಮೇರೆಗೆ ಪೊಲೀಸ್ ನೇಮಕಾತಿ ವಿಭಾಗಕ್ಕೆ ನೇಮಿಸಲಾಗಿತ್ತು. ನಾಲ್ಕೈದು ವರ್ಷದಿಂದ ವಿಭಾಗದಲ್ಲಿ ಕೆಲಸ ಮಾಡುತ್ತಿದ್ದ ಶ್ರೀಧರ್, ಮಧ್ಯವರ್ತಿಗಳ ಮೂಲಕ ಅಭ್ಯರ್ಥಿಗಳನ್ನು ಪರಿಚಯಿಸಿಕೊಂಡು ಅಕ್ರಮಕ್ಕೆ ಸಹಕಾರ ನೀಡುತ್ತಿದ್ದ' ಎಂದು ಸಿಐಡಿ ಮೂಲಗಳು ಹೇಳಿವೆ.

'545 ಪಿಎಸ್ಐ ಹುದ್ದೆಗಳ ನೇಮಕಾತಿ ಪ್ರಕ್ರಿಯೆಯಲ್ಲಿ ಅಭ್ಯರ್ಥಿಗಳಿಂದ ಕೋಟ್ಯಂತರ ರೂಪಾಯಿ ಪಡೆದಿದ್ದ ಶ್ರೀಧರ್, ಅದರಲ್ಲಿ ತನ್ನ ಪಾಲು ಇಟ್ಟುಕೊಂಡಿದ್ದ. ಉಳಿದ ಹಣವನ್ನು ಇತರೆ ಆರೋಪಿಗಳಿಗೂ ಹಂಚಿರುವುದು ಗೊತ್ತಾಗಿದೆ. 'ಬಸವೇಶ್ವರ ನಗರದ ಶಾರದಾ ಕಾಲೊನಿಯಲ್ಲಿರುವ ಶ್ರೀಧರ್ ಮನೆ ಮೇಲೆ ಇತ್ತೀಚೆಗೆ ದಾಳಿ ಮಾಡಲಾಗಿತ್ತು. ಆರಂಭದಲ್ಲಿ ₹16 ಲಕ್ಷ ಮಾತ್ರ ಸಿಕ್ಕಿತ್ತು. ಇದಾದ ನಂತರ ಶ್ರೀಧರ್‌ನ ಸ್ನೇಹಿತರು ದಾಳಿಗೆ ಹೆದರಿ ಹಂತ ಹಂತವಾಗಿ ₹ 2 ಕೋಟಿ ತಂದುಕೊಟ್ಟಿದ್ದಾರೆ. ಅಕ್ರಮದಿಂದ ಬಂದಿದ್ದ ಹಣವನ್ನು ತಮ್ಮ ಬಳಿ ಇಟ್ಟುಕೊಳ್ಳುವಂತೆ ಶ್ರೀಧರ್ ಹೇಳಿದ್ದಾಗಿ ಸ್ನೇಹಿತರು ಹೇಳಿಕೆ ಸಹ ನೀಡಿದ್ದಾರೆ' ಎಂದೂ ಮೂಲಗಳು ಹೇಳಿವೆ.

ತುಮಕೂರಿನಲ್ಲಿ ಬಂಗ್ಲೆ: 'ಪ್ರಕರಣದ ಪ್ರಮುಖ ಆರೋಪಿ ಆಗಿರುವ ಡಿವೈಎಸ್‌ಪಿ ಶಾಂತಕುಮಾರ್ ಅಧೀನದಲ್ಲಿ ಶ್ರೀಧರ್ ಕೆಲಸ ಮಾಡುತ್ತಿದ್ದ. ಅಕ್ರಮದಿಂದಲೇ ಇದುವರೆಗೂ ಆತ ₹4 ಕೋಟಿಗೂ ಹೆಚ್ಚು ಹಣ ಗಳಿಸಿರುವ ಮಾಹಿತಿ ಇದೆ. ಹಣದ ಮೂಲ ಹುಡುಕುತ್ತ ಹೊರಟಾಗ, ತುಮಕೂರಿನಲ್ಲಿ ಐಷಾರಾಮಿ ಬಂಗ್ಲೆ ಕಟ್ಟಿಸುತ್ತಿರುವ ಸಂಗತಿ ತಿಳಿಯಿತು. ಕಟ್ಟಡ ನಿರ್ಮಾಣ ಕೆಲಸ ಮುಗಿದಿದ್ದು, ಗಾರೆ (ಪ್ಲಾಸ್ಟರಿಂಗ್) ಕೆಲಸ ಮಾತ್ರ ಬಾಕಿ ಇದೆ. ಜೊತೆಗೆ, ಹೊರಾಂಗಣ ಹಾಗೂ ಒಳಾಂಗಣ ವಿನ್ಯಾಸ ಕೆಲಸವನ್ನೂ ಈಗಾಗಲೇ ಗುತ್ತಿಗೆ ನೀಡಿದ್ದಾನೆ' ಎಂದು ಸಿಐಡಿ ಮೂಲಗಳು ವಿವರಿಸಿವೆ.

'ತುಮಕೂರಿನ ಸ್ಫೂರ್ತಿ ಬಡಾವಣೆಯಲ್ಲಿ 32X42 ಚದರ ಅಡಿ ಅಳತೆಯ ನಿವೇಶನ ಖರೀದಿಸಿರುವ ಶ್ರೀಧರ್, ಅದೇ ಸ್ಥಳದಲ್ಲಿ ಮೂರು ಅಂತಸ್ತಿನ ಐಷಾರಾಮಿ ಬಂಗ್ಲೆ ನಿರ್ಮಾಣ ಮಾಡಿಸುತ್ತಿದ್ದಾನೆ.'

'ಶ್ರೀಧರ್ ಹೆಸರಿನಲ್ಲೇ ನಿವೇಶನ ನೋಂದಣಿ ಆಗಿದೆ. ತುಮಕೂರಿಗೆ ಹೋಗಿದ್ದ ವಿಶೇಷ ತಂಡ, ಉಪ ನೋಂದಣಾಧಿಕಾರಿಗಳಿಂದ ದಾಖಲೆ ಸಮೇತ ಮಾಹಿತಿ ಕಲೆ ಹಾಕಿದೆ. ಕಟ್ಟಡ ನಿರ್ಮಾಣ ಜವಾಬ್ದಾರಿ ವಹಿಸಿಕೊಂಡಿದ್ದ ಎಂಜಿನಿಯರ್ ಹಾಗೂ ಇತರೆ ವ್ಯಕ್ತಿಗಳಿಂದಲೂ ಹೇಳಿಕೆ ಪಡೆಯುವ ಕೆಲಸ ನಡೆದಿದೆ' ಎಂದೂ ತಿಳಿಸಿವೆ.

ನ್ಯಾಯಾಲಯಕ್ಕೆ ಮಾಹಿತಿ: 'ಶ್ರೀಧರ್, ಆದಾಯಕ್ಕಿಂತಲೂ ಹೆಚ್ಚು ಆಸ್ತಿ ಹೊಂದಿದ್ದಾನೆ. ನೇಮಕಾತಿ ವಿಭಾಗದಲ್ಲಿ ಕೆಲಸ ಆರಂಭಿಸಿದ ದಿನದಿಂದಲೇ ಆತನ ಆಸ್ತಿ ಹೆಚ್ಚಳವಾಗಿದೆ. ಪ್ರತಿ ನೇಮಕಾತಿಯಲ್ಲೂ ಅಕ್ರಮ ನಡೆಸಿರುವುದರ ಬಗ್ಗೆ ಮಾಹಿತಿ ಇದ್ದು, ಪರಿಶೀಲಿಸಬೇಕಿದೆ' ಎಂದು ಸಿಐಡಿ ಮೂಲಗಳು ಹೇಳಿವೆ.

'ಶ್ರೀಧರ್ ಬಳಿ ಸಿಕ್ಕಿರುವ ಹಣ ಹಾಗೂ ಆತನ ಹೆಸರಿನಲ್ಲಿರುವ ಆಸ್ತಿ ಪತ್ತೆ ಮಾಡಲಾಗುತ್ತಿದ್ದು, ನ್ಯಾಯಾಲಯಕ್ಕೆ ಸಲ್ಲಿಸಲಾಗುವುದು. ಶ್ರೀಧರ್ ಅವರ ಆಸ್ತಿಯನ್ನು ಮುಟ್ಟುಗೋಲು ಹಾಕುವ ಬಗ್ಗೆ ನ್ಯಾಯಾಲಯವೇ ತೀರ್ಮಾನ ಕೈಗೊಳ್ಳಲಿದೆ' ಎಂದೂ ತಿಳಿಸಿವೆ.

'3 ಕೋಟಿಗೂ ಹೆಚ್ಚು ಖರ್ಚು'

'ಹೆಡ್ ಕಾನ್ಸ್‌ಟೆಬಲ್ ಶ್ರೀಧರ್, ತುಮಕೂರಿನಲ್ಲಿ ನಿವೇಶನ ಖರೀದಿಸಿ ಮೂರು ಅಂತಸ್ತಿನ ಐಷಾರಾಮಿ ಬಂಗ್ಲೆ ಕಟ್ಟಲು ₹3 ಕೋಟಿಗೂ ಹೆಚ್ಚು ಖರ್ಚು ಮಾಡಿರುವ ಮಾಹಿತಿ ಇದೆ. ಈ ಬಗ್ಗೆ ದಾಖಲೆ ಸಂಗ್ರಹಿಸಲಾಗುತ್ತಿದೆ. ಎಲ್ಲಿಯಾದರೂ ಸಾಲ ಪಡೆದಿರುವ ಬಗ್ಗೆಯೂ ಪರಿಶೀಲಿಸಲಾಗುತ್ತಿದೆ. ಶ್ರೀಧರ್‌ನನ್ನು ಸದ್ಯ ನ್ಯಾಯಾಂಗ ಬಂಧನಕ್ಕೆ ನೀಡಲಾಗಿದೆ. ಅಗತ್ಯವಿದ್ದರೆ, ಪುನಃ ಕಸ್ಟಡಿಗೆ ಪಡೆದು ವಿಚಾರಣೆ ನಡೆಸಲಾಗುವುದು' ಎಂದು ಸಿಐಡಿ ಮೂಲಗಳು ಹೇಳಿವೆ.

ದಾವೋಸ್‌ನಲ್ಲಿ ಮಂಗಳವಾರ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಉದ್ಯಮಿ ಗೌತಮ್ ಅದಾನಿ ಅವರನ್ನು ಭೇಟಿ ಮಾಡಿದರು. ಬೃಹತ್ ಕೈಗಾರಿಕಾ ಸಚಿವ ಮುರುಗೇಶ್ ನಿರಾಣಿ ಇದ್ದರು

ರೆನ್ಯೂ ಪವರ್‌ನಿಂದ ₹50 ಸಾವಿರ ಕೋಟಿ ಹೂಡಿಕೆ ಒಪ್ಪಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನವೀಕರಿಸಬಹುದಾದ ಇಂಧನದ ಉತ್ಪಾದನೆಯಲ್ಲಿ ತೊಡಗಿರುವ ಅತ್ಯಂತ ದೊಡ್ಡ ಸಂಸ್ಥೆಯಾದ ರೆನ್ಯೂ ಪವರ್ ಕಂಪನಿಯು ರಾಜ್ಯದಲ್ಲಿ ಮುಂದಿನ ಏಳು ವರ್ಷಗಳಲ್ಲಿ ₹50 ಸಾವಿರ ಕೋಟಿ ಹೂಡಿಕೆ ಒಪ್ಪಂದಕ್ಕೆ ಸಹಿ ಮಾಡಿದೆ.

ದಾವೋಸ್‌ನಲ್ಲಿ ನಡೆಯುತ್ತಿರುವ ವಿಶ್ವ ಆರ್ಥಿಕ ಒಕ್ಕೂಟದ ವಾರ್ಷಿಕ ಸಮಾವೇಶದಲ್ಲಿ ಸಿಎಂ ಬಸವರಾಜ ಬೊಮ್ಮಾಯಿ ಸಮ್ಮುಖದಲ್ಲಿ ಕಂಪನಿಯ ಅಧ್ಯಕ್ಷ ಸಿಇಒ ಸುಮಂತ್ ಸಿನ್ಹಾ ಅವರು ಮಂಗಳವಾರ ಒಪ್ಪಂದಕ್ಕೆ ಸಹಿ ಹಾಕಿದರು.

ಈ ಕಂಪನಿಯು ಮುಂದಿನ ಏಳು ವರ್ಷಗಳಲ್ಲಿ ನವೀಕರಿಸಬಹುದಾದ ಇಂಧನ, ಬ್ಯಾಟರಿ ಸ್ಟೋರೇಜ್, ಗ್ರೀನ್ ಹೈಡ್ರೋಜನ್ ಘಟಕಗಳನ್ನು ಸ್ಥಾಪಿಸಲು ಉದ್ದೇಶಿಸಿದ್ದು, ಮೊದಲ ಹಂತದಲ್ಲಿ ಈಗಾಗಲೇ ಜಾರಿಯಲ್ಲಿರುವ ಯೋಜನೆಗಳಿಗೆ ₹11,900 ಕೋಟಿ ಬಂಡವಾಳ ಹೂಡಿಕೆ ಮಾಡಲಿದ್ದು, ಎರಡು ವರ್ಷಗಳಲ್ಲಿ ಈ ಯೋಜನೆ ಕಾರ್ಯಾರಂಭಗೊಳ್ಳಲಿದೆ. ಎರಡನೇ ಹಂತದಲ್ಲಿ ನವೀಕರಿಸ ಬಹುದಾದ ಇಂಧನ ಹಾಗೂ ಗ್ರೀನ್ ಹೈಡ್ರೋಜನ್ ಘಟಕಗಳನ್ನು ಮುಂದಿನ 5 ವರ್ಷಗಳಲ್ಲಿ ಸ್ಥಾಪಿಸಲು ₹37,500 ಕೋಟಿ ಹೂಡಿಕೆ ಮಾಡಲಿದೆ. ಈ ಎರಡು ಹಂತದ ಯೋಜನೆಗಳಿಂದ ಸುಮಾರು 30 ಸಾವಿರ ಉದ್ಯೋಗ ಸೃಷ್ಟಿಯಾಗುವ ನಿರೀಕ್ಷೆ ಇದೆ.

ದೇಶದ ಒಂಬತ್ತು ರಾಜ್ಯಗಳಲ್ಲಿ 120ಕ್ಕೂ ಹೆಚ್ಚು ಪವನ, ಸೌರ ಹಾಗೂ ಹೈಡ್ರೋ ಇಂಧನ ಪ್ರಾಜೆಕ್ಟ್‌ಗಳನ್ನು ರೆನ್ಯೂ ಕಂಪನಿ ಹೊಂದಿದೆ. ಸದ್ಯ 12 ಗಿಗಾ ವ್ಯಾಟ್‌ನಷ್ಟು ಇಂಧನವನ್ನು ಈ ಸಂಸ್ಥೆ ಉತ್ಪಾದಿಸುತ್ತಿದೆ.

ಪ್ರಮುಖ ದತ್ತಾಂಶ ಕೇಂದ್ರ: ಇದಕ್ಕೂ ಮೊದಲು ಮುಖ್ಯಮಂತ್ರಿಯನ್ನು ಭೇಟಿ ಮಾಡಿದ ಭಾರ್ತಿ ಎಂಟರ್ ಪ್ರೈಸಸ್ ಅಧ್ಯಕ್ಷ ಹಾಗೂ ಸಿಇಒ ಸುನಿಲ್ ಭಾರ್ತಿ ಮಿತ್ತಲ್ ಅವರು ರಾಜ್ಯದಲ್ಲಿ ಇನ್ನೊಂದು ಪ್ರಧಾನ ದತ್ತಾಂಶ ಕೇಂದ್ರ ಸ್ಥಾಪಿಸುವ ಇಂಗಿತ ವ್ಯಕ್ತಪಡಿಸಿದರು. ಅದಕ್ಕೆ ಪ್ರತಿಕ್ರಿಯಿಸಿದ ಮುಖ್ಯಮಂತ್ರಿ, ರಾಜ್ಯ ಸರ್ಕಾರ ಅಗತ್ಯ ಬೆಂಬಲ ನೀಡುವುದಾಗಿ ಭರವಸೆ ನೀಡಿದ್ದಾರೆ ಎಂದು ಮುಖ್ಯಮಂತ್ರಿ ಕಚೇರಿ ಪ್ರಕಟಣೆ ತಿಳಿಸಿದೆ.

ಅದಾನಿ ಗ್ರೂಪ್ ಅಧ್ಯಕ್ಷ ಗೌತಮ್ ಅದಾನಿ ಮತ್ತು ಜಾನ್ಸನ್ ಕಂಟ್ರೋಲ್ಸ್ ಸಿಇಒ ಜಾರ್ಜ್ ಒಲಿವರ್ ಅವರ ಜೊತೆಗೂ ರಾಜ್ಯದಲ್ಲಿ ಬಂಡವಾಳ ಹೂಡಿಕೆಯ ಅವಕಾಶಗಳ ಕುರಿತಂತೆ ಮುಖ್ಯಮಂತ್ರಿ ಚರ್ಚೆ ನಡೆಸಿದರು.

ಕೈಗಾರಿಕಾ ಸಚಿವ ಮುರುಗೇಶ್ ನಿರಾಣಿ, ಉನ್ನತ ಶಿಕ್ಷಣ ಹಾಗೂ ಕೌಶಲಾಭಿವೃದ್ಧಿ ಸಚಿವ ಡಾ. ಸಿ.ಎನ್. ಅಶ್ವತ್ಥನಾರಾಯಣ, ಕೈಗಾರಿಕಾ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಇ.ವಿ. ರಮಣ ರೆಡ್ಡಿ, ಸಿಎಂ ಪ್ರಧಾನ ಕಾರ್ಯದರ್ಶಿ ಎನ್. ಮಂಜುನಾಥ್ ಪ್ರಸಾದ್, ಕೈಗಾರಿಕಾ ಇಲಾಖೆ ಆಯುಕ್ತರಾದ ಗುಂಜನ್ ಕೃಷ್ಣ ಇದ್ದರು.

ಜಿ.ಪಂ, ತಾ.ಪಂ: ಮೀಸಲು ನಿಗದಿಗೆ 12 ವಾರ ಗಡುವು

ಒಂದನೇ ಪುಟದಿಂದ...

ಇದನ್ನು ಮಾನ್ಯ ಮಾಡಿದ ನ್ಯಾಯಪೀಠ 12 ವಾರಗಳ ಗಡುವು ವಿಧಿಸಿ ವಿಚಾರಣೆ ಮುಂದೂಡಿದೆ.

ಕಳೆದ ವಿಚಾರಣೆ ವೇಳೆಯಲ್ಲಿ ಆಯೋಗವು, 'ನಗರ ಸ್ಥಳೀಯ ಸಂಸ್ಥೆಗಳ ಚುನಾವಣೆಗೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್ ತೀರ್ಪು ನೀಡಿದೆ. ಅದರಂತೆ, ರಾಜ್ಯದಲ್ಲೂ ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿಗಳಿಗೆ ಚುನಾವಣೆ ನಡೆಸಬೇಕಾಗಿದೆ. ಸುಪ್ರೀಂ ಕೋರ್ಟ್ ತೀರ್ಪಿನಿಂದ ತುರ್ತು ಸ್ಥಿತಿ ಎದುರಾಗಿದೆ' ಎಂದು ಕಳವಳ ವ್ಯಕ್ತಪಡಿಸಿತ್ತು.

ಆಯೋಗ ರಚನೆ ಪ್ರಶ್ನೆ: ಕಳೆದ ವರ್ಷ ಏಪ್ರಿಲ್, ಮೇ ಮತ್ತು ಜೂನ್‌ನಲ್ಲಿ ಅವಧಿ ಪೂರ್ಣಗೊಂಡ ರಾಜ್ಯದ ಜಿಲ್ಲಾ ಪಂಚಾಯಿತಿ ಹಾಗೂ ತಾಲ್ಲೂಕು ಪಂಚಾಯಿತಿಗಳಿಗೆ ಚುನಾವಣೆ ನಡೆಸಲು ಸಿದ್ಧತೆ ಆರಂಭಿಸಿದ್ದ ಚುನಾವಣಾ ಆಯೋಗವು ಈ ಸಂಬಂಧ ಕ್ಷೇತ್ರ ಪುನರ್‌ವಿಂಗಡಣೆ ಮಾಡಿ ಮತದಾರರ ಅಂತಿಮ ಪಟ್ಟಿ ಪ್ರಕಟಿಸಿತ್ತು. ಅಂತೆಯೇ ಮೀಸಲಾತಿ ಕರಡು ಕೂಡಾ ಪ್ರಕಟಿಸಲಾಗಿತ್ತು.

ಚುನಾವಣೆಗೆ ದಿನಾಂಕ ಘೋಷಣೆ ಮಾಡಬೇಕು ಎನ್ನುವ ಸಂದರ್ಭದಲ್ಲಿ ಕ್ಷೇತ್ರ ಪುನರ್ ವಿಂಗಡಣೆ ಮತ್ತು ಮೀಸಲಾತಿ ಅಧಿಕಾರವನ್ನು ಚುನಾವಣಾ ಆಯೋಗದಿಂದ ಹಿಂಪಡೆದಿದ್ದ ಸರ್ಕಾರ ಪ್ರತ್ಯೇಕವಾಗಿ ಸೀಮಾ ನಿರ್ಣಯ ಆಯೋಗ ರಚಿಸಿತ್ತು.

ಇದನ್ನು ಪ್ರಶ್ನಿಸಿ ಚುನಾವಣಾ ಆಯೋಗ ಹೈಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿದೆ.

ನಿಧನ ವಾರ್ತೆ

ಕೃಷ್ಣಸ್ವಾಮಿ ಭಟ್ಟರ್

ಬೇಲೂರು: ಬೇಲೂರಿನ ಚನ್ನಕೇಶವ ಸ್ವಾಮಿ ದೇಗುಲದ ಪ್ರಧಾನ ಅರ್ಚಕ ಕೃಷ್ಣಸ್ವಾಮಿ ಭಟ್ಟರ್ (ಪಾಚು ಭಟ್ಟರ್- 63) ಮಂಗಳವಾರ ಬೆಳಿಗ್ಗೆ ತಮಿಳುನಾಡಿನ ಕಂಚಿಯಲ್ಲಿ ಹೃದಯಾಘಾತದಿಂದ ನಿಧನರಾದರು.

ಅವರಿಗೆ ಪತ್ನಿ, ಇಬ್ಬರು ಪುತ್ರಿಯರು ಮತ್ತು ಒಬ್ಬ ಪುತ್ರ ಇದ್ದಾರೆ. ಅವರ ಸ್ವಂತ ಊರಾದ ಮೇಲುಕೋಟೆಯಲ್ಲಿ ಅಂತ್ಯಕ್ರಿಯೆ ನಡೆದಿದೆ. ಮೃತರ ಗೌರವಾರ್ಥ ಚನ್ನಕೇಶವಸ್ವಾಮಿ ದೇಗುಲದ ಗರ್ಭಗುಡಿ, ಅನ್ನ ದಾಸೋಹವನ್ನು ಮಂಗಳವಾರ ಬಂದ್ ಮಾಡಲಾಗಿತ್ತು. ಮೇಲುಕೋಟೆಯ ಚೆಲುವನಾರಾಯಣ ಸ್ವಾಮಿ ದೇಗುಲದಲ್ಲಿ ಅರ್ಚಕರಾಗಿ ಕಾರ್ಯನಿರ್ವಹಿಸಿ, ನಂತರ ಚನ್ನಕೇಶವ ಸ್ವಾಮಿ ದೇಗುಲದಲ್ಲಿ ಹಲವು ವರ್ಷಗಳಿಂದ ಕಾರ್ಯನಿರ್ವಹಿಸುತ್ತಾ ಇಲ್ಲಿಯೇ ವಾಸವಿದ್ದರು. ತಮಿಳುನಾಡಿನ ಕಂಚಿ ರಥೋತ್ಸವದಲ್ಲಿ ಭಾಗವಹಿಸಲು ಸೋಮವಾರ ಹೋಗಿದ್ದರು.

ಕೃಷಿ ವಿಶ್ವವಿದ್ಯಾಲಯ ಧಾರವಾಡ

ಆಸ್ತಿ ವಿಭಾಗ, ಕೃಷಿ ನಗರ, ಧಾರವಾಡ–5

Fax:+91-836-2441188 Epabx:+91-836-2214214/216,332
E mail: eo@uasd.in Phone :+ 91-836-2214214

ಸಂ.ಆಅ/ಇ–ಪ್ರೋ.ಬೀಜ/ಐಓಎಫ್‌ಧಾ/2022–23 ದಿನಾಂಕ: 24.05.2022

ಇ–ಪ್ರೋಕ್ಯೂರಮೆಂಟ ಟೆಂಡರ ಪ್ರಕಟಣೆ (ತೃತೀಯ ಕರೆ)

ಕೃಷಿ ವಿಶ್ವವಿದ್ಯಾಲಯ ಧಾರವಾಡದಲ್ಲಿ ಅನುಪಯುಕ್ತ 42.00 ಕ್ವಿಂಟಲ್ ಸೋಯಾ ಅವರೆ ಕಾಳುಗಳ ವಿಲೇವಾರಿಗಳಿಗೆ ಐಟಂವಾರು ಟೆಂಡರನ್ನು ಅಧಿಕೃತ ಏಜೆನ್ಸಿ /ಗುತ್ತಿಗೆದಾರರುಗಳಿಂದ ಮರು ಆಹ್ವಾನಿಸಿರುತ್ತಾರೆ. ಸದರಿ ಟೆಂಡರನ್ನು http://eproc.karnataka.gov.in online ಮುಖಾಂತರ ಸಲ್ಲಿಸತಕ್ಕದ್ದು. ಹೆಚ್ಚಿನ ವಿವರಗಳಿಗಾಗಿ ಕಚೇರಿ ಕೆಲಸದ ಸಮಯದಲ್ಲಿ ದೂರವಾಣಿ ಸಂಖ್ಯೆ 9448013373 ರಲ್ಲಿ ಪಡೆಯುವುದು.

ಟೆಂಡರ್ ವೇಳಾಪಟ್ಟಿ

1	ವಿಚಾರಣೆಗಳಿಗಾಗಿ ಕೊನೆಯ ದಿನಾಂಕ ಹಾಗೂ ವೇಳೆ	28.05.2022	Upto	16.00 Hrs
2	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಹಾಗೂ ವೇಳೆ	31.05.2022	Upto	16.00 Hrs
3	ಟೆಂಡರ್ ತೆರೆಯುವ ದಿನಾಂಕ ಹಾಗೂ ವೇಳೆ	01.06.2022	At	16.15 Hrs

ಸೂಚನೆ: ಟೆಂಡರ್‌ಗೆ ಸಂಬಂಧಿಸಿದಂತೆ ಕಾಲಕಾಲಕ್ಕೆ ಇ–ಪ್ರೊಕ್ಯೂರಮೆಂಟ್ ವೇದಿಕೆಯಲ್ಲಿ ಪ್ರವಹಿಸುವ ತಿದ್ದುಪಡಿಗಳು / ಮಾರ್ಪಾಡುಗಳನ್ನು ಗುತ್ತಿಗೆದಾರರು ಗಮನಿಸಬೇಕು

ಸಹಿ/–ಆಸ್ತಿ ಅಧಿಕಾರಿಗಳು

ವಾ.ಸಾ.ಇ/ಧಾ/199/2022–23/ದೇಶಪಾಂಡೆಪಬ್ಲಿಸಿಟಿ

ಕರ್ನಾಟಕ ಸರ್ಕಾರ

ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ, ವಿಭಾಗ, ಹರಪನಹಳ್ಳಿ.

ಸಂಖ್ಯೆ : EE/RDWS&SD/HRP/e-tender/Tech/2022-23/295 ದಿನಾಂಕ : 20.05.2022

ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ ಸಂಖ್ಯೆ – 06./2022–23.

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಹರಪನಹಳ್ಳಿರವರು 2021–22ನೇ ಸಾಲಿನ ವಿವಿಧ ಯೋಜನೆಯಡಿ ಅನುಮೋದನೆಯಾದ ಹೂವಿನಹಡಗಲಿ, ಹರಪನಹಳ್ಳಿ, ಹಗರಿಬೊಮ್ಮನಹಳ್ಳಿ ಮತ್ತು ಹೊಸಪೇಟೆ ತಾಲ್ಲೂಕಿನಲ್ಲಿ ಕಾರ್ಯತ್ಮಕ ನಳ ಸಂಪರ್ಕ ಕಲ್ಪಿಸಿ ನೀರು ಸರಬರಾಜು ಮಾಡುವ (ರೆಟ್ರೋಫಿಟ್ಟಿಂಗ್) ಕಾಮಗಾರಿಗಳಿಗೆ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ಹಾಗೂ ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ನೊಂದಾಯಿಸಲ್ಪಟ್ಟ ಗುತ್ತಿಗೆದಾರರಿಂದ ಐಟಂವಾರು ಟೆಂಡರ್‌ಗಳನ್ನು ಇ–ಪ್ರೊಕ್ಯೂರಮೆಂಟ್ ಮೂಲಕ ಇ–ಟೆಂಡರ್ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ಹಾಗೂ ಭರ್ತಿ ಮಾಡಿದ ಟೆಂಡರ್‌ಗಳನ್ನು ಸಲ್ಲಿಸಲು ನಿಗದಿತ ಅವಧಿ ದಿನಾಂಕ: 18.05.2022 ರಿಂದ 04.06.2022 ರ ಸಾಯಂಕಾಲ 5.00 ಗಂಟೆಯವರೆಗೆ ಮತ್ತು ಇ–ಪ್ರೊಕ್ಯೂರ್ ಮೆಂಟ್ ಟೆಂಡರ್ ತೆರೆಯುವ ದಿನಾಂಕ : 06.06.2022 ಬೆಳಿಗ್ಗೆ 11.00 ಗಂಟೆಯ ನಂತರ ಹಾಗೂ ದಿನಾಂಕ 30.05.2022 ರಂದು ಬೆಳಿಗ್ಗೆ 11.00 ಗಂಟೆಗೆ ಪೂರ್ವಭಾವಿ ಸಭೆಯನ್ನು ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ, ವಿಭಾಗ, ಹರಪನಹಳ್ಳಿಯಲ್ಲಿ ಕರೆಯಲಾಗಿದೆ. ಹೆಚ್ಚಿನ ವಿವರಗಳಿಗೆ ಕರ್ನಾಟಕ ಸರ್ಕಾರದ ವಿದ್ಯುನ್ಮಾನ ಸಂಗ್ರಹಣೆ ವೇದಿಕೆ (e-procurement portal) ವೆಬ್‌ಸೈಟ್‌ನಲ್ಲಿ ಪಡೆಯಬಹುದು. (www.eproc.karnataka.gov.in) ಈ ಬಗ್ಗೆ ಇನ್ನು ಹೆಚ್ಚಿನ ವಿವರಗಳಿಗಾಗಿ ಕಾರ್ಯಪಾಲಕ ಅಭಿಯಂತರರು ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಹರಪನಹಳ್ಳಿರವರ ಕಛೇರಿಯ ವೇಳೆಯಲ್ಲಿ ಪಡೆಯಬಹುದು.

ಕಾರ್ಯಪಾಲಕ ಇಂಜನೀಯರ್,
ಗ್ರಾ.ಕು.ನೀ & ನೈ ವಿಭಾಗ, ಹರಪನಹಳ್ಳಿ.

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ

#49, ಪರಿಸರ ಭವನ, ಚರ್ಚ್ ಸ್ಟ್ರೀಟ್, ಬೆಂಗಳೂರು–560 001
ದೂ: 080–2558 1383/ 2558 9112 ಫ್ಯಾಕ್ಸ್: 080–2588 6321
ಇಮೇಲ್: ho@kspcb.gov.in ವೆಬ್‌ಸೈಟ್: www.kspcb.karnataka.gov.in

ಸಂ:ಮಾನಿಮಂ/117/ಹಿಪಅ/ಗಣಿ/ಪಸಾಸ/2022–23/1338 ದಿನಾಂಕ: 23.05.2022

ಪರಿಸರ ಸಾರ್ವಜನಿಕ ಸಭೆಗಾಗಿ ಸೂಚನೆ

ಶ್ರೀ ರಾಮರೆಡ್ಡೆಪ್ಪ, ರವರು ಸಾಮಾನ್ಯ ಮರಳು ಗಣಿಗಾರಿಕೆ ಮಾಡಲು ಸರ್ವೆ ನಂ. 53 (ಭಾಗ) ಕೋಳೂರು ಗ್ರಾಮ, ಕೊಪ್ಪಳ ತಾಲ್ಲೂಕು ಮತ್ತು ಜಿಲ್ಲೆಯಲ್ಲಿ 6–00 ಎಕರೆ ಪ್ರದೇಶದಲ್ಲಿ ವರ್ಷಕ್ಕೆ 66,882 ಟನ್‌ಗಳಷ್ಟು (Open cast semi mechanized method) ಸಾಮರ್ಥ್ಯದ ಮರಳು ಗಣಿಗಾರಿಕೆ –ಯನ್ನು ಮಾಡಲು ಉದ್ದೇಶಿಸಿರುತ್ತಾರೆ. ಸದರಿ ಯೋಜನೆಯು ಪರಿಸರ ಆಘಾತ ಅಧ್ಯಯನದ ಅಧಿಸೂಚನೆ ದಿನಾಂಕ 14.09.2006ಗೆ (ತಿದ್ದುಪಡಿ ದಿನಾಂಕ: 01.12.2009) ಒಳಪಟ್ಟಿದ್ದು, ಅದರ ಪ್ರಕಾರ, ಪರಿಸರ ಸಾರ್ವಜನಿಕ ಆಲಿಕೆಯನ್ನು ನಡೆಸಬೇಕಿದೆ. ರಾಜ್ಯ ಮಟ್ಟದ ಪರಿಸರ ಅಘಾತ ಅಧ್ಯಯನ ಪ್ರಾಧಿಕಾರ, ಕರ್ನಾಟಕ ಸರ್ಕಾರ, ಇವರ Terms of Reference ಪತ್ರ ಸಂಖ್ಯೆ:SEIAA 593 2021 ದಿನಾಂಕ: 14.01.2022 ಮತ್ತು ಉದ್ದಿಮೆಯವರು ನೀಡಿದ ನಿವೇದನಾ ಪತ್ರದ ಸ್ವೀಕೃತಿ ದಿನಾಂಕ 16.02.2022 ಪ್ರಕಾರ, ಪರಿಸರ ಸಾರ್ವಜನಿಕ ಆಲಿಕೆಯನ್ನು ಮಂಡಳಿವತಿಯಿಂದ ನಡೆಸಲಾಗುತ್ತಿದೆ. **ಯೋಜನೆಯ ವಿವರಗಳು ಕೆಳಕಂಡಂತಿವೆ:**

1.	ಕಂಪನಿಯ ಹೆಸರು ಮತ್ತು ವಿಳಾಸ: ಶ್ರೀ ರಾಮರೆಡ್ಡೆಪ್ಪ, S/o, ನಾಗರೆಡ್ಡೆಪ್ಪ ರೆಡ್ಡೇರ್, ಹೌಸ್ ನಂ. 1/29, ಕೋಳೂರು ಗ್ರಾಮ, ಕೊಪ್ಪಳ ತಾಲ್ಲೂಕು & ಜಿಲ್ಲೆ, ಕರ್ನಾಟಕ
2.	ಉದ್ದೇಶಿತ ಯೋಜನೆಯ ಸ್ಥಳ: ಸರ್ವೆ ನಂ. 53 (ಭಾಗ) ಕೋಳೂರು ಗ್ರಾಮ, ಕೊಪ್ಪಳ ತಾಲ್ಲೂಕು ಮತ್ತು ಜಿಲ್ಲೆ, ಕರ್ನಾಟಕ.
3.	ಉದ್ದೇಶಿತ ಯೋಜನೆಯ ಕಾರ್ಯಚಟುವಟಿಕೆ: ವರ್ಷಕ್ಕೆ 66,882 ಟನ್‌ಗಳಷ್ಟು ಸಾಮರ್ಥ್ಯದ ಮರಳು ಗಣಿಗಾರಿಕೆ.
4.	ಮಾಲಿನ್ಯ ನಿಯಂತ್ರಣ ಕ್ರಮಗಳು ಕ್ವಾರಿ ಕಛೇರಿಯಿಂದ ಉತ್ಪತ್ತಿಯಾಗುವ ಗೃಹ ಬಳಕೆಯ ತ್ಯಾಜ್ಯ ನೀರನ್ನು ರಾಸಾಯನಿಕ ಶೌಚಾಲಯಕ್ಕೆ ಬಿಡಲಾಗುವುದು. ಮಳೆಗಾಲದಲ್ಲಿ ಗಣಿ ಹೊಂಡಗಳಲ್ಲಿ ಸಂಗ್ರಹವಾದ ಮಳೆನೀರನ್ನು ಧೂಳು ನಿಗ್ರಹಕ್ಕೆ ಮತ್ತು ತೋಟಗಾರಿಕೆಗೆ ಬಳಸಲಾಗುತ್ತದೆ. ಸಾಗಿಸುವ ಮತ್ತು ಪ್ರವೇಶ ರಸ್ತೆಗಳಲ್ಲಿ ನಿಯಮಿತವಾಗಿ ನೀರನ್ನು ಸಿಂಪಡಿಸಲಾಗುತ್ತದೆ. ಡೀಸಲ್ ಎಂಜಿನ್‌ಗಳಿಂದ ಹೊರಹೊಮ್ಮುವ ಧೂಳಿನ ಕಣಗಳು ಮತ್ತು ಅನಿಲ ಹೊರಸೂಸುವಿಕೆಯನ್ನು ಕಡಿಮೆ ಮಾಡಲು ಎಲ್ಲಾ ಉಪಕರಣಗಳನ್ನು ನಿಯಮಿತವಾಗಿ ನಿರ್ವಹಣೆ ಮಾಡಲಾಗುತ್ತದೆ. ಗುತ್ತಿಗೆ ಪ್ರದೇಶದ ಗಡಿ ಉದ್ದಕ್ಕೂ ದಟ್ಟವಾದ ಹಸಿರು ಪಟ್ಟಿಯನ್ನು ಒದಗಿಸಲಾಗಿದೆ ಮತ್ತು ಇದು ಫ್ಯುಜಿಟಿವ್ ಎಮಿಷನ್‌ಗಳನ್ನು ನಿರ್ಬಂಧಿಸಲು ತಡೆಗೋಡೆಯಾಗಿ ಕಾರ್ಯನಿರ್ವಹಿಸುತ್ತದೆ.
5.	ಪರಿಸರ ಸಾರ್ವಜನಿಕ ಸಭೆಯ ಸ್ಥಳ, ದಿನಾಂಕ ಮತ್ತು ಸಮಯ: 24.06.2022 (ಶುಕ್ರವಾರ) ರಂದು ಬೆಳಿಗ್ಗೆ 11:00 ಗಂಟೆ, ಸರ್ವೆ ನಂ. 53 (ಭಾಗ) ಕೋಳೂರು ಗ್ರಾಮ, ಕೊಪ್ಪಳ ತಾಲ್ಲೂಕು ಮತ್ತು ಜಿಲ್ಲೆ, ಕರ್ನಾಟಕ.
6.	ಯೋಜನೆಯ ಕಾರ್ಯಕಾರಿ ಸಾರಾಂಶ ಸಾರ್ವಜನಿಕ ಪರಾಮರ್ಶೆಗೆ ಇಡುವ ಸ್ಥಳ: (ಅ) ಜಿಲ್ಲಾಧಿಕಾರಿಗಳ ಕಛೇರಿ, ಕೊಪ್ಪಳ ಜಿಲ್ಲೆ, ಕೊಪ್ಪಳ (ಆ) ಮುಖ್ಯ ಕಾರ್ಯ–ನಿರ್ವಾಹಕ ಅಧಿಕಾರಿಗಳ ಕಛೇರಿ, ಜಿಲ್ಲಾ ಪಂಚಾಯತ್, ಕೊಪ್ಪಳ (ಇ) ಜಿಲ್ಲಾ ಕೈಗಾರಿಕಾ ಕೇಂದ್ರ, ಕೊಪ್ಪಳ (ಈ) ತಾಲ್ಲೂಕು ಪಂಚಾಯಿತಿ, ಕೊಪ್ಪಳ (ಉ) ಗ್ರಾಮ ಪಂಚಾಯಿತಿ ಕಾರ್ಯಾಲಯ, ಕೋಳೂರು (ಊ) ಪ್ರಾದೇಶಿಕ ಅಧಿಕಾರಿಗಳ ಕಛೇರಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಕೊಪ್ಪಳ (ಋ) ರಾಜ್ಯ ಮಟ್ಟದ ಪರಿಸರ ಅಘಾತ ಅಧ್ಯಯನ ಪ್ರಾಧಿಕಾರ, ಅರಣ್ಯ, ಜೀವಪರಿಸ್ಥಿತಿ ಮತ್ತು ಪರಿಸರ ಇಲಾಖೆ, ಕರ್ನಾಟಕ ಸರ್ಕಾರ, ಕೊಠಡಿ ಸಂಖ್ಯೆ. 706, 7ನೇ ಮಹಡಿ 4ನೇ ಗೇಟ್, ಬಹುಮಹಡಿಗಳ ಕಟ್ಟಡ, ಬೆಂಗಳೂರು–560 001 (ೠ) ಸಹಾಯ ಮೇಜು, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ,ನೆಲ ಅಂತಸ್ತು, ನಂ.49, ಪರಿಸರ ಭವನ, ಚರ್ಚ್ ಸ್ಟ್ರೀಟ್, ಬೆಂಗಳೂರು–560 001

ಸೂಚನೆ: ಯೋಜನಾ ಸ್ಥಳದಲ್ಲಿ ವಾಸವಾಗಿರುವ ಆಸಕ್ತ ನಿವಾಸಿಗಳು, ಪರಿಸರಾಸಕ್ತ ಗುಂಪುಗಳು ಮತ್ತು ಈ ಯೋಜನೆಯಿಂದ ತೊಂದರೆಗೊಳಗಾಗಬಹುದಾದ ಸಾರ್ವಜನಿಕರು ತಮ್ಮ ಸಲಹೆಗಳು, ಅನಿಸಿಕೆಗಳು, ಟೀಕೆಟಿಪ್ಪಣಿಗಳು ಹಾಗು ಅಹವಾಲುಗಳನ್ನು ಮೌಖಿಕ/ಲಿಖಿತ/ಇ–ಮೇಲ್ ಮೂಲಕ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ/ಅಧ್ಯಕ್ಷರು, ಪರಿಸರ ಸಾರ್ವಜನಿಕ ಸಮಿತಿ (ಜಿಲ್ಲಾಧಿಕಾರಿಗಳು, ಕೊಪ್ಪಳ ಜಿಲ್ಲೆ, ಕೊಪ್ಪಳ) ಇವರಿಗೆ ಈ ಅಧಿಸೂಚನೆ ಪ್ರಕಟವಾದ 30 ದಿನಗಳ ಒಳಗೆ ಸಲ್ಲಿಸತಕ್ಕದ್ದು. ಇಚ್ಛೆಯುಳ್ಳ ಸಾರ್ವಜನಿಕರು ಮೇಲೆ ತಿಳಿಸಿರುವ ದಿನದಂದು ಪರಿಸರ ಸಾರ್ವಜನಿಕ ಸಭೆಯಲ್ಲಿ ಪಾಲ್ಗೊಳ್ಳಬಹುದಾಗಿದೆ. ಹೆಚ್ಚಿನ ವಿವರಗಳನ್ನು ಮಂಡಳಿಯ ವೆಬ್‌ಸೈಟ್: kspcb.karnataka.gov.in ನಲ್ಲಿ ಪಡೆಯಬಹುದು.

ಸಹಿ/–
ಸದಸ್ಯ ಕಾರ್ಯದರ್ಶಿ

ಪ್ಲಾಸ್ಟಿಕ್ ಬಳಕೆ ನಿಲ್ಲಿಸಿ, ಪರಿಸರ ಹಾನಿ ತಪ್ಪಿಸಿ

ಕರ್ನಾಟಕ ಸರ್ಕಾರ

ಜಿಲ್ಲಾ ಪಂಚಾಯತ್, ಬಳ್ಳಾರಿ

ಕಾರ್ಯನಿರ್ವಾಹಕ ಅಭಿಯಂತರವರ ಕಛೇರಿ, ಪಂಚಾಯತ್ ರಾಜ್ ಇಂಜನೀಯರಿಂಗ್ ವಿಭಾಗ, ಬಳ್ಳಾರಿ.

ಸಂ: ಕಾನಿಇಂ/ಪಂ.ರಾ.ಇಂ.ವಿ./ಬ/ಎಇ–1/5054/ಟೆಂಡರು/2022–23/252 ದಿನಾಂಕ : 23.05.2022

ಟೆಂಡರು ಪ್ರಕಟಣೆ

(ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)

ಕರ್ನಾಟಕ ರಾಜ್ಯಪಾಲರ ಪರವಾಗಿ ಪಂಚಾಯತ್ ರಾಜ್ ಇಂಜನೀಯರಿಂಗ್ ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ಪಂ.ರಾ.ಇಂ. ವಿಭಾಗ ಬಳ್ಳಾರಿ ವ್ಯಾಪ್ತಿಯ 5054 ಲಂಪ್ ಸಮ್ ಯೋಜನೆ ಅಡಿಯಲ್ಲಿ ಅನುಮೋದನೆಗೊಂಡ ರಸ್ತೆ ನಿರ್ಮಾಣದ ಒಟ್ಟು 01 ಕಾಮಗಾರಿಗೆ ಇ–ಪ್ರೊಕ್ಯೂರ್ ಮೆಂಟ್ ಮುಖಾಂತರ ಐಟಂವಾರು ದರಗಳಲ್ಲಿ ಟೆಂಡರು ಆಹ್ವಾನಿಸಿದೆ.

ಟೆಂಡರ್ ನಮೂನೆಗಳನ್ನು www.eproc.karnataka.gov.in/e-portal/index.seam ಅಂತರ್ಜಾಲದಲ್ಲಿ ದಿನಾಂಕ 24.05.2022 ರಿಂದ ದಿನಾಂಕ 09.06.2022 ರಂದು ಸಂಜೆ 4.00 ಗಂಟೆಯವರೆಗೆ ಡೌನ್ ಲೋಡ್ ಮಾಡಿಕೊಂಡು ಅವಶ್ಯ ಮಾಹಿತಿ ಹಾಗೂ ನಿಗಧಿತ ಇ.ಎಂ.ಡಿ.ಯೊಂದಿಗೆ ದಿನಾಂಕ : 09.06.2022 ರ 16.00 ಗಂಟೆಯವರೆಗೆ ಸ್ವೀಕರಿಸಲಾಗುವುದು. ಕಾಮಗಾರಿಯ ತಾಂತ್ರಿಕ ಬಿಡ್ ನ್ನು ಆನ್ ಲೈನ್ ನಲ್ಲಿ ದಿನಾಂಕ: 10.06.2022 ರಂದು 17.00 ಗಂಟೆಗೆ ತೆರೆಯಲಾಗುವುದು. ಈ ಕುರಿತು ತಿದ್ದುಪಡಿಗಳೇನಾದರೂ ಇದ್ದಲ್ಲಿ ತಿದ್ದುಪಡಿಯನ್ನು www.eproc.karnataka.gov.in/e-portal/index.seam ವೆಬ್ ಸೈಟ್ ನಲ್ಲಿ ಮಾತ್ರ ಪ್ರಕಟಿಸಲಾಗುವುದು. ಟೆಂಡರನ್ನು ಯಾವುದೇ ಕಾರಣ ನೀಡದೇ ತಿರಸ್ಕರಿಸುವ ಹಕ್ಕನ್ನು ಕಾಯ್ದಿರಿಸಲಾಗುವುದು. ಟೆಂಡರನ್ನು ಯಾವುದೇ ಕಾರಣ ನೀಡದೇ ತಿರಸ್ಕರಿಸುವ ಹಕ್ಕನ್ನು ಕಾಯ್ದಿರಿಸಲಾಗಿದೆ, ಹೆಚ್ಚಿನ ವಿವರಗಳನ್ನು ಈ ಕಛೇರಿ ವೇಳೆಯಲ್ಲಿ ಖುದ್ದಾಗಿ ಪಡೆಯಬಹುದಾಗಿರುತ್ತದೆ. ಕಛೇರಿ ದೂರವಾಣಿ ಸಂಖ್ಯೆ: 08392–266173.

ಕಾರ್ಯನಿರ್ವಾಹಕ ಅಭಿಯಂತರರು,
ಪಂ.ರಾ.ಇಂ. ವಿಭಾಗ, ಬಳ್ಳಾರಿ.

ಕಾರ್ಯಪಾಲಕ ಇಂಜಿನಿಯರ್ ರವರ ಕಛೇರಿ, ಲೋಕೋಪಯೋಗಿ ಇಲಾಖೆ, ಚಿಕ್ಕಮಗಳೂರು ವಿಭಾಗ, ಚಿಕ್ಕಮಗಳೂರು.

ಅಲ್ಪಾವಧಿ ಟೆಂಡರ್‌ಪ್ರಕಟಣೆ ಸಂಖ್ಯೆ: 04/2022–23 ದಿನಾಂಕ :21.05.2022

ಅಲ್ಪಾವಧಿ ಟೆಂಡರ್ ಪ್ರಕಟಣೆ

ಮೇಲ್ಕಂಡ ಟೆಂಡರ್ ಪ್ರಕಟಣೆಯಲ್ಲಿ ಚಿಕ್ಕಮಗಳೂರು ಜಿಲ್ಲೆಯ ಚಿಕ್ಕಮಗಳೂರು ಲೋಕೋಪಯೋಗಿ ಇಲಾಖೆ ವಿಭಾಗಕ್ಕೆ ಒಳಪಡುವ ಈ ಕೆಳಗೆ ವಿವರಿಸಿರುವ ಕಾಮಗಾರಿಗಳಿಗೆ ಇ–ಪ್ರೋಕ್ ಹಾಗೂ ಮ್ಯಾನುವಲ್ ಮೂಲಕ ಅರ್ಹ ಗುತ್ತಿಗೆದಾರರಿಂದ ಟೆಂಡರ್ ಆಹ್ವಾನಿಸಲಾಗಿದೆ. ಕಾಮಗಾರಿಗಳನ್ನು ವಹಿಸಿಕೊಳ್ಳುವ ಅಥವಾ ನಿರ್ವಹಿಸಿರುವ ಸಾಮರ್ಥ್ಯದ ಬಗ್ಗೆ (Standard Tender Document-KW-1&3ರಂತೆ) ವಿವರಗಳನ್ನು ಲಗತ್ತಿಸತಕ್ಕದ್ದು, ಗುತ್ತಿಗೆದಾರರಿಗೆ ಅಧಿನಿಯಮ 3 ರಲ್ಲಿ ನಮೂದಿಸಿರುವ ಕನಿಷ್ಠ ಅರ್ಹತೆಗಳಿದ್ದರೆ ಮಾತ್ರ ಗುತ್ತಿಗೆಯನ್ನು ವಹಿಸಬಹುದಾಗಿರುತ್ತದೆ. ಕನಿಷ್ಠ ಅಂದಾಜು ಮೊತ್ತ ರೂ. 5.00 ಲಕ್ಷಗಳು ಹಾಗೂ ಗರಿಷ್ಠ ಅಂದಾಜು ಮೊತ್ತ ರೂ 100.00 ಲಕ್ಷಗಳು ಆಗಿರುತ್ತವೆ.

1. ಕ್ರಮ ಸಂಖ್ಯೆ 1 ಮತ್ತು 2ರ ಕಾಮಗಾರಿಗಳಿಗೆ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ದಿನಾಂಕ:13.06.2022 ರಂದು ಸಂಜೆ 4.00 ಗಂಟೆಯೊಳಗೆ ಟೆಂಡರ್ ಸಲ್ಲಿಸಬೇಕು. ಸದರಿ ಟೆಂಡರ್‌ನ್ನು ದಿನಾಂಕ:14.06.2022 ರಂದು ಸಂಜೆ4.15 ಗಂಟೆಯ ನಂತರ ಸಾಧ್ಯವಾದಲ್ಲಿ ತೆರೆಯಲಾಗುವುದು.
2. ಕ್ರಮ ಸಂಖ್ಯೆ 3 ಮತ್ತು 4ರ ಕಾಮಗಾರಿಗಳು ಮ್ಯಾನುವಲ್ ಆಗಿದ್ದು, ಅರ್ಹ ಗುತ್ತಿಗೆದಾರರು ದಿನಾಂಕ 31.05.2022 ಹಾಗೂ 01.06.2022 ನಿಗದಿತ ಶುಲ್ಕ ಪಾವತಿಸಿ ಖಾಲಿ ಟೆಂಡರ್ ಫಾರಂ ಕೋರಿ ಅರ್ಜಿ ಸಲ್ಲಿಸಬೇಕು ದಿನಾಂಕ : 07.06.2022 ರಂದು ಖಾಲಿ ಟೆಂಡರ್ ಫಾರಂ ಪಡೆದು ದಿನಾಂಕ : 09.06.2022 ರಂದು ಸಂಜೆ 4.00 ರ ವರೆಗೆ ಭರ್ತಿ ಮಾಡಿದ ಟೆಂಡರ್ ಗಳನ್ನು ಸಲ್ಲಿಸಬೇಕು ಸದರಿ ಟೆಂಡರ್‌ನ್ನು ದಿನಾಂಕ:10.06.2022 ರಂದು ಸಂಜೆ4.15 ಗಂಟೆಯ ನಂತರ ಸಾಧ್ಯವಾದಲ್ಲಿ ತೆರೆಯಲಾಗುವುದು.

ಈ ದಿನಾಂಕಗಳಂದು ಆಕಸ್ಮಿಕ ರಜಾ ದಿನಗಳು ಬಂದಲ್ಲಿ ಮರುದಿನವನ್ನು ಪರಿಗಣಿಸಲಾಗುವುದು. ಹೆಚ್ಚಿನ ವಿವರಗಳಿಗೆ ಕಛೇರಿ ವೇಳೆಯಲ್ಲಿ ವಿಷಯ ನಿರ್ವಾಹಕರನ್ನು ಸಂಪರ್ಕಿಸಿ ತಿಳಿಯಬಹುದಾಗಿದೆ.

ಸಹಿ – ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ,
ಚಿಕ್ಕಮಗಳೂರು ವಿಭಾಗ, ಚಿಕ್ಕಮಗಳೂರು

ಕರ್ನಾಟಕ ಸರಕಾರ

ಕಾರ್ಯನಿರ್ವಾಹಕ ಅಭಿಯಂತರ ಕಚೇರಿ

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಬಾಗಲಕೋಟ

ನಂ:ಗ್ರಾಕುನೀಮತ್ತುನೈವಿ/ಬಾಗಲಕೋಟ/ಪಿಬಿ–4ಟೆಂಡರ್/2022–23/270 ದಿನಾಂಕ23–05–2022

ಅಲ್ಪಾವಧಿ ಇ–ಪ್ರೋಕ್ಯೂರಮೆಂಟ್–ಟೆಂಡರ ಪ್ರಕಟಣೆ

ಕರ್ನಾಟಕ ಸರ್ಕಾರದ ಮಾನ್ಯ ರಾಜ್ಯಪಾಲರ ಪರವಾಗಿ ಕಾರ್ಯನಿರ್ವಾಹಕ ಇಂಜನೀಯರ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಬಾಗಲಕೋಟ ರವರಿಂದ ಕುಡಿಯುವ ನೀರು ಕಾಮಗಾರಿಗಳಿಗೆ ಅರ್ಹ ಗುತ್ತಿಗೆದಾರರಿಂದ ಟೆಂಡರ್ ಆಹ್ವಾನಿಸಲಾಗಿದ್ದು, ವಿವರ ಈ ಕೆಳಗಿನಂತಿದೆ.

1) ಹುನಗುಂದ ತಾಲ್ಲೂಕಿನ ಕಾಮಗಾರಿಯ ವಿವರ (Call-2 works)
   1) Gopsani (ST) Indent No - 40429 APT- 10.75 lakhs Call-2,
   2) Revadihal (GEN) Indent No - 40428 APT- 13.41 lakhs Call-2,
   3) Marol Indent No - 40427 APT- 70.47 lakhs Call-2,
   4) Pochapur Indent No - 40426 APT- 22.76 lakhs Call-2,
   5) Krishnapura Indent No - 40425 APT- 66.76 lakhs Call-2,
   6) Hulaginal Indent No- 40424 APT- 71.06 lakhs Call-2,
   7) Belagal Indent No - 40423 APT- 53.00 lakhs Call-2,
   8) chikkodagali LT2 Indent No-39867 APT- 111.96 lakhs Call-2
   9) IDDALAGI Indent No - 39573APT- 406.17 lakhs(call-4)
2) ಲೆಕ್ಕ ಶೀರ್ಷಿಕೆ: JJM–2215
3) ಟೆಂಡರ್ ಅರ್ಜಿ ಬೆಲೆ ಮತ್ತು ಇ.ಎಮ್ ಡಿ ಮೊತ್ತ ಇ–ಪ್ರೋಕ್ಯೂರಮೆಂಟ್ ಪ್ರಕಾರ
4) ಟೆಂಡರ್ ಫಾರಂ ಸಲ್ಲಿಸುವ ಅಂತಿಮ ದಿನಾಂಕ: 30–05–2022 ಸಾಯಂಕಾಲ 5.30 ಗಂಟೆಯ ವರೆಗೆ
5) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 01–06–2022 ಮಧ್ಯಾಹ್ನ 11.00 ಗಂಟೆಯ ನಂತರ (Two Cover)
6) ಆರ್ಥಿಕ ಬಿಡ್ ತೆರೆಯುವ ದಿನಾಂಕ: 01–06–2022 11.00 ಗಂಟೆಯ ನಂತರ (Two Cover)
7) ಆರ್ಥಿಕ ಬಿಡ್ ತೆರೆಯುವ ದಿನಾಂಕ: 03–06–2022 11.00 ಗಂಟೆಯ ನಂತರ (Single Cover)
8) ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ ಕಾರ್ಯನಿರ್ವಾಹಕ ಇಂಜನೀಯರ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಬಾಗಲಕೋಟ

ಟಿಪ್ಪಣಿ:– 1) ಟೆಂಡರ ಮೊತ್ತಕ್ಕಿಂತ ಕಡಿಮೆ ದರವನ್ನು ನಮೂದಿಸಿದಲ್ಲಿ ಒಟ್ಟು ವ್ಯತ್ಯಾಸ ಮೊತ್ತದ DD/FDRನ್ನು ಕಾರ್ಯನಿರ್ವಾಹಕ ಇಂಜನೀಯರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಬಾಗಲಕೋಟ ಇವರ ಹೆಸರಿನಲ್ಲಿ ಪಡೆದು ಸ್ಕ್ಯಾನ್ ಮಾಡಿ ಆನ್‌ಲೈನ್ ಮುಖಾಂತರ ಟೆಂಡರ ಜೊತೆಗೆ ಅಪ್‌ಲೋಡ್ ಮಾಡಬೇಕು. ಟೆಂಡರ ಅನುಮೋದನೆಗಿಂತ ಮುಂಚಿತವಾಗಿ ಈ ಕಛೇರಿಗೆ ಸಲ್ಲಿಸತಕ್ಕದ್ದು. ತಪ್ಪಿದಲ್ಲಿ ಅಂತಹ ಟೆಂಡರನ್ನು ಪರಿಗಣಿಸಲಾಗುವುದಿಲ್ಲ.
2) ಗುತ್ತಿಗೆ ಮೊತ್ತಕ್ಕೆ 12% GST ಯನ್ನು ಸೇರಿಸಿ ಕೆಲಸದ ಆದೇಶ ನೀಡಲಾಗುವುದು.

ಸಹಿ/– ಕಾರ್ಯನಿರ್ವಾಹಕ ಇಂಜನೀಯರರು,
ಗ್ರಾಕುನೀಮತ್ತುನೈ ವಿಭಾಗ, ಬಾಗಲಕೋಟ

ವಾ.ಸಾ.ಇ/ಬಾಗಲಕೋಟೆ/120/2022–23/ದೇಶಪಾಂಡೆಪಬ್ಲಿಸಿಟಿ

ಕೋವಿಡ್–19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ

(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೊಳಪಟ್ಟಿದೆ)
(CIN: U04010KA2002SGC030438)

ಅಲ್ಪಾವಧಿ ಟೆಂಡರ್ ಆಹ್ವಾನ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ವಿಧಾನದಲ್ಲಿ ಮಾತ್ರ)

ಬೆ.ವಿ.ಕಂ, ವಿಚಾರಣಾ ಸಂಖ್ಯೆ: ಬೆವಿಕಂ/ಪ್ರವ್ಯ–ಡಾಸ್/ಆರ್‌ಎಮ್‌ಯು–ಆರ್‌ಟಿಯು/22–23/04ರ ಅನುಸಾರ ಡಾಸ್ (DAS) ಶಾಖೆಯಿಂದ **"ವಿನ್ಯಾಸ, ಪರೀಕ್ಷೆ, ಸರಬರಾಜು, ಅನುಸ್ಥಾಪನೆ(ಬದಲಾವಣೆ), ಕಾರ್ಯಾರಂಭ ಮತ್ತು DAS ನಿಯಂತ್ರಣ ಕೇಂದ್ರದೊಂದಿಗೆ SCADA RMU ಹಾಗೂ RTU ಗಳ ಸಂಯೋಜನೆ"** ಗಾಗಿ ಟೆಂಡರನ್ನು ಆಹ್ವಾನಿಸಲಾಗಿದೆ.

ಬಿಡ್ ದಾಖಲೆಗಳನ್ನು ದಿನಾಂಕ: **26.05.2022, ಮಧ್ಯಾಹ್ನ 3.00** ಗಂಟೆಯಿಂದ **https://eproc.karnataka.gov.in** ವೆಬ್‌ಸೈಟ್ ಮೂಲಕ ಪಡೆಯಬಹುದು. ಇ–ಪ್ರೊಕ್ಯೂರ್‌ಮೆಂಟ್ ಸಹಾಯವಾಣಿ: +91 80 46010000, +91 80 22631200 ಅಥವಾ ಇ–ಮೇಲ್: **support@ihelpdesk.com**

ಸಹಿ/– ಪ್ರಭಾರ ಪ್ರಧಾನ ವ್ಯವಸ್ಥಾಪಕರು (ಡಾಸ್), ಬೆವಿಕಂ

ವಿದ್ಯುತ್ ಸಂಬಂಧಿತ ದೂರುಗಳಿಗೆ ಕರೆ ಮಾಡಿ: 1912
ಬೆಸ್ಕಾಂ ಮಿತ್ರ ಮೊಬೈಲ್ APP Download ಮಾಡಿಕೊಳ್ಳಿ

CENTRAL UNIVERSITY OF KARNATAKA

(Established by an Act of the Parliament in 2009)

Kadaganchi, Aland Road, Kalaburagi – 585 367.Phone (08477)-226706
Website: www.cuk.ac.inEmail: coe@cuk.ac.in

Common University Entrance Test PG (CUET)-2022

The University invites online applications through the National Testing Agency (NTA) for the CUET(PG)-2022 Entrance test for admission to B.Ed. andthe following Postgraduate courses - Law, English, Linguistics, Hindi, Kannada, History, Performing Arts, Applied Geography and Geoinformatics, Applied Geology, MSW, Life Science, Chemistry, MCA, Mathematics, Physics, Commerce, MBA, Tourism and Management, Folkloristics and Tribal Studies, Journalism and Mass Communication, Public Administration and Governance, Economics, and M.Tech in Embedded and Real-Time System, Power and Energy Engineering.

Last date for online application:
18.06.2022 (up to 11.50 PM).
Visit the Websites for Online application:
www.cuk.ac.in. - https:/cuet.nta.nic.in/

Place: Kalaburagi Sd/-
Date: 23.05.2022 Controller of Examinations

ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಸ್ವಾಮ್ಯದ ಉದ್ಯಮ)
ವಿಶ್ವೇಶ್ವರಯ್ಯ ಕೇಂದ್ರ 12ನೇ ಮಹಡಿ, ಮುಖ್ಯ ಗೋಪುರ, ಡಾ॥ ಬಿ.ಆರ್ ಅಂಬೇಡ್ಕರ್ ವೀಧಿ, ಬೆಂಗಳೂರು–560001. www.kmdc.karnataka.gov.in

ಕೆ.ಎಂ.ಡಿ.ಸಿ/ಸಿಬ್ಬಂದಿ/2019–20 ದಿನಾಂಕ: 21.05.2022

ನುರಿತ ಅಕೌಂಟೆಂಟ್ ಬೇಕಾಗಿದ್ದಾರೆ

ಕರ್ನಾಟಕ ಸರ್ಕಾರದ ಉದ್ಯಮವಾದ ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದ ಬೆಂಗಳೂರಿನಲ್ಲಿರುವ ಪ್ರಧಾನ ಕಛೇರಿಗೆ ಅನುಭವಿ ಅಕೌಂಟೆಂಟ್ ಅತ್ಯವಶ್ಯಕವಿದ್ದು, ಗುತ್ತಿಗೆ ಆಧಾರದ ಮೇಲೆ ನೇಮಿಸಿಕೊಳ್ಳಲು ಇಚ್ಛಿಸಿದ್ದು ವಿವರ ಕೆಳಕಂಡಂತಿರುತ್ತದೆ. **ಹುದ್ದೆಗಳ ಸಂಖ್ಯೆ:** 1 (ಒಂದು), **ಗರಿಷ್ಠ ವಯೋಮಿತಿ:** 50 ವರ್ಷಗಳು, **ವಿದ್ಯಾರ್ಹತೆ:** ಬಿಕಾಂ/ಸಿ.ಎ.ಇಂಟರ್, ಹಣಕಾಸು, ಲೆಕ್ಕಪತ್ರ ನಿರ್ವಹಣೆ ಮತ್ತು ತೆರಿಗೆಯಲ್ಲಿ ಪರಿಣಿತಿ ಹೊಂದಿರಬೇಕು. **ನೇಮಕಾತಿಯ ಸ್ವರೂಪ:** ಒಪ್ಪಂದದ ಆಧಾರದ ಮೇಲೆ ಆರಂಭದಲ್ಲಿ ಒಂದು ವರ್ಷಕ್ಕೆ/ಆನಂತರ ತೃಪ್ತಿದಾಯಕ ಕಾರ್ಯಕ್ಷಮತೆಯ ಆಧಾರದ ಮೇಲೆ ನವೀಕರಿಸಲಾಗುವುದು. **ಅನುಭವ:** ಕನಿಷ್ಠ 5 ವರ್ಷಗಳು ಮತ್ತು ಸರ್ಕಾರಿ ಕಂಪನಿಗಳು/ನಿಗಮ/ಮಂಡಳಿಗೆ ಸಂಬಂಧಿಸಿದ ಲೆಕ್ಕಪತ್ರ ನಿರ್ವಹಣೆ ಮತ್ತು ಆಡಿಟ್ ಮಾಡಿದ ಅನುಭವ ಹೊಂದಿರಬೇಕು. ಆಸಕ್ತಿಯುಳ್ಳ ಅಭ್ಯರ್ಥಿಗಳು ತಮ್ಮ ವಿವರಗಳನ್ನು ನಿಗಮದ ಇ–ಮೇಲ್ **accounts.kmdc@karnataka.gov.in** ಗೆ ದಿನಾಂಕ **31.05.2022** ರೊಳಗೆ ಸಲ್ಲಿಸಲು ಸೂಚಿಸಿದೆ.

ಸಹಿ/–ವ್ಯವಸ್ಥಾಪಕ ನಿರ್ದೇಶಕರು,
ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ,
ಬೆಂಗಳೂರು.

ವಾಸಾಸಂಇ/ವಾ.ಪ್ರ/ಶಿರಡಿ ಸಾಯಿ/637/2022–23

ಕೋವಿಡ್–19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಲೋಕೋಪಯೋಗಿ ಇಲಾಖೆ. ತುಮಕೂರು

ಕಾರ್ಯಪಾಲಕ ಇಂಜಿನಿಯರ್‌ರವರ ಕಚೇರಿ, ಲೋಕೋಪಯೋಗಿ ಇಲಾಖೆ ತುಮಕೂರು.

ಕ್ರ.ಸಂ:ಕಾಇಂ:ಲೋಇವಿ:ತುವು:ಸಇಂ–1:ಟೆಂಡರ್–05/2022–23
ದಿನಾಂಕ: 21.05.2022

ಟೆಂಡರ್ ಪ್ರಕಟಣೆ ಸಂ.05/2022–23 ದಿನಾಂಕ: 21.05.2022

ಈ ಕಚೇರಿ ಟೆಂಡರ್ ಪ್ರಕಟಣೆ ಸಂಖ್ಯೆ: 05/2022–23:ದಿನಾಂಕ 21–05–2022ರಂದು ತುಮಕೂರು ವಿಭಾಗದ ವ್ಯಾಪ್ತಿಯಲ್ಲಿ 8443 : ಠೇವಣಿ ವಂತಿಕೆ, 5054–04–337–0–01–154 : ಜಿಲ್ಲಾ ಮತ್ತು ಇತರೆ ರಸ್ತೆಗಳು– ಸುಧಾರಣೆ ಮತ್ತು 5054–04–337–0–01–423 : ಜಿಲ್ಲಾ ಮತ್ತು ಇತರೆ ರಸ್ತೆಗಳ– ಗಿರಿಜನ ಉಪಯೋಜನೆ ಲೆಕ್ಕ ಶೀರ್ಷಿಕೆ ಅಡಿಯಲ್ಲಿ 04 ಕಾಮಗಾರಿಗಳಿಗೆ ಇ–ಪ್ರೂಕ್ಯೂರ್‌ಮೆಂಟ್ ಮೂಲಕ ಟೆಂಡರ್ ಆಹ್ವಾನಿಸಲಾಗಿರುತ್ತದೆ. ಟೆಂಡರಿಗಿಟ್ಟ ಕನಿಷ್ಠ ಮೊತ್ತ ರೂ.14.73 ಲಕ್ಷಗಳು, ಹಾಗೂ ಗರಿಷ್ಠ ಮೊತ್ತ ರೂ.89.20 ಲಕ್ಷಗಳು ಇ.ಎಂ.ಡಿ ಮೊತ್ತ ರೂ.25,000/–, ಹಾಗೂ ಗರಿಷ್ಠ ಮೊತ್ತ ರೂ.1,78,400/– ಲಕ್ಷಗಳು. ಅರ್ಹ ಗುತ್ತಿಗೆದಾರರು : 4 ನೇ ದರ್ಜೆ ಮೇಲ್ಪಟ್ಟು, ಕಾಲಾವಧಿ: 02 ರಿಂದ 11 ತಿಂಗಳು, ಸಂಬಂಧಿಸಿದ ವಿಚಾರಣೆ ಮತ್ತು ಸ್ಪಷ್ಟೀಕರಣಗಳಿಗೆ ಕೊನೆ ದಿನಾಂಕ ಮತ್ತು ವೇಳೆ: **06.06.2022** ರ 16.00 ಗಂಟೆಗೆ, ಇ–ಪ್ರೂಕ್ಯೂರ್‌ಮಂಟ್ ಮೂಲಕ ಟೆಂಡರ್‌ಗಳನ್ನು ದಿನಾಂಕ **23.05.2022** ರಿಂದ **08.06.2022**ರ 16.00 ಗಂಟೆಯವರೆಗೆ ಪಡೆಯಬಹುದಾಗಿದೆ. ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ವೇಳೆ: **08.06.2022** ರ ಸಂಜೆ 16.00 ಗಂಟೆವರೆಗೆ, ರೂ.50.00 ಲಕ್ಷಕ್ಕಿಂತ ಮೇಲ್ಪಟ್ಟ ಕಾಮಗಾರಿಗಳ ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ವೇಳೆ: **09.06.2022** ರ ಸಂಜೆ 16.30 ಗಂಟೆಗೆ, ರೂ.50.00 ಲಕ್ಷಕ್ಕಿಂತ ಕಡಿಮೆ ಮೊತ್ತದ ಕಾಮಗಾರಿಗಳ ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ವೇಳೆ: **09.06.2022** ರ ಸಂಜೆ 16.30 ಗಂಟೆಗೆ, ರೂ.50.00 ಲಕ್ಷಕ್ಕಿಂತ ಮೇಲ್ಪಟ್ಟ ಕಾಮಗಾರಿಗಳ ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ವೇಳೆ: **13.06.2022** ರ ಸಂಜೆ 16.30 ಗಂಟೆಗೆ, ಹೆಚ್ಚಿನ ವಿವರಗಳನ್ನು ಸದರಿ ಕಚೇರಿಯಿಂದ ಕಚೇರಿ ವೇಳೆಯಲ್ಲಿ ಪಡೆಯಬಹುದಾಗಿದೆ ಹಾಗೂ ವೆಬ್‌ಸೈಟ್ ಸಂ: www.eproc.karnataka.gov.inರಲ್ಲಿ ಪಡೆಯಬಹುದಾಗಿದೆ.

ಸೂಚನೆ: ಆರ್ಥಿಕ ವಹಿವಾಟಿನ ಪತ್ರದಲ್ಲಿ ಯು.ಡಿ.ಐ ಸಂಖ್ಯೆಯನ್ನು ನಮೂದಿಸಿಲ್ಲದಿರುವ ಆರ್ಥಿಕ ವಹಿವಾಟನ್ನು ಪರಿಗಣಿಸುವುದಿಲ್ಲ

ಸಹಿ/–ಕಾರ್ಯಪಾಲಕ ಇಂಜಿನಿಯರ್,
ಲೋಕೋಪಯೋಗಿ ಇಲಾಖೆ ವಿಭಾಗ, ತುಮಕೂರು.

DIPR/TUM/151/MCA/2022-23



EXAM DH ಪ್ರಜಾವಾಣಿ MASTERMIND™
ವಾರ್ಷಿಕ ಚಂದಾದಾರಿಕೆ ಈಗ ಕೇವಲ ₹599 ₹399ಕ್ಕೆ ಮಾತ್ರ
ಯುಪಿಎಸ್‌ಸಿ, ಕೆಪಿಎಸ್‌ಸಿ, ಪಿಎಸ್‌ಐ, ಎಫ್‌ಡಿಎ, ಬ್ಯಾಂಕಿಂಗ್ ಪಿ.ಒ... ಸ್ಪರ್ಧಾತ್ಮಕ ಪರೀಕ್ಷೆಗಳಿಗಾಗಿ ಇ-ಮಿತ್ರ
ಈಗಲೇ ಚಂದಾದಾರರಾಗಲು QR ಕೋಡ್ ಸ್ಕ್ಯಾನ್ ಮಾಡಿ ಅಥವಾ
www.exammastermind.comಗೆ ಭೇಟಿ ಕೊಡಿ

ಕಾಲ್ ರೆಕಾರ್ಡಿಂಗ್ ಗೂಗಲ್ ನಿರ್ಬಂಧ

ಕೃಷ್ಣ ಭಟ್

ಕಾಲ್ ರೆಕಾರ್ಡ್ ಮಾಡುವುದು ಸ್ಮಾರ್ಟ್‌ಫೋನ್‌ಗಳಲ್ಲಿನ ಅತ್ಯಂತ ಪ್ರಮುಖ ಸೌಲಭ್ಯಗಳಲ್ಲೊಂದು. ಇದು ಹಲವು ಉದ್ದೇಶಕ್ಕೆ ಬಳಕೆಯಾಗುತ್ತದೆ. ಇದರಿಂದ ಉತ್ಪಾದನೆಯಾಗುವ ಡೇಟಾ ಅಂತೂ ಕೋಟ್ಯಂತರ ಬೆಲೆ ಬಾಳುವಂಥದ್ದು. ಒಬ್ಬೊಬ್ಬರಿಗೆ ಒಂದೊಂದು ರೀತಿಯಲ್ಲಿ ಬಳಕೆಯಾಗುವ ಈ ಕಾಲ್ ರೆಕಾರ್ಡಿಂಗ್ ಸೌಲಭ್ಯದ ಹಿಂದೆ 'ಗೌಪ್ಯತೆಯ ಉಲ್ಲಂಘನೆ'ಯ ಆರೋಪವೂ ಇದೆ. ಕರೆಯಲ್ಲಿರುವ ಎಲ್ಲರೂ ರೆಕಾರ್ಡ್ ಮಾಡುವುದಕ್ಕೆ ಸಮ್ಮತಿಸಿರಬೇಕು ಎಂಬುದು ಗೂಗಲ್ ಅಭಿಪ್ರಾಯ. ಗೂಗಲ್ ಕಳೆದ ವರ್ಷ ಕಾಲ್ ರೆಕಾರ್ಡಿಂಗ್ ಮಾಡುವಾಗ 'ನಿಮ್ಮ ಕರೆ ರೆಕಾರ್ಡ್ ಆಗುತ್ತಿದೆ...' ಎಂಬ ಧ್ವನಿಯೊಂದನ್ನ ಹೊರಡಿಸಲು ನಿರ್ಧರಿಸಿದಾಗ ಗೌಪ್ಯತೆ ವಿಚಾರದಲ್ಲಿ ಗೂಗಲ್ ಮಹತ್ವದ ನಿರ್ಧಾರ ಕೈಗೊಂಡಿರುವುದು ಮೆಚ್ಚುಗೆಗೆ ಪಾತ್ರವಾಗಿತ್ತು. ಈಗ ಈ ನಿಟ್ಟಿನಲ್ಲಿ ಇನ್ನೂ ಒಂದು ಹೆಜ್ಜೆ ಮುಂದಿಟ್ಟಿರುವ ಗೂಗಲ್, ತನ್ನ ಗೂಗಲ್ ಪ್ಲೇ ಸ್ಟೋರ್‌ನಲ್ಲಿ ಎಲ್ಲ ಕರೆ ರೆಕಾರ್ಡ್ ಮಾಡುವ ಆ್ಯಪ್‌ಗಳಿಗೆ ನಿಷೇಧ ಹೇರಿದೆ. ಆ್ಯಪ್ ಸ್ಟೋರ್‌ನಲ್ಲಿ ಹಲವು ಕಾಲ್ ರೆಕಾರ್ಡ್ ಮಾಡುವ ಆ್ಯಪ್‌ಗಳು ಇದ್ದವು. ಇವುಗಳನ್ನೆಲ್ಲ ಥರ್ಡ್ ಪಾರ್ಟಿ ಆ್ಯಪ್‌ಗಳು ಎಂದು ಕರೆಯಲಾಗಿದ್ದು, ಗೂಗಲ್‌ಗೂ, ಸ್ಮಾರ್ಟ್‌ಫೋನ್ ತಯಾರಕ ಕಂಪನಿಗೂ ಸಂಬಂಧವಿಲ್ಲದವುಗಳು.

ಆದರೆ, ವಾಸ್ತವವಾಗಿ ಈ ಕಾಲ್ ರೆಕಾರ್ಡಿಂಗ್ ಆ್ಯಪ್‌ಗಳಿಗೆ ಹೇರಿರುವ ನಿರ್ಬಂಧ ಜನಪ್ರಿಯ ಬ್ರ್ಯಾಂಡ್‌ನ ಸ್ಮಾರ್ಟ್‌ಫೋನ್ ಬಳಕೆ ಮಾಡುತ್ತಿರುವವರಿಗೆ ಬಾಧಿಸುವುದು ಅಷ್ಟಕ್ಕಷ್ಟೇ! ಏಕೆಂದರೆ, ಜನಪ್ರಿಯ ಬ್ರ್ಯಾಂಡ್‌ನ ಫೋನ್‌ಗಳಲ್ಲೆಲ್ಲ ಆ ಬ್ರ್ಯಾಂಡ್‌ನ ಯೂಸರ್ ಇಂಟರ್‌ಫೇಸ್‌ನಲ್ಲೇ ಈ ಸೌಲಭ್ಯವನ್ನು ಅಳವಡಿಸಲಾಗಿರುತ್ತದೆ. ಹೀಗಾಗಿ, ಇಂಥ ಸ್ಮಾರ್ಟ್‌ಫೋನ್ ಬಳಸುತ್ತಿರುವವರು ಎಂದಿನಂತೆ ಕಾಲ್ ರೆಕಾರ್ಡ್ ಮಾಡಿಕೊಳ್ಳಬಹುದು.



ನಿಷೇಧಿಸಿದ್ದು ಏಕೆ?

ಹಲವು ವರ್ಷಗಳಿಂದಲೂ ಕರೆ ರೆಕಾರ್ಡ್ ಮಾಡುವ ಬಗ್ಗೆ ಗೂಗಲ್ ತನ್ನ ಸ್ಪಷ್ಟ ವಿರೋಧವನ್ನು ವ್ಯಕ್ತಪಡಿಸಿದೆ. ಇದು ಬಳಕೆದಾರರ ಗೌಪ್ಯತೆಯ ಉಲ್ಲಂಘನೆ ಎಂಬುದು ಅದರ ಅಭಿಪ್ರಾಯ. ಇದೇ ಕಾರಣಕ್ಕೆ, ತನ್ನ ಡೈಲರ್ ಆ್ಯಪ್‌ನಲ್ಲಿ ಇರುವ ಕಾಲ್ ರೆಕಾರ್ಡಿಂಗ್ ಸೌಲಭ್ಯಕ್ಕೆ ಕಳೆದ ವರ್ಷ ಧ್ವನಿ ಸೂಚನೆಯನ್ನು ಅಳವಡಿಸಿತ್ತು. ಅಂದರೆ, ನೀವು ಫೋನ್ ಕರೆಯಲ್ಲಿದ್ದಾಗ ರೆಕಾರ್ಡಿಂಗ್ ಬಟನ್ ಒತ್ತಿದರೆ, ಕರೆಯ ಆ ಕಡೆಯಲ್ಲಿರುವವರಿಗೂ 'ಈ ಕರೆಯನ್ನು ರೆಕಾರ್ಡ್ ಮಾಡಲಾಗುತ್ತಿದೆ' ಎಂಬ ಧ್ವನಿ ಸಂದೇಶ ಕೇಳಿಸುತ್ತಿತ್ತು. ಈ ಸೌಲಭ್ಯ ಈಗಲೂ ಮುಂದುವರೆದಿದೆ.

ಇನ್‌ಸ್ಟಾಲ್ ಮಾಡಿದ ಆ್ಯಪ್ ಅಬಾಧಿತ

ಈ ನಿಷೇಧ ಕೇವಲ ಹೊಸದಾಗಿ ಆ್ಯಪ್ ಸ್ಟೋರ್‌ನಿಂದ ಆ್ಯಪ್ ಇನ್‌ಸ್ಟಾಲ್ ಮಾಡಿಸಿಕೊಳ್ಳುವುದರ ಮೇಲೆ ಮಾತ್ರ ಅನ್ವಯಿಸುತ್ತದೆ. ಉದಾಹರಣೆಗೆ, ಈಗಾಗಲೇ ಕಾಲ್ ರೆಕಾರ್ಡಿಂಗ್ ಆ್ಯಪ್ ಇನ್‌ಸ್ಟಾಲ್ ಮಾಡಿಕೊಂಡಿದ್ದರೆ, ಅದು ಮೊದಲಿನ ಹಾಗೆಯೇ ಕೆಲಸ ಮಾಡುತ್ತಿರುತ್ತದೆ. ಅಷ್ಟೇ ಅಲ್ಲ, ಅದು ಗೂಗಲ್ ಪ್ಲೇ ಸ್ಟೋರ್‌ನಲ್ಲಿ ಸಿಗುತ್ತಿಲ್ಲವಷ್ಟೇ. ಬೇರೆ ಬೇರೆ ಪ್ಲೇ ಸ್ಟೋರ್‌ಗಳಿಂದ ಇದನ್ನು ಡೌನ್‌ಲೋಡ್ ಮಾಡಿಕೊಂಡು ಇನ್‌ಸ್ಟಾಲ್ ಮಾಡಿಕೊಳ್ಳುವ ಅವಕಾಶ ಇದ್ದೇ ಇದೆ. ಅದು ಸ್ವಲ್ಪ ಅಪಾಯಕಾರಿ ನಿರ್ಧಾರವಾದರೂ, ಅದಕ್ಕೆ ಅವಕಾಶವಿದೆ. ಹೀಗಾಗಿ, ಈ ಸೌಲಭ್ಯಕ್ಕೇನೂ ತೊಂದರೆ ಇಲ್ಲ.

> ಕಾಲ್ ರೆಕಾರ್ಡಿಂಗ್ ಎಂಬುದು ಸದ್ಯಕ್ಕೆ ಅತ್ಯಂತ ಸಾಮಾನ್ಯ ಸೌಲಭ್ಯ. ಹಲವು ಆ್ಯಪ್‌ಗಳು ಒಂದು ಫೀಚರ್ ಆಗಿ ಇದನ್ನು ಹೊಂದಿದ್ದವು

ಒಳಗಿನ ಫೀಚರ್‌ಗಳೂ ಮಾಯ

ಕಾಲ್ ರೆಕಾರ್ಡಿಂಗ್ ಎಂಬುದು ಸದ್ಯಕ್ಕೆ ಅತ್ಯಂತ ಸಾಮಾನ್ಯ ಸೌಲಭ್ಯ. ಹೀಗಾಗಿ, ಹಲವು ಆ್ಯಪ್‌ಗಳು ಒಂದು ಫೀಚರ್ ಆಗಿ ಇದನ್ನು ಹೊಂದಿದ್ದವು. ಉದಾಹರಣೆಗೆ, ಟ್ರೂಕಾಲರ್ ಎಂಬ ಆ್ಯಪ್‌ನಲ್ಲಿ ಕಾಲ್ ರೆಕಾರ್ಡಿಂಗ್ ಸೌಲಭ್ಯವೂ ಇತ್ತು. ಆದರೆ, ಈಗ ಗೂಗಲ್‌ನ ಹೊಸ ನೀತಿಯಿಂದಾಗಿ ಟ್ರೂಕಾಲರ್ ಈ ಸೌಲಭ್ಯವನ್ನು ತೆಗೆದುಹಾಕಿದೆ.

ಇಂತಹ ಹಲವು ಆ್ಯಪ್‌ಗಳು ಗೂಗಲ್ ಪ್ಲೇ ಸ್ಟೋರ್‌ನಿಂದ ನಿಷೇಧಕ್ಕೊಳಗಾಗುವ ಭೀತಿಯಲ್ಲಿ ಈ ಸೌಲಭ್ಯವನ್ನು ತೆಗೆದುಹಾಕಬೇಕಾಗಿದೆ. ಪರ್ಯಾಯ ವಿಧಾನಗಳಿಗೆ ಮೊರೆ ಹೋಗುವ ಬಳಕೆದಾರರು ಸಾಮಾನ್ಯವಾಗಿ ಇಂತಹ ಸೌಲಭ್ಯಗಳು ಗೂಗಲ್ ಪ್ಲೇ ಸ್ಟೋರ್‌ನಲ್ಲಿ ಲಭ್ಯವಿಲ್ಲದಿದ್ದರೆ, ಅವುಗಳ ಮೇಲೆ ಅವಲಂಬಿಸಿರುವವರು ಇತರ ಸುರಕ್ಷಿತವಲ್ಲದ ಪ್ಲೇ ಸ್ಟೋರ್‌ಗಳನ್ನು, ವೆಬ್‌ಸೈಟ್‌ಗಳು ಬಳಸಿ ಆ್ಯಪ್‌ಗಳನ್ನು ಡೌನ್‌ಲೋಡ್ ಮಾಡಿಕೊಳ್ಳುತ್ತಾರೆ. ಇದರಿಂದ ಬಳಕೆದಾರರ ಸುರಕ್ಷತೆಗೆ ಇನ್ನಷ್ಟು ಅಪಾಯವೇ ಎದುರಾಗುತ್ತದೆ. ಹೀಗಾಗಿ, ಇತರ ವೆಬ್‌ಸೈಟ್‌ಗಳಲ್ಲಿ ಸಿಗುವ ಆ್ಯಪ್‌ಗಳನ್ನು ಬಳಸುವ ಮುನ್ನ ಎಚ್ಚರಿಕೆ ವಹಿಸುವುದು ಸೂಕ್ತ.

ಕಾನೂನು ಏನು ಹೇಳುತ್ತದೆ?

ಕರೆ ರೆಕಾರ್ಡಿಂಗ್‌ಗೆ ಸಂಬಂಧಿಸಿದ ಕಾನೂನು ಒಂದೊಂದು ದೇಶದಲ್ಲಿ ಒಂದೊಂದು ರೀತಿ ಇದೆ. ಉದಾಹರಣೆಗೆ, ಅಮೆರಿಕದ ಕಾನೂನು ಪ್ರಕಾರ ಕರೆ ರೆಕಾರ್ಡಿಂಗ್ ಮಾಡಲು ಒಂದು ಪಕ್ಷದ ಅನುಮತಿ ಇದ್ದರೆ ಸಾಕು. ಉದಾಹರಣೆಗೆ, ಕರೆ ಮಾಡುವವರ ಅನುಮತಿ ಇದ್ದರೂ, ಕರೆ ಸ್ವೀಕರಿಸಿದವರ ಅನುಮತಿ ಇದ್ದರೂ ಕರೆ ರೆಕಾರ್ಡ್ ಮಾಡಬಹುದು. ಕೆಲವು ದೇಶಗಳಲ್ಲಿ ಇಬ್ಬರ ಅನುಮತಿಯೂ ಬೇಕಾಗಿರುತ್ತದೆ. ಹೀಗಾಗಿ, ಗೂಗಲ್ ಈ ಸೌಲಭ್ಯವನ್ನೇ ನಿಷೇಧಿಸುವ ಮೂಲಕ ಕಾನೂನಿನ ವಿಚಾರದಲ್ಲಿ ಹೆಚ್ಚು ಸುರಕ್ಷಿತವಾಗಿರುವ ವಿಧಾನವನ್ನು ಅನುಸರಿಸಿದೆ. ❖

ಇದೊಂದು ಮೊಬೈಲ್ ಕಥೆ



ಶರತ್ ಭಟ್ ಸೇರಾಜೆ

'I like to compare the history of the mobile industry to the work of Umberto Eco: you get what is going on, but it makes your head hurt in the process' – (ಇದರ ತಾತ್ಪರ್ಯ: ಮೊಬೈಲ್ ತಯಾರಿಕೆಯ ಉದ್ದಿಮೆಯ ಕಥೆ ಅಂದರೆ ಅದು ಒಂಥರಾ ನವ್ಯದವರು ಬರೆದ ಸಣ್ಣಕಥೆಯ ಹಾಗೆ, ಮೊದಲು ಇದಾಯಿತು, ಆಮೇಲೆ ಅದಾಯಿತು, ಅನಂತರ ಏನಾಯಿತು ಅಂತ ಹೇಳಿಬಿಡಬಹುದು, ಹೇಳಿ ಮುಗಿಸುವಷ್ಟರಲ್ಲಿ ನಮ್ಮ ತಲೆ ಮಾತ್ರ ಚಿತ್ರಾನ್ನ ಆಗಿರುತ್ತದೆ.) ಅಂತ ಒಬ್ಬರು ಚತುರೋಕ್ತಿಪ್ರಿಯರು ಹೇಳಿದ್ದನ್ನು ನೆನಪಿನಲ್ಲಿಟ್ಟುಕೊಂಡೇ ಮೊಬೈಲ್ ಫೋನುಗಳ ಬಾಲ್ಯ ಮತ್ತು ಕಿಶೋರಾವಸ್ಥೆಗಳ ಕಡೆಗೊಂದು ದೃಷ್ಟಿ ಹಾಯಿಸಿ ನೋಡೋಣ.

ಮೊಬೈಲ್‌ಗಳನ್ನು ಆಧುನಿಕ, ಅತ್ಯಾಧುನಿಕ ತಂತ್ರಜ್ಞಾನದ ಶಿಶುಗಳು ಅಂತ ಹೇಳುತ್ತೇವಾದರೂ, ತತ್ತ್ವದ, ತಂತ್ರಜ್ಞಾನದ ದೃಷ್ಟಿಯಿಂದ ಇವುಗಳ ಪೂರ್ವಗಾಮಿಗಳು, ವಂಶದ ಹಿರೀಕರು ಅನ್ನಬಹುದಾದ ಉತ್ಪನ್ನಗಳು ಸುಮಾರು ಎಂಬತ್ತು-ನೂರು ವರ್ಷಕ್ಕೂ ಮೊದಲೇ ಇದ್ದವು ಅಂದರೆ ಹಲವರು ಹುಬ್ಬೇರಿಸಬಹುದು.

ರೇಡಿಯೊ ಮತ್ತು ಮೊಬೈಲ್‌ಗಳು ಒಂದೇ ಮನೆತನದ ಕುಡಿಗಳು ಎಂಬುದೂ ಹಲವರ ತಲೆಗೆ ಬಂದಿರಲಿಕ್ಕಿಲ್ಲ. ಯೋಚಿಸಿ ನೋಡಿ. ಎಲ್ಲೋ ಆಕಾಶವಾಣಿ ಕೇಂದ್ರದಲ್ಲಿ ಕುಳಿತು ಯಾರೋ ಮಾತಾಡಿದ್ದು, ನಮ್ಮ ಮನೆಯಲ್ಲಿ ಕೇಳುತ್ತಿತ್ತು. ನಾವು ತಿರುಗಿ ಮಾತಾಡಿದ್ದು ಆಕಾಶವಾಣಿ ಕೇಂದ್ರದವರಿಗೆ ಕೇಳುತ್ತಿರಲಿಲ್ಲ ಎನ್ನುವುದನ್ನು ಬಿಟ್ಟರೆ, ಆಕಾಶವಾಣಿಯು ಹೆಚ್ಚುಕಡಿಮೆ ಏಕಮುಖಿ ಮೊಬೈಲೇ ಅಲ್ಲವೇ (ಸಿಗ್ನಲ್ ಸಿಕ್ಕದೆ, 'ಹಲೋ... ಕೇಳ್ತಾ ಇದೆಯಾ? ಕೇಳ್ತಾ ಇಲ್ಲ, ಈಗ ಕೇಳ್ತಾ ಇದೆ, ಮತ್ತೆ ಕೇಳ್ತಾ ಇಲ್ಲ' ಅಂತೆಲ್ಲ ಪರದಾಡುವಾಗ ನಮ್ಮ ಮೊಬೈಲ್ ಒಂದು ರೀತಿ ಆಕಾಶವಾಣಿಯ ಹಾಗೆ ಒಂದೇ ಕಡೆಯಿಂದ ಸಂಭಾಷಣೆಗೆ ಎಡೆಗೊಡುತ್ತಿರುತ್ತದೆ). ಇನ್ನು ಹಳೆಯ ಹಾಲಿವುಡ್ ಸಿನಿಮಾಗಳಲ್ಲಿ, ಯುದ್ಧಗಳಲ್ಲಿ ಸೈನಿಕರು ವಾಕಿಟಾಕಿ ಬಳಸಿ ಮಾತಾಡುವುದನ್ನು ನೋಡಿರುತ್ತೇವೆ. ಅದು ಆಕಾಶವಾಣಿಗಿಂತ ಸ್ವಲ್ಪ ವಾಸಿ, ಅದರಲ್ಲಿ ಇಬ್ಬರೂ ಮಾತಾಡಬಹುದು, ಆದರೆ ಒಟ್ಟಿಗೆ ಅಲ್ಲ! ಒಬ್ಬರ ಮಾತು ಮುಗಿದಾದ ಮೇಲೆ ಇನ್ನೊಬ್ಬರು ಶುರುಹಚ್ಚಿಕೊಳ್ಳಬಹುದು. ಹಾಗಾಗಿಯೇ, ನನ್ನ ಮಾತು ಮುಗಿಯಿತು, ನಿಮ್ಮ ಮಾತು ಕೇಳಿಸಿತು ಅಂತೆಲ್ಲ ತಿಳಿಸಲಿಕ್ಕೆ, 'ಓವರ್', 'ಕಾಪಿ ದಟ್' ಮುಂತಾದ ಪದಬಳಕೆ ಮಾಡುವುದನ್ನು ಸಿನಿಮಾಗಳಲ್ಲಿ ನಾವು ನೋಡಿದ್ದೇವೆ. ಈ ವಾಕಿಟಾಕಿಗಳಲ್ಲಿ ಮಾತಾಡಿದ್ದು ಹೆಚ್ಚು ದೂರ ಸಾಗುತ್ತಿರಲಿಲ್ಲ ಅನ್ನುವುದು ಅದರ ಇನ್ನೊಂದು ಕೊರತೆ.

ಹಾಗೆ ನೋಡಿದರೆ, ಇಪ್ಪತ್ತರ ದಶಕದಲ್ಲೇ ಜರ್ಮನಿಯಲ್ಲಿ ರೈಲುಗಳಲ್ಲಿ ತಂತಿಗಳಿಲ್ಲದ ರೇಡಿಯೊ ಫೋನುಗಳನ್ನು ಅಳವಡಿಸಲಾಗಿತ್ತು. ಇದನ್ನು ನೋಡಿದ ಅಮೆರಿಕದವರು ಕಾರುಗಳಲ್ಲಿ ಬಳಸಬಹುದಾದ ಕಾರ್ ಫೋನುಗಳನ್ನು ನಲವತ್ತರ ದಶಕದಲ್ಲಿ ತಂದರು. ಇವುಗಳನ್ನು ಬಳಸಿದರೆ ಕಾರಿನ ಡಿಕ್ಕಿಯಲ್ಲಿ ಮತ್ತೇನನ್ನೂ ಇಡಲು ಸ್ಥಳವಿಲ್ಲ ಅನಿಸುವಷ್ಟು ದೊಡ್ಡ ಬ್ಯಾಟರಿಗಳನ್ನು ಇಡಬೇಕಾಗುತ್ತಿತ್ತು. ಈ ಜಾಲಗಳ ಪ್ರಸಾರವ್ಯಾಪ್ತಿ ಅದೆಷ್ಟು ದುರ್ಬಲವಾಗಿತ್ತೆಂದರೆ ನ್ಯೂಯಾರ್ಕಿನಲ್ಲಿ ಈ ಕಾರು ಫೋನುಗಳನ್ನು ಬಳಸಿ ಏಕಕಾಲಕ್ಕೆ ನೂರೈವತ್ತು ಜನರಿಗಿಂತ ಹೆಚ್ಚು ಜನ ಮಾತಾಡುವಂತಿಲ್ಲ ಎಂಬಷ್ಟು! ಈ ತಲೆನೋವಿಗೆ ಔಷಧ ಕಂಡುಹಿಡಿಯಲು ಹೊರಟದ್ದು ಅಮೆರಿಕದ ದೂರವಾಣಿಗಳ ಸಾರ್ವಭೌಮನಾಗಿದ್ದ AT&T ಸಂಸ್ಥೆಯ ಬೆಲ್ ಲ್ಯಾಬ್ಸ್. ಆಗ ಹುಟ್ಟಿದ್ದು 'ಸೆಲ್' ಎಂಬ ಪರಿಕಲ್ಪನೆ. ಇಡೀ ಊರನ್ನು ಒಂದಷ್ಟು ಸೆಲ್ಲುಗಳಾಗಿ ವಿಭಾಗಿಸಿ ಒಂದೊಂದು ಸೆಲ್ಲಿಗೂ ಒಂದೊಂದು ಟವರ್ ಎಂಬಂತೆ ವಿನ್ಯಾಸ ಮಾಡಲಾಯಿತು. ಉದಾಹರಣೆಗೆ, ಬೆಂಗಳೂರಿನಲ್ಲಾದರೆ ಜಯನಗರವು ಒಂದು ಸೆಲ್, ಮಲ್ಲೇಶ್ವರವು ಇನ್ನೊಂದು ಸೆಲ್, ಬಸವನಗುಡಿ ಮತ್ತೊಂದು ಸೆಲ್ – ಹೀಗೆ ಭಾವಿಸಿಕೊಳ್ಳಬಹುದು. ಒಂದು ಸೆಲ್ಲಿನಿಂದ ಮತ್ತೊಂದಕ್ಕೆ ನೀವು ಹಾದುಹೋಗುವಾಗ ನಿಮ್ಮನ್ನು ಒಂದು ಸೆಲ್ಲಿನ ಟವರಿನಿಂದ ಮತ್ತೊಂದಕ್ಕೆ ಹಸ್ತಾಂತರ ಮಾಡುವ 'ಟವರಿಗೆ ಬಾ ತಂಗಿ!' ಕೆಲಸವನ್ನು ಕಂಪ್ಯೂಟರುಗಳೇ ನಿರ್ವಹಿಸುತ್ತವೆ. ಈ ತಂತ್ರಜ್ಞಾನದಿಂದಾಗಿಯೇ ಈ ಫೋನಿಗೆ ಸೆಲ್ ಫೋನ್ ಎಂಬ ಹೆಸರು.

ಇದಾಗುತ್ತಿರುವಾಗ ಮತ್ತೊಂದು ಕಡೆಯಲ್ಲಿ ಕುಳಿತು, 'ಸ್ಥಾವರವಾಗಿದ್ದ ದೂರವಾಣಿಯು ಜಂಗಮವಾದರೆ ಹೇಗೆ' ಎಂಬ ನಿಟ್ಟಿನಲ್ಲಿ ಯೋಚಿಸತೊಡಗಿದ್ದು (ಆಗಿನ್ನೂ ಚಿಕ್ಕ ಸಂಸ್ಥೆಯಾಗಿದ್ದ) ಮೋಟೊರೋಲದವರು. ಇಂಥ ಫೋನನ್ನು ತಯಾರಿಸಲು ಹವಣಿಸಿದ ಮಾರ್ಟಿನ್ ಕೂಪರ್ ಅವರದ್ದೇ ಮಾತಿನಲ್ಲಿ ಹೇಳುವುದಾದರೆ, 'People are mobile, they are naturally, inherently, fundamentally mobile. Everybody is rushing off somewhere, nobody is where they want to be, everybody is going somewhere else', ಹೀಗಿರುವಾಗ, ಜನರಂತೆ ಅವರ ಫೋನು ಕೂಡ ಚಲನಶೀಲವಾಗಲಿ ಎಂಬ ಸಿದ್ಧಾಂತ ಅವರದು. ಸೆಲ್ ಫೋನ್ ಮೊಬೈಲ್ ಫೋನ್ (ಅಂದರೆ ಚಲಿಸುವ ಫೋನು) ಆದದ್ದು ಹೀಗೆ.

1973ರಲ್ಲಿ ಹೀಗೆ ತಯಾರಾದ ಫೋನ್, ಉಸಿರು ಬಿಗಿ ಹಿಡಿದುಕೊಳ್ಳಿ, ಸುಮಾರು ಒಂದು ಕಿಲೋ ಭಾರ ಇತ್ತಂತೆ. ಅದರ ಬ್ಯಾಟರಿ ನಿಲ್ಲುತ್ತಿದ್ದದ್ದು - ತಲೆ ಮೇಲೆ ಕೈ ಇಟ್ಟುಕೊಳ್ಳಿ - ಬರೀ ಇಪ್ಪತ್ತು ನಿಮಿಷ ! 'ಇದೊಂದು ಸಮಸ್ಯೆಯೇ ಆಗಲಿಲ್ಲ. ಏಕೆಂದರೆ ಈ ಒಂದು ಕೆಜಿ ಭಾರದ ಫೋನನ್ನು ಇಪ್ಪತ್ತು ನಿಮಿಷ ಎತ್ತಿ ಹಿಡಿಯುವ ಗಟ್ಟಿ ಜೀವದ ಹುರಿಯಾಳುಗಳು ಎಷ್ಟಿದ್ದಾರು' ಅಂತ ಮಾರ್ಟಿನ್ ಕೂಪರ್ ತಮಾಷೆ ಮಾಡಿದ್ದುಂಟು. ಈ ಮೊದಲ ಮಾದರಿಯನ್ನು ಮಾರ್ಪಡಿಸಿ Motorola DynaTAC 8000x ಎಂಬ ಫೋನನ್ನು ತರಲಿಕ್ಕೆ ಮತ್ತೆ ಹತ್ತು ವರ್ಷಗಳೇ ಹಿಡಿದವು. ಇದೂ ಭಾರ ಎತ್ತುವ ಸ್ಪರ್ಧೆಗೆ ಹೇಳಿಮಾಡಿಸಿದ ಫೋನೇ.

ನಮ್ಮ ನಿಮ್ಮಂಥ ಹುಲುಮಾನವರು ಕೈಯ್ಯಲ್ಲಿ ಹಿಡಿಯಬಹುದಾದ ದೂರವಾಣಿಯನ್ನು ಕಡೆಗೂ 1992ರಲ್ಲಿ ನೋಕಿಯಾದವರು ತಂದ ಮೇಲೆ ಹಂತ ಹಂತವಾಗಿ ರೆಕ್ಕೆಪುಕ್ಕ ಸೇರಿಸಿಕೊಂಡು, ಸಿಂಗಾರ ಬಂಗಾರ ಮಾಡಿಕೊಂಡು ಬೆಳೆದ ಈ ಕೈಪಿಡಿ ಫೋನು ಹೇಗೆ ಓಡಿತೆಂದರೆ ಅದನ್ನು ಹಿಡಿಯುವವರೇ ಇರಲಿಲ್ಲ! ❖

ಹೈಬ್ರಿಡ್ ಸೌರ ಸಾಧನಗಳು

ಕೊಳ್ಳೇಗಾಲ ಶರ್ಮ

ಬದುಕು ಸಂದಿಗ್ಧದ ಸರಮಾಲೆ ಎನ್ನುವುದಕ್ಕೆ ಮೊನ್ನೆ ಮನೆ ಕಟ್ಟುವಾಗ ಆದ ಅನುಭವವೇ ಉದಾಹರಣೆ. ಮನೆಯಲ್ಲಿ ವಿದ್ಯುತ್ತಿನ ಬದಲಿಗೆ ಸೌರಶಕ್ತಿಯನ್ನು ಆದಷ್ಟೂ ಬಳಸುವ ಉದ್ದೇಶವಿತ್ತು. ಹೀಗಾಗಿ ಸೌರವಿದ್ಯುತ್ ಫಲಕಗಳನ್ನು ಛಾವಣಿಯಲ್ಲಿ ಹಾಕಲು ತೀರ್ಮಾನಿಸಿದ್ದೆ. ಆದರೆ ಅನಂತರ ಎಂಜಿನಿಯರ್‌ಗಳ ಜೊತೆಗೆ ಮಾತನಾಡುವಾಗ ಒಂದು ಸಮಸ್ಯೆಯನ್ನು ತಂದೊಡ್ಡಿದರು. ಒಂದೋ ನೀರು ಕಾಯಿಸಲು ಬಳಸುವ ಸೌರ ಸಾಧನಗಳನ್ನು ಉಪಯೋಗಿಸಿ, ಇಲ್ಲವೇ ವಿದ್ಯುತ್ ಉತ್ಪಾದಿಸುವ ಸೌರ ಫಲಕಗಳನ್ನು ಬಳಸಿ. ಎರಡನ್ನೂ ಬಳಸಲು ನಿಮ್ಮ ಛಾವಣಿಯಲ್ಲಿ ಸಾಕಷ್ಟು ಜಾಗವಿಲ್ಲ ಎಂದುಬಿಟ್ಟರು. ಉದ್ದೇಶ ಉತ್ತಮವಾಗಿದ್ದರೂ ಈ ಸಂದಿಗ್ಧದಿಂದಾಗಿ ಸೌರವಿದ್ಯುತ್ ಫಲಕಗಳನ್ನು ಕೈಬಿಡಬೇಕಾಯಿತು. ವಿದ್ಯುತ್ತು ಮತ್ತು ತಾಪವೆರಡನ್ನೂ ಉತ್ಪಾದಿಸುವ ಸೌರ ಸಾಧನವೊಂದಿದ್ದರೆ ಎಷ್ಟು ಚೆನ್ನಿರುತ್ತಿತ್ತು ಎನ್ನಿಸಿತು. ಇದೋ... ಹೀಗೂ ಒಂದು ಸಾಧನ ಸಾಧ್ಯವಂತೆ. ಅಮೆರಿಕದ ತುಲೇನ್ ವಿಶ್ವವಿದ್ಯಾನಿಲಯದ ಭೌತವಿಜ್ಞಾನಿ ಮ್ಯಾಥ್ಯೂ ಎಸ್ಕಾರಾ ಮತ್ತು ಸಂಗಡಿಗರು ಹೀಗೊಂದು ಸೌರ ಸಾಧನವನ್ನು ವಿನ್ಯಾಸ ಮಾಡಿದ್ದಾರೆ.

ಅಸಾಂಪ್ರದಾಯಿಕ ಇಂಧನಗಳಲ್ಲಿ ಸೌರ ವಿದ್ಯುತ್ತು ಹಾಗೂ ಸೌರ ಶಕ್ತಿ ಪ್ರಮುಖವಾದವು. ವರ್ಷಾದ್ಯಂತ ಪ್ರಪಂಚದ ಬಹುತೇಕ ಪ್ರದೇಶಗಳಲ್ಲಿ ಯಥೇಚ್ಛವಾಗಿ ದೊರೆಯುವ ಬಿಸಿಲಿನಿಂದ ದಿನೇ, ದಿನೇ ಬೇಡಿಕೆ ಹೆಚ್ಚಾಗುತ್ತಲೇ ಇರುವ ವಿದ್ಯುತ್ತನ್ನು ಒದಗಿಸಬಹುದು ಎನ್ನುವುದು ಲೆಕ್ಕಾಚಾರ. ಆದರೆ ವಾಸ್ತವ ಹಾಗಿಲ್ಲ. ಬಿಸಿಲು ಯಥೇಚ್ಛವಾಗಿದ್ದರೂ ಅದರಲ್ಲಿನ ಶಕ್ತಿಯನ್ನು ಸಂಪೂರ್ಣವಾಗಿ ನಾವು ಬಳಸಲು ಯೋಗ್ಯವಾದ ರೂಪಕ್ಕೆ ಬದಲಾಯಿಸುವ ತಂತ್ರಜ್ಞಾನ ನಮಗಿನ್ನೂ ಕೈಗೆಟುಕಿಲ್ಲ. ಉದಾಹರಣೆಗೆ, ಅತ್ಯಂತ ಕ್ಷಮತೆ ಇರುವ ಸೌರ ವಿದ್ಯುತ್ ಫಲಕಗಳೂ ತಮ್ಮ ಮೇಲೆ ಬೀಳುವ ಬೆಳಕಿನಲ್ಲಿ ಇರುವ ಶಕ್ತಿಯ ಹತ್ತೋ, ಹದಿನೈದು ಶತಾಂಶವನ್ನಷ್ಟೆ ವಿದ್ಯುತ್ತನ್ನಾಗಿ ಪರಿವರ್ತಿಸಬಲ್ಲುವು. ಇನ್ನು ತಾಪವನ್ನಾಗಿ ಪರಿವರ್ತಿಸುವ ಸೌರ ಸಾಧನಗಳೂ ಅಷ್ಟೆ. ಬಿಸಿಲಿನಲ್ಲಿರುವ ಶಕ್ತಿಯ ಇಪ್ಪತ್ತೋ, ಮೂವತ್ತು ಶತಾಂಶವನ್ನಷ್ಟೆ ಉಷ್ಣವನ್ನಾಗಿ ಬದಲಾಯಿಸಬಲ್ಲವು. ಸದ್ಯಕ್ಕೆ ಇವೆರಡೂ ಉಪಾಯಗಳನ್ನು ಪ್ರತ್ಯೇಕವಾಗಿಯೇ ಬಳಸಬೇಕಾಗಿರುವುದರಿಂದ ಸೂರ್ಯನು ಒದಗಿಸುತ್ತಿರುವ ಶಕ್ತಿಯ ಅತ್ಯಲ್ಪ ಅಂಶವನ್ನಷ್ಟೆ ನಾವು ಉಪಯೋಗಿಸಲು ಸಾಧ್ಯವಾಗಿದೆ. ಮ್ಯಾಥ್ಯೂ ಎಸ್ಕಾರಾ ತಂಡದ ವಿನ್ಯಾಸ ಸಫಲವಾದಲ್ಲಿ ಬಹುಶಃ ನಾವು ಮನೆಯ ಸೂರಿನ ಮೇಲೆ ಒಂದು ಡಿಶ್ ಆಂಟೆನಾದಂತಹ ಸಾಧನವನ್ನು ಸ್ಥಾಪಿಸಿ, ಬಿಸಿನೀರು ಹಾಗೂ ವಿದ್ಯುತ್ತು ಎರಡನ್ನೂ ಬಿಸಿಲಿನಿಂದ ಮುಫತ್ತಾಗಿ ಪಡೆಯಬಹುದು.

ಎಸ್ಕಾರಾ ತಂಡ ತಮ್ಮ ಸಾಧನವನ್ನು 'ಸೂರ್ಯಕಾಂತಿ' ಎಂದು ಹೆಸರಿಸಿದ್ದಾರೆ. ಇದರಲ್ಲಿ ಒಂದು ದೊಡ್ಡ ಡಿಶ್ ಆಂಟೆನಾದಂತಹ ಬೋಗುಣಿ ಇದೆ. ಈ ಬೋಗುಣಿಯೊಂದು ಕನ್ನಡಿ. ಕನ್ನಡಿಯಿಂದ ಪ್ರತಿಫಲಿಸಿದ ಸೂರ್ಯಕಿರಣಗಳು ಎಲ್ಲವೂ ಒಂದೆಡೆ ಕೇಂದ್ರೀಕೃತವಾಗುತ್ತವೆ. ಮಸೂರವೊಂದು ಬಿಸಿಲನ್ನು ಒಟ್ಟಾಗಿಸುವ ಹಾಗೆಯೇ ಎನ್ನಿ. ಈ ಕೇಂದ್ರ ಅಗಾಧ ಬಿಸಿಯೇರುತ್ತದೆ. ಆಂಧ್ರಪ್ರದೇಶದ ಕರ್ನೂಲ್ ಜಿಲ್ಲೆಯಲ್ಲಿ ಇರುವ ಸೌರ ವಿದ್ಯುತ್ ಕೇಂದ್ರ ದೇಶದಲ್ಲಿಯೇ ಅತಿ ದೊಡ್ಡದು. ಪಾವಗಡದ ಬಳಿಯೂ ಇಂತಹುದೇ ಒಂದು ಸೌರ ವಿದ್ಯುತ್ ಕೇಂದ್ರವಿದೆ. ಇವೆಲ್ಲವೂ ಕೇವಲ ವಿದ್ಯುತ್ತನ್ನಷ್ಟೆ ಉತ್ಪಾದಿಸಬಲ್ಲವು. ಪ್ರತಿದಿನವೂ ಸುಮಾರು ಎಂಟು ಮಿಲಿಯನ್ ಯೂನಿಟ್‌ಗಳನ್ನು ತಯಾರಿಸುವ ಕರ್ನೂಲಿನ ಸ್ಥಾವರ ಸುಮಾರು ಎರಡೂವರೆ ಸಾವಿರ ಎಕರೆ ಭೂಮಿಯನ್ನು ಆವರಿಸಿದೆ. ಇಷ್ಟು ಯೂನಿಟ್‌ಗಳನ್ನು ತಯಾರಿಸಲು ಬಳಸುವ ಫಲಕಗಳು ವಿದ್ಯುತ್ ತಯಾರಿಸುತ್ತಿರುವಾಗಲೇ ಬಿಸಿಯೇರುವುದುಂಟು. ಹೀಗಾಗಿ ಅವನ್ನು ತಣಿಸಲು ಮತ್ತು ಶುಚಿಗೊಳಿಸಲು ಸಾಕಷ್ಟು ನೀರೂ ಬೇಕು.

ಸೌರ ಫಲಕಗಳು ಬಿಸಿಯೇರಿದಾಗ ವಿದ್ಯುತ್ ತಯಾರಿಸುವ ಅವುಗಳ ಕ್ಷಮತೆ ಕಡಿಮೆ ಆಗುವುದರಿಂದ ವಿದ್ಯುತ್ ಸ್ಥಾವರಗಳಲ್ಲಿ ನೀರನ್ನು ಬಿಸಿ ಮಾಡುವಂತಹ ತಾಪೋತ್ಪಾದಕ ತಂತ್ರಗಳನ್ನು ಬಳಸುವುದಿಲ್ಲ. ಇದು ವಿದ್ಯುತ್ ಉತ್ಪಾದನೆಗೆ ಅಡ್ಡಿಯಾಗುತ್ತದೆ ಎನ್ನುವುದು ಕಾರಣ. ಈ ದೋಷವನ್ನೇ ಲಾಭದಾಯಕವಾಗಿ ಉಪಯೋಗಿಸುವುದು ಎಸ್ಕಾರಾ ತಯಾರಿಸಿರುವಂತಹ ಹೈಬ್ರಿಡ್ ಸಾಧನಗಳ ಯೋಚನೆ. ಎರಡೂ ತಂತ್ರಗಳನ್ನೂ ಒಂದೇ ಯಂತ್ರದಲ್ಲಿ ಅಳವಡಿಸುವ ಮೂಲಕ ಇದನ್ನು ಸಾಧಿಸಬಹುದು ಎಂದು ಎಸ್ಕಾರಾ ವರದಿ ಮಾಡಿದ್ದಾರೆ.

ಕನ್ನಡಿಯು ಬಿಸಿಲನ್ನೆಲ್ಲ ಕೇಂದ್ರೀಕರಿಸುವ ಸ್ಥಾನದಲ್ಲಿ ಇವರು ಇಟ್ಟಿರುವ ಸಾಧನ ಒಂದರೊಳಗೊಂದು ಇರುವ ತೊಟ್ಟಿಯಂತೆ ಇದೆ. ಒಳಗಿರುವ ತೊಟ್ಟಿಯ ಸೂರಿನಲ್ಲಿ ವಿದ್ಯುತ್ ಉತ್ಪಾದಿಸುವ ಫಲಕವಿದೆ. ಈ ಫಲಕ ವಿಶೇಷವಾದದ್ದು. ಇದು ಸುಮಾರು 85 ಡಿಗ್ರಿ ಸೆಲ್ಶಿಯಸ್ ಅಂದರೆ ಹೆಚ್ಚೂ ಕಡಿಮೆ ಕುದಿಯುವ ನೀರಿನ ಉಷ್ಣತೆಯಲ್ಲಿಯೂ ವಿದ್ಯುತ್ ತಯಾರಿಸಬಲ್ಲುದು. ಇನ್ನೂ ಬಿಸಿಯಾದರಷ್ಟೆ ಇದರ ಕ್ಷಮತೆ ಕಡಿಮೆ ಆಗುತ್ತದೆ. ಈ ವಿದ್ಯುತ್ ಉತ್ಪಾದಿಸುವ ತೊಟ್ಟಿಯ ಸುತ್ತಲೂ ಸ್ವಲ್ಪ ದೂರದಲ್ಲಿ ಇನ್ನೊಂದು ತೊಟ್ಟಿ ಇದೆ. ಆ ತೊಟ್ಟಿಯ ಗೋಡೆ ಕ್ವಾರ್ಟ್ಜ್ ಖನಿಜದಿಂದಾದ ಗೋಡೆ. ಬಿಸಿಲಿನಿಂದ ಇದು ಸುಮಾರು ಮುನ್ನೂರು ಡಿಗ್ರಿ ಸೆಲ್ಶಿಯಸ್ಸಿನಷ್ಟು ಬಿಸಿಯೇರಬಲ್ಲುದು. ಇದಕ್ಕೆ ಅಂಟಿಕೊಂಡಂತೆ ತಣ್ಣೀರನ್ನು ಸಾಗಿಸುವ ಕೊಳವೆಗಳನ್ನು ಅಳವಡಿಸಲಾಗಿದೆ. ಕೊಳವೆಗಳಲ್ಲಿ ಪಂಪು ಮಾಡಿದ ನೀರು ಗೋಡೆಯ ಬಿಸಿಯನ್ನು ಹೀರಿಕೊಂಡು, ಹಬೆಯಾಗಿ ಹೊರಹೋಗುತ್ತದೆ. ಈ ಹಬೆಯನ್ನು ವಿದ್ಯುತ್ ತಯಾರಿಸುವ ಟರ್ಬೈನುಗಳನ್ನು ತಿರುಗಿಸಲೋ ಅಥವಾ ಕಾರ್ಖಾನೆಗಳಲ್ಲಿ ಬೇರೆ ಕೆಲಸಗಳಿಗೋ ಬಳಸಬಹುದು.

ಈ ವ್ಯವಸ್ಥೆಯಿಂದಾಗಿ ಸೌರವಿದ್ಯುತ್ ತಯಾರಿಸುವ ಫಲಕಗಳು ಕೆಲಸ ಮಾಡದಷ್ಟು ಬಿಸಿಯೇರುವುದಿಲ್ಲ. ಜೊತೆಗೆ ವಿದ್ಯುತ್ ಉತ್ಪಾದನೆಗೆ ಸಿಕ್ಕದ ಶಕ್ತಿ ಹಬೆಯನ್ನು ಉತ್ಪಾದಿಸುತ್ತದೆ. ಹೀಗೆ ಒಟ್ಟಾರೆ ಬಿಸಿಲಿನ ಶೇಕಡ 65ರಷ್ಟು ಶಕ್ತಿಯನ್ನು ಲಾಭಕರವಾಗಿ ಬಳಸಬಹುದು ಎಂದು ಇವರು ಅಂದಾಜಿಸಿದ್ದಾರೆ. ಇವರು ರೂಪಿಸಿದ ಒಂದು ಡಿಶ್ ಆಂಟೆನಾ ಗಾತ್ರದ ಸಾಧನ ಗಂಟೆಗೆ ಏಳು ಕಿಲೋವ್ಯಾಟ್ ಶಕ್ತಿಯನ್ನು ಸಂಗ್ರಹಿಸಿತ್ತಂತೆ. ಇದರಲ್ಲಿ ವಿದ್ಯುತ್ತಿನ ಪ್ರಮಾಣ ಕಡಿಮೆ ಆದರೂ, ಹಬೆಯಿಂದ ಬಿಸಿನೀರನ್ನಷ್ಟೆ ಅಲ್ಲದೆ, ವಿದ್ಯುತ್ತನ್ನೂ ತಯಾರಿಸುವ ಸಾಧ್ಯತೆ ಇರುವುದರಿಂದ ಗೃಹಬಳಕೆಗಿಂತಲೂ ಕಾರ್ಖಾನೆಗಳಲ್ಲಿ ಹೆಚ್ಚು ಉಪಯುಕ್ತ ಎನಿಸುತ್ತದೆ. ಕೈಗಾರಿಕೆಗಳಲ್ಲಿ ಬಳಕೆಯಾಗುವ ಶಕ್ತಿಯ ಅರ್ಧಕ್ಕರ್ಧ ಹಬೆಯ ರೂಪದಲ್ಲಿ ಬಳಕೆಯಾಗುತ್ತದೆಯಷ್ಟೆ. ಹೀಗಾಗಿ ಈ ಹೈಬ್ರಿಡ್ ಸೌರ ವಿದ್ಯುತ್ ಸಾಧನಗಳು ಸೌರಶಕ್ತಿಯ ಬೆಲೆಯನ್ನು ಇನ್ನಷ್ಟು ಅಗ್ಗವಾಗಿಸಬಹುದೆನ್ನುವ ನಿರೀಕ್ಷೆ ಇದೆ.

ಎಸ್ಕಾರಾ ತಂಡ ನಿರ್ಮಿಸಿರುವ ಈ ಸಾಧನದ ವಿವರಗಳು ಸೆಲ್ ರಿಪೋರ್ಟ್ಸ್ ಫಿಸಿಕಲ್ ಸೈನ್ಸ್ ಪತ್ರಿಕೆಯ ಇತ್ತೀಚಿನ ಸಂಚಿಕೆಯಲ್ಲಿ ಪ್ರಕಟವಾಗಿವೆ. ❖

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಅಭಿಮತ



ಸುಭಾಷಿತ

'ನಾನು' ಎಂಬಲ್ಲಿಂದ ಅಸ್ವಸ್ಥತೆ ಆರಂಭವಾಗುತ್ತದೆ,
'ನಾವು' ಎಂಬಲ್ಲಿಂದ ಸ್ವಾಸ್ಥ್ಯ ಆರಂಭವಾಗುತ್ತದೆ.
-ಶಿವಾನಂದ ಸರಸ್ವತಿ

ಪಠ್ಯ ಪರಿಷ್ಕರಣೆ ರಗಳೆ ನಾಡಿನ ಘನತೆಗೆ ಮುಕ್ಕು

ಪಠ್ಯಪುಸ್ತಕ ಪರಿಷ್ಕರಣೆಯ ಹೆಸರಿನಲ್ಲಿ ರಾಜ್ಯದಲ್ಲಿ ನಡೆಯುತ್ತಿರುವ ವಿದ್ಯಮಾನಗಳು ವಿದ್ಯಾರ್ಥಿಗಳಲ್ಲಿ ಅನಗತ್ಯ ಗೊಂದಲ ಉಂಟುಮಾಡಿರುವುದರ ಜೊತೆಗೆ, ಶಿಕ್ಷಣ ಕ್ಷೇತ್ರದ ವರ್ಚಸ್ಸಿಗೆ ಧಕ್ಕೆ ತರುವಂತಿವೆ. ಕೊರೊನಾ ಅವಧಿಯಲ್ಲಿ ಕುಂಠಿತಗೊಂಡ ಕಲಿಕೆಯ ಅವಧಿಯನ್ನು ಸ್ವಲ್ಪವಾದರೂ ಸರಿದೂಗಿಸುವ ದೃಷ್ಟಿಯಿಂದ ಬೇಸಿಗೆ ರಜೆಯನ್ನು ಕಡಿಮೆ ಮಾಡಿದ್ದ ರಾಜ್ಯ ಸರ್ಕಾರವು ಎರಡು ವಾರ ಮೊದಲೇ ಶಾಲೆಗಳನ್ನು ಆರಂಭಿಸಿದೆ. ಆದರೆ, ಶಾಲೆಗಳನ್ನು ಆರಂಭಿಸುವಲ್ಲಿ ತೋರಿಸಿದ ಉತ್ಸಾಹವನ್ನು ಪಠ್ಯಪುಸ್ತಕಗಳನ್ನು ಒದಗಿಸುವ ದಿಸೆಯಲ್ಲಿ ತೋರಿಸಿಲ್ಲ. ಶಾಲೆಗಳು ಆರಂಭವಾದ ತಕ್ಷಣ ವಿದ್ಯಾರ್ಥಿಗಳ ಕೈಗೆ ಪುಸ್ತಕಗಳನ್ನು ಕೊಡಬೇಕಿದ್ದ ಸರ್ಕಾರ, ಪಠ್ಯ ಪರಿಷ್ಕರಣೆಯ ಹಗ್ಗಜಗ್ಗಾಟದಲ್ಲಿ ಕಾಲಹರಣ ಮಾಡುತ್ತಿದೆ. ಪಠ್ಯಪುಸ್ತಕ ಪರಿಷ್ಕರಣೆ ಪ್ರಕ್ರಿಯೆ ಈಗ ಶಿಕ್ಷಣ ಕ್ಷೇತ್ರಕ್ಕೆ ಸಂಬಂಧಿಸಿದ ಸಂಗತಿಯಾಗಿಯಷ್ಟೇ ಉಳಿದಿಲ್ಲ. ರಾಜಕೀಯ ಕೆಸರೆರಚಾಟದ ಕಾರಣದಿಂದಾಗಿ, ಪಠ್ಯಪುಸ್ತಕದ ಹೆಸರಿನಲ್ಲಿ ನಡೆಯುತ್ತಿರುವ ವಿದ್ಯಮಾನಗಳು ದೇಶದೆದುರು ರಾಜ್ಯದ ಘನತೆಯನ್ನು ಕುಗ್ಗಿಸುವಂತಿವೆ. ಪಠ್ಯ ಪರಿಷ್ಕರಣೆ ಚಟುವಟಿಕೆಗಳು ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ನಡೆಯಬೇಕು. ಪಠ್ಯಗಳು ಸಮಾಜದ ಬಹುತ್ವವನ್ನು, ನಾಡಿನ ಅನನ್ಯತೆಯನ್ನು ಹಾಗೂ ಪ್ರಾದೇಶಿಕ ವೈವಿಧ್ಯವನ್ನು ಒಳಗೊಳ್ಳಬೇಕು. ಸಾರ್ವಜನಿಕ ಅಭಿಪ್ರಾಯವನ್ನು ಗೌರವಿಸಿ ಪಠ್ಯಗಳನ್ನು ಪರಿಷ್ಕರಿಸುತ್ತಿರುವುದಾಗಿ ಹೇಳುತ್ತಿರುವವರು, ಪರಿಷ್ಕರಣೆಯ ಬಗೆಗಿನ ವಿಮರ್ಶಾತ್ಮಕ ಅಭಿಪ್ರಾಯಗಳಿಗೆ ಒರಟಾಗಿ ಪ್ರತಿಕ್ರಿಯಿಸುತ್ತಿದ್ದಾರೆ. ಈ ನಡವಳಿಕೆ ಪ್ರಜಾಸತ್ತಾತ್ಮಕವಾದುದಲ್ಲ, ಶೈಕ್ಷಣಿಕ ಶಿಸ್ತು-ಸೌಂದರ್ಯವನ್ನೂ ಒಳಗೊಂಡಿಲ್ಲ. ಪ್ರಸ್ತುತ ಕೈಬಿಟ್ಟಿರುವ ಹಾಗೂ ಸೇರ್ಪಡೆಗೊಂಡಿರುವ ಪಠ್ಯಗಳ ಲೇಖಕರ ಪಟ್ಟಿಯನ್ನು ಗಮನಿಸಿದರೆ, 'ಬಹುತ್ವದ ಪಠ್ಯ' ಏಕಮುಖಿ ಆಗುವತ್ತ ಸಾಗುತ್ತಿರುವಂತಿದೆ. ವಿದ್ಯಾರ್ಥಿಗಳ ಮೇಲೆ ಯಾವುದೇ ಒಂದು ಪಕ್ಷದ ರಾಜಕೀಯ ಸಿದ್ಧಾಂತಗಳನ್ನು ಹೇರುವುದು ತರವಲ್ಲ.

ಪ್ರಜಾಸತ್ತಾತ್ಮಕ ನಡವಳಿಕೆ ಹಾಗೂ ಎಲ್ಲರನ್ನೂ ಒಳಗೊಳ್ಳುವ ಪ್ರಯತ್ನ ಪ್ರಸ್ತುತ ಪಠ್ಯಪುಸ್ತಕ ಪರಿಷ್ಕರಣೆಯ ಸಂದರ್ಭದಲ್ಲಿ ಕಾಣಿಸುತ್ತಿಲ್ಲ

ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಮೊದಲು ಅನುಷ್ಠಾನಕ್ಕೆ ತಂದ ರಾಜ್ಯ ಎನ್ನುವ ಹೆಗ್ಗಳಿಕೆ ಕರ್ನಾಟಕದ್ದು ಎಂದು ರಾಜ್ಯ ಸರ್ಕಾರ ಹೇಳಿಕೊಂಡಿದೆ. ಅದರ ಹೊಸ ಶಿಕ್ಷಣ ಕ್ರಮವನ್ನು ಪ್ರಾಥಮಿಕ ಹಂತದಿಂದ ಜಾರಿಗೊಳಿಸಲು ಬೇಕಾದ ಅಗತ್ಯ ಸಿದ್ಧತೆಯನ್ನೇ ಸರ್ಕಾರ ಈವರೆಗೆ ನಡೆಸಿದಂತಿಲ್ಲ. ಹೊಸ ಶಿಕ್ಷಣ ನೀತಿಗೆ ಅನುಗುಣವಾಗಿ ಪಠ್ಯವನ್ನು ಪುನರ್ ರಚಿಸುವ ಅವಕಾಶ ಸರ್ಕಾರಕ್ಕಿತ್ತು. ಆಗ ಈಗಿನ ಪಠ್ಯಗಳಲ್ಲಿ ಇದ್ದಿರಬಹುದಾದ ಓರೆಕೋರೆಗಳನ್ನು ಸರಿಪಡಿಸಬಹುದಿತ್ತು. ಆ ಸಾಧ್ಯತೆಗಳನ್ನು ಬಿಟ್ಟುಕೊಟ್ಟಿರುವ ಸರ್ಕಾರ, ಆತುರದಲ್ಲಿ ಪಠ್ಯಪುಸ್ತಕಗಳ ಪರಿಷ್ಕರಣೆ ಮಾಡುತ್ತಿದೆ. ಕೋಟ್ಯಂತರ ರೂಪಾಯಿ ವೆಚ್ಚದಲ್ಲಿ ಪರಿಷ್ಕೃತ ಪಠ್ಯಗಳನ್ನು ಮುದ್ರಿಸುವುದನ್ನು ಸಾರ್ವಜನಿಕರ ತೆರಿಗೆ ಹಣದ ಅಪಬಳಕೆಯೆಂದೇ ಹೇಳಬೇಕಾಗುತ್ತದೆ. ವೈಯಕ್ತಿಕ ಪ್ರತಿಷ್ಠೆ ಹಾಗೂ ಹಟ ಸಾಧನೆಗಾಗಿ ಸಾರ್ವಜನಿಕರ ಹಣವನ್ನು ಪೋಲು ಮಾಡುವುದು ಸಲ್ಲದು. ಬರಗೂರು ರಾಮಚಂದ್ರಪ್ಪ ಅವರ ಅಧ್ಯಕ್ಷತೆಯಲ್ಲಿ ಈ ಮೊದಲು ನಡೆದ ಪಠ್ಯಪುಸ್ತಕ ಪರಿಷ್ಕರಣೆಯಲ್ಲಾದ ತಪ್ಪುಗಳನ್ನು ಈಗ ಸರಿಪಡಿಸುತ್ತಿರುವುದಾಗಿ ಸರ್ಕಾರ ಹೇಳುತ್ತಿದೆ. ತಪ್ಪುಗಳನ್ನು ಸರಿಪಡಿಸುವುದು ಸ್ವಾಗತಾರ್ಹ. ಬದಲಾವಣೆ ನಿರಂತರ ಪ್ರಕ್ರಿಯೆಯೂ ಹೌದು. ಆದರೆ, ಯಾವುದೇ ಬದಲಾವಣೆಯ ಪ್ರಕ್ರಿಯೆ ಪ್ರಜಾಸತ್ತಾತ್ಮಕವಾಗಿರಬೇಕು. ಬರಗೂರರ ನೇತೃತ್ವದಲ್ಲಿ ಪಠ್ಯ ಪರಿಷ್ಕರಣೆ ನಡೆದಾಗ, ಪ್ರತ್ಯೇಕ ಅಧ್ಯಕ್ಷರನ್ನೊಳಗೊಂಡ 27 ತಜ್ಞರ ಸಮಿತಿಗಳು ಕಾರ್ಯ ನಿರ್ವಹಿಸಿದ್ದವು. ಪರಿಷ್ಕರಣೆಗೆ ಸಂಬಂಧಿಸಿದಂತೆ ಪ್ರಾಥಮಿಕ ಹಾಗೂ ಪ್ರೌಢಶಾಲಾ ಶಿಕ್ಷಕರ ಅಭಿಪ್ರಾಯಗಳನ್ನು ಸಂಗ್ರಹಿಸಲಾಗಿತ್ತು. ವಿಷಯ ತಜ್ಞರು ಹಾಗೂ ಸಂಘ ಸಂಸ್ಥೆಗಳ ಮುಖಂಡರೊಂದಿಗೆ ಸಮಾಲೋಚನೆ ನಡೆಸಲಾಗಿತ್ತು. ಈ ಪ್ರಜಾಸತ್ತಾತ್ಮಕ ನಡವಳಿಕೆ ಹಾಗೂ ಎಲ್ಲರನ್ನೂ ಒಳಗೊಳ್ಳುವ ಪ್ರಯತ್ನ ಪ್ರಸ್ತುತ ಪರಿಷ್ಕರಣೆಯ ಸಂದರ್ಭದಲ್ಲಿ ಕಾಣಿಸುತ್ತಿಲ್ಲ.

ಪರಿಷ್ಕೃತ ಪಠ್ಯದ ಬಗ್ಗೆ ಸಾರ್ವಜನಿಕರು ಎತ್ತುತ್ತಿರುವ ಆಕ್ಷೇಪಗಳಿಗೆ ಸರ್ಕಾರ ನೀಡುತ್ತಿರುವ ಉತ್ತರಗಳು ಗೊಂದಲ ಹುಟ್ಟಿಸುವಂತಿವೆ. ಕೈಬಿಟ್ಟಿದ್ದ ಕೆಲವು ಪಠ್ಯಗಳನ್ನು ಸಾರ್ವಜನಿಕರ ವಿರೋಧದ ನಂತರ ಮತ್ತೆ ಸೇರಿಸಲಾಗಿದೆ. ಪಠ್ಯಪುಸ್ತಕ ಪರಿಷ್ಕರಣೆಗೆ ಸಂಬಂಧಿಸಿದಂತೆ ಎದುರಾಗಿರುವ ತಾತ್ವಿಕ ವಿರೋಧವನ್ನು ಸಾವಧಾನದಿಂದ ಪರಿಶೀಲಿಸುವ ಪ್ರಯತ್ನವನ್ನೂ ಸರ್ಕಾರ ಮಾಡುತ್ತಿಲ್ಲ. ವಿವಾದಕ್ಕೆ ಗುರಿಯಾಗಿರುವ ಸಮಿತಿಗೆ ದ್ವಿತೀಯ ಪಿಯುಸಿಯ ಇತಿಹಾಸ ಪಠ್ಯವನ್ನು ಪರಿಷ್ಕರಿಸುವ ಹೊಣೆಯನ್ನು ಸರ್ಕಾರ ವಹಿಸಿದೆ. 2022–23ರ ಸಾಲಿನಲ್ಲೇ ಇತಿಹಾಸದ ಪರಿಷ್ಕೃತ ಪಠ್ಯಪುಸ್ತಕ ಪ್ರಕಟಿಸಲು ಉದ್ದೇಶಿಸಿದೆ. ಈ ಪರಿಷ್ಕರಣೆ ಕಾರ್ಯ ಮುಗಿದು, ಪಠ್ಯಪುಸ್ತಕಗಳು ಮುದ್ರಣಗೊಂಡು, ಅವು ವಿದ್ಯಾರ್ಥಿಗಳ ಕೈಗೆ ಬರುವುದು ಯಾವಾಗ? ಪಠ್ಯಪುಸ್ತಕಗಳು ಮಕ್ಕಳ ಮನೋವಿಕಾಸಕ್ಕೆ ಪೂರಕವಾಗಿರಬೇಕು. ಆದರೆ, ಪಠ್ಯಪುಸ್ತಕ ಪರಿಷ್ಕರಣೆಯ ಹೆಸರಿನಲ್ಲಿ ನಡೆಯುತ್ತಿರುವ ವಿದ್ಯಮಾನಗಳು ಮಕ್ಕಳಲ್ಲಿ ಪಠ್ಯಪುಸ್ತಕಗಳ ಬಗ್ಗೆಯೇ ಹೇಸಿಗೆ ಹುಟ್ಟಿಸುವಂತಿವೆ. ಇದರ ಹೊಣೆಯನ್ನು ಸರ್ಕಾರವೇ ಹೊರಬೇಕು.

ದಿನದ ಟ್ವೀಟ್

ಎಲ್ಲೆಡೆಯೂ ಹಾವಳಿ

ಪಂಜಾಬ್‌ನ ಆರೋಗ್ಯ ಸಚಿವ ವಿಜಯ್ ಸಿಂಗ್ಲಾ ಅವರನ್ನು ಭ್ರಷ್ಟಾಚಾರದ ಆರೋಪದ ಮೇಲೆ ವಜಾ ಮಾಡಲಾಗಿದೆ. ಲಂಚದ ಹಾವಳಿಗೆ ಸಂಬಂಧಿಸಿದಂತೆ ಆಮ್ ಆದ್ಮಿ ಪಾರ್ಟಿಯು ನುಡಿದಂತೆ ನಡೆಯುತ್ತಿರುವುದು ಒಳ್ಳೆಯ ಬೆಳವಣಿಗೆ. ಇತರ ಪಕ್ಷಗಳೂ ಈ ಮಾರ್ಗವನ್ನು ಅನುಸರಿಸುತ್ತವೆಯೇ? ಅಂತೂ 'ಕಮಿಷನ್ ರಾಜ್' ಪ್ರತೀ ರಾಜ್ಯದಲ್ಲೂ ಇದೆ!

ಸಾಗರಿಕಾ ಘೋಷ್, ಪತ್ರಕರ್ತೆ

ಕಿಡಿನುಡಿ

ಹೋರ್ಡಿಂಗ್ ಹಾವಳಿಯ ಬಳಿಕ ಈಗ ಪಾದಚಾರಿಗಳು ರಸ್ತೆಗಳಲ್ಲಿ ನಡೆಯುವ ನಮ್ಮ ಹಕ್ಕನ್ನು ಒತ್ತಾಯಪೂರ್ವಕವಾಗಿ ಬಿಟ್ಟುಕೊಡುವಂತೆ, ಸೇತುವೆಗಳನ್ನು ಹತ್ತಲು ಹೆಣಗಾಡುವಂತೆ, ಕಾರ್ಪೊರೇಟ್ ಜಾಹೀರಾತುಗಳಿಗೆ ದಾರಿ ಮಾಡಿಕೊಡುವಂತೆ ಮಾಡಲಾಗುತ್ತಿದೆಯೇ ಮತ್ತು 40%ಗೆ ಹೊಸ ವಿಧಾನಗಳನ್ನು ಕಂಡುಕೊಳ್ಳಲಾಗುತ್ತಿದೆಯೇ...? ಬಸ್‌ಗಳ ಸಂಖ್ಯೆ ಹೆಚ್ಚಿಸಬೇಕು, ಬಿಎಂಟಿಸಿಯು ಇತರ ನಗರಗಳಿಂದ ಪಾಠ ಕಲಿಯಬೇಕು. ಕೊನೆಯ ತಾಣದವರೆಗೂ ಸಂಪರ್ಕ ಕಲ್ಪಿಸಲು ಅನುವಾಗುವಂತೆ ಶಟಲ್ ಬಸ್‌ಗಳನ್ನೂ ಪರಿಚಯಿಸಬೇಕು.

ಬೃಂದಾ ಅಡಿಗೆ, ಸಾಮಾಜಿಕ ಕಾರ್ಯಕರ್ತೆ

25 ವರ್ಷಗಳ ಹಿಂದೆ

ಭಾನುವಾರ, 25-5-1997

- **ಹಗರಣಗಳ ತನಿಖಾ ವರದಿ ವಿವರ ಬಹಿರಂಗ ಸಲ್ಲ: ಗುಜ್ರಾಲ್**

ನವದೆಹಲಿ, ಮೇ 24 (ಯುಎನ್‌ಐ)– ತನಿಖಾ ಸಂಸ್ಥೆಗಳು ತನಿಖಾ ವರದಿಗಳ ಪ್ರಮುಖ ಅಂಶಗಳನ್ನು ಮಾಧ್ಯಮಗಳಿಗೆ ರಹಸ್ಯವಾಗಿ ಬಹಿರಂಗಪಡಿಸದೆ ವಿಶ್ವಾಸಾರ್ಹತೆ ಉಳಿಸಿಕೊಳ್ಳುವತ್ತ ಮೌನವಾಗಿ ಕೆಲಸ ಮಾಡಬೇಕು ಎಂದು ಪ್ರಧಾನಿ ಐ.ಕೆ.ಗುಜ್ರಾಲ್ ಇಂದು ಇಲ್ಲಿ ಹೇಳಿದರು.

'ಪರಿಣಾಮಕಾರಿ ಹಾಗೂ ಜವಾಬ್ದಾರಿಯುತ ಆಡಳಿತ' ಕುರಿತ ಮುಖ್ಯಮಂತ್ರಿಗಳ ಹಾಗೂ ಕೇಂದ್ರಾಡಳಿತ ಪ್ರದೇಶಗಳ ಲೆಫ್ಟಿನೆಂಟ್ ಗವರ್ನರ್‌ಗಳ ಒಂದು ದಿನದ ಸಮ್ಮೇಳನವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ತನಿಖಾ ಸಂಸ್ಥೆಗಳ ಇಂತಹ ತನಿಖಾ ವರದಿಗಳ ಸೋರಿಕೆಯು ನ್ಯಾಯಾಲಯದಲ್ಲಿ ನಡೆಯುತ್ತಿರುವ ಮೊಕದ್ದಮೆಗಳನ್ನು ದುರ್ಬಲಗೊಳಿಸಬಹುದು ಎಂದು ಸಿಬಿಐಯ ಹೆಸರನ್ನು ಉಲ್ಲೇಖಿಸದೆ ಪ್ರಧಾನಿ ಗುಜ್ರಾಲ್ ಅವರು ನುಡಿದರು.

50 ವರ್ಷಗಳ ಹಿಂದೆ

ಗುರುವಾರ, 25-5-1972

- **ಆಡಳಿತ ಸ್ವಚ್ಛತೆಗಾಗಿ ರಾಜ್ಯದ ಅಧಿಕಾರಿಗಳ ಆಸ್ತಿ ತನಿಖೆಗೆ ಕ್ರಮ**

ಬೆಂಗಳೂರು, ಮೇ 24– ಆಡಳಿತವನ್ನು ಸ್ವಚ್ಛಗೊಳಿಸುವ ಬೃಹತ್ ಕಾರ್ಯಕ್ರಮದ ಅಂಗವಾಗಿ ಸರ್ಕಾರಿ ಅಧಿಕಾರಿಗಳ ಆಸ್ತಿಪಾಸ್ತಿಗಳ ಬಗ್ಗೆ ತನಿಖೆ ನಡೆಸಲು ರಾಜ್ಯ ಸರ್ಕಾರ ಯೋಚಿಸಿದೆ.

ಕಳೆದ 10 ವರ್ಷಗಳ ಅವಧಿಯ ಆಸ್ತಿಪಾಸ್ತಿಗಳ ಬಗ್ಗೆ ಘೋಷಿಸಬೇಕೆಂದು ಸರ್ಕಾರಿ ಗೆಜೆಟೆಡ್ ಅಧಿಕಾರಿಗಳಿಗೆ ಸರ್ಕಾರ ತಿಳಿಸಿದೆ ಎಂದು ಇಲ್ಲಿ ತಿಳಿದುಬಂದಿದೆ. ಘೋಷಿಸಲಾದ ಆಸ್ತಿಪಾಸ್ತಿಗಳ ಬಗ್ಗೆ ಪರಿಶೀಲನೆ ನಡೆಸಲು ಸೆಕ್ರೆಟೇರಿಯಟ್ ಮಟ್ಟದಲ್ಲಿ ವಿಶೇಷ ವ್ಯವಸ್ಥೆ ಮಾಡಲಾಗಿದೆ. ಪರಿಶೀಲನಾ ಘಟ್ಟದಲ್ಲಿ ಅನುಮಾನಕ್ಕೆ ಬರಲಾಗುವ ಎಲ್ಲ ಪ್ರಕರಣಗಳನ್ನೂ ಶೀಘ್ರ ತನಿಖೆಗಾಗಿ ಜಾಗೃತ ಆಯೋಗಕ್ಕೆ ಒಪ್ಪಿಸಲಾಗುವುದು.

- **ಚಂದ್ರಕಂಪನ ಪ್ರಯೋಗ ಭಾಗಶಃ ಯಶಸ್ವಿ**

ಹೂಸ್ಟನ್, ಮೇ 24– ವೈಜ್ಞಾನಿಕ ಉಪಕರಣವನ್ನಾಗಿ ಪುನರ್‌ರೂಪಿಸಿದ ಸಮರ ಶಸ್ತ್ರಾಸ್ತ್ರವೊಂದನ್ನು ಚಂದ್ರಗ್ರಹದಲ್ಲಿ ಮಂಗಳವಾರ ಬೆಳಿಗ್ಗೆ ಸ್ಫೋಟಿಸಲಾಯಿತು. ಆದರೆ ಪ್ರಯೋಗ ಭಾಗಶಃ ಯಶಸ್ವಿಯಾಯಿತು ಎಂದು ವಿಜ್ಞಾನಿಗಳು ಹೇಳಿದ್ದಾರೆ.

ಮೋಸದಾಟ ಹಾಗೂ ಬಾಜಿ ಹಾವಳಿಯಿಂದ ಆಟದ ನಂಬಿಕೆಗೆ ಪೆಟ್ಟು

ಐಪಿಎಲ್ ಸಿರಿ: ಇರಲಿ ನಂಬಿಕೆಯ ಗರಿ

ವಿಶ್ಲೇಷಣೆ

ಗಿರೀಶ ದೊಡ್ಡಮನಿ

'ಬಾಲ್ಯದಲ್ಲಿ ನಾನು ಕ್ರಿಕೆಟ್‌ನ ಅಪ್ಪಟ ಅಭಿಮಾನಿಯಾಗಿದ್ದೆ. ಆದರೆ, ಬುದ್ಧಿ ಬೆಳೆದಂತೆ ಮ್ಯಾಚ್ ಫಿಕ್ಸಿಂಗ್ ಪ್ರಕರಣಗಳನ್ನು ತಿಳಿದು ಕ್ರಿಕೆಟ್ ಪ್ರೀತಿ ಕಡಿಮೆಯಾಯಿತು. ಬೇರೆ ಕ್ರೀಡೆಗಳತ್ತ ಒಲವು ಬೆಳೆಯಿತು. ನಮ್ಮ ಕೈಯೊಳಗಿನ ಐದು ಬೆರಳುಗಳೂ ಒಂದೇ ತರಹ ಇರಲ್ಲ. ಅದೇ ರೀತಿ ಎಲ್ಲರೂ ಭ್ರಷ್ಟರಲ್ಲ ಅನ್ನೋದು ನಿಜ. ಆದರೆ, ನನ್ನ ತಲೆಯಲ್ಲಿ ಬೇರೂರಿರುವ ಅಪನಂಬಿಕೆಯು ಬಲಿತಿದೆ. ಕ್ರಿಕೆಟ್ ನೋಡುವಾಗ ಅನುಮಾನಗಳು ಕಾಡುತ್ತವೆ'–

ಇದು, ಬಾಲಿವುಡ್ ನಟಿ ತಾಪ್ಸಿ ಪನ್ನು ಈಚೆಗೆ ಸಂದರ್ಶನವೊಂದರಲ್ಲಿ ಹೇಳಿದ ಮಾತು. ಕ್ರಿಕೆಟ್ ಆಟಗಾರ್ತಿ ಮಿಥಾಲಿ ರಾಜ್ ಜೀವನಗಾಥೆ ಆಧಾರಿತ 'ಶಾಭಾಷ್ ಮೀತು' ಚಲನಚಿತ್ರದಲ್ಲಿ ಅವರು ನಾಯಕಿಯಾಗಿದ್ದಾರೆ. ಈ ಚಿತ್ರ ಇನ್ನಷ್ಟೇ ಬಿಡುಗಡೆಯಾಗಬೇಕಿದೆ.

ಇದು ತಾಪ್ಸಿ ಅವರೊಬ್ಬರದ್ದೇ ಅಭಿಪ್ರಾಯವಲ್ಲ. ಇವತ್ತು ಕ್ರಿಕೆಟ್ ಆಟವನ್ನು ನೋಡುವ ಮತ್ತು ಪ್ರೀತಿಸುವ ಹಲವರು ಹೇಳುವ ಮಾತಿದು. ಅದರಲ್ಲೂ ಇಂಡಿಯನ್ ಪ್ರೀಮಿಯರ್ ಲೀಗ್‌ನಂತಹ ಬಹುಕೋಟಿ ಆದಾಯ ತರುವ ಟೂರ್ನಿಯ ಬಗ್ಗೆಯಂತೂ ಇಂತಹ ಅನುಮಾನದ ಮಾತುಗಳು ಹೆಚ್ಚು ಕೇಳಿಬರುತ್ತಿವೆ. ಅದಕ್ಕೆ ಕಾರಣಗಳೂ ಇಲ್ಲದಿಲ್ಲ. 2013ರಲ್ಲಿಯ ಸ್ಪಾಟ್ ಫಿಕ್ಸಿಂಗ್‌ನಿಂದಾಗಿ ಬಿಸಿಸಿಐ ಆಡಳಿತವೇ ಬದಲಾಗುವಂತಾಗಿದ್ದು ಇತಿಹಾಸ. ಮಂಡಳಿಯಲ್ಲಿ ಹೊಸ ನಿಯಮಾವಳಿ ಅನುಷ್ಠಾನವಾದ ನಂತರ, ಸುಧಾರಣೆಯಾಗುತ್ತಿದೆ ಎಂಬ ನಂಬಿಕೆಯನ್ನು ಇತ್ತೀಚಿನ ಒಂದು ವರದಿ ಅಲುಗಾಡಿಸಿದೆ.

2019ರ ಐಪಿಎಲ್‌ನಲ್ಲಿ ಮ್ಯಾಚ್ ಫಿಕ್ಸಿಂಗ್ ನಡೆದಿತ್ತು. ಪಾಕಿಸ್ತಾನದಲ್ಲಿರುವ ಮಾಫಿಯಾದಿಂದ ಪಂದ್ಯದ ಫಲಿತಾಂಶಗಳ ಕುರಿತು ಬರುವ ಮಾಹಿತಿಗಳ ಆಧಾರದಲ್ಲಿ ಭಾರತದಲ್ಲಿ ಬೆಟ್ಟಿಂಗ್ ಜಾಲ ಕಾರ್ಯಾಚರಣೆ ಮಾಡುತ್ತಿತ್ತು. ಇದಕ್ಕೆ ಸಂಬಂಧಿಸಿದಂತೆ ಏಳು ಜನರನ್ನು ಬಂಧಿಸಿ, ಎರಡು ಎಫ್‌ಐಆರ್‌ಗಳನ್ನು ಕೇಂದ್ರ ತನಿಖಾ ಸಂಸ್ಥೆ (ಸಿಬಿಐ) ದಾಖಲಿಸಿಕೊಂಡಿದೆ. ಈ ಪ್ರಕರಣದಲ್ಲಿ ಬೆಟ್ಟಿಂಗ್ ಮತ್ತು ಮ್ಯಾಚ್ ಫಿಕ್ಸಿಂಗ್ ಜಾಲಗಳು ಬೆಸೆದುಕೊಂಡು ಕಾರ್ಯನಿರ್ವಹಿಸುತ್ತಿವೆ ಎಂದು ತನಿಖಾ ಸಂಸ್ಥೆ ಹೇಳಿರುವುದು ಆತಂಕ ಮೂಡಿಸಿರುವ ಸಂಗತಿ.

ಈ ಪಿಡುಗು ಮರುಕಳಿಸಲು ಪ್ರಮುಖ ಕಾರಣವೆಂದರೆ, ಹೊಸ ನಿಯಮಾವಳಿಯನ್ನು ಜಾರಿಗೊಳಿಸುವಲ್ಲಿ ಆಗಿರುವ ಲೋಪ. ಲೋಧಾ ಸಮಿತಿಯು ನೀಡಿದ್ದ ಶಿಫಾರಸುಗಳಲ್ಲಿ 'ಕ್ರಿಕೆಟ್ ಬೆಟ್ಟಿಂಗ್ ಅನ್ನು ಕಾನೂನುಬದ್ಧಗೊಳಿಸಬೇಕು. ಬಿಸಿಸಿಐ ಪದಾಧಿಕಾರಿಗಳು, ಆಡಳಿತ ಸಿಬ್ಬಂದಿ, ಆಟಗಾರರು ಇದರಲ್ಲಿ ಭಾಗಿಯಾಗುವಂತಿಲ್ಲ. ಅವರೆಲ್ಲರೂ ತಮ್ಮ ಆಸ್ತಿಪಾಸ್ತಿಯ ವಿವರ ಸಲ್ಲಿಸಬೇಕು. ಮ್ಯಾಚ್ ಫಿಕ್ಸಿಂಗ್ ಅನ್ನು ಅಪರಾಧವೆಂದು ಪರಿಗಣಿಸಿ ಶಿಕ್ಷೆ ನೀಡುವ ನಿಯಮ ತರಬೇಕು' ಎಂದು ಹೇಳಲಾಗಿತ್ತು.

ಬೆಟ್ಟಿಂಗ್ ಕಾನೂನುಬದ್ಧವಾದರೆ, ಸರ್ಕಾರದ ನಿಯಂತ್ರಣ ಇರುತ್ತದೆ. ಅಲ್ಲದೆ ಅದರಿಂದ ಬರುವ ಆದಾಯವು ಮಂಡಳಿಗೆ ಮತ್ತು ತೆರಿಗೆಯ ಹಣ ಸರ್ಕಾರಕ್ಕೆ ಸಂದಾಯವಾಗುತ್ತದೆ. ಪ್ರತಿವರ್ಷದ ಐಪಿಎಲ್ ಸಂದರ್ಭದಲ್ಲಿ ದೇಶದಾದ್ಯಂತ ನೂರಾರು ಕೋಟಿ ರೂಪಾಯಿ ಮೊತ್ತದ ಬೆಟ್ಟಿಂಗ್ ನಡೆಯುತ್ತಿದೆ. ಇದು ಮಾಫಿಯಾ ಕೈ ಸೇರುತ್ತಿದೆ. ಬಾಜಿ ಕಟ್ಟಿ ಕಳೆದುಕೊಂಡವರು ಬೀದಿಪಾಲಾಗುತ್ತಿದ್ದಾರೆ. ಒಂದೊಮ್ಮೆ ಬೆಟ್ಟಿಂಗ್ ಅನ್ನು ಕಾನೂನಿನ ಚೌಕಟ್ಟಿನೊಳಗೆ ತಂದರೆ, ಫಿಕ್ಸಿಂಗ್‌ನಂತಹ ಅಪರಾಧಗಳಿಗೆ ಕಡಿವಾಣ ಹಾಕಲು ಸುಲಭವಾಗುತ್ತದೆ.

'ಮ್ಯಾಚ್ ಫಿಕ್ಸಿಂಗ್ ಪ್ರಕರಣಗಳನ್ನು ಗಂಭೀರ ಅಪರಾಧಗಳೆಂದು ಪರಿಗಣಿಸಬೇಕು. ಅವುಗಳನ್ನು ಕಾನೂನಿನ ಅಡಿಯಲ್ಲಿ ತರಬೇಕು. ತಪ್ಪಿತಸ್ಥರನ್ನು ಕಠಿಣ ಶಿಕ್ಷೆಗೆ ಗುರಿಪಡಿಸಬೇಕೆಂದು ಕಾನೂನು ತಜ್ಞರು ಹಲವು ವರ್ಷಗಳಿಂದ ಹೇಳುತ್ತಿದ್ದಾರೆ. ಆದರೆ, ಈ ವಿಷಯದಲ್ಲಿ ಭಾರತದಲ್ಲಿ ಪೊಲೀಸರ ಕೈ ಕಟ್ಟಿಹಾಕಲಾಗಿದೆ' ಎಂದು ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ (ಐಸಿಸಿ) ಭ್ರಷ್ಟಾಚಾರ ತಡೆ ಘಟಕದ ಸಂಯೋಜಕ ಸ್ಟೀವ್ ರಿಚರ್ಡ್ಸನ್ ಈ ಹಿಂದೆಯೇ ಹೇಳಿದ್ದರು.

1999–2000ದಲ್ಲಿ ಮೊದಲ ಸಲ ಮ್ಯಾಚ್ ಫಿಕ್ಸಿಂಗ್ ಪ್ರಕರಣ ಬಯಲಾದ ನಂತರ, ಭಾರತದ ಕ್ರಿಕೆಟಿಗೆ ಮರುಜನ್ಮ ನೀಡಿದ ಶ್ರೇಯ ಸೌರವ್ ಗಂಗೂಲಿ ನಾಯಕತ್ವದ ತಂಡಕ್ಕೆ ಸಲ್ಲುತ್ತದೆ. ಆದರೆ, ಈಗ ಗಂಗೂಲಿಯವರೇ ಬಿಸಿಸಿಐಗೆ ಅಧ್ಯಕ್ಷರಾಗಿರುವ ಕಾಲಘಟ್ಟದಲ್ಲಿಯೇ ಆಟದ ನಂಬಿಕೆಯ ತಳಹದಿ ಅಲುಗಾಡುತ್ತಿರುವುದು ವಿಪರ್ಯಾಸ. ಅವರ ಬಳಗದಲ್ಲಿ ಆಡಿದ್ದ ಸಚಿನ್ ತೆಂಡೂಲ್ಕರ್, ಜಾವಗಲ್ ಶ್ರೀನಾಥ್, ಅನಿಲ್ ಕುಂಬ್ಳೆ, ರಾಹುಲ್ ದ್ರಾವಿಡ್, ವಿವಿಎಸ್ ಲಕ್ಷ್ಮಣ್, ಜಹೀರ್ ಖಾನ್, ವೀರೇಂದ್ರ ಸೆಹ್ವಾಗ್, ಮಹೇಂದ್ರಸಿಂಗ್ ಧೋನಿ ಅವರ ಯೋಗದಾನವನ್ನು ಕ್ರಿಕೆಟ್ ಲೋಕ ಮರೆಯಲು ಸಾಧ್ಯವಿಲ್ಲ. ಈ ದಿಗ್ಗಜರಲ್ಲಿ ಬಹುತೇಕರು ಈಗ ಪ್ರಮುಖ ಸ್ಥಾನಗಳಲ್ಲಿದ್ದಾರೆ. ಇಷ್ಟಾದರೂ ಯಾರೂ ಈ ಫಿಕ್ಸಿಂಗ್ ಮತ್ತು ಬೆಟ್ಟಿಂಗ್ ಪಿಡುಗಿನ ಬಗ್ಗೆ ಧ್ವನಿ ಎತ್ತುತ್ತಿಲ್ಲ.

ದಿನದಿಂದ ದಿನಕ್ಕೆ ಆಕ್ಟೋಪಸ್‌ನಂತೆ ಬೆಳೆಯುತ್ತಿರುವ ಈ ಪಿಡುಗಿನಿಂದಾಗಿ ಕ್ರಿಕೆಟ್ ಬಗ್ಗೆ ಜನಸಾಮಾನ್ಯರು ಹಗುರವಾಗಿ ಮಾತಾಡುವಂತಾಗಿದೆ. ಜನರ ಅನುಮಾನಗಳಿಗೆ ಪುಷ್ಟಿ ನೀಡುವಂತಹ ಕೆಲವು ಘಟನೆಗಳೂ ಕ್ರೀಡಾಂಗಣದಲ್ಲಿ ನಡೆದಿವೆ.

ಹೋದ ವರ್ಷದ ಟೂರ್ನಿಯಲ್ಲಿ ಪಂದ್ಯವೊಂದರ ಮುನ್ನಾದಿನವೇ ತಂಡವೊಂದರ ಸ್ಕೋರ್ ಅನ್ನು ಟ್ವೀಟ್ ಮಾಡಿದ್ದ ಮುಂಬೈ ಇಂಡಿಯನ್ಸ್, ಸ್ವಲ್ಪ ಹೊತ್ತಿನ ನಂತರ ಸಂದೇಶ ಅಳಿಸಿಹಾಕಿತ್ತು. ಆದರೆ ಟ್ವಿಟರ್‌ನಲ್ಲಿ ಮುಂಬೈ ತಂಡದ ವಿರುದ್ಧ ಟೀಕೆಗಳ ಮಳೆಯೇ ಸುರಿದಿತ್ತು. ಈ ಬಾರಿಯ ಟೂರ್ನಿಯಲ್ಲಿ ಆಡುತ್ತಿರುವ ಎರಡು ಹೊಸ ತಂಡಗಳ ಪೈಕಿ ಒಂದನ್ನು ಖರೀದಿಸಿರುವ ಸಂಸ್ಥೆಯೊಂದರ ಕುರಿತು ಐಪಿಎಲ್‌ನ ಮಾಜಿ ಮುಖ್ಯಸ್ಥ ಲಲಿತ್ ಮೋದಿ ಅವರು ಮಾಡಿದ್ದ ಟ್ವೀಟ್ ಗಮನ ಸೆಳೆದಿತ್ತು.

'ಐಪಿಎಲ್ ತಂಡವನ್ನು ಈಗ ಬೆಟ್ಟಿಂಗ್ ಕಂಪನಿಗಳೂ ಖರೀದಿಸಬಹುದು ಎಂದು ನನಗನಿಸುತ್ತಿದೆ. ಈಚೆಗೆ ತಂಡವನ್ನು ಬಿಡ್‌ನಲ್ಲಿ ಪಡೆದ ಕಂಪನಿಯು ದೊಡ್ಡ ಬೆಟ್ಟಿಂಗ್ ಕಂಪನಿಯ ಒಡೆತನವನ್ನೂ ಹೊಂದಿದೆ. ಮುಂದೇನು? ಬಿಡ್ ನಿರ್ಣಯದ ಕುರಿತು ಬಿಸಿಸಿಐ ಪೂರ್ವಾಭ್ಯಾಸ ಮಾಡಿಲ್ಲವೇ? ಭ್ರಷ್ಟಾಚಾರ ತಡೆ ಘಟಕ ಇಂತಹ ಸಂದರ್ಭದಲ್ಲಿ ಏನು ಮಾಡಿತು?' ಎಂದು ಟ್ವೀಟ್‌ನಲ್ಲಿ ಪ್ರಶ್ನಿಸಿದ್ದರು.

ಇಂತಹ ಘಟನೆಗಳಿಂದಾಗಿ ಅನುಮಾನದ ಹುತ್ತ ಬೆಳೆಯುತ್ತಲೇ ಹೋಗುತ್ತಿದೆ. ಪಂದ್ಯಗಳಲ್ಲಿ ಫೀಲ್ಡರ್‌ಗಳು ಸುಲಭ ಕ್ಯಾಚ್ ಬಿಟ್ಟಾಗ, ಬೌಲರ್‌ಗಳು ಪದೇ ಪದೇ ನೋಬಾಲ್, ವೈಡ್ ಬಾಲ್ ಹಾಕಿದಾಗ, ಒಳ್ಳೆಯ ಲಯದಲ್ಲಿರುವ ಬ್ಯಾಟರ್ ದಿಢೀರ್ ಔಟಾದಾಗ ಮತ್ತು ಮಿಸ್‌ಫೀಲ್ಡಿಂಗ್ ಮಾಡಿದಾಗ ಸಂಶಯದ ದೃಷ್ಟಿ ಬಲವಾಗುತ್ತದೆ. ಈ ಬಾರಿಯ ಟೂರ್ನಿಯ 70 ಲೀಗ್ ಪಂದ್ಯಗಳು ಮುಗಿದಿವೆ. ಸಾಮಾಜಿಕ ಜಾಲತಾಣಗಳಲ್ಲಿ ಪ್ರತಿಯೊಂದು ಪಂದ್ಯದ ಫಲಿತಾಂಶದ ಕುರಿತು ನಡೆಯುವ ಚರ್ಚೆಯಲ್ಲಿ ಇಂತಹ ಅನುಮಾನಗಳು ಇಣುಕಿರುವುದು ಗಮನಾರ್ಹ. ಇದು, ಇವತ್ತಲ್ಲ ನಾಳೆ ಕ್ರಿಕೆಟ್‌ಗೆ ಮುಳುವಾಗುವುದರಲ್ಲಿ ಅನುಮಾನವೇ ಇಲ್ಲ.

ಯುರೋಪ್, ಅಮೆರಿಕದಲ್ಲಿ ಫುಟ್‌ಬಾಲ್ ಮತ್ತು ಬ್ಯಾಸ್ಕೆಟ್‌ಬಾಲ್ ಲೀಗ್‌ಗಳಲ್ಲಿ ಐಪಿಎಲ್‌ಗಿಂತಲೂ ಐದು ಪಟ್ಟು ಹೆಚ್ಚು ಆದಾಯ ಹರಿದುಬರುತ್ತದೆ. ಅಲ್ಲಿಯ ಪಂದ್ಯಗಳ ಮೇಲೂ 'ಲೀಗಲ್ ಬೆಟ್ಟಿಂಗ್' ನಡೆಯುತ್ತದೆ. ಅಕ್ರಮ ಬೆಟ್ಟಿಂಗ್ ವಿರುದ್ಧ ಕಠಿಣ ಕ್ರಮ ಜರುಗಿಸಲಾಗುತ್ತದೆ. ಆದ್ದರಿಂದಲೇ ಆ ಲೀಗ್‌ಗಳ ಕುರಿತು ಜನಾಭಿಪ್ರಾಯ ಕುಂದಿಲ್ಲ. ವರ್ಷದಿಂದ ವರ್ಷಕ್ಕೆ ವರ್ಚಸ್ಸು ಹೆಚ್ಚಿಸಿಕೊಳ್ಳುವುದರ ಜೊತೆಗೆ, ಆಟಗಾರರ ಗಳಿಕೆಯೂ ಮುಗಿಲಮುಖಿಯಾಗಿದೆ.

ಅಲ್ಲಿಯ ಲೀಗ್‌ಗಳಿಂದ ಪ್ರೇರಣೆಗೊಂಡು ಆರಂಭವಾಗಿರುವ ಐಪಿಎಲ್ ಕೂಡ ಅಂತಹ ಗಟ್ಟಿ ನಂಬಿಕೆಯನ್ನು ಉಳಿಸಿಕೊಳ್ಳಬೇಕಾದ ತುರ್ತು ಅಗತ್ಯ ಈಗ ಇದೆ. ಏಕೆಂದರೆ ಐಪಿಎಲ್‌ನಿಂದಾಗಿ ಬಡ ಕುಟುಂಬದ ಪ್ರತಿಭೆಗಳಾದ ಮೊಹಮ್ಮದ್ ಸಿರಾಜ್, ಯಶಸ್ವಿ ಜೈಸ್ವಾಲ್ ಅವರಂತಹವರೂ ಕೋಟ್ಯಧಿಪತಿಗಳಾಗಿದ್ದಾರೆ. ಸಿನಿಮಾ, ಟಿ.ವಿ. ಸೀರಿಯಲ್‌ಗಳಿಂದಾಚೆ ಕುಟುಂಬಸಮೇತ ಆಸ್ವಾದಿಸುವ ಮನರಂಜನೆಯಾಗಿಯೂ ಕ್ರಿಕೆಟ್ ಬೆಳೆದಿದೆ. ಬಿಸಿಸಿಐ ಶ್ರೀಮಂತ ಕ್ರೀಡಾಸಂಸ್ಥೆಗಳಲ್ಲಿ ಒಂದಾಗಿದೆ. ಇದೆಲ್ಲವೂ ಉಳಿಯಬೇಕಾದರೆ ತಾಪ್ಸಿ ಪನ್ನು ಸೇರಿದಂತೆ ಹಲವರ ಮನದಲ್ಲಿರುವ ಅನುಮಾನದ ಬೇರುಗಳನ್ನು ಕಿತ್ತುಹಾಕಿ, ವಿಶ್ವಾಸ ಚಿಗುರಿಸಬೇಕು. ಕ್ರಿಕೆಟ್ ಮತ್ತು ಕ್ರಿಕೆಟಿಗರನ್ನು ತಾರಾಪಟ್ಟಕ್ಕೇರಿಸಿ ಆರಾಧಿಸುವ ಅಭಿಮಾನಿಗಳ ಕಣ್ಣಿಗೆ ಮಣ್ಣೆರಚುವ ಮೋಸದಾಟಕ್ಕೆ ಅಂಕುಶ ಹಾಕಲು ಈಗಲಾದರೂ ಇಚ್ಛಾಶಕ್ತಿ ತೋರಬೇಕು.

ಚುರುಮುರಿ

ಕುಟುಂಬ ಕಲ್ಯಾಣ

• ಮಣ್ಣೆರಾಜು

ಶಾಸಕರ ಮನೆಯ ಕುಟುಂಬ ಕಲಹ ಹೊಸಿಲು ದಾಟಿತ್ತು. ಶಾಸಕರ ಪುತ್ರ ಮಾತೃಪಕ್ಷ ತ್ಯಜಿಸಿ ಶತ್ರುಪಕ್ಷಕ್ಕೆ ಸೇರ್ಪಡೆಯಾಗಿದ್ದ.

ಮಗನನ್ನೂ ಶಾಸಕನನ್ನಾಗಿ ಮಾಡಿ ತಮ್ಮೊಂದಿಗೆ ವಿಧಾನಸೌಧಕ್ಕೆ ಕರೆದೊಯ್ಯಬೇಕೆಂಬ ಕನಸು ಶಾಸಕರಿಗಿತ್ತು. ಅವರ ಪತ್ನಿಯು ಮಗನಿಗಾಗಿ ದೇವರಿಗೆ ಹರಕೆ ಹೊತ್ತಿದ್ದರು. ಮಗನೂ ಕಾರ್ಯಕರ್ತರನ್ನು ಸಂಘಟಿಸಿ ಪಕ್ಷದ ಕ್ಷೇತ್ರದಲ್ಲಿ ಕೃಷಿ ಮಾಡಲು ನೆಲ ಹಸನು ಮಾಡಿಕೊಂಡಿದ್ದ. ಆದರೆ, ಕುಟುಂಬಕ್ಕೊಂದು ರೇಷನ್ ಕಾರ್ಡ್ ರೀತಿ, ಕುಟುಂಬಕ್ಕೊಂದು ಟಿಕೆಟ್ ಅಂತ ಪಕ್ಷ ನಿರ್ಧಾರ ಮಾಡಿದ್ದು ಶಾಸಕರ ಕುಟುಂಬದ ಆಸೆಗೆ ತಣ್ಣೀರು ಎರಚಿದಂತಾಯ್ತು.

'ರಾಜಕಾರಣದಿಂದ ನಿವೃತ್ತರಾಗಿ, ನನಗೆ ಟಿಕೆಟ್ ಕೊಡಿಸಿ' ಎಂದು ಶಾಸಕರಿಗೆ ಪುತ್ರ ಗಂಟುಬಿದ್ದಿದ್ದ.

ತಮ್ಮ ಪದವಿಗೇ ಕುತ್ತು ಬಂದಿದ್ದನ್ನು ಶಾಸಕರು ಸಹಿಸಲಿಲ್ಲ. 'ಮಕ್ಕಳಿಗೆ ಹಂಚಲು ಅಸೆಂಬ್ಲಿ ಸೀಟು ಪಿತ್ರಾರ್ಜಿತ ಆಸ್ತಿಯಲ್ಲ, ಬೇಕಾದ್ರೆ ಹಣ, ಆಸ್ತಿಯಲ್ಲಿ ಪಾಲು ಕೊಡ್ತೀನಿ' ಎಂದುಬಿಟ್ಟರು.

ತಂದೆ- ಮಗನ ಅಧಿಕಾರ ಜಗಳದಿಂದ ಶಾಸಕರ ಪತ್ನಿ ಅಪಾರ ನೊಂದರು. ಪತಿಯ ಪದವಿ ಉಳಿಸು, ಪುತ್ರನಿಗೆ ಪದವಿ ಕರುಣಿಸು ಎಂದು ಮನೆ ದೇವರಿಗೆ ತುಪ್ಪದ ದೀಪ ಹಚ್ಚಿದರು.

ಜಗಳ ವಿಕೋಪಕ್ಕೆ ತಿರುಗಿ, ಮಗ ಮನೆ ಬಿಟ್ಟು ಹೋಗ್ತೀನಿ ಅಂತ ಹೊರಟ. ತಡೆದು ನಿಲ್ಲಿಸಿದ ಶಾಸಕರ ಪತ್ನಿ, 'ಮನೆ ಬಿಟ್ಟು ಹೋಗಬೇಡ, ಪಕ್ಷ ಬಿಟ್ಟು ಹೋಗು...' ಅಂದರು.

ತಾಯಿಯ ಆಸೆ, ಅಜ್ಞೆಯಂತೆ ಮಗ ಪರಪಕ್ಷಕ್ಕೆ ಸೇರ್ಪಡೆಯಾಗಿ ಆ ಪಕ್ಷದಲ್ಲಿ ಟಿಕೆಟ್ ಪಡೆದು ಚುನಾವಣೆಗೆ ಸ್ಪರ್ಧಿಸಲು ಸಿದ್ಧನಾಗಿದ್ದಾನೆ.

ಒಂದು ಪಕ್ಷದಿಂದ ಒಂದೇ ಕುಟುಂಬದ ಇಬ್ಬರಿಗೆ ಟಿಕೆಟ್ ಇಲ್ಲ, ಆದರೆ, ಬೇರೆ ಪಕ್ಷದಿಂದ ಸ್ಪರ್ಧೆ ಮಾಡಬಹುದಲ್ಲವೇ?

ಮೇಲ್ನೋಟಕ್ಕೆ ಶಾಸಕರ ಮನೆಯಲ್ಲಿ ಕುಟುಂಬ ಕಲಹ, ಒಳನೋಟದಲ್ಲಿ ಅದು ಕುಟುಂಬ ಕಲ್ಯಾಣ...!

ಸಂಗತ

ಜಮೀನಿನ ಪೋಡಿ ನೀವೇ ಮಾಡಿ!

ತಮ್ಮ ಜಮೀನಿನ ಪೋಡಿ ನಕ್ಷೆಯನ್ನು ಸ್ವತಃ ತಯಾರಿಸಿಕೊಳ್ಳಲು ಅವಕಾಶ ಕಲ್ಪಿಸುವ ಹೊಸ ವ್ಯವಸ್ಥೆಯು ಭೂ ದಾಖಲಾತಿಯಲ್ಲಿ ಒಂದು ಮಹತ್ವದ ಹೆಜ್ಜೆ

• ಮಲ್ಲಿಕಾರ್ಜುನ ಹೆಗ್ಗಳಗಿ

ಭೂ ಒಡೆತನ ಹೊಂದಿರುವವರು ತಮ್ಮ ಜಮೀನಿನ ಪೋಡಿ ನಕ್ಷೆಯನ್ನು (ಸ್ಕೆಚ್) ತಾವೇ ತಯಾರಿಸಿಕೊಳ್ಳಬಹುದಾದ ಸ್ವಯಂ ಸೇವೆಯ ಹೊಸ ವ್ಯವಸ್ಥೆಯನ್ನು ಕಂದಾಯ ಇಲಾಖೆ ಸಿದ್ಧಪಡಿಸಿದ್ದು, ಏಪ್ರಿಲ್ 25ರಿಂದ ಜಾರಿಗೆ ಬಂದಿದೆ. ಭೂ ದಾಖಲಾತಿಯಲ್ಲಿ ನಿಜಕ್ಕೂ ಇದು ಒಂದು ಮಹತ್ವದ ಹೆಜ್ಜೆ.

ಇದಕ್ಕಾಗಿ ಕಂದಾಯ ಇಲಾಖೆ 'ಸ್ವಾವಲಂಬಿ' ಎಂಬ ಹೆಸರಿನ ಆ್ಯಪ್ ಒಂದನ್ನು ಅಭಿವೃದ್ಧಿಪಡಿಸಿದೆ. ಈ ಆ್ಯಪ್ ನಿರ್ವಹಣೆ ಕೂಡ ಸರಳವಾಗಿದೆ. ಇದನ್ನು ಕಲಿತುಕೊಂಡರೆ ರೆವಿನ್ಯೂ ಸ್ಕೆಚ್ ಸ್ವತಃ ತಯಾರಿಸಬಹುದು ಅಥವಾ ಬಲ್ಲವರಿಂದ ಸ್ಕೆಚ್ ತಯಾರಿಸಿಕೊಳ್ಳಬಹುದು.

ಭೂಮಿಯ ಬಗ್ಗೆ ಎಲ್ಲರಿಗೂ ಭಾವನಾತ್ಮಕ ಗೌರವ ಇದೆ. ಆದರೆ ಅದು ಭೌತಿಕವಾಗಿ ದೊಡ್ಡ ಸಂಪತ್ತು ಎಂಬುದನ್ನು ಮರೆಯಬಾರದು. ಕುಟುಂಬದ ಸದಸ್ಯರ ಪಾಲುಗಾರಿಕೆ, ಭೂ ಆಸ್ತಿಯ ಕೆಲವು ಭಾಗ ಮಾರಾಟ, ದಾನಪತ್ರ, ನಿವೇಶನಕ್ಕೆ ಬಳಕೆ, ವಾಣಿಜ್ಯ ಉದ್ದೇಶಕ್ಕೆ ಭೂ ಪರಿವರ್ತನೆ ಹೀಗೆ ಅನೇಕ ಚಟುವಟಿಕೆಗಳಿಗೆ ನಕ್ಷೆ ತೀರಾ ಅವಶ್ಯ. ಅದಿಲ್ಲದೆ ಯಾವುದೇ ದಾಖಲೆ ಸಿದ್ಧವಾಗುವುದಿಲ್ಲ.

ಸಹೋದರರು, ಸಂಬಂಧಿಕರು ಮನೆಯಲ್ಲಿಯೇ ಕುಳಿತು ತಮ್ಮ ಜಮೀನಿನ ಭಾಗ ಮಾಡಿಕೊಳ್ಳಲು ಇದು ಅವಕಾಶ ಕಲ್ಪಿಸಿದೆ. ಉದಾಹರಣೆಗೆ, ಮನೆಯಲ್ಲಿ ಇಬ್ಬರು ಸಹೋದರರು, ಒಬ್ಬ ಸಹೋದರಿ, ತಮ್ಮ 5 ಎಕರೆ ಭೂಮಿಯನ್ನು ಯಾರಿಗೆ ಎಷ್ಟು ಭಾಗ ಎಂಬುದನ್ನು ನಿರ್ಧರಿಸಿ ಸ್ಕೆಚ್ ಸಿದ್ಧಪಡಿಸಬಹುದು. ಎಲ್ಲರೂ ಒಪ್ಪಿದ ನಂತರ ಸ್ಕೆಚ್ ಅನ್ನು ತಹಶೀಲ್ದಾರ್ ಕಚೇರಿಯ ಭೂ ದಾಖಲೆಗಳ ವಿಭಾಗಕ್ಕೆ ಅಪ್‌ಲೋಡ್ ಮಾಡಿದರೆ ಸಾಕು. ನಂತರ ನೋಂದಣಿ ಇಲಾಖೆಯಲ್ಲಿ ಆ ಸ್ಕೆಚ್‌ನ ಗಡಿಗಳಿಗೆ (ಬೌಂಡರಿ) ಅನುಗುಣವಾಗಿ ನೋಂದಣಿ ಮಾಡಲಾಗುತ್ತದೆ.

ಆಸ್ತಿ ಸರ್ವೆ ನಡೆಸಿ, ಸ್ಕೆಚ್ ಸಿದ್ಧಪಡಿಸಲು ಹಿಂದೆ 6 ತಿಂಗಳಿನಿಂದ ಒಂದು ವರ್ಷ ಬೇಕಾಗುತ್ತಿತ್ತು. ಈ ಕೆಲಸ ಮಾಡಿಸಿಕೊಳ್ಳಲು ಸಿಬ್ಬಂದಿಗೆ ದೊಡ್ಡ ಮೊತ್ತದಲ್ಲಿ 'ಖುಷಿ' ಕೊಡಬೇಕಾಗುತ್ತಿತ್ತು.

ಈ ಗೋಜಲು, ರಗಳೆಯಿಂದ ಬೇಸತ್ತು ಅನೇಕ ಕುಟುಂಬಗಳು ಮೌಖಿಕ ಒಪ್ಪಂದ ಮಾಡಿಕೊಂಡು ಸಾಗುವಳಿ ಮಾಡುತ್ತಿವೆ. ದಿನ ಕಳೆದಂತೆ ಅಧಿಕೃತ ದಾಖಲೆ ಇಲ್ಲದ್ದಕ್ಕೆ ಬಹಳಷ್ಟು ವ್ಯಾಜ್ಯಗಳು ಹುಟ್ಟಿಕೊಂಡಿವೆ. ನ್ಯಾಯಾಲಯಗಳಲ್ಲಿ ಪ್ರತಿಶತ 60ರಷ್ಟು ವ್ಯಾಜ್ಯಗಳು ಭೂಮಿಯ ಪಾಲುದಾರಿಕೆಗೆ ಸಂಬಂಧಿಸಿವೆ ಎಂದು ವರದಿಯೊಂದು ಹೇಳಿದೆ. ಇದು ಈ ಸಮಸ್ಯೆಯ ಗಂಭೀರತೆಗೆ ಸಾಕ್ಷಿಯಾಗಿದೆ.

ಭೂ ಒಡೆತನದ ಮುಖ್ಯ ದಾಖಲೆಯಾದ ಉತಾರದಲ್ಲಿ (ಆರ್‌ಟಿಸಿ) ಮಾಲೀಕ ಹೊಂದಿದ ಭೂಮಿಯ ವ್ಯಾಪ್ತಿಯು ಎಕರೆ ಮತ್ತು ಗುಂಟೆಯಲ್ಲಿ ದಾಖಲಾಗಿರುತ್ತದೆ. ಆದರೆ ವಾಸ್ತವದಲ್ಲಿ ಅಳತೆ ಹೆಚ್ಚು ಅಥವಾ ಕಡಿಮೆಯಾಗಿರುತ್ತದೆ. ಅನಧಿಕೃತ ಒತ್ತುವರಿಯಿಂದ ಈ ವ್ಯತ್ಯಾಸ ಉಂಟಾಗಿರುತ್ತದೆ. ಇದನ್ನು ಸರಿಪಡಿಸದೆ ಪೋಡಿ ನಕ್ಷೆ ಸಿದ್ಧಪಡಿಸಲು ಸಾಧ್ಯವಾಗುವುದಿಲ್ಲ. ಇದೊಂದು ದೊಡ್ಡ ಸವಾಲು. ಇದನ್ನು ಪರಿಹರಿಸುವ ವಿಧಾನವನ್ನೂ ಸರಳೀಕರಣಗೊಳಿಸಬೇಕು.

ಭೂ ಮಾಪನದಲ್ಲಿ ತೀರಾ ಅಲ್ಪಸ್ವಲ್ಪ ವ್ಯತ್ಯಾಸ ಇದ್ದರೆ ಅದನ್ನು ಪರಿಗಣಿಸದೇ ಇರುವುದು, ಹೆಚ್ಚು ವ್ಯತ್ಯಾಸ ಕಂಡುಬಂದಾಗ ಖರಾಬು ಭೂಮಿ ಎಂದು ಪರಿಗಣಿಸುವ ವಿಧಾನವನ್ನು ಕಾನೂನುಬದ್ಧಗೊಳಿಸಬೇಕು. ಅಂದರೆ ಮಾತ್ರ ನಿಜವಾದ ಸರಳ ಪೋಡಿಗೆ ಅರ್ಥ ಬರುತ್ತದೆ.

ಪ್ರತೀ ಭೂ ನಿವೇಶನದ ನಾಲ್ಕು ಬದಿಗಳಲ್ಲಿ ಕನಿಷ್ಠ ಒಂದು ಬದಿಯಲ್ಲಿ ಅತಿಕ್ರಮಣ ಅಥವಾ ಬೇರೆಯವರಿಂದ ಆಕ್ರಮಣ ಆಗಿರುವ ತಕರಾರು ಬಹಳ ಇವೆ. ತಂತ್ರಜ್ಞಾನವನ್ನು ಸಮರ್ಪಕವಾಗಿ ಬಳಸುವುದರಿಂದ ಇದನ್ನು ಸರಿಪಡಿಸಬಹುದು.

ಕೃಷಿ ಭೂಮಿಯನ್ನು ಕೃಷಿಯೇತರ ಭೂಮಿಯಾಗಿ ಕೇವಲ 3 ದಿನಗಳಲ್ಲಿ ಪರಿವರ್ತಿಸುವ ಸರಳ ವಿಧಾನವನ್ನೂ ಜಾರಿಗೆ ತರಲು ಕಂದಾಯ ಇಲಾಖೆಯು ಕರ್ನಾಟಕ ಲ್ಯಾಂಡ್ ರೆವಿನ್ಯೂ ಕಾನೂನು ಸೆಕ್ಷನ್ 95ಕ್ಕೆ ತಿದ್ದುಪಡಿ ತರಲು ಮುಂದಾಗಿದೆ. ಇದು ಇನ್ನೊಂದು ಮಹತ್ವದ ಬೆಳವಣಿಗೆಯಾಗಿದೆ.

ಕೃಷಿ ಭೂಮಿಯನ್ನು ಕೃಷಿಯೇತರ ಉದ್ದೇಶಕ್ಕಾಗಿ ಪರಿವರ್ತಿಸುವುದಕ್ಕೆ ಬಹಳಷ್ಟು ಪರದಾಡಬೇಕಾಗುತ್ತಿತ್ತು. ದೊಡ್ಡ ಪ್ರಮಾಣದಲ್ಲಿ 'ಖುಷಿ' ಕೊಡಬೇಕಾಗುತ್ತಿತ್ತು. ಉದ್ದೇಶಿತ ಈ ಹೊಸ ವಿಧಾನವು ಉದ್ಯಮಿಗಳಿಗೆ, ವಾಣಿಜ್ಯ ವಹಿವಾಟು ಮಳಿಗೆಗಳನ್ನು ಕಟ್ಟುವುದಕ್ಕೆ ಬಹಳ ಅನುಕೂಲಕರವಾಗಿದೆ.

ತಮ್ಮ ಭೂಮಿಯನ್ನು ಯಾವ ಉದ್ದೇಶಕ್ಕೆ (ಉದಾಹರಣೆಗೆ, ಕೈಗಾರಿಕೆ, ಶಿಕ್ಷಣ ಸಂಸ್ಥೆ, ವಾಣಿಜ್ಯ ಮಳಿಗೆ, ಆಸ್ಪತ್ರೆ ಇತ್ಯಾದಿ ಕಾರ್ಯಗಳಿಗಾಗಿ) ಪರಿವರ್ತನೆ ಮಾಡಬಯಸಿದ್ದೇವೆ ಎಂದು ಸ್ವತಃ ಅಫಿಡವಿಟ್ ಬರೆದುಕೊಟ್ಟು ಅನುಮತಿ ಪಡೆಯಬಹುದಾಗಿದೆ.

ಅಫಿಡವಿಟ್ ಬರೆದುಕೊಟ್ಟ ಮೂರು ದಿನಗಳಲ್ಲಿ ಜಿಲ್ಲಾ ಆಡಳಿತ ಒಪ್ಪಿಗೆ ಪತ್ರ ನೀಡುತ್ತದೆ. ಅಫಿಡವಿಟ್ ಬರೆದುಕೊಟ್ಟದ್ದಕ್ಕೆ ವ್ಯತಿರಿಕ್ತವಾಗಿ ಭೂಮಿಯನ್ನು ಅನ್ಯಕಾರ್ಯಗಳಿಗೆ ಬಳಸಿರುವುದು ಏನಾದರೂ ಕಂಡುಬಂದರೆ ಸರ್ಕಾರ ಆ ಭೂಮಿಯನ್ನು ಮುಟ್ಟುಗೋಲು ಹಾಕಿಕೊಂಡು ವಶಪಡಿಸಿಕೊಳ್ಳುವ ಕಠಿಣ ಕಾನೂನು ಹಾಗೂ ಹಸಿರು ವಲಯಕ್ಕೆ ಸೇರಿರಬಾರದು ಎಂಬ ಹಿಂದಿನ ನಿಯಮಗಳನ್ನು ಕಡ್ಡಾಯಗೊಳಿಸಿರುವುದು ಸೂಕ್ತವಾಗಿದೆ.

ವಾಚಕರ ವಾಣಿ

ಸುಂಕ ಕಡಿತ ಸ್ವಾಗತಾರ್ಹ: ರಾಜ್ಯವೂ ಅನುಸರಿಸಲಿ

ಕೇಂದ್ರ ಸರ್ಕಾರವು ಪೆಟ್ರೋಲ್, ಡೀಸೆಲ್ ಮೇಲಿನ ಎಕ್ಸೈಸ್ ಸುಂಕವನ್ನು ಕಡಿತ ಮಾಡಿರುವುದು ಸ್ವಾಗತಾರ್ಹ. ಪೆಟ್ರೋಲ್ ಹಾಗೂ ಡೀಸೆಲ್ ಬೆಲೆ ಏರಿಕೆಯಿಂದ ದಿನನಿತ್ಯ ಬಳಸುವ ವಸ್ತುಗಳ ಬೆಲೆ ಗಗನಕ್ಕೇರಿದ್ದು, ಇದರಿಂದ ಜನಸಾಮಾನ್ಯರ ಬದುಕು ದುಸ್ತರವಾಗಿದೆ. ಕೇಂದ್ರದ ಈ ನಿರ್ಧಾರದಿಂದ ದರ ತುಸು ಇಳಿಕೆಯಾಗಿದೆ. ಇದರಿಂದಾಗಿ ಸಾರ್ವಜನಿಕರಲ್ಲಿ ಕೊಂಚ ನಿರಾಳ ಭಾವ ಮೂಡಿದೆ. ಆದರೂ ಪೈಸೆ ಪೈಸೆಗಳ ಮಟ್ಟದಲ್ಲಿ ತಿಂಗಳುಗಟ್ಟಲೆ ಪೆಟ್ರೋಲ್ ಹಾಗೂ ಡೀಸೆಲ್ ದರ ಏರಿಸಿದ ಬಳಿಕ ಈಗ ಸುಂಕದಲ್ಲಿ ಕಡಿತ ಮಾಡಿದರೇನು ಬಂತು ಎಂದು ಕೆಲವರು ಟೀಕಿಸುತ್ತಿದ್ದಾರೆ. ಬೆಲೆ ಏರಿಕೆಯಾದಾಗ ಟೀಕಿಸುವುದು ಸಹಜ ನಡಾವಳಿ. ಅದೇ ರೀತಿ ಸುಂಕ ಕಡಿತಗೊಳಿಸಿದಾಗ ಅಭಿನಂದಿಸುವುದು ಸೌಜನ್ಯ.

ರಾಜ್ಯ ಸರ್ಕಾರ ಕೂಡ ತನ್ನ ವ್ಯಾಪ್ತಿಯಲ್ಲಿ ಕರಭಾರ ಕಡಿಮೆ ಮಾಡಿ ಜನಸಾಮಾನ್ಯರ ಬದುಕು ಮತ್ತಷ್ಟು ಹಗುರವಾಗಲು ನೆರವಾಗಬೇಕು.

ಹರಳಹಳ್ಳಿ ಪುಟ್ಟರಾಜು, ಪಾಂಡವಪುರ

ಧರ್ಮನಿರಪೇಕ್ಷ ಪಠ್ಯಪುಸ್ತಕ ಆದ್ಯತೆಯಾಗಲಿ

ಪಠ್ಯಪುಸ್ತಕಗಳಿಗೆ ಜಾತಿ- ಧರ್ಮದ ಹಣೆಪಟ್ಟಿ ಹಚ್ಚುವುದು ಸರಿಯಲ್ಲ. ಮಕ್ಕಳ ಮುಗ್ಧ ಮನಸ್ಸನ್ನು ಕದಡಿಸದಂತಹ, ಧರ್ಮನಿರಪೇಕ್ಷ ರಾಷ್ಟ್ರ ನಿರ್ಮಾಣಕ್ಕೆ ಪೂರಕವಾದ ಪಠ್ಯಪುಸ್ತಕದ ಅವಶ್ಯಕತೆ ಇದೆ. ಇತಿಹಾಸದಲ್ಲಿ ನಡೆದ ಘಟನೆಗಳಿಗೆ ಉಪ್ಪು ಖಾರ ಹಾಕಿ ಬಿಂಬಿಸುವ ಬದಲು, ಸಂವಿಧಾನದ ಪ್ರಸ್ತಾವನೆಯಲ್ಲಿರುವ ಜಾತ್ಯತೀತ ಪದವನ್ನು ನಿರೂಪಿಸುವ ಕೆಲಸವಾಗಬೇಕು. ಸಾಮರಸ್ಯ, ಸಹೋದರತ್ವದಿಂದ ಬಾಳುವ ಪಾಠಗಳನ್ನು ಒಳಗೊಂಡ ಪಠ್ಯಪುಸ್ತಕದ ಅವಶ್ಯಕತೆ ಈಗ ಇದೆ.

ಚಂದ್ರಶೇಖರ್ ಕಿತ್ತೂರ್, ನರಗುಂದ

ನ್ಯಾಯದಾನ ವ್ಯವಸ್ಥೆಯ ಮೂಲ ತತ್ವ ಪರಿಗಣನೆ

ಹೈದರಾಬಾದ್‌ನ ಹೊರವಲಯದಲ್ಲಿ ಮೂರು ವರ್ಷಗಳ ಹಿಂದೆ ಪಶುವೈದ್ಯೆಯೊಬ್ಬರ ಮೇಲೆ ಸಾಮೂಹಿಕ ಅತ್ಯಾಚಾರ ನಡೆಸಿ ಕೊಲೆ ಮಾಡಿದ್ದ ಆರೋಪಿಗಳನ್ನು ಪೊಲೀಸರು ಎನ್‌ಕೌಂಟರ್‌ನಲ್ಲಿ ಕೊಂದುಹಾಕಿದ ಬಗೆಗಿನ ತನಿಖೆಗೆ ಸುಪ್ರೀಂ ಕೋರ್ಟ್ ನೇಮಿಸಿದ್ದ ಆಯೋಗವು, ಪೊಲೀಸರು ಉದ್ದೇಶಪೂರ್ವಕವಾಗಿ ಆರೋಪಿಗಳನ್ನು ಕೊಂದಿರುವುದರಿಂದ, ಕೊಲೆ ಆಪಾದನೆಯ ಅನ್ವಯ ಅವರ ಮೇಲೆ ಕ್ರಮ ಕೈಗೊಳ್ಳುವಂತೆ ಶಿಫಾರಸು ಮಾಡಿದೆ. ಈ ಎನ್‌ಕೌಂಟರ್ ಮಾಡಿದ ಸಮಯದಲ್ಲಿ, ಇದೇ ಪೊಲೀಸರನ್ನು ಹೀರೊಗಳಂತೆ ಬಿಂಬಿಸಿ, ಅವರ ಮೇಲೆ ಸಾರ್ವಜನಿಕರು ಹೂಮಳೆ ಸುರಿದಿದ್ದರು. ನಮ್ಮ ದೇಶದ ನ್ಯಾಯದಾನ ವ್ಯವಸ್ಥೆಯ ವಿಳಂಬದಿಂದ ಸಹನೆ ಕಳೆದುಕೊಂಡ ಜನಸಾಮಾನ್ಯರು ಈ ರೀತಿ ಪ್ರತಿಕ್ರಿಯಿಸುವುದು ಸಹಜವೇ ಎನ್ನಬಹುದು.

ಆದರೆ, ಪೊಲೀಸರು ಎನ್‌ಕೌಂಟರ್ ಮಾಡಿ ಕೊಂದದ್ದು ಆರೋಪಿಗಳನ್ನೇ ವಿನಾ ಅಪರಾಧಿಗಳನ್ನಲ್ಲ ಎಂಬ ಪ್ರಾಥಮಿಕ ಸತ್ಯವನ್ನೂ ಮರೆತು ಕೆಲವು ಮಾಧ್ಯಮಗಳು ಈ ಎನ್‌ಕೌಂಟರ್ ಅನ್ನು ಅನ್ಯಾಯದ ವಿರುದ್ಧ ನ್ಯಾಯದ ಜಯ ಎಂಬಂತೆ ಸಂಭ್ರಮಿಸಿದವು. ಸಮಾಜದ ಗಣ್ಯರು, ಸೆಲೆಬ್ರಿಟಿಗಳು, ರಾಜಕಾರಣಿಗಳು, ಅಧಿಕಾರಸ್ಥರು ಸಹ ತಮ್ಮ ವಿವೇಚನೆ ಕಳೆದುಕೊಂಡು ಈ ಎನ್‌ಕೌಂಟರ್ ಅನ್ನು ಸಮರ್ಥಿಸಿದ್ದರು. ರಾಜಕಾರಣಿಗಳು, ಶ್ರೀಮಂತ ಉದ್ಯಮಿಗಳ ಮಕ್ಕಳು ಇಂತಹ ಕೃತ್ಯದಲ್ಲಿ ಭಾಗಿಯಾಗಿದ್ದರೆ ಪೊಲೀಸರು ಇದೇ ರೀತಿ ವರ್ತಿಸುತ್ತಿದ್ದರೇ ಎಂಬ ಪ್ರಶ್ನೆ ಕೆಲವರ ಮನಸ್ಸಿನಲ್ಲಾದರೂ ಮೂಡಿತ್ತು.

'ನೂರು ಜನ ಅಪರಾಧಿಗಳು ಶಿಕ್ಷೆಯಿಂದ ತಪ್ಪಿಸಿಕೊಂಡರೂ ಒಬ್ಬ ನಿರಪರಾಧಿಗೂ ಶಿಕ್ಷೆ ಆಗಬಾರದು' ಎಂಬ ನಮ್ಮ ನ್ಯಾಯದಾನ ವ್ಯವಸ್ಥೆಯ ಮೂಲ ತತ್ವವನ್ನು ತನಿಖಾ ಆಯೋಗದ ಈ ವರದಿಯು ಎತ್ತಿ ಹಿಡಿದಿರುವುದು ಸಮಾಧಾನಕರ ಸಂಗತಿ.

ಡಾ. ಟಿ.ಜಯರಾಂ, ಕೋಲಾರ

ರಾಜಕೀಯ ಪರಿಭಾಷೆಗೆ ಮೊರೆ

'ಸ್ವಾತಂತ್ರ್ಯ ಹೋರಾಟಗಾರ ಹೆಡಗೇವಾರ್ ಪಾಠವಿದ್ದರೆ ತಪ್ಪೇನು?' ಎಂಬ ಲೇಖನದಲ್ಲಿ (ಪ್ರ.ವಾ., ಮೇ 21) ಶಿಕ್ಷಣ ಸಚಿವ ಬಿ.ಸಿ.ನಾಗೇಶ್ ಅವರು ಪಠ್ಯಪುಸ್ತಕದ ಈ ಹಿಂದಿನ ಪರಿಷ್ಕರಣೆಯನ್ನು ವಿರೋಧಿಸುವ ಭರದಲ್ಲಿ, 'ಕಾಂಗ್ರೆಸ್ ಮತ್ತು ಆ ಪಕ್ಷದ ಮುಖಂಡರ ಕೃಪಾಶೀರ್ವಾದಕ್ಕೆ ಒಳಗಾದವರು ಬರೆದಿದ್ದೇ ಇತಿಹಾಸ, ಅದೇ ಸರಿ ಎನ್ನುವಂತಾಗಿದೆ' ಎಂದು ಹೇಳಿದ್ದಾರೆ. ಇಂತಹ ಹೇಳಿಕೆಯ ಮೂಲಕ ಅವರು ರಾಜಕೀಯ ಪರಿಭಾಷೆಯ ಮೊರೆ ಹೋಗಿದ್ದಾರೆ.

ಮೊದಲನೆಯದಾಗಿ, ಈ ರೀತಿಯ ಬೀಸು ಹೇಳಿಕೆಗಳು ಸಚಿವರಿಗೆ ಶೋಭೆ ತರುವುದಿಲ್ಲ. ಎರಡನೆಯದಾಗಿ, ಸಚಿವರು 'ಇತಿಹಾಸದಲ್ಲಿ ಗತಿಸಿದ ಅನ್ಯಾಯ, ದಬ್ಬಾಳಿಕೆ, ಆಕ್ರಮಣಗಳಿಗೆ ಸಂಬಂಧಿಸಿದ ಸಂಗತಿಗಳ ಬಗ್ಗೆ ಮಕ್ಕಳಿಗೆ ಅರಿವು ಮೂಡಿಸುವಂತಿರಬೇಕು' ಎಂದಿದ್ದಾರೆ. ಈ ಮಾತುಗಳನ್ನು ಭಾರತದ ಮೇಲೆ ನಡೆದ ಆಕ್ರಮಣಗಳನ್ನು ಮತ್ತು ಅದರ ವಿರುದ್ಧ ನಮ್ಮ ಅಂದಿನ ತಲೆಮಾರಿನವರು ನೀಡಿದ ಪ್ರತಿರೋಧಗಳನ್ನು ಅರ್ಥಮಾಡಿಕೊಳ್ಳಲು ಮಾತ್ರ ಸೀಮಿತಗೊಳಿಸಿಕೊಳ್ಳಬಾರದು. ಚರಿತ್ರೆ ಎಂದರೆ ಕೇವಲ ಹಿಂದಿನ ರಾಜಕೀಯ ಎನ್ನುವ ವ್ಯಾಖ್ಯೆ ಅಪ್ರಸ್ತುತವಾಗಿ ದಶಕಗಳೇ ಕಳೆದಿವೆ. ಭಾರತದ ಸಾಮಾಜಿಕ ಮತ್ತು ಸಾಂಸ್ಕೃತಿಕ ಇತಿಹಾಸಗಳು ಅತ್ಯಂತ ಸಂಕೀರ್ಣವಾದವು. ಅಲ್ಲಿ ನಡೆದ ಅಂತರ್ ಸಂಘರ್ಷಗಳಿಗೂ ಅನ್ವಯಿಸಿ ನೋಡಬೇಕಾಗುತ್ತದೆ.

ಬಹುತ್ವವನ್ನು ಒಪ್ಪದ ಯಾವ ಮನಸ್ಸೂ ನಮ್ಮ ಚರಿತ್ರೆಯನ್ನು ಸರಿಯಾಗಿ ಗ್ರಹಿಸಲು ಸಾಧ್ಯವಾಗುವುದಿಲ್ಲ. 'ಯುದ್ಧಗಳು ಕೊಲ್ಲುವುದಕ್ಕಿಂತ ಹೆಚ್ಚಿನ ಜನರನ್ನು ಧರ್ಮಸಂಘರ್ಷಗಳು ಕೊಂದಿವೆ' ಎನ್ನುವ ಸತ್ಯವು ಜಾಗತಿಕ ಇತಿಹಾಸ ಬಲ್ಲವರೆಲ್ಲರಿಗೂ ತಿಳಿದಿದೆ. ಆದ್ದರಿಂದ ಸಚಿವರು ತಮ್ಮ ನಂಬಿಕೆಯೇ ಅಂತಿಮ ಎಂದು ಭಾವಿಸಿದ್ದರೆ ಅದು ತಪ್ಪು. ಆದ್ದರಿಂದ ಹಿಂದೆ ಪರಿಷ್ಕರಣಾ ಕಾರ್ಯದಲ್ಲಿ ಕೆಲಸ ಮಾಡಿದವರನ್ನು 'ಕಾಂಗ್ರೆಸ್ ನಾಯಕರ ಕೃಪಾಶೀರ್ವಾದಕ್ಕೆ ಒಳಗಾದವರು' ಎಂದು ಅಂಟಿಸಿದ ಹಣೆಪಟ್ಟಿಯನ್ನು ಸಚಿವರು ವಾಪಸ್ ಪಡೆಯಬೇಕು.

ಡಾ. ಅಶ್ವತ್ಥನಾರಾಯಣ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಹಣ ಅಕ್ರಮ ವರ್ಗಾವಣೆ ತಡೆ ಕಾಯ್ದೆ

ದುರ್ಬಳಕೆ ದೂರುಗಳ ಮಹಾಪೂರ

ಪ್ರಜಾವಾಣಿ ವಾರ್ತೆ

2002ರಲ್ಲಿ ರೂಪುಗೊಂಡ ಹಣ ಅಕ್ರಮ ವರ್ಗಾವಣೆ ತಡೆ ಕಾಯ್ದೆಯನ್ನು (ಪಿಎಂಎಲ್‌ಎ) ಅತ್ಯಂತ ವ್ಯಾಪಕವಾಗಿ ದುರ್ಬಳಕೆ ಮಾಡಲಾಗಿದೆ. ರಾಜಕೀಯ ಪ್ರತಿಸ್ಪರ್ಧಿಗಳನ್ನು ಹಣಿಯುವುದಕ್ಕೆ ಕೇಂದ್ರ ಸರ್ಕಾರವು ಈ ಕಾಯ್ದೆಯನ್ನು ಬಳಸಿಕೊಳ್ಳುತ್ತಿದೆ ಎಂದು ವಿರೋಧ ಪಕ್ಷಗಳು ಪದೇ ಪದೇ ದೂರಿವೆ. ವಿರೋಧ ಪಕ್ಷಗಳ ಈ ಆರೋಪಕ್ಕೆ ಪುಷ್ಟಿ ನೀಡುವಂತೆ, ವಿರೋಧ ಪಕ್ಷಗಳ ಹಲವು ಪ್ರಮುಖ ಮುಖಂಡರ ವಿರುದ್ಧ ಪಿಎಂಎಲ್‌ಎ ಬಳಕೆಯಾಗಿದೆ. ಕಾಂಗ್ರೆಸ್‌ನ ಪಿ. ಚಿದಂಬರಂ, ಕಾರ್ತಿ ಚಿದಂಬರಂ, ಡಿ.ಕೆ. ಶಿವಕುಮಾರ್, ಎನ್‌ಸಿಪಿಯ ನವಾಬ್ ಮಲಿಕ್, ಮಹಾರಾಷ್ಟ್ರದ ಮಾಜಿ ಗೃಹ ಸಚಿವ ಅನಿಲ್ ದೇಶಮುಖ್ ಮುಂತಾದ ಮುಖಂಡರನ್ನು ಜಾರಿ ನಿರ್ದೇಶನಾಲಯವು (ಇ.ಡಿ) ಬಂಧಿಸಿದೆ.

ಕಾಯ್ದೆಯ ಸಾಂವಿಧಾನಿಕ ಸಿಂಧುತ್ವವನ್ನು ಪ್ರಶ್ನಿಸಿ ಹಾಗೂ ದುರ್ಬಳಕೆ ತಡೆಯಬೇಕು ಮತ್ತು ಕಾಯ್ದೆಯ ವಿವಿಧ ಅವಕಾಶಗಳನ್ನು ರದ್ದುಪಡಿಸಬೇಕು ಎಂದು ಕೋರಿ ಸುಮಾರು 200 ಅರ್ಜಿಗಳು ಸಲ್ಲಿಕೆಯಾಗಿವೆ ಎಂದು ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಅವರು ಸುಪ್ರೀಂ ಕೋರ್ಟ್‌ಗೆ ಈ ಹಿಂದೆ ಮಾಹಿತಿ ನೀಡಿದ್ದರು. ನ್ಯಾಯಮೂರ್ತಿಗಳಾದ ಎ.ಎಂ. ಖಾನ್ವಿಲ್ಕರ್, ಸಿ.ಟಿ.ರವಿಕುಮಾರ್ ಮತ್ತು ದಿನೇಶ್ ಮಾಹೇಶ್ವರಿ ಅವರ ಪೀಠವು ಈ ಪ್ರಕರಣಗಳ ವಿಚಾರಣೆ ನಡೆಸಿದೆ. ಪಿಎಂಎಲ್‌ಎಯನ್ನು ಪ್ರಶ್ನಿಸಿ ಅರ್ಜಿ ಸಲ್ಲಿಸಿದವರಲ್ಲಿ ಕಾರ್ತಿ ಚಿದಂಬರಂ ಮತ್ತು ಪಿಡಿಪಿ ಮುಖ್ಯಸ್ಥೆ ಮೆಹಬೂಬಾ ಮುಫ್ತಿ ಸೇರಿದ್ದಾರೆ.

ಪಿಎಂಎಲ್‌ಎ ಅಡಿಯಲ್ಲಿ ಆರೋಪಿಯನ್ನು ಬಂಧಿಸಬೇಕಿದ್ದರೆ ಮ್ಯಾಜಿಸ್ಟ್ರೇಟ್ ಅನುಮತಿ ಪಡೆದುಕೊಳ್ಳಬೇಕೇ?, ಅಪರಾಧ ಪ್ರಕ್ರಿಯಾ ಸಂಹಿತೆಯಲ್ಲಿರುವ ಪೊಲೀಸ್ ತನಿಖೆಗೆ ಅನ್ವಯವಾಗುವ ನಿಯಮಗಳು ಪಿಎಂಎಲ್‌ಎ ಅಡಿಯಲ್ಲಿ ತನಿಖೆ ನಡೆಸುವ ಇ.ಡಿ.ಗೆ ಅನ್ವಯ ಆಗುವುದಿಲ್ಲವೇ ಮುಂತಾದ ವಿಚಾರಗಳನ್ನು ಸುಪ್ರೀಂ ಕೋರ್ಟ್‌ನಲ್ಲಿ ಪ್ರಶ್ನಿಸಲಾಗಿದೆ.

ಪಿಎಂಎಲ್‌ಎ 45ನೇ ಸೆಕ್ಷನ್‌ಗೆ ತಿದ್ದುಪಡಿ ತರುವ ಮೂಲಕ, ಈ ಕಾಯ್ದೆಯ ಅಡಿಯಲ್ಲಿ ದಾಖಲಾಗುವ ಪ್ರಕರಣಗಳು 'ವಿಚಾರಣಾಯೋಗ್ಯ ಮತ್ತು ಜಾಮೀನುರಹಿತ' ಎಂದು ಹೇಳಲಾಗಿದೆ. ಈ ತಿದ್ದುಪಡಿಯಿಂದಾಗಿ ಆರೋಪಿಯನ್ನು ಯಾವುದೇ ವಾರಂಟ್ ಇಲ್ಲದೆ ಬಂಧಿಸುವ ಅಧಿಕಾರವು ಇ.ಡಿ.ಗೆ ದೊರೆಯುತ್ತದೆ. 'ಆರೋಪಿಯು ತಪ್ಪು ಮಾಡಿಯೇ ಇಲ್ಲ ಎಂದು ನ್ಯಾಯಾಧೀಶರಿಗೆ ಮನವರಿಕೆ ಆದರೆ ಮಾತ್ರ ಜಾಮೀನು ನೀಡಬಹುದು' ಎಂದು ಜಾಮೀನು ನಿಯಮ ರೂಪಿಸಲಾಗಿದೆ. ಹಾಗಾಗಿ, ಆರೋಪಿಯು ಜಾಮೀನು ಪಡೆಯುವುದು ಬಹಳ ಕ್ಲಿಷ್ಟಕರವಾಗುತ್ತದೆ. ಇದು ಅಪರಾಧ ಪ್ರಕ್ರಿಯಾ ಸಂಹಿತೆಗಿಂತ ಭಿನ್ನವಾಗಿದೆ. ಅದರ ಪ್ರಕಾರ, ಆರೋಪಿಯು ಪರಾರಿಯಾಗುವ ಸಾಧ್ಯತೆ ಇಲ್ಲ ಮತ್ತು ತನಿಖೆಗೆ ಅಡ್ಡಿ ಮಾಡುವುದಿಲ್ಲ ಎಂಬುದು ಮನದಟ್ಟಾದರೆ ಜಾಮೀನು ನೀಡಬಹುದು. ಹಾಗಾಗಿಯೇ, ಇ.ಡಿ. ಹೊಂದಿರುವ ಶೋಧ, ಮುಟ್ಟುಗೋಲು ಮತ್ತು ಬಂಧನದ ಅಧಿಕಾರದ ಬಗ್ಗೆ ಹೆಚ್ಚಿನ ಚರ್ಚೆ ನಡೆಯುತ್ತಿದೆ. ಇ.ಡಿ. ಹೊಂದಿರುವ ಶೋಧ, ಮುಟ್ಟುಗೋಲು ಮತ್ತು ಬಂಧನದ ಅಧಿಕಾರವು ಸಂವಿಧಾನಬಾಹಿರವೇ ಎಂಬ ಪ್ರಶ್ನೆಯನ್ನೂ ಸುಪ್ರೀಂ ಕೋರ್ಟ್ ಮುಂದೆ ಇರಿಸಲಾಗಿದೆ.

ನ್ಯಾಯಮೂರ್ತಿಗಳಾದ ರೋಹಿಂಗ್ಟನ್ ನರಿಮನ್ ಮತ್ತು ಸಂಜಯ್ ಕಿಶನ್ ಕೌಲ್ ಅವರ ಪೀಠವು ಪಿಎಂಎಲ್‌ಎ ಸೆಕ್ಷನ್ 45 ಸಂವಿಧಾನಬಾಹಿರ ಎಂದು ನಿಕೇಶ್ ತಾರಾಚಂದ್ ಶಾ ಪ್ರಕರಣದಲ್ಲಿ ಹೇಳಿತ್ತು. ಆದರೆ, ನ್ಯಾಯಮೂರ್ತಿ ಖಾನ್ವಿಲ್ಕರ್ ಅವರ ಪೀಠದ ಮುಂದೆ ನಡೆದ ವಿಚಾರಣೆಯಲ್ಲಿ, ತುಷಾರ್ ಮೆಹ್ತಾ ಅವರು ಕಾಯ್ದೆಯ ಎಲ್ಲ ಅಂಶಗಳನ್ನು ಬಲವಾಗಿ ಸಮರ್ಥಿಸಿಕೊಂಡಿದ್ದಾರೆ. '2002ರಲ್ಲಿ ಕಾಯ್ದೆ ಜಾರಿಗೆ ಬಂದಾಗಿನಿಂದ ಈವರೆಗೆ 313 ಮಂದಿಯನ್ನು ಮಾತ್ರ ಬಂಧಿಸಲಾಗಿದೆ. ಅತ್ಯಂತ ಕಟ್ಟುನಿಟ್ಟಿನ ಶಾಸನಾತ್ಮಕ ರಕ್ಷಣೆಗಳು ಇರುವ ಕಾರಣಕ್ಕೇ ಇಷ್ಟು ಕಡಿಮೆ ಮಂದಿಯ ಬಂಧನವಾಗಿದೆ' ಎಂದು ಫೆಬ್ರುವರಿ 23ರಂದು ನಡೆದ ವಿಚಾರಣೆ ವೇಳೆ ಮೆಹ್ತಾ ಹೇಳಿದ್ದರು.

ಸುಪ್ರೀಂ ಕೋರ್ಟ್ ಇನ್ನಷ್ಟೇ ತೀರ್ಪು ನೀಡಬೇಕಿದೆ.

ಬಿಜೆಪಿ ಅಧಿಕಾರದ ಅವಧಿಯಲ್ಲೇ ಹೆಚ್ಚು ಪ್ರಕರಣ

ಪಿಎಂಎಲ್‌ಎ ಜಾರಿಗೆ ಬಂದ ನಂತರದಿಂದ ಇದೇ ಮೇ 9ರವರೆಗೆ ದೇಶದಾದ್ಯಂತ ಈ ಕಾಯ್ದೆಯ ಅಡಿ ಒಟ್ಟು 5,422 ಪ್ರಕರಣಗಳನ್ನು ಜಾರಿ ನಿರ್ದೇಶನಾಲಯವು ದಾಖಲಿಸಿದೆ.

ಈ ಕಾಯ್ದೆಯು ರೂಪುಗೊಂಡು 20 ವರ್ಷ ಕಳೆದಿದೆ. ಈ ಅವಧಿಯಲ್ಲಿ ಒಟ್ಟು 5,422 ಪ್ರಕರಣಗಳು ದಾಖಲಾಗಿವೆ. ಇವುಗಳಲ್ಲಿ 2,908 ಪ್ರಕರಣಗಳು ಕಳೆದ 7 ವರ್ಷಗಳಲ್ಲಿ ದಾಖಲಾಗಿವೆ. ಅಂದರೆ 2016ರಿಂದ 2022ರ ಮೇ ಎರಡನೇ ವಾರದವರೆಗೆ ಒಟ್ಟು 2,908 ಪ್ರಕರಣಗಳು ದಾಖಲಾಗಿವೆ. ಬಿಜೆಪಿ ನೇತೃತ್ವದ ಸರ್ಕಾರವು ಅಧಿಕಾರಕ್ಕೆ ಬಂದ ನಂತರದ ಅವಧಿಯಲ್ಲಿ ಈ ಕಾಯ್ದೆಯ ಅಡಿ ಹೆಚ್ಚು ಪ್ರಕರಣಗಳನ್ನು ದಾಖಲಿಸಲಾಗಿದೆ. ಒಟ್ಟು ಪ್ರಕರಣಗಳಲ್ಲಿ, ಬಿಜೆಪಿ ಅಧಿಕಾರದ ಅವಧಿಯಲ್ಲಿ ದಾಖಲಾದ ಪ್ರಕರಣಗಳ ಪ್ರಮಾಣ ಶೇ 53.6ರಷ್ಟು.

ಈ ಕಾಯ್ದೆ ಅಡಿ ದಾಖಲಾದ ಒಟ್ಟು ಪ್ರಕರಣಗಳಲ್ಲಿ ವಿಚಾರಣೆಯ ಹಂತವನ್ನು ತಲುಪಿದ ಪ್ರಕರಣಗಳ ಸಂಖ್ಯೆ 992 ಮಾತ್ರ. ಇದು ಒಟ್ಟು ಪ್ರಕರಣಗಳ ಶೇ 18.33ರಷ್ಟಾಗುತ್ತದೆ. ಒಟ್ಟು ಪ್ರಕರಣಗಳಲ್ಲಿ ಶೇ 32.07ರಷ್ಟು ಪ್ರಕರಣಗಳಲ್ಲಿ ಮಾತ್ರ ಆಸ್ತಿ ಮುಟ್ಟುಗೋಲಿಗೆ ಆದೇಶ ಹೊರಡಿಸಲಾಗಿದೆ. ಆದರೆ ಒಟ್ಟು ಪ್ರಕರಣಗಳ ಶೇ 49.6ರಷ್ಟು ಇನ್ನೂ ವಿಚಾರಣೆಯ ಹಂತದಲ್ಲೇ ಇವೆ.

ಈ ಎಲ್ಲಾ ಪ್ರಕರಣಗಳಲ್ಲಿ ಈವರೆಗೆ ಬಂಧನಕ್ಕೆ ಒಳಗಾದವರ ಸಂಖ್ಯೆ 400. ಆದರೆ ಎಷ್ಟು ಪ್ರಕರಣಗಳಲ್ಲಿ ಆರೋಪಿಗಳನ್ನು ಬಂಧಿಸಲಾಗಿದೆ ಎಂಬುದರ ಮಾಹಿತಿ ಲಭ್ಯವಿಲ್ಲ. ಒಟ್ಟು ಪ್ರಕರಣಗಳಲ್ಲಿ ಈವರೆಗೆ 25 ಮಂದಿಗಷ್ಟೇ ಶಿಕ್ಷೆಯಾಗಿದೆ. ಆದರೆ ಎಷ್ಟು ಪ್ರಕರಣಗಳಲ್ಲಿ ಶಿಕ್ಷೆಯಾಗಿದೆ ಎಂಬುದರ ಮಾಹಿತಿ ಸಹ ಲಭ್ಯವಿಲ್ಲ.

ಹೀಗಾಗಿ ಈ ಕಾಯ್ದೆ ಅಡಿ ದಾಖಲಾದ ಒಟ್ಟು ಪ್ರಕರಣಗಳಲ್ಲಿ, ವಿಲೇವಾರಿಯಾದ ಒಟ್ಟು ಪ್ರಕರಣಗಳ ಸಂಖ್ಯೆಗೆ ಸಂಬಂಧಿಸಿದ ನಿಖರ ಮಾಹಿತಿ ಲಭ್ಯವಿಲ್ಲ. ಈ ದತ್ತಾಂಶವನ್ನು ಜಾರಿ ನಿರ್ದೇಶನಾಲಯವಾಗಲೀ, ಹಣಕಾಸು ಸಚಿವಾಲಯವಾಗಲೀ ನೀಡಿಲ್ಲ. ಬೇರೆಲ್ಲಾ ಆರ್ಥಿಕ ಅಪರಾಧ ಪ್ರಕರಣಗಳ ದತ್ತಾಂಶಗಳನ್ನು ದಾಖಲಿಸುವ ರಾಷ್ಟ್ರೀಯ ಅಪರಾಧ ದಾಖಲೆಗಳ ಬ್ಯೂರೊ ಸಹ ಪಿಎಂಎಲ್‌ಎ ಪ್ರಕರಣಗಳ ದತ್ತಾಂಶವನ್ನು ಸಂಗ್ರಹಿಸಿಲ್ಲ. ಒಟ್ಟಾರೆಯಾಗಿ ಪಿಎಂಎಲ್‌ಎ ಪ್ರಕರಣಗಳ ಸ್ಥಿತಿಗತಿಗೆ ಸಂಬಂಧಿಸಿದ ಸಂಪೂರ್ಣ ಮಾಹಿತಿ ಲಭ್ಯವಿಲ್ಲ.

ಕಾನೂನು ಹೇಳುವುದೇನು?

ಅಕ್ರಮವಾಗಿ ಹಣ ಗಳಿಸುವುದು ಮತ್ತು ಅದು ಸಕ್ರಮ ಎಂದು ಬಿಂಬಿಸುವ ಕೃತ್ಯದಲ್ಲಿ ಯಾವುದೇ ವ್ಯಕ್ತಿ ನೇರವಾಗಿ ಅಥವಾ ಪರೋಕ್ಷವಾಗಿ ಭಾಗಿಯಾಗುವುದು ಅಥವಾ ಇತರರಿಗೆ ಉದ್ದೇಶಪೂರ್ವಕವಾಗಿ ನೆರವಾಗುವುದು ಅಥವಾ ಇಂತಹ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗಿಯಾಗುವುದು ಹಣ ಅಕ್ರಮ ವರ್ಗಾವಣೆ ಎನಿಸಿಕೊಳ್ಳುತ್ತದೆ ಎಂದು ಹಣ ಅಕ್ರಮ ವರ್ಗಾವಣೆ (ತಡೆ) ಕಾಯ್ದೆಯ ಮೂರನೇ ಸೆಕ್ಷನ್‌ನಲ್ಲಿ ವಿವರಿಸಲಾಗಿದೆ.



ವಿಪಕ್ಷಗಳ ನಾಯಕರೇ ಗುರಿ

- **ಡಿ.ಕೆ. ಶಿವಕುಮಾರ್**

ಕಾಂಗ್ರೆಸ್ ಮುಖಂಡ ಡಿ.ಕೆ. ಶಿವಕುಮಾರ್ ಅವರ ವಿರುದ್ಧ ದೆಹಲಿಯ ಫ್ಲ್ಯಾಟ್‌ವೊಂದರಲ್ಲಿ ಅಪಾರ ಪ್ರಮಾಣದ ಹಣ ಪತ್ತೆ ಪ್ರಕರಣದಲ್ಲಿ ಜಾರಿ ನಿರ್ದೇಶನಾಲಯವು (ಇ.ಡಿ.) ಹಣ ಅಕ್ರಮ ವರ್ಗಾವಣೆ ತಡೆ (ಪಿಎಂಎಲ್‌ಎ) ಕಾಯ್ದೆಯ ಅಡಿ ಪ್ರಕರಣ ದಾಖಲಿಸಿಕೊಂಡಿತ್ತು. ವಿಚಾರಣೆ ವೇಳೆ ಅವರನ್ನು ಬಂಧಿಸಲಾಗಿತ್ತು. ಅವರ ಬಂಧನವು ರಾಜ್ಯ ರಾಜಕೀಯದಲ್ಲಿ ಸಂಚಲನಕ್ಕೆ ಕಾರಣವಾಗಿತ್ತು. ಶಿವಕುಮಾರ್ ಅವರ ಪುತ್ರಿ ಐಶ್ವರ್ಯಾ ಅವರನ್ನೂ ಮತ್ತೊಂದು ಪ್ರಕರಣದಲ್ಲಿ ಇ.ಡಿ. ವಿಚಾರಣೆಗೆ ಒಳಪಡಿಸಿತ್ತು.

- **ಪಿ. ಚಿದಂಬರಂ, ಕಾರ್ತಿ ಚಿದಂಬರಂ**

ಐಎನ್‌ಎಕ್ಸ್ ಮೀಡಿಯಾ ಹಗರಣದಲ್ಲಿ ಕೇಂದ್ರದ ಮಾಜಿ ಹಣಕಾಸು ಸಚಿವ ಪಿ.ಚಿದಂಬರಂ ಅವರನ್ನು ಬಂಧಿಸಲಾಗಿತ್ತು. ಪುತ್ರ ಕಾರ್ತಿ ಚಿದಂಬರಂ ಅವರಿಗೆ ಸಹಾಯ ಮಾಡುವಂತೆ ಚಿದಂಬರಂ ನಿರ್ದೇಶಿಸಿದ್ದರು ಎಂಬ ಆರೋಪದಡಿ ಅವರನ್ನು ಬಂಧಿಸಿ, ಪಿಎಂಎಲ್‌ಎ ಪ್ರಕರಣದ ಅಡಿ ವಿಚಾರಣೆ ನಡೆಸಲಾಗಿತ್ತು. 2018ರಲ್ಲಿ ಕಾರ್ತಿಗೆ ಸೇರಿದ ₹54 ಕೋಟಿ ಮೌಲ್ಯದ ಆಸ್ತಿಯನ್ನು ಇ.ಡಿ. ಮುಟ್ಟುಗೋಲು ಹಾಕಿಕೊಂಡು, ಹಲವು ಬಾರಿ ವಿಚಾರಣೆ ನಡೆಸಿತ್ತು.

- **ಶರದ್ ಪವಾರ್, ಅಜಿತ್ ಪವಾರ್**

ಎನ್‌ಸಿಪಿ ಮುಖ್ಯಸ್ಥ ಶರದ್ ಪವಾರ್ ಹಾಗೂ ಅವರ ಸಂಬಂಧಿ ಅಜಿತ್ ಪವಾರ್ ವಿರುದ್ಧ ಮಹಾರಾಷ್ಟ್ರ ಸಹಕಾರಿ ಬ್ಯಾಂಕ್ ಹಗರಣದಲ್ಲಿ ದೂರು ದಾಖಲಿಸಲಾಗಿತ್ತು. 2019ರಲ್ಲಿ, ಮಹಾರಾಷ್ಟ್ರ ವಿಧಾನಸಭಾ ಚುನಾವಣೆಗೆ ಒಂದು ತಿಂಗಳು ಬಾಕಿಯಿದ್ದಾಗ ಈ ವಿದ್ಯಮಾನ ನಡೆದಿತ್ತು. ಶರದ್ ಪವಾರ್ ಅವರು ಸ್ವಯಂಪ್ರೇರಣೆಯಿಂದ ವಿಚಾರಣೆಗೆ ಹಾಜರಾಗಲು ನಿರ್ಧರಿಸಿ, ರಾಜಕೀಯ ಷಡ್ಯಂತ್ರದ ವಿರುದ್ಧ 'ಗಾಂಧಿಗಿರಿ' ಪ್ರದರ್ಶಿಸಿದ್ದರು.

- **ಅನಿಲ್ ದೇಶ್‌ಮುಖ್, ನವಾಬ್ ಮಲಿಕ್**

ಮಹಾರಾಷ್ಟ್ರದಲ್ಲಿ ಶಿವಸೇನಾ ನೇತೃತ್ವದ ಮಹಾವಿಕಾಸ ಅಘಾಡಿ (ಎಂವಿಎ) ಸರ್ಕಾರ ಅಸ್ತಿತ್ವಕ್ಕೆ ಬಂದ ಬಳಿಕ ಇಬ್ಬರು ಸಚಿವರನ್ನು ಈ ಕಾಯ್ದೆಯಡಿ ಬಂಧಿಸಿ ವಿಚಾರಣೆ ನಡೆಸಲಾಗಿದೆ. ಗೃಹಸಚಿವರಾಗಿದ್ದ ಅನಿಲ್ ದೇಶ್‌ಮುಖ್ ಹೆಸರು ಅಮಾನತುಗೊಂಡಿದ್ದ ಪೊಲೀಸ್ ಅಧಿಕಾರಿ ಸಚಿನ್ ವಾಜೆ ಮೂಲಕ ಹಣ ವಸೂಲಿ ಪ್ರಕರಣದಲ್ಲಿ ಕೇಳಿಬಂದಿತ್ತು. ಅವರನ್ನು ಕಳೆದ ನವೆಂಬರ್‌ನಲ್ಲಿ ಬಂಧಿಸಲಾಗಿತ್ತು. ಜಮೀನು ವಿಚಾರದಲ್ಲಿ ನವಾಬ್ ಮಲಿಕ್ ಅವರು ಭೂಗತಪಾತಕಿ ದಾವೂದ್ ಇಬ್ರಾಹಿಂ ಸಹೋದರಿ ಹಸೀನಾ ಪಾರ್ಕರ್ ಅವರಿಗೆ ₹55 ಲಕ್ಷ ನಗದು ನೀಡಿದ್ದರು ಎಂದು ಇ.ಡಿ. ಆರೋಪಿಸಿದೆ. 10ಕ್ಕೂ ಹೆಚ್ಚು ಎಂವಿಎ ಮುಖಂಡರೂ ಪಿಎಂಎಲ್‌ಎ ವಿಚಾರಣೆ ಎದುರಿಸುತ್ತಿದ್ದಾರೆ.

- **ಶಾರದಾ ಚಿಟ್‌ಫಂಡ್ ಪ್ರಕರಣ**

ಟಿಎಂಸಿ ಪ್ರಮುಖ ನಾಯಕರಾಗಿದ್ದ ಮುಕುಲ್ ರಾಯ್, ಸುವೇಂದು ಅಧಿಕಾರಿ, ಸೋವನ್ ಚಟರ್ಜಿ ಸೇರಿ ಹಲವು ಟಿಎಂಸಿ ನಾಯಕರ ಹೆಸರು 2013ರ ಶಾರದಾ ಚಿಟ್‌ಫಂಡ್ ಹಗರಣದಲ್ಲಿ ಉಲ್ಲೇಖವಾಗಿತ್ತು. ಈ ಮೂವರೂ ಈಗ ಬಿಜೆಪಿಯಲ್ಲಿದ್ದಾರೆ. ಮಮತಾ ಬ್ಯಾನರ್ಜಿ ಅವರ ಅಳಿಯ ಅಭಿಷೇಕ್ ಬ್ಯಾನರ್ಜಿ ಹಾಗೂ ಅವರ ಪತ್ನಿ ರುಜಿರಾ ಅವರನ್ನು ಕಲ್ಲಿದ್ದಲು ಹಗರಣದಲ್ಲಿ ಇ.ಡಿ. ವಿಚಾರಣೆ ನಡೆಸಿದೆ.

- **ಪ್ರಫುಲ್ ಪಟೇಲ್, ವರ್ಷಾ ರಾವುತ್**

2020ರಲ್ಲಿ ಎನ್‌ಸಿಪಿ ಸೇರಿದ್ದ ಏಕನಾಥ ಖಾಡ್ಸೆ ಹಾಗೂ ಅವರ ಪತ್ನಿ ವಿರುದ್ಧ ಮಹಾರಾಷ್ಟ್ರ ಕೈಗಾರಿಕಾ ಅಭಿವೃದ್ಧಿ ನಿಗಮಕ್ಕೆ ಸಂಬಂಧಿಸಿದ ಪ್ರಕರಣದಲ್ಲಿ ಪಿಎಂಎಲ್‌ಎ ಪ್ರಕರಣ ದಾಖಲಾಗಿದೆ. ಪ್ರಫುಲ್ ಪಟೇಲ್ ಕುಟುಂಬದ ಒಡೆತನದ ಅಪಾರ್ಟ್‌ಮೆಂಟ್‌ನಲ್ಲಿ ಗ್ಯಾಂಗ್‌ಸ್ಟರ್ ಇಕ್ಬಾಲ್ ಮಿರ್ಚಿ ಕುಟುಂಬದವರು ಫ್ಲ್ಯಾಟ್ ಖರೀದಿಸಿದ್ದಾರೆ ಎಂಬ ಆರೋಪದಲ್ಲಿ ಪ್ರಕರಣ ದಾಖಲಾಗಿದೆ. ಶಿವಸೇನಾ ವಕ್ತಾರ ಸಂಜಯ್ ರಾವುತ್ ಅವರ ಪತ್ನಿ ವರ್ಷಾ ರಾವುತ್ ವಿರುದ್ಧ ಪಿಎಂಸಿ ಬ್ಯಾಂಕ್ ಹಗರಣದ ದೂರು ಇದೆ. ಶಿವಸೇನಾ ಶಾಸಕ ಪ್ರತಾಪ್ ಸರ್ನಾಯಕ್ ಹಾಗೂ ಅನಿಲ್ ಭೋಸಲೆ ಅವರ ವಿರುದ್ಧ ₹175 ಕೋಟಿ ಮೊತ್ತದ ಅಕ್ರಮ ಹಣ ವರ್ಗಾವಣೆ ಪ್ರಕರಣವಿದೆ.

- **ಡಿಎಂಕೆಯ ರಾಜಾ, ಕನಿಮೋಳಿ**

ಡಿಎಂಕೆ ಮುಖಂಡರಾದ ಎ.ರಾಜಾ, ಕನಿಮೊಳಿ ಅವರು 2010ರ 2ಜಿ ಸ್ಪೆಕ್ಟ್ರಂ ಹಗರಣದಲ್ಲಿ ಅಕ್ರಮ ಹಣ ವರ್ಗಾವಣೆ ಪ್ರಕರಣದ ಅಡಿ ವಿಚಾರಣೆ ಎದುರಿಸಿದ್ದರು.

ಎನ್‌ಸಿ ಮುಖ್ಯಸ್ಥ ಫಾರೂಕ್ ಅಬ್ದುಲ್ಲಾ, ಆರ್‌ಜೆಡಿ ಮುಖ್ಯಸ್ಥ ಲಾಲು ಪ್ರಸಾದ್, ಪಂಜಾಬ್ ಮಾಜಿ ಮುಖ್ಯಮಂತ್ರಿ ಅಮರಿಂದರ್ ಸಿಂಗ್, ಆಂಧ್ರಪ್ರದೇಶ ಮುಖ್ಯಮಂತ್ರಿ ವೈ.ಎಸ್. ಜಗನ್‌ಮೋಹನ್ ರೆಡ್ಡಿ ವಿರುದ್ಧ ಹಣ ಅಕ್ರಮ ವರ್ಗಾವಣೆ ಆರೋಪವಿದೆ. ತಲೆಮರೆಸಿಕೊಂಡಿರುವ ಉದ್ಯಮಿಗಳಾದ ವಿಜಯ್ ಮಲ್ಯ, ಮೆಹುಲ್ ಚೋಕ್ಸಿ ಹಾಗೂ ಎನ್‌ಎಸ್‌ಇ ಮಾಜಿ ಮುಖ್ಯಸ್ಥೆ ಚಿತ್ರಾ ರಾಮಕೃಷ್ಣ ಅವರು ಪಿಎಂಎಲ್‌ಎ ಪ್ರಕರಣ ಎದುರಿಸುತ್ತಿದ್ದಾರೆ.

ಆಧಾರ: ಜಾರಿ ನಿರ್ದೇಶನಾಲಯ, ಜಾರಿ ನಿರ್ದೇಶನಾಲಯದ ವಾರ್ಷಿಕ ವರದಿ, ಹಣಕಾಸು ಸಚಿವಾಲಯದ ಆರ್ಥಿಕ ಗುಪ್ತಚರ ಘಟಕದ ವಾರ್ಷಿಕ ವರದಿ, ಎನ್‌ಸಿಆರ್‌ಬಿ, ಸುಪ್ರೀಂ ಕೋರ್ಟ್ ಅಧಿಕೃತ ಜಾಲತಾಣ, ಸುಪ್ರೀಂ ಕೋರ್ಟ್ ಅಬ್ಸರ್ವರ್, ಪಿಟಿಐ

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 129

ತಪಸ್ಸಿಗೆ ಹೊರಟ ಸಂಧ್ಯಾದೇವಿ

ಸತೀಖಂಡದ ಐದನೇ ಅಧ್ಯಾಯದಲ್ಲಿ ಬ್ರಹ್ಮನು ಹೇಳಿದ ರತಿಮನ್ಮಥರ ವಿವಾಹವನ್ನು ಕೇಳಿದ ನಾರದ ಪುನಃ ಪ್ರಶ್ನೆ ಮಾಡಿದ ವಿವರವನ್ನು ಸೂತಮುನಿಯು ತಿಳಿಸುತ್ತಾನೆ.

'ಓ ವಿಧಿಯೇ, ರತಿಯನ್ನು ಮದುವೆಯಾಗಿ ಮನ್ಮಥ ತನ್ನ ಸ್ಥಾನಕ್ಕೆ ತೆರಳಿದ. ನಿನ್ನ ಪುತ್ರ ದಕ್ಷಬ್ರಹ್ಮ ಮತ್ತು ಮಾನಸಪುತ್ರರೆಲ್ಲರೂ ಸಹ ತಮ್ಮ ತಮ್ಮ ಸ್ಥಾನಕ್ಕೆ ತೆರಳಿದರು. ಆದರೆ ಬ್ರಹ್ಮಪುತ್ರಿ ಮತ್ತು ಪಿತೃಗಳಿಗೆ ಮಾತೆಯಾದ ಸಂಧ್ಯಾದೇವಿ ಎಲ್ಲಿಗೆ ಹೋದಳು? ಮುಂದೇನು ಮಾಡಿದಳು? ಯಾವ ಪುರುಷನನ್ನು ಮದುವೆಯಾದಳು? ಓ ವಿಧಿಯೇ! ಈ ಸಂಧ್ಯೆಯ ಚರಿತ್ರೆಯನ್ನೆಲ್ಲಾ ಹೇಳು' ಎಂದ ನಾರದ.

'ಎಲೈ ವತ್ಸ! ಸಂಧ್ಯಾದೇವಿಯ ಚರಿತ್ರೆಯೆಲ್ಲವನ್ನೂ ಹೇಳುವೆನು. ಇದನ್ನು ಕೇಳಿದರೆ ಸ್ತ್ರೀಯರೆಲ್ಲರೂ ಸದಾ ಪತಿವ್ರತೆಯರಾಗುವರು. ನನ್ನ ಮನಸ್ಸಿನಿಂದ ಜನಿಸಿದ ಪುತ್ರಿಯಾದ ಸಂಧ್ಯೆ ತಪಸ್ಸನ್ನಾಚರಿಸಿ, ತನ್ನ ಶರೀರವನ್ನು ಬಿಟ್ಟು ಮುಂದೆ ಅರುಂಧತಿಯಾಗಿ ಜನಿಸಿದಳು. ಮುನಿಶ್ರೇಷ್ಠನಾದ ಮೇಧಾತಿಥಿ ಮಗಳಾಗಿ ಜನಿಸಿದ ಅರುಂಧತಿಯು ಮಹಾತ್ಮನೂ ಮಹಾತಪಸ್ವಿಯೂ ಆದಂತಹ ವಸಿಷ್ಠಮುನಿಯನ್ನು ವರಿಸಿದಳು. ಮುಂದೆ ಅವಳು ಪತಿವ್ರತೆಯರಲ್ಲಿ ಉತ್ತಮಳೂ, ಪೂಜಿಸಲು ಮತ್ತು ನಮಸ್ಕರಿಸಲು ಯೋಗ್ಯಳೂ ಶಾಂತಳೂ ಆದ ಮಹಾಪತಿವ್ರತೆಯಾದಳು' ಎಂದ ಬ್ರಹ್ಮ.

ಇಷ್ಟಕ್ಕೆ ಸಮಾಧಾನವಾಗದ ನಾರದಮುನಿ 'ಸಂಧ್ಯೆ ತಪಸ್ಸನ್ನು ಹೇಗೆ ಆಚರಿಸಿದಳು? ಎಲ್ಲಿ? ಏತಕ್ಕಾಗಿ ಆಚರಿಸಿದಳು? ಅವಳು ಹೇಗೆ ಅರುಂಧತಿಯಾಗಿ ಜನಿಸಿದಳು? ವಸಿಷ್ಠಮುನಿಯನ್ನು ಪತಿಯನ್ನಾಗಿ ಹೇಗೆ ವರಿಸಿದಳು? ಈ ಅರುಂಧತಿಯ ಕಥೆಯನ್ನು ಕೇಳಬೇಕೆಂಬ ಕುತೂಹಲವು ನನಗೆ ಅಧಿಕವಾಗುತ್ತಿದೆ. ಅದನ್ನು ನನಗೆ ವಿಸ್ತಾರವಾಗಿ ಹೇಳು' ಎಂದು ಒತ್ತಾಯಿಸಿದ. ಆಗ ಬ್ರಹ್ಮ ಅರುಂಧತಿ ಕಥೆಯನ್ನ ಹೇಳಲು ಆರಂಭಿಸಿದ.

ಹಿಂದೆ ನಾನು, ನನ್ನ ಮಾನಸಪುತ್ರಿಯಾದ ಸಂಧ್ಯೆಯನ್ನು ನೋಡಿ ಕಾಮಸುಖವನ್ನು ಹೊಂದುವ ಮನಸ್ಸುಳ್ಳವನಾಗಿದ್ದೆ. ಶಿವನ ಭಯದಿಂದ ಅವಳನ್ನು ಬಿಟ್ಟುಬಿಟ್ಟೆ. ಮನ್ಮಥಬಾಣಗಳಿಂದ ನನ್ನಂತೆ ಸಂಧ್ಯೆಯ ಮನಸ್ಸೂ ಚಂಚಲವಾಗಿ ಕಾಮವಿಕಾರವಾಗಿತ್ತು. ಋಷಿಗಳ ಎದುರಿನಲ್ಲಿ ಮರ್ಯಾದೆಯಿಲ್ಲದೆ ಕಾಮವಿಕಾರವನ್ನು ಪ್ರಕಟಿಸಿದ ತನ್ನ ನಡವಳಿಕೆ ಬಗ್ಗೆ ಪಶ್ಚಾತ್ತಾಪಪಟ್ಟು ತುಂಬಾ ದುಃಖಿಸಿದಳು. ನಾನು ಮನ್ಮಥನನ್ನು ಶಪಿಸಿ ಅಂತರ್ಧಾನನಾದೆ. ಅಲ್ಲೇ ಇದ್ದ ನನ್ನ ಪುತ್ರಿ ಸಂಧ್ಯೆ ತುಂಬಾ ಚಿಂತಿಸುತ್ತಾ ಧ್ಯಾನಪರವಶಳಾದಳು. ಸ್ವಲ್ಪ ಹೊತ್ತು ಧ್ಯಾನಿಸುತ್ತಾ ಹಿಂದೆ ನಡೆದುದನ್ನು ಯಥಾಯೋಗ್ಯವಾಗಿ ವಿಮರ್ಶಿಸಿದಳು.

'ಆಗಷ್ಟೇ ಜನಿಸಿದ ಯುವತಿಯಾದ ನನ್ನನ್ನು ನೋಡಿ ತಂದೆ ಬ್ರಹ್ಮನಿಗೆ ಕಾಮವಿಕಾರವಾಯಿತು. ನನ್ನ ತಂದೆ ಮಾತ್ರವಲ್ಲದೆ, ನನ್ನ ಸೋದರ ಸಮಾನರಾದ ಮರೀಚಿ ಮುಂತಾದ ಜಿತೇಂದ್ರಿಯರಾದ ಮುನಿಗಳಿಗೂ ಕಾಮವಿಕಾರ ಉಂಟಾಯಿತು. ದುರಾತ್ಮನಾದ ಮನ್ಮಥ ನನ್ನ ಮನಸ್ಸನ್ನೂ ಹಾಳುಮಾಡಿದ. ಆದ್ದರಿಂದಲೇ ನನ್ನ ಮನಸ್ಸು ಮುನಿಗಳನ್ನು ನೋಡಿ ತುಂಬಾ ಚಂಚಲವಾಯಿತು. ಮನ್ಮಥ ಮಾಡಿದ ಪಾಪಕ್ಕೆ ಯೋಗ್ಯವಾದ ಫಲವನ್ನು ಪಡೆದ. ಬ್ರಹ್ಮ ಕೋಪಗೊಂಡು ಮನ್ಮಥನನ್ನು ಶಪಿಸಿ, ತಕ್ಕ ಶಾಸ್ತಿ ಮಾಡಿದ. ಈಗ ನಾನೂ ನನ್ನ ಪಾಪಕ್ಕೆ ಪ್ರಾಯಶ್ಚಿತ್ತವನ್ನು ಪಡೆಯಲೇಬೇಕು. ನನ್ನನ್ನು ನೋಡಿ ತಂದೆ ಮತ್ತು ಸಹೋದರರೇ ಕಾಮೇಚ್ಛೆಯುಳ್ಳವರಾದರೆಂದರೆ, ನನಗಿಂತ ಪಾಪಿಷ್ಠೆ ಇನ್ನಾರೂ ಇಲ್ಲ. ಅಲ್ಲದೆ, ನನಗೂ ನನ್ನ ತಂದೆ ಮತ್ತು ಸಹೋದರರಲ್ಲಿ ಸಹಜವಲ್ಲದ ಕಾಮವಿಕಾರ ಉಂಟಾಯಿತು. ಈ ನನ್ನ ಪಾಪಕ್ಕೆ ತಕ್ಕ ಪ್ರಾಯಶ್ಚಿತ್ತವನ್ನು ನಾನೇ ಮಾಡಿಕೊಳ್ಳುವೆ. ನನ್ನ ಶರೀರವನ್ನು ಅಗ್ನಿಯಲ್ಲಿ ವೇದೋಕ್ತ ವಿಧಿಯಿಂದ ಹೋಮ ಮಾಡುವೆ. ಇನ್ನು ಮುಂದೆ ಭೂಮಿಯಲ್ಲಿ ಹುಟ್ಟಿದೊಡನೆಯೇ ಪ್ರಾಣಿಗಳು ಕಾಮವಿಕಾರಕ್ಕೊಳಗಾಗಬಾರದೆಂಬ ನಿಯಮವನ್ನು ಸ್ಥಾಪಿಸುವೆ. ಇದಕ್ಕಾಗಿ ನಾನು ಭಯಂಕರವಾದ ತಪಸ್ಸನ್ನಾಚರಿಸುವೆ. ನಂತರ ಪ್ರಾಣ ಬಿಡುವೆ. ಯಾವ ನನ್ನ ಶರೀರದಲ್ಲಿ ತಂದೆ ಬ್ರಹ್ಮನಿಗೂ ಸಹೋದರರಾದ ಮಾನಸಪುತ್ರರಿಗೂ ಸಹ ಕಾಮಾಭಿಲಾಷೆಯುಂಟಾಯಿತೋ ಅದು ಕಲುಷಿತವಾದುದು. ಪುಣ್ಯಕ್ಕೆ ಸಾಧನವಾಗಲಾರದ ಶರೀರದಿಂದ ಪುಣ್ಯ ಸಂಪಾದಿಸಲಾಗದು' ಎಂದು ಆಲೋಚಿಸಿದ ಆ ಸಂಧ್ಯೆಯು ತಪಸ್ಸು ಮಾಡಲು ಚಂದ್ರಭಾಗಾನದಿ ಹುಟ್ಟುವ ಚಂದ್ರಭಾಗಪರ್ವತಕ್ಕೆ ತೆರಳಿದಳು.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

'ಯುವಜನರು ಉದ್ದಿಮೆ ಆರಂಭಿಸಲು ಪ್ರಧಾನ ಮಂತ್ರಿ ಮುದ್ರಾ ಯೋಜನೆ ಅಡಿ ₹ 10 ಲಕ್ಷದ ಸಾಲವನ್ನು ನೀಡಲಾಗುತ್ತಿದೆ. ದೇಶದ ಎಲ್ಲ ಯುವಕರಿಗೂ ಈ ಯೋಜನೆ ಅಡಿ ಸಾಲ ನೀಡಲಾಗುತ್ತದೆ. ಅರ್ಹರಿಗೆ ಈಗಾಗಲೇ ಸಾಲ ಮಂಜೂರಾಗಿದೆ. ಈ ಪೋಸ್ಟ್‌ನಲ್ಲಿ ಇರುವ ಲಿಂಕ್ ಅನ್ನು ಕ್ಲಿಕ್ ಮಾಡಿ, ಅರ್ಜಿ ಹಾಕಿ. ಜತೆಗೆ ಅರ್ಜಿ ಶುಲ್ಕ ಮತ್ತು ಪ್ರಕ್ರಿಯಾ ಶುಲ್ಕವಾಗಿ ₹4,500 ಅನ್ನು ಲಿಂಕ್‌ನಲ್ಲಿ ಸೂಚಿಸಿರುವ ಖಾತೆಗೆ ಜಮೆ ಮಾಡಿ. ಒಂದೇ ದಿನದಲ್ಲಿ ನಿಮ್ಮ ಖಾತೆಗೆ ₹ 10 ಲಕ್ಷ ಬರಲಿದೆ' ಎಂಬ ವಿವರ ಇರುವ ಪೋಸ್ಟ್ ಫೇಸ್‌ಬುಕ್‌ನಲ್ಲಿ ವೈರಲ್ ಆಗಿದೆ.

'ಈ ಪೋಸ್ಟ್‌ನಲ್ಲಿ ಇರುವ ವಿವರ ಸುಳ್ಳು. ಇದೊಂದು ಸುಳ್ಳು ಸುದ್ದಿ' ಎಂದು ಪಿಐಬಿ ಫ್ಯಾಕ್ಟ್‌ಚೆಕ್ ಪ್ರಕಟಿಸಿದೆ. 'ಮುದ್ರಾ ಯೋಜನೆ ಅಡಿ ಯಾರಿಗೂ ಸಾಲವನ್ನು ಪೂರ್ವ ಮಂಜೂರು ಮಾಡಿರುವುದಿಲ್ಲ. ಇದಕ್ಕಾಗಿ ಅರ್ಜಿ ಶುಲ್ಕವಾಗಿ ₹4,500 ಸಂಗ್ರಹಿಸುತ್ತಿಲ್ಲ. ಈ ಲಿಂಕ್‌ನಲ್ಲಿರುವ ಖಾತೆಗೆ ಹಣ ಜಮೆ ಮಾಡಿ, ಹಣ ಕಳೆದುಕೊಳ್ಳಬೇಡಿ' ಎಂದು ಪಿಐಬಿ ತನ್ನ ಫ್ಯಾಕ್ಟ್‌ಚೆಕ್‌ನಲ್ಲಿ ವಿವರಿಸಿದೆ.

ಗುಂಡಣ್ಣ

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ | ಬುಧವಾರ ಮೇ 25, 2022

ಶ್ರೀಶುಭಕೃತ್ ನಾಮ ಸಂವತ್ಸರ ಉತ್ತರಾಯಣ - ವಸಂತ ಋತು ತಿಥಿ: ವೈಶಾಖ ಕೃಷ್ಣದಶಮಿ ಗಂ. 10-33 ನಕ್ಷತ್ರ: ಉತ್ತರಾಭಾದ್ರಾ ಗಂ. 23-20, ಯೋಗ: ಪ್ರೀತಿ ಗಂ. 22-44, ಕರಣ: ವಿಷ್ಟಿ ಗಂ. 10-33, ವೃಷಭ ಮಾಸದ 10 ನೇ ದಿನ.
ರಾಹುಕಾಲ : ಮಧ್ಯಾಹ್ನ 12:00 - 01:30
ಸೂರ್ಯೋದಯ : 06-07 ಸೂರ್ಯಾಸ್ತ : 06-48
ಮುಸ್ಲಿಂ ದಿನಾಂಕ : 23 ಶವ್ವಾಲ್ ಅದೃಷ್ಟ ಸಂಖ್ಯೆ : 3, 7

ಮೇಷ: ನಿಮ್ಮಗೊಂದಲಕ್ಕೆ ಕಾರಣವನ್ನು ತಿಳಿದುಕೊಳ್ಳುವ ಪ್ರಯತ್ನ ಮಾಡಿ. ಅದರಿಂದಾಗಿ ಕ್ಷುಲ್ಲಕ ಕಾರಣಕ್ಕೆ ಉಂಟಾದ ಮನಸ್ತಾಪಗಳು ಬಗೆಹರಿದು ನೆಮ್ಮದಿ ಕಾಣುವಿರಿ. ವರಿಷ್ಠ ಜನರ ಜೊತೆ ಸಂಪರ್ಕ ಬೆಳೆಯಲಿದೆ.

ವೃಷಭ: ಈ ದಿನ ನೀವು ಮಾಡುವ ಕೆಲಸವನ್ನು ಸಮಯೋಚಿತ ಬುದ್ಧಿಯಿಂದ ಯೋಚಿಸಿ ಮಾಡುವುದು ಉತ್ತಮ. ಬೇರೆಯವರ ಸಹಾಯ ಪಡೆಯದೆ ನಿಮ್ಮ ಶ್ರಮದಿಂದಲೇ ಕೆಲಸವನ್ನು ಅಚ್ಚುಕಟ್ಟಾಗಿ ನಿರ್ವಹಿಸುವುದು ಲಾಭದಾಯಕ.

ಮಿಥುನ: ಹೋಟೆಲ್ ಉದ್ಯಮದವರಿಗೆ ಇಂದು ಅತ್ಯಧಿಕ ಲಾಭ ಪ್ರಾಪ್ತಿ. ಸಹೋದ್ಯೋಗಿಗಳಿಂದ ಕಾರ್ಯಾನುಕೂಲ ಆಗುತ್ತದೆ. ಧರ್ಮ ಕಾರ್ಯಗಳಲ್ಲಿ ಭಾಗವಹಿಸುವುದು, ಅಥವಾ ಆಸಕ್ತಿ ಬೆಳೆಸಿಕೊಳ್ಳುವುದು ಅಗತ್ಯವಾಗುವುದು.

ಕರ್ಕಾಟಕ: ನೇರ ನಡೆ-ನುಡಿಯಿಂದಾಗಿ ವ್ಯವಹಾರದಲ್ಲಿ ಕುಂಠಿತ. ಮದುವೆಗೆ ಇರುವ ಅಡಚಣೆಗಳನ್ನು, ಸಮಸ್ಯೆ ಬಗೆಹರಿಸಿಕೊಳ್ಳುವ ಬಗ್ಗೆ ಗಮನಹರಿಸಿ. ವಕೀಲರಿಗೆ ಕಾರ್ಯದಲ್ಲಿ ವಿಜಯ, ಸಾಧಿಸಿದ ಸಂತಸ ಸಿಗಲಿದೆ.

ಸಿಂಹ: ಜೀವನ ಶೈಲಿಯಲ್ಲಿ ಸಮತೋಲಿತ ದಿನಚರಿಯನ್ನು ಅನುಸರಿಸುವುದು ಒಳ್ಳೆಯದು. ಪಿತ್ತರಸಕ್ಕೆ ಸಂಬಂಧಿಸಿದ ದೈಹಿಕ ಸಮಸ್ಯೆಗಳನ್ನು ಹೊಂದುವ ಸಾಧ್ಯತೆಗಳಿದೆ. ಆರೋಗ್ಯದ ಬಗ್ಗೆ ವಿಶೇಷ ಕಾಳಜಿಯನ್ನು ವಹಿಸಿರಿ.

ಕನ್ಯಾ: ನಿಮ್ಮನ್ನು ನಂಬಿ ಒಂದು ಸಂಸ್ಥೆ ಹೊಸ ಕಾರ್ಯವೊಂದಕ್ಕೆ ಅಣಿಯಾಗಲಿದೆ. ಪ್ರೀತಿಯ ಜೀವನದಲ್ಲಿ ಅನೇಕ ದೀರ್ಘಕಾಲೀನ ಬದಲಾವಣೆಗಳಾಗಬಹುದು. ದಾಂಪತ್ಯ ಜೀವನದಲ್ಲಿ ಬಿಸಿಲು ನೆರಳಿನ ಪರಿಸ್ಥಿತಿ.

ತುಲಾ: ವಿದ್ಯುತ್ ಉಪಕರಣಗಳ ಮಾರಾಟಗಾರರಿಗೆ ಹೆಚ್ಚಿನ ವ್ಯಾಪಾರ. ನಿಮ್ಮ ತಂಡವನ್ನು ನಿಭಾಯಿಸುವಲ್ಲಿ ಯಶಸ್ವಿಯಾಗುತ್ತೀರಿ. ನಿಮ್ಮ ಮುಂದಾಳುತ್ವದಲ್ಲೇ ಸಕಲ ಕಾರ್ಯಗಳು ಜರುಗಲಿವೆ. ಮೆಡಿಕಲ್ ವಿದ್ಯಾರ್ಥಿಗಳಿಗೆ ಸುದಿನ.

ವೃಶ್ಚಿಕ: ಮನೆ ನಿರ್ಮಾಣ ಕೆಲಸಕ್ಕೆ ಹಿತೈಷಿಗಳ ಸಲಹೆ ಸಹಕಾರ. ಅನುಮಾನದ ವಿಚಾರಕ್ಕೆ ನಿಮ್ಮ ಮೇಲಧಿಕಾರಿಯಿಂದ ದ್ವಂದ್ವವಿಲ್ಲದ ಅಭಿಪ್ರಾಯ ಸಿಗುತ್ತದೆ. ತಿಂಡಿ ತಿನಿಸು ಪದಾರ್ಥಗಳ ಮಾರಾಟಗಾರರಿಗೆ ಹೆಚ್ಚಿನ ಲಾಭ ಸಿಗುವುದು.

ಧನು: ಮಿತ್ರರೊಡನೆ ಸಣ್ಣಮಟ್ಟದ ಉತ್ಪಾದನಾ ಘಟಕ ಪ್ರಾರಂಭಿಸುವ ಯೋಚನೆಗಳು. ರಾಜಕೀಯ ವ್ಯಕ್ತಿಗಳಿಂದ ವೈಯಕ್ತಿಕ ಅನುಕೂಲವಾಗುವ. ನೀವು ಕೊಟ್ಟ ಮಾತನ್ನು ಉಳಿಸಿ ಕೊಳ್ಳುವ ಕಾರ್ಯದಲ್ಲಿ ಜಯ ಕಾಣುವಿರಿ.

ಮಕರ: ಸಂಗೀತಾಭ್ಯಾಸಿಗರಿಗೆ ದೊಡ್ಡ ವೇದಿಕೆಯಲ್ಲಿ ಗಾಯನ ಪ್ರದರ್ಶಿಸುವ ಅವಕಾಶ. ಮನಸ್ಸಿಗೆ ಹಿತವಾಗುವ ವಾತಾವರಣ. ವ್ಯಥಾ ಕಾಲಹರಣ ಬೇಡ. ಕೆಲಸದ ನಿಮಿತ್ತ ದೂರದ ಊರಿಗೆ ತೆರಳಬೇಕಾಗಬಹುದು.

ಕುಂಭ: ಇಷ್ಟದ ಕೆಲಸವನ್ನು ಈಡೇರಿಸಿಕೊಳ್ಳಲು ಹಿರಿಯರ ಮನ ಒಲಿಸಬೇಕಾಗುವುದು. ನಿಮ್ಮ ಪ್ರಯತ್ನ ಸಫಲವಾಗುತ್ತದೆ. ಮನೆಯಲ್ಲಿ ಸಂತಸ. ಸ್ಟೇಷನರಿ ವಸ್ತುಗಳ ತಯಾರಕರು ಹಾಗೂ ಮಾರಾಟದಾರರಿಗೆ ಅಧಿಕ ವ್ಯಾಪಾರ.

ಮೀನ: ನಿಮ್ಮ ನಿಲುವನ್ನು ಬದಲಿಸಿಕೊಳ್ಳುವುದರಿಂದ ಎಲ್ಲರ ಪ್ರೀತಿಗೆ ಪಾತ್ರರಾಗುತ್ತೀರಿ. ತಾಳ್ಮೆಯಿಂದ ವ್ಯವಹರಿಸಿದಲ್ಲಿ ಜಯ. ಮುಂದಾಲೋಚನೆಯಿಂದ ಯೋಜನೆ ರೂಪಿಸಿ. ಉತ್ತಮ ಪರಿಶ್ರಮಕ್ಕೆ ಅಧಿಕ ಲಾಭ ಸಿಗುತ್ತದೆ.

ಬೆರಗಿನ ಬೆಳಕು

ಗುರುರಾಜ ಕರಜಗಿ

ತಾಳ್ಮೆಯೊಂದೇ ಮದ್ದು

ಗುದ್ದಲಿಯಿನಾದೀತೆ ಮಲೆ ಕಣಿವೆ ಸಮದ ನೆಲ ? |
ಮದ್ದು ತಡೆವುದೆ ಮುಪ್ಪು ಕಳ್ಳನವೊಲಮರೆ? ||
ಯುದ್ಧತಾಪದೆ ಶಾಂತಿಶೀತಲತೆಯುದಿಸೀತೆ? |
ಸಿದ್ಧವಿರು ಸೈರಣೆಗೆ - ಮಂಕುತಿಮ್ಮ || 635 ||

ಪದ-ಅರ್ಥ: ಗುದ್ದಲಿಯಿನಾದೀತೆ = ಗುದ್ದಲಿಯಿನ್ (ಗುದ್ದಲಿಯಿಂದ) + ಆದೀತೆ, ಮಲೆ = ಬೆಟ್ಟ, ಕಳ್ಳನವೊಲಮರೆ = ಕಳ್ಳನವೊಲ್ (ಕಳ್ಳನ ಹಾಗೆ) + ಅಮರೆ(ಅಂಟಿಕೊಳ್ಳೆ), ಶಾಂತಿಶೀತಲತೆಯುದಿಸೀತೆ = ಶಾಂತಿ + ಶೀತಲತೆ + ಉದಿಸೀತೆ, ಸೈರಣೆ = ತಾಳ್ಮೆ

ವಾಚ್ಯಾರ್ಥ: ಒಂದು ಕೈ ಗುದ್ದಲಿಯಿಂದ, ಬೆಟ್ಟ ಕಣಿವೆಗಳನ್ನು ಸಮನಾಗಿ ಮಾಡುವುದು ಸಾಧ್ಯವೆ? ವೃದ್ಧಾಪ್ಯ ಕಳ್ಳನ ಹಾಗೆ ಆವರಿಸಿಕೊಂಡಾಗ ಔಷಧಿ ಅದನ್ನು ತಡೆಯುವುದೆ? ಯುದ್ಧದ ಕೋಲಾಹಲದಿಂದ ಶಾಂತಿ ಮತ್ತು ಸುಂದರ ವಾತಾವರಣ ನಿರ್ಮಾಣವಾದೀತೆ? ಇವೆಲ್ಲಕ್ಕೂ ಒಂದೇ ಸಿದ್ಧತೆ, ಅದು ಸೈರಣೆ.

ವಿವರಣೆ: ಇಂದಿನ ಪ್ರಪಂಚ ತುಂಬ ಆತುರದ್ದು. Fast food ಜಗತ್ತು. ಎಲ್ಲವೂ ಬೇಗನೆ ಆಗಿಬಿಡಬೇಕು. ಕೆಲವೊಮ್ಮೆ ಅಸಾಧ್ಯವೆಂಬುದನ್ನು ಮಾಡಲು ಹೋಗಿ ಪೆಟ್ಟು ತಿಂದವರು ಬೇಕಾದಷ್ಟು ಜನ. ತಾವು ಹಿಮಾಚಲ ಪ್ರದೇಶದಲ್ಲಿ ಪ್ರಯಾಣ ಮಾಡಿದ್ದರೆ ಅಲ್ಲಿ ರಸ್ತೆ ಮಾಡುವ ಪರಿಪಾಟಲು ಅರ್ಥವಾಗುತ್ತದೆ. ಅಲ್ಲಿ ಒಂದು ಚೂರೂ ಸಮತಟ್ಟಾದ ನೆಲವಿಲ್ಲ. ಬರೀ ಬೆಟ್ಟ, ಕಣಿವೆಗಳ ಪ್ರದೇಶ. ದೊಡ್ಡ ಬೆಟ್ಟಗಳನ್ನು ಅಗಿದು ಕತ್ತರಿಸಬೇಕು, ಕಣಿವೆಗಳನ್ನು ಮುಚ್ಚಬೇಕು, ನೆಲವನ್ನು ಸಮತಟ್ಟಾಗಿ ಮಾಡಿ, ನಂತರ ರಸ್ತೆಗೆ ಕಾಂಕ್ರೀಟ್ ಹಾಕಬೇಕು. ಅಲ್ಲಿ ಎಲ್ಲ ದೈತ್ಯ ಯಂತ್ರಗಳು ಕಾರ್ಯಮಾಡುತ್ತವೆ. ಒಬ್ಬ ಮನುಷ್ಯ ಅಂತಹ ರಸ್ತೆಯನ್ನು ಮಾಡಲು ಹೊರಟ ಎಂದಿಟ್ಟುಕೊಳ್ಳಿ. ಅವನು ಒಬ್ಬನಷ್ಟೇ ಅಲ್ಲ, ಅವನ ಬಳಿ ಒಂದು ಗುದ್ದಲಿಯನ್ನು ಬಿಟ್ಟರೆ ಯಾವ ಉಪಕರಣವೂ ಇಲ್ಲ. ಆಗ, ಅವನದ್ದು ಆತುರ ಸ್ವಭಾವ, ಅವನಲ್ಲಿ ಉತ್ಸಾಹವಿದೆ ಆದರೆ ಯೋಜನೆಯಿಲ್ಲ ಎಂದುಕೊಳ್ಳುವದಿಲ್ಲವೆ? ಅದೊಂದು ನೀಗದ ಕಾರ್ಯ.

ಮುಪ್ಪು ಬರುವುದನ್ನು ತಪ್ಪಿಸುವುದು ಅಸಾಧ್ಯ. ಅದು ಪ್ರಕೃತಿ ಗುಣ, ಆದರೆ ವಿಚಿತ್ರವೆಂದರೆ, ಮುಪ್ಪು ಬರುವುದು ಗೊತ್ತೇ ಆಗುವುದಿಲ್ಲ. ಅದಕ್ಕೆ ಮುಪ್ಪಿನದು ಕಳ್ಳಹೆಜ್ಜೆ ಎನ್ನುತ್ತಾರೆ. ವಿ.ಸ. ಖಾಂಡೇಕರ್ ರವರ ಯಯಾತಿ ಕಾದಂಬರಿಯಲ್ಲಿ ಒಂದು ಸುಂದರ ಪ್ರಸಂಗ. ಯಯಾತಿಯ ತಂದೆ ನಹುಷ ಮಗನನ್ನು ಕರೆದು ಹೇಳುತ್ತಾನೆ, "ಮಗೂ, ಆ ಗೂಡಿನಲ್ಲಿರುವ, ಇಂದ್ರ ನನಗೆ ಬರೆದುಕೊಟ್ಟಿರುವ ಜಯಪತ್ರವನ್ನು ಓದು. ಈ ದೇಹ, ಇಂದ್ರನನ್ನು ಸೋಲಿಸಿದ ದೇಹ. ಆದರೆ ಈಗ ವೃದ್ಧಾಪ್ಯ ಕಳ್ಳನಂತೆ ಹಿಂದಿನ ಬಾಗಿಲಿನಿಂದ ಬಂದಿದೆ. ಅಷ್ಟು ಬಲಿಷ್ಠವಾದ ದೇಹ ಈಗ ಏಳಲಾರದಂತಾಗಿದೆ, ಇಂದ್ರನ ಜಯಪತ್ರವನ್ನು ಓದಲೂ ಈ ಕಣ್ಣುಗಳಿಗೆ ಶಕ್ತಿ ಇಲ್ಲ. ಮುಪ್ಪಿನಂಥ ಮೋಸಗಾರ ಕಳ್ಳ ಬೇರಿಲ್ಲ".

ಹೀಗೆ ಕಳ್ಳನ ಹಾಗೆ ಆವರಿಸಿಕೊಳ್ಳುವ ಮುಪ್ಪನ್ನು ತಡೆಯಲು ಯಾವುದೇ ಔಷಧಿಯಿಂದ ಆದೀತೇ? ಯುದ್ಧದ ಬೆಂಕಿ ನೆಲವನ್ನು ಸುಡುತ್ತಿದ್ದಾಗ, ಜನರ ಬದುಕು ಸುಟ್ಟು ಕರಕಾಗುತ್ತಿದ್ದಾಗ, ಶಾಂತಿ, ಸುಂದರ ವಾತಾವರಣ ಉಳಿದೀತೇ? ಶಾಂತಿ ಕದಡಿದಾಗಲೇ ಯುದ್ಧದ ಕಿಡಿ ಹಾರುವುದು, ಯುದ್ಧದಲ್ಲಿ ಭಾಗಿಯಾದವರಿಗೆ, ಅದನ್ನು ಯೋಚಿಸಿದವರಿಗೆ, ಅಲ್ಲಿ ಅನಿವಾರ್ಯವಾಗಿ ಸಿಕ್ಕಿಹಾಕಿಕೊಂಡ ಅಮಾಯಕ ಜನರಿಗೆ ಸಂಕಟ, ತಲ್ಲಣ ತಪ್ಪಿದ್ದಲ್ಲ.

ಹಾಗಾದರೆ ಇಂಥ ಪರಿಸ್ಥಿತಿಗಳನ್ನು ನಿಭಾಯಿಸುವುದು ಹೇಗೆ? ಆತುರದಲ್ಲಿ ಅಸಾಧ್ಯವಾದ ಕಾರ್ಯವನ್ನು ಕೈಗೆತ್ತಿಕೊಳ್ಳುವುದು, ಮುಪ್ಪನ್ನು ತಡೆಯುವುದು ಹಾಗೂ ಯುದ್ಧದ ಬೆಂಕಿಯಲ್ಲಿ ಶೀತಲತೆಯನ್ನು ಬಯಸುವುದು, ಇಂತಹ ಪರಿಸ್ಥಿತಿಗಳಲ್ಲಿ ಬೇಕಾದದ್ದು ಮನಸ್ಸಿನ ಸ್ಥಿರತೆ, ತಾಳ್ಮೆ, ತಾಳ್ಮೆಯೊಂದೇ ಇಂಥ ಅಸಾಮಾನ್ಯ ಪರಿಸ್ಥಿತಿಗಳಲ್ಲಿ ಬದುಕನ್ನು ಹಗುರ ಮಾಡುವುದು.

ಪದಬಂಧ 4968

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
3.ರಣಧೀರನು ಕಾಳಗ ಮಾಡಿದ ಜಾಗ (4)
5.ಯಜಮಾನನ ಸ್ವಭಾವ! (4)
6.ದಾರಿಯಲ್ಲಿನಡೆದು ಹೋಗುತ್ತಿರುವವ (4)
8.ಕಳ್ಳನ ಬಗ್ಗೆ ಇಷ್ಟು ಆಸಕ್ತಿಯೇ? (4)
11.ಜೇನುನೊಣ ಹೀರುತ್ತಿರುವ ಹೂವಿನ ಸಿಹಿ ರಸ (4)
13.ವಿವರಗಳನ್ನೊಳಗೊಂಡಿದ್ದು (4)
15.ಕರಣವಿಟ್ಟ ಘಟನೆ! (4)
16.ನಡುವೆ ಗರ ತಿರುಗಿಸಿದರೆ ಆಧೀನ! (4)

ಮೇಲಿಂದ ಕೆಳಕ್ಕೆ
1.ನಡುಮನೆ ಇಲ್ಲಿದೆ (3)
2.ನಡುವಿರುವ ಮಾಣಿ ಬಲು ನಂಬಿಕಸ್ತ! (4)
3.ದಾಳಿ ನಡೆಸಿ ತಿಂದಿದ್ದು ಶ್ರೇಷ್ಠ ಕಬ್ಬು (4)
4.ರಾಗಗಳನ್ನು ಸಂಯೋಜಿಸಿ ಕಾವ್ಯ ಗಾಯನ ಮಾಡುವ ಕಲೆ (3)
9.ಕಳ್ಳನಿಗೆ ಅಂಟಿಕೊಂಡಿರುವ ದೋಷ! (3)
10.ಕೊಡದಂತಹ ದೊಡ್ಡ ಪಾತ್ರೆ ಹಗುರವಿದೆಯಲ್ಲಾ! (3)
11.ಮರದ ಹತ್ತಿರ ಸಿಕ್ಕಿರುವ ಪಚ್ಚೆ (4)
12.ಕಸರತ್ತು ಮಾಡಿ ಹಾಕಿದ ಸಹಿ! (4)
13.ಸರಿಗೆ ತಂದಿರುವವ ಸರಿಸಮನಾದವನು (3)
14.ಪರಿಣಯಕ್ಕೆ ತಿರುಗಿದ ಪ್ರೀತಿ! (3)



4967ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಅಡಿಪಾಯ 3.ಆಯವ್ಯಯ
5.ಮಡದಿ 6.ಮರುಳ
7.ಗಹನ 9.ತಲ್ಲೀನ
11.ವಿರಾಮ 12.ಮಸೂರ
14.ಯಮಸುತ 15.ವಿನಾಯಕ

ಮೇಲಿಂದ ಕೆಳಕ್ಕೆ:
1.ಅನುರಾಗ 2.ಯಮ
3.ಆದಿ 4.ಯಮಳ
6.ಮಡಿವಂತ 8.ನವಸುಮ
10.ನಳಪಾಕ 11.ವಿದಾಯ
12.ಮತ 13.ರವಿ

ಸುಡೊಕು 5354

		4		7			3	
7			2		3	6		8
8				4			2	
4		3		1		8		6
			9		4		7	
9		8		3		4		1
1		9	3		5		8	7
	6			9				
5		7	4		1	9		3

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5353 ಸುಡೊಕು

2	4	1	6	8	3	9	7	5
9	8	5	2	4	7	6	1	3
7	6	3	1	9	5	8	4	2
4	5	9	8	2	1	7	3	6
6	1	7	3	5	4	2	9	8
8	3	2	9	7	6	4	5	1
3	2	4	7	1	8	5	6	9
5	9	6	4	3	2	1	8	7
1	7	8	5	6	9	3	2	4

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	16,214
ಇಂದಿನ ಅಂತ್ಯ	16,125
▼	89
ದಿನದ ಕನಿಷ್ಠ	16,262

ವಿನಿಮಯ ದರ

$ ಡಾಲರ್	77.57
£ ಪೌಂಡ್	97.65
€ ಯುರೊ	83.16
¥ ಯೆನ್ (100ಕ್ಕೆ)	61.18

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು

100 ಮೊಟ್ಟೆಗೆ	₹465
12 ಮೊಟ್ಟೆಗೆ	₹62

ಮೈಸೂರು

100 ಮೊಟ್ಟೆಗೆ	₹465

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1590 (1590)
ಸೋಯಾ (ರಿಫೈನ್ಡ್)	₹1570 (1560)
ಸೂರ್ಯಕಾಂತಿ (ರಿಫೈನ್ಡ್)	₹1860 (1870)
ಪಾಮೋಲಿನ್	₹1535 (1525)

ಈರುಳ್ಳಿ ಧಾರಣೆ

(ಕ್ವಿಂಟಲ್‌ಗೆ)

ದಪ್ಪ	₹1000-1200
ಮಧ್ಯಮ	₹800-1000
ಸಣ್ಣ	₹400-600

ತೆಂಗು ಧಾರಣೆ (ಸಾವಿರಕ್ಕೆ)

ಮಂಗಳೂರು
1ನೇ ದರ್ಜೆ ₹18000-27000
2ನೇ ದರ್ಜೆ ₹10000-15000

ಎನ್.ಆರ್.ಪುರ ರಬ್ಬರ್

(ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹173
ಆರ್‌ಎಸ್‌ಎಸ್-5	₹165
ಗುಡ್ ಲಾಟ್	₹160

₹ 3.12 ಕೋಟಿ ಪಾವತಿಸಲು ಚಿತ್ರಾಗೆ ನೋಟಿಸ್

ನವದೆಹಲಿ (ಪಿಟಿಐ): ರಾಷ್ಟ್ರೀಯ ಷೇರುಪೇಟೆ (ಎನ್‌ಎಸ್‌ಇ) ಮಾಜಿ ಮುಖ್ಯಸ್ಥೆ ಚಿತ್ರಾ ರಾಮಕೃಷ್ಣ ಅವರಿಗೆ ನೋಟಿಸ್ ಜಾರಿಗೊಳಿಸಿರುವ ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿ (ಸೆಬಿ), ಎನ್‌ಎಸ್‌ಇ ಆಡಳಿತದಲ್ಲಿನ ಲೋಪಗಳಿಗೆ ಸಂಬಂಧಿಸಿದ ಪ್ರಕರಣದಲ್ಲಿ ₹ 3.12 ಕೋಟಿ ಪಾವತಿಸುವಂತೆ ಹೇಳಿದೆ.

ಈ ಮೊತ್ತವನ್ನು 15 ದಿನಗಳಲ್ಲಿ ಪಾವತಿ ಮಾಡದಿದ್ದರೆ ಬಂಧಿಸಲಾಗುತ್ತದೆ, ಬ್ಯಾಂಕ್ ಖಾತೆ ಮತ್ತು ಆಸ್ತಿಯನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುತ್ತದೆ ಎಂದು ಎಚ್ಚರಿಕೆ ನೀಡಿದೆ. ಸೆಬಿ ವಿಧಿಸಿರುವ ದಂಡವನ್ನು ಪಾವತಿಸಲು ಚಿತ್ರಾ ವಿಫಲವಾಗಿರುವ ಕಾರಣ ಈ ನೋಟಿಸ್ ಜಾರಿ ಮಾಡಲಾಗಿದೆ.

ಆನಂದ ಸುಬ್ರಮಣಿಯನ್ ಅವರನ್ನು ಎನ್‌ಎಸ್‌ಇ ಗ್ರೂಪ್ ಆಪರೇಟಿಂಗ್ ಆಫೀಸರ್ ಆಗಿ ನೇಮಕ ಮಾಡುವಲ್ಲಿ ಲೋಪ ಎಸಗಿದ ಆರೋಪದ ಅಡಿಯಲ್ಲಿ ಚಿತ್ರಾ ಅವರಿಗೆ ₹ 3 ಕೋಟಿ ದಂಡವನ್ನು ಸೆಬಿ ವಿಧಿಸಿತ್ತು.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ಪ್ರಥಮ ವರ್ಷದ ಸವಿನೆನಪು

ಶ್ರೀ ವಿ. ಗೋಪಾಲ್ ರೆಡ್ಡಿ
(ಜನನ: 02.06.1972 • ಮರಣ: 25.05.2021)
(ಶ್ರೀಮತಿ ಸರಸ್ವತಮ್ಮ ಮತ್ತು ಶ್ರೀ ವೆಂಕಟೇಶ ರೆಡ್ಡಿ, ಇವರ ಜೇಷ್ಠ ಪುತ್ರ)
ಬೆಳ್ಳಂದೂರು
ನಿಮ್ಮ ಸವಿನೆನಪು ನಮ್ಮಲ್ಲಿ ಚಿರಸ್ಮರಣೆಯಾಗಿ ಉಳಿದಿದೆ.
ಸದಾ ನಿಮ್ಮ ನೆನಪಿನಲ್ಲಿ:
ಪತ್ನಿ: ಶ್ರೀಮತಿ ರೂಪ ಮತ್ತು ಮಕ್ಕಳು ಹಾಗೂ ಕುಟುಂಬಸ್ಥರು.

ಮೊದಲನೇ ವರ್ಷದ ಪುಣ್ಯ ಸ್ಮರಣೆ

ಶ್ರೀಮತಿ ಅನಿತ ಕೃಷ್ಣ
W/o ಬಿ.ಸಿ. ಕೃಷ್ಣ
ಇಂತಿ
ಪತಿ, ಮಕ್ಕಳು, ಮೊಮ್ಮಗಳು ಮತ್ತು ಕುಟುಂಬ ಸದಸ್ಯರು

ಜೀವನದಲ್ಲಿ ನೀವು ನಿರ್ವಹಿಸಿದ ಮೌಲ್ಯಗಳನ್ನು ನಾವು ಸದಾಕಾಲ ಅನುಸರಿಸುತ್ತೇವೆ.

25 - 05 - 2021
ಎಂ.ಎನ್.ರಾಜಣ್ಣ ರವರು
ಮುದ್ದೇನಹಳ್ಳಿ, ನಂದಿಗ್ರಾಮ, ಚಿಕ್ಕಬಳ್ಳಾಪುರ ಜಿಲ್ಲೆ.
ಜ್ಞಾನದ ಚಿಲುಮೆ, ಉತ್ತೇಜನದ ಗಣಿ ಮತ್ತು ಪ್ರೋತ್ಸಾಹದ ಕಾರಂಜಿಯಾಗಿದ್ದ ಇವರು ತಮ್ಮ ಜೀವನದ ಗೌರವ ಮತ್ತು ಮೌಲ್ಯಗಳ ಅನುಭವಗಳನ್ನು ನಮ್ಮೆಲ್ಲರ ಉಪಜೀವನಕ್ಕೆ ಕೊಡುಗೆಯಾಗಿ ನೀಡಿದ್ದಾರೆ.
ಸವಿನೆನಪಿನಲ್ಲಿರುವ
ಪುಷ್ಪಾ, ನಿರ್ಮಲಾ, ಮೋಹನ್ ಮತ್ತು ಶ್ವೇತಾ ಹಾಗೂ ಕುಟುಂಬ ಸದಸ್ಯರು, ಯಲಹಂಕ.

12ನೇ ವರ್ಷದ ಚಿರಸ್ಮರಣೆ



ಶ್ರೀ|| ಹೆಚ್.ಕೆ.ಚಿಂದಯ್ಯ
(ನಿವೃತ್ತ ಅಡಿಷನಲ್ ರಿಜಿಸ್ಟ್ರಾರ್ ಆಫ್ ಕೋ-ಆಪರೇಟಿವ್ ಸೊಸೈಟಿ)
ನೀವು ನಮ್ಮನ್ನೆಲ್ಲಾ ಅಗಲಿ ಇಂದಿಗೆ ಹನ್ನೆರಡು ವರ್ಷವಾಯಿತು
ನೀವು ನಮ್ಮ ಹೃದಯಗಳಲ್ಲಿ ಚಿರಸ್ಥಾಯಿಯಾಗಿರುವಿರಿ ನಿಮ್ಮ ಆತ್ಮಕ್ಕೆ ಶಾಂತಿನೀಡಲೆಂದು ದೇವರಲ್ಲಿ ಪ್ರಾರ್ಥಿಸುತ್ತೇವೆ.
ಮಕ್ಕಳು, ಮೊಮ್ಮಕ್ಕಳು ಹಾಗೂ ಕುಟುಂಬವರ್ಗದವರು

ಒಂದೆರಡು ದಿನಗಳಲ್ಲಿ ಅಧಿಸೂಚನೆ ಪ್ರಕಟಿಸುವ ಸಾಧ್ಯತೆ

ಸಕ್ಕರೆ ರಫ್ತು ನಿರ್ಬಂಧಕ್ಕೆ ಚಿಂತನೆ

ನವದೆಹಲಿ/ಮುಂಬೈ (ರಾಯಿಟರ್ಸ್/ಪಿಟಿಐ): ಕೇಂದ್ರ ಸರ್ಕಾರವು ಸಕ್ಕರೆ ರಫ್ತಿಗೆ ನಿರ್ಬಂಧ ವಿಧಿಸಲು ಚಿಂತನೆ ನಡೆಸಿದೆ ಎಂದು ಮೂಲಗಳು ತಿಳಿಸಿವೆ. ಪ್ರಸಕ್ತ ಹಂಗಾಮಿನಲ್ಲಿ ಸಕ್ಕರೆ ರಫ್ತನ್ನು 1 ಕೋಟಿ ಟನ್‌ಗೆ ಮಿತಿಗೊಳಿಸಲು ಕೇಂದ್ರ ಆಲೋಚಿಸುತ್ತಿದೆ ಎಂದು ಗೊತ್ತಾಗಿದೆ.

ದೇಶಿ ಮಾರುಕಟ್ಟೆಯಲ್ಲಿ ಸಕ್ಕರೆ ಬೆಲೆ ಹೆಚ್ಚಾಗದಂತೆ ನೋಡಿಕೊಳ್ಳಲು ಈ ಕ್ರಮ ಎನ್ನಲಾಗಿದೆ. ಆರು ವರ್ಷಗಳಿಂದ ಈಚೆಗೆ ಇಂತಹ ನಿರ್ಬಂಧಗಳು ಜಾರಿಗೆ ಬಂದಿರಲಿಲ್ಲ. ವಿಶ್ವದಲ್ಲಿ ಅತಿಹೆಚ್ಚು ಸಕ್ಕರೆ ಉತ್ಪಾದನೆ ಆಗುವುದು ಭಾರತದಲ್ಲಿ. ರಫ್ತಿನಲ್ಲಿ ಭಾರತವು ಎರಡನೆಯ ಸ್ಥಾನದಲ್ಲಿದೆ. ಬ್ರೆಜಿಲ್ ಮೊದಲ ಸ್ಥಾನದಲ್ಲಿದೆ. ಸಕ್ಕರೆ ರಫ್ತು ನಿರ್ಬಂಧಕ್ಕೆ ಸಂಬಂಧಿಸಿದ ಅಧಿಸೂಚನೆಯು ಒಂದೆರಡು ದಿನಗಳಲ್ಲಿ ಹೊರಬೀಳಲಿದೆ ಎಂದು ಮೂಲವೊಂದು ಹೇಳಿದೆ.

ಬ್ರೆಜಿಲ್‌ನಲ್ಲಿ ಸಕ್ಕರೆ ಉತ್ಪಾದನೆ ಕಡಿಮೆ ಆಗಿದೆ. ಕಚ್ಚಾ ತೈಲ ಬೆಲೆ ಏರಿಕೆ ಆಗಿರುವ ಕಾರಣ, ಅಲ್ಲಿನ ಸಕ್ಕರೆ ಕಾರ್ಖಾನೆಗಳು ಕಬ್ಬಿನಿಂದ ಹೆಚ್ಚಿನ ಪ್ರಮಾಣದಲ್ಲಿ ಎಥೆನಾಲ್ ಉತ್ಪಾದಿಸುತ್ತಿವೆ. ಇದರಿಂದಾಗಿ ಜಾಗತಿಕ ಮಟ್ಟದಲ್ಲಿ ಸಕ್ಕರೆ ಬೆಲೆ ಹೆಚ್ಚಾಗಿದೆ.

ಮುಖ್ಯಾಂಶಗಳು
- ಸಕ್ಕರೆ ಬೆಲೆ ಏರಿಕೆ ನಿಯಂತ್ರಣ ಉದ್ದೇಶ
- ಸಕ್ಕರೆ ಕಂಪನಿಗಳ ಷೇರು ಮೌಲ್ಯ ಇಳಿಕೆ

ಆರಂಭದಲ್ಲಿ ಕೇಂದ್ರವು ಸಕ್ಕರೆ ರಫ್ತನ್ನು 80 ಲಕ್ಷ ಟನ್‌ಗೆ ಸೀಮಿತ ಮಾಡಲು ಯೋಚಿಸಿತ್ತು. ಆದರೆ, ಉತ್ಪಾದನಾ ಅಂದಾಜು ಹೆಚ್ಚಳವಾದ ಕಾರಣ, ತುಸು ಹೆಚ್ಚು ಸಕ್ಕರೆ ರಫ್ತಿಗೆ ಅವಕಾಶ ಕೊಡಲು ಸರ್ಕಾರ ತೀರ್ಮಾನಿಸಿದೆ ಎಂದು ಗೊತ್ತಾಗಿದೆ.

ಸರ್ಕಾರದ ಸಬ್ಸಿಡಿ ಇಲ್ಲದೆ, 2021-22ನೆಯ ಮಾರುಕಟ್ಟೆ ವರ್ಷದಲ್ಲಿ ಒಟ್ಟು 85 ಲಕ್ಷ ಟನ್ ಸಕ್ಕರೆ ರಫ್ತಿಗೆ ಭಾರತದ ಸಕ್ಕರೆ ಕಾರ್ಖಾನೆಗಳು ಈಗಾಗಲೇ ಸಹಿ ಹಾಕಿವೆ. ಇಷ್ಟು ಪ್ರಮಾಣದಲ್ಲಿ 71 ಲಕ್ಷ ಟನ್ ಸಕ್ಕರೆಯನ್ನು ಈಗಾಗಲೇ ರವಾನೆ ಮಾಡಲಾಗಿದೆ.

ದೇಶದ ಪ್ರಮುಖ ಸಕ್ಕರೆ ಕಾರ್ಖಾನೆಗಳಾದ ಬಲರಾಮ್‌ಪುರ ಚಿನಿ, ದಾಲ್ಮಿಯಾ ಭಾರತ್ ಷುಗರ್, ಧಾಂಪುರ ಷುಗರ್ ಮಿಲ್ಸ್, ದ್ವಾರಿಕೇಶ್ ಷುಗರ್ ಇಂಡಸ್ಟ್ರೀಸ್ ಮತ್ತು ಶ್ರೀರೇಣುಕಾ ಷುಗರ್ಸ್ ಷೇರು ಮೌಲ್ಯವು ಮಂಗಳವಾರ ಗರಿಷ್ಠ ಶೇಕಡ 8ರವರೆಗೆ ಕುಸಿದಿವೆ.

1 ಕೋಟಿ ಟನ್ ಸಕ್ಕರೆ ರಫ್ತಿಗೆ ಅವಕಾಶ ಇರುವುದು ಸಣ್ಣದೇನೂ ಅಲ್ಲ ಎಂದು ವರ್ತಕರು ಹೇಳಿದ್ದಾರೆ. 1 ಕೋಟಿ ಸಕ್ಕರೆ ರಫ್ತು ಮಾಡಿದ ನಂತರ, ಅಕ್ಟೋಬರ್ 1ರ ಸುಮಾರಿಗೆ ದೇಶದಲ್ಲಿ 60 ಲಕ್ಷ ಟನ್ ಸಕ್ಕರೆ ಲಭ್ಯವಿರುತ್ತದೆ. ಇದು ಡಿಸೆಂಬರ್ ತ್ರೈಮಾಸಿಕದಲ್ಲಿನ ಹಬ್ಬಗಳ ಸಂದರ್ಭದಲ್ಲಿ ಬರುವ ಬೇಡಿಕೆ ಪೂರೈಸಲು ಸಾಕು ಎಂದು ವರ್ತಕರುಹೇಳಿದ್ದಾರೆ.

ವಾಟ್ಸ್‌ಆ್ಯಪ್ ಮೂಲಕ ಡಿಜಿಲಾಕರ್ ಸೇವೆ

ನವದೆಹಲಿ (ಪಿಟಿಐ): ಡಿಜಿಲಾಕರ್ ಸೇವೆಗಳನ್ನು ಪಡೆದುಕೊಳ್ಳಲು ಮೈಗವ್ ಸಹಾಯವಾಣಿಯನ್ನು ವಾಟ್ಸ್‌ಆ್ಯಪ್ ಮೂಲಕ ಬಳಕೆ ಮಾಡುವ ಅವಕಾಶ ಲಭ್ಯವಾಗಿದೆ.

ಡಿಜಿಲಾಕರ್‌ನಲ್ಲಿ ಇರಿಸಿರುವ ದಾಖಲೆಗಳಿಗೆ ಮೂಲ ದಾಖಲೆಗಳಿಗೆ ಇರುವಷ್ಟೇ ಮೌಲ್ಯ ಇದೆ. ವಾಟ್ಸ್‌ಆ್ಯಪ್ ಮೂಲಕ ಡಿಜಿಲಾಕರ್ ಖಾತೆ ತೆರೆದು, ಅದನ್ನು ಅಧಿಕೃತಗೊಳಿಸಿ, ಅಲ್ಲಿಂದ ಅಗತ್ಯ ದಾಖಲೆಗಳನ್ನು ಡೌನ್‌ಲೋಡ್ ಮಾಡಿಕೊಳ್ಳುವ ಸೌಲಭ್ಯಗಳು ಸಿಗಲಿವೆ. ಡಿಜಿಲಾಕರ್ ಸೇವೆ ಪಡೆಯಲು ವಾಟ್ಸ್‌ಆ್ಯಪ್ ಬಳಕೆದಾರರು, ವಾಟ್ಸ್‌ಆ್ಯಪ್ ಮೂಲಕ +91 9013151515 ಸಂಖ್ಯೆಗೆ Hi ಎಂದು ಅಥವಾ Namaste ಎಂದು ಸಂದೇಶ ಕಳುಹಿಸಬೇಕು.

ಸೂರ್ಯಕಾಂತಿ, ಸೋಯಾ ಎಣ್ಣೆ ಸುಂಕ ರಹಿತ ಆಮದಿಗೆ ಅನುಮತಿ

ನವದೆಹಲಿ (ಪಿಟಿಐ): ವಾರ್ಷಿಕ 20 ಲಕ್ಷ ಟನ್‌ವರೆಗೆ ಕಚ್ಚಾ ಸೋಯಾ ಎಣ್ಣೆ ಮತ್ತು ಸೂರ್ಯಕಾಂತಿ ಎಣ್ಣೆಯ ಆಮದಿಗೆ ಸೀಮಾ ಸುಂಕ ಹಾಗೂ ಕೃಷಿ ಮೂಲಸೌಕರ್ಯ ಅಭಿವೃದ್ಧಿ ಸೆಸ್‌ನಿಂದ ಕೇಂದ್ರ ಸರ್ಕಾರ ವಿನಾಯಿತಿ ನೀಡಿದೆ. ದೇಶಿ ಮಾರುಕಟ್ಟೆಯಲ್ಲಿ ಅಡುಗೆ ಎಣ್ಣೆ ಬೆಲೆ ತಗ್ಗಿಸುವ ಉದ್ದೇಶದಿಂದ ಈ ಕ್ರಮ ಕೈಗೊಳ್ಳಲಾಗಿದೆ.

ಸುಂಕ ರಹಿತವಾಗಿ 20 ಲಕ್ಷ ಟನ್ ಕಚ್ಚಾ ಸೋಯಾ ಎಣ್ಣೆ ಮತ್ತು ಕಚ್ಚಾ ಸೂರ್ಯಕಾಂತಿ ಎಣ್ಣೆ ಆಮದು ಮಾಡಿಕೊಳ್ಳುವ ಅವಕಾಶವು ಎರಡು ಆರ್ಥಿಕ ವರ್ಷಗಳಿಗೆ (2022-23 ಹಾಗೂ 2023-24) ಅನ್ವಯವಾಗಲಿದೆ ಎಂದು ಕೇಂದ್ರ ಹಣಕಾಸು ಸಚಿವಾಲಯ ಹೇಳಿದೆ. 'ಈ ಕ್ರಮವು ಗ್ರಾಹಕರಿಗೆ ಸಮಾಧಾನ ತರಲಿದೆ' ಎಂದು ಕೇಂದ್ರ ಪರೋಕ್ಷ ತೆರಿಗೆಗಳ ಮಂಡಳಿಯು ಟ್ವೀಟ್ ಮಾಡಿದೆ.

ಹಣದುಬ್ಬರವನ್ನು ನಿಯಂತ್ರಿಸುವ ಉದ್ದೇಶದಿಂದ ಕೇಂದ್ರವು ಹಿಂದಿನ ವಾರ ಪೆಟ್ರೋಲ್ ಮತ್ತು ಡೀಸೆಲ್ ಮೇಲಿನ ಎಕ್ಸೈಸ್ ಸುಂಕವನ್ನು ತಗ್ಗಿಸಿತ್ತು.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ
ಸಕಲೇಶಪುರ
ಕೂಳೆ 430- 450
ನಡುಗೋಲು 500-550
ರಾಶಿ 600-650
ರಾಶಿ ಉತ್ತಮ 650-700
ಜರಡಿ 750 - 800
ಹೆರಕಿದ್ದು 1,100-1,150
ಹಸಿರು ಸಾಧಾರಣ 600-700
ಹಸಿರು ಉತ್ತಮ 900-950
ಹಸಿರು ಅತಿ ಉತ್ತಮ 1,200-1,250
ಕಾಳು ಮೆಣಸು - 490
ಅಡಿಕೆ
ಬಂಟ್ವಾಳ
ಕೋಕ 12500-25000
ಹೊಸತು 27500-45000
ಹಳತು 46000-54500
ಭದ್ರಾವತಿ
ರಾಶಿ 47599-49299
ಚಿತ್ರದುರ್ಗ
ಆಪಿ 48929-49369
ಬೆಟ್ಟೆ 38619-39059
ಕೆಂಪುಗೋಟು 29600-30000
ರಾಶಿ 48439-48889
ಕಾರ್ಕಳ
ಹೊಸತು 40000-45000
ಪುತ್ತೂರು
ಕೋಕ 11000-26000
ಹೊಸತು 27500-45000
ಸಾಗರ
ಬಿಳಿಗೋಟು 26989-29729
ಚಾಲಿ 36499-38099
ಕೋಕ 28099-28099
ಕೆಂಪುಗೋಟು 36199-36299
ರಾಶಿ 36699-48699
ಸಿಪ್ಪೆಗೋಟು 20009-21710
ಶಿವಮೊಗ್ಗ
ಬೆಟ್ಟೆ 48899-52920
ಗೊರಬಲು 18200-37329
ರಾಶಿ 46000-49499
ಸಿದ್ದಾಪುರ
ಬಿಳಿಗೋಟು 24900-31469
ಚಾಲಿ 34889-38900
ಕೋಕ 23389-31112
ಕೆಂಪುಗೋಟು 28100-31499
ರಾಶಿ 44599-49299
ತಟ್ಟಿಬೆಟ್ಟೆ 34090-44599
ಶಿರಸಿ
ಬೆಟ್ಟೆ 37199-46108
ಬಿಳಿಗೋಟು 21009-32599
ಚಾಲಿ 26899-39519
ರಾಶಿ 39389-49699
ತುಮಕೂರು
ರಾಶಿ 48000-49500
ಯಲ್ಲಾಪುರ
ಆಪಿ 54269-54269
ಬಿಳಿಗೋಟು 27811-34138
ಚಾಲಿ 35899-39310
ಕೋಕ 18899-30099
ಕೆಂಪುಗೋಟು 26919-35619
ರಾಶಿ 47182-53899
ತಟ್ಟಿಬೆಟ್ಟೆ 36509-46799

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	16000	15900	16000	215.75 ಸೆಂಟ್ಸ್
ಎಸಿ	8900	8500	8675	
ಆರ್‌ಪಿ	9500	9900	10000	ಲಂಡನ್
ಆರ್‌ಸಿ	4650	4300	4475	2041ಡಾಲರ್ಸ್

ಸೆನ್ಸೆಕ್ಸ್, ನಿಫ್ಟಿ ಇಳಿಕೆ

ಮುಂಬೈ (ಪಿಟಿಐ): ದೇಶದ ಷೇರು ಮಾರುಕಟ್ಟೆಗಳಲ್ಲಿ ಸತತ ಎರಡನೆಯ ದಿನವೂ ವಹಿವಾಟು ಇಳಿಕೆ ಕಂಡಿದೆ.

ರೂಪಾಯಿ ದುರ್ಬಲವಾಗಿರುವುದು ಹಾಗೂ ವಿದೇಶಿ ಹೂಡಿಕೆಯ ಹೊರಹರಿವು ಕೂಡ ವಹಿವಾಟಿನ ಮೇಲೆ ಪ್ರಭಾವ ಬೀರಿತು ಎಂದು ವರ್ತಕರು ತಿಳಿಸಿದ್ದಾರೆ. ವಹಿವಾಟಿನ ಆರಂಭದಲ್ಲಿ ಏರುಗತಿಯಲ್ಲಿ ಇದ್ದ ಸೆನ್ಸೆಕ್ಸ್, ಕೊನೆಯಲ್ಲಿ 236 ಅಂಶ ಕುಸಿಯಿತು.

54,052 ಅಂಶಗಳಲ್ಲಿ ವಹಿವಾಟು ಕೊನೆಗೊಳಿಸಿತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 89 ಅಂಶ ಇಳಿಯಿತು.

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ) ₹245-560
ದ್ವಿತಳಿ (ಬಿ.ವಿ) ₹250-850

ಆರತಿ ಸ್ಕ್ಯಾನ್ಸ್‌ನಲ್ಲಿ ಟಾಟಾ ಹೂಡಿಕೆ

ಬೆಂಗಳೂರು: ಆರತಿ ಸ್ಕ್ಯಾನ್ಸ್ ಪ್ರೈವೇಟ್ ಲಿಮಿಟೆಡ್‌ನಲ್ಲಿ ಟಾಟಾ ಕ್ಯಾಪಿಟಲ್ ಗ್ರೋತ್ ಫಂಡ್ ₹ 2,160 ಕೋಟಿ ಹೂಡಿಕೆ ಮಾಡಲಿದೆ. ಆರತಿ ಸ್ಕ್ಯಾನ್ಸ್ ಕಂಪನಿಯು ದೇಶದ 10 ರಾಜ್ಯಗಳಲ್ಲಿ ಅಸ್ತಿತ್ವ ಹೊಂದಿದೆ.

ಪ್ರಶ್ನೋತ್ತರ

ಪ್ರಮೋದ ಶ್ರೀಕಾಂತ ದೈತೋಟ
ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ

ಹೆಸರು ಬೇಡ, ಬೆಂಗಳೂರು

- **ಪ್ರಶ್ನೆ:** ನನ್ನ ಮಗನಿಗೆ ಒಂದು ಜರ್ಮನ್ ವಿಶ್ವವಿದ್ಯಾಲಯದಲ್ಲಿ 2021ರ ನವೆಂಬರ್‌ನಲ್ಲಿ ಪ್ರವೇಶ ಸಿಕ್ಕಿತು. ಈ ವರ್ಷದ ಫೆಬ್ರುವರಿಯಲ್ಲಿ ಬ್ಯಾಂಕ್ ಮೂಲಕ ಶಿಕ್ಷಣ ಸಾಲ ಸಿಕ್ಕಿತು. ಜರ್ಮನ್ ವೀಸಾ ಇದುವರೆಗೂ ಬಂದಿಲ್ಲ. ಹೀಗಾಗಿ ಆತ ಏಪ್ರಿಲ್‌ನಲ್ಲಿ ಜರ್ಮನಿಗೆ ಹೋಗಲಾಗಿಲ್ಲ. ಈ ನಡುವೆ ಜರ್ಮನಿಯ ವಿಶ್ವವಿದ್ಯಾಲಯವು ನನ್ನ ಮಗ ಹಾಜರಾಗಿಲ್ಲವೆಂಬ ಕಾರಣಕ್ಕೆ ಪ್ರವೇಶ ರದ್ದುಗೊಳಿಸಿದೆ. ಈ ಸಾಲದ ಬಡ್ಡಿಗೆ ಬ್ಯಾಂಕಿನವರು ನೀಡಿರುವ ದೃಢೀಕರಣ ಪತ್ರದ ಮೇಲೆ ಕಲಂ 80ಇ ಅನ್ವಯ 2022ರ ಫೆಬ್ರವರಿ, ಮಾರ್ಚ್ ತಿಂಗಳಲ್ಲಿ ತೆರಿಗೆ ವಿನಾಯಿತಿ ಪಡೆದು ತೆರಿಗೆ ಲೆಕ್ಕಾಚಾರ ಸಲ್ಲಿಸಿರುತ್ತೇನೆ. ವೀಸಾ ಇನ್ನೂ ಬಂದಿಲ್ಲದ ಕಾರಣ ನನ್ನ ಮಗ ಈ ವರ್ಷ ಜರ್ಮನಿಗೆ ವ್ಯಾಸಂಗಕ್ಕೆ ತೆರಳಲು ಸಾಧ್ಯವಾಗದು. ಹೀಗಾಗಿ, ಆದಾಯ ತೆರಿಗೆ ವಿನಾಯತಿ ನನಗೆ ಲಭ್ಯವಾಗುತ್ತದೆಯೇ?

ಉತ್ತರ: ಆದಾಯ ತೆರಿಗೆ ನಿಯಮ 80ಇ ಪ್ರಕಾರ ಶಿಕ್ಷಣ ಸಾಲಕ್ಕೆ ಪಾವತಿಸಿರುವ ಬಡ್ಡಿಯ ಮೇಲೆ ಆದಾಯ ತೆರಿಗೆ ರಿಯಾಯಿತಿ ಇದೆ. ಇಲ್ಲಿ ಸಾಲದ ಬಡ್ಡಿಯ ಮೇಲಿನ ರಿಯಾಯಿತಿ, ಬಡ್ಡಿ ಪಾವತಿ ಆರಂಭಿಸಿದ ವರ್ಷದಿಂದ ಗರಿಷ್ಠ ಎಂಟು ವರ್ಷ ಸಿಗುತ್ತದೆ. ನೀವು ಈಗಾಗಲೇ ಎರಡು ಕಂತು ಪಾವತಿಸಿರುತ್ತೀರಿ ಹಾಗೂ ಪಾವತಿ ಮುಂದುವರಿಸುತ್ತಿದ್ದೀರಿ. ಮಗನ ಶಿಕ್ಷಣ ಅಲ್ಲೇ ಮುಂದುವರಿಯುವ ಸಾಧ್ಯತೆ ಇದ್ದಲ್ಲಿ ವಿಶ್ವವಿದ್ಯಾಲಯದಿಂದ ಸಮಯ ವಿನಾಯಿತಿಗೆ ಸಂಬಂಧಿಸಿದ ಸೂಕ್ತ ದಾಖಲೆ ತರಿಸಿಕೊಳ್ಳಿ. ಮೇಲೆ ಉಲ್ಲೇಖಿಸಿದ ಅವಧಿಯವರೆಗೆ ನಿಮಗೆ ತೆರಿಗೆ ರಿಯಾಯಿತಿ ಪಡೆಯಲು ಅವಕಾಶವಿದೆ. ಸಾಲ ಪಡೆದ ಬ್ಯಾಂಕಿಗೆ ಅಗತ್ಯ ಮಾಹಿತಿ ನೀಡಿ.

ಶಿಕ್ಷಣ ಮುಂದುವರಿಸದಿರುವ ನಿರ್ಧಾರ ನಿಮ್ಮದಾಗಿದ್ದರೆ, ಈಗಾಗಲೇ ನಿಮಗೆ ನೀಡಲಾದ ಸಾಲದ ಮರುಪಾವತಿಯ ಬಗ್ಗೆ ಬ್ಯಾಂಕ್ ಜೊತೆ ಚರ್ಚಿಸಿ. ಪಾವತಿಯಾಗದ ಬಡ್ಡಿಗೆ ರಿಯಾಯಿತಿ ಇರುವುದಿಲ್ಲ. ಬ್ಯಾಂಕುಗಳು ಕೂಡ ಅಂಕಪಟ್ಟಿ, ಉತ್ತೀರ್ಣತಾ ಪತ್ರ ಇತ್ಯಾದಿಗಳನ್ನು ಸಾಲ ಪರಿಶೀಲನೆಯ ಭಾಗವಾಗಿ ಸಾಲಗಾರರಿಂದ ಪಡೆಯುತ್ತವೆ. ಉದ್ದೇಶಿತ ಶಿಕ್ಷಣವನ್ನು ಸಂಪೂರ್ಣ ಸ್ಥಗಿತಗೊಳಿಸಿ ಕಂತುಗಳ ಪಾವತಿ ನಿಲ್ಲಿಸಿದ್ದರೆ ತೆರಿಗೆ ರಿಯಾಯಿತಿ ಪಡೆಯುವ ಪ್ರಮೇಯ ಬರುವುದಿಲ್ಲ. ನಿಮ್ಮ ಫಾರ್ಮ್ 16ನ್ನು ಮೇಲಿನ ಬಡ್ಡಿ ಕಳೆದು ತೆರಿಗೆ ಲೆಕ್ಕ ಹಾಕಿ ನಿಮಗೆ ನೀಡುವುದಿದ್ದರೂ, ಜುಲೈ ತಿಂಗಳೊಳಗೆ ನೀವು ತೆರಿಗೆ ವಿವರ ಸಲ್ಲಿಸುವಾಗ ಆ ನಿರ್ದಿಷ್ಟ ಕಲಂನಡಿ ವಿವರ ಶೂನ್ಯ ಎಂದು ನಮೂದಿಸಿ, ವ್ಯತ್ಯಾಸವುಳ್ಳ ತೆರಿಗೆ ಪಾವತಿಸುವ ಅವಕಾಶವಿದೆ. ಈ ಸನ್ನಿವೇಶಕ್ಕೆ ನಿರ್ದಿಷ್ಟ ಕಾನೂನು ಇಲ್ಲದಿದ್ದರೂ, ಆಂತರಿಕ ವ್ಯವಸ್ಥೆಯ ಭಾಗವಾಗಿ ಬ್ಯಾಂಕ್‌ಗಳು ಧೃಡೀಕರಣ ನೀಡುವಾಗ ತಮ್ಮದೇ ನಿಯಮ ಪಾಲಿಸುತ್ತವೆ. ಶಿಕ್ಷಣ ಮುಂದುವರಿಸದಿರುವ ನಿರ್ಧಾರ ನಿಮ್ಮದಾಗಿದ್ದರೆ, ಈಗಾಗಲೇ ನಿಮಗೆ ನೀಡಲಾದ ಸಾಲದ ಮರುಪಾವತಿಯ ಬಗ್ಗೆ ಬ್ಯಾಂಕ್‌ನಲ್ಲಿ ಚರ್ಚಿಸಿ ನಿರ್ಧಾರ ಕೈಗೊಳ್ಳಿ.

ರಾಜ್, ಉಡುಪಿ

- **ಪ್ರಶ್ನೆ:** ನಾನು ವಿದ್ಯಾರ್ಥಿ, ಮುಂದೆ ವಾಣಿಜ್ಯೋದ್ಯಮಿ ಆಗಬೇಕೆಂದುಕೊಂಡಿದ್ದೇನೆ. ನನ್ನಲ್ಲಿ ₹ 3,000 ಇದೆ. ಅದನ್ನು ಹೆಚ್ಚು ಮಾಡುವ ವಿಧಾನ ತಿಳಿಯಬೇಕು. ವಿದ್ಯಾರ್ಥಿಯಾಗಿ ಹೇಗೆ ಹಣ ಗಳಿಸಬಹುದು? ಅದಕ್ಕೆ ಸಂಬಂಧಿಸಿದ ಪುಸ್ತಕಗಳೇನಾದರೂ ಇವೆಯೇ? ನನ್ನ ಬಳಿ ಇರುವ ಹಣ ಹೂಡಿಕೆ ಮಾಡಿದರೆ ಕಡಿಮೆ ಅವಧಿಯಲ್ಲಿ ದ್ವಿಗುಣ ಆಗಬಹುದೇ?

ಉತ್ತರ: ನಿಮ್ಮ ಸಮಸ್ಯೆ, ವೈಯಕ್ತಿಕ ಹಣಕಾಸು ವಿಚಾರಕ್ಕಿಂತ ಒಂದು ಹಂತ ಹಿಂದಿನದು. ಅಂದರೆ, ಸಂಪಾದಿಸಿದ ಹಣದ ಸುತ್ತಲಿನ ವಿಚಾರಗಳಾದ ತೆರಿಗೆ, ಹೂಡಿಕೆ, ಉಳಿತಾಯ ಇತ್ಯಾದಿಗಳಿಗಿಂತ ಪೂರ್ವಹಂತದ್ದು. ನೀವು ಕ್ಷಿಪ್ರವಾಗಿ ಹಣ ಗಳಿಸುವ, ಇರುವ ಹಣವನ್ನು ಕಡಿಮೆ ಅವಧಿಯೊಳಗೆ ದ್ವಿಗುಣಗೊಳಿಸುವ ಮಾರ್ಗೋಪಾಯ ಕಂಡುಕೊಳ್ಳುವ ಧಾವಂತದಲ್ಲಿದ್ದಂತಿದೆ.

ಈಗ ನೀವು ವಿದ್ಯಾರ್ಥಿಯಾಗಿದ್ದು ಮುಂದೆ ವ್ಯಾಪಾರ ವ್ಯವಹಾರ ಕ್ಷೇತ್ರದಲ್ಲಿ ತೊಡಗಿಕೊಳ್ಳುವ ಆಕಾಂಕ್ಷೆ ಹೊಂದಿದ್ದೀರಿ. ಇದು ಶ್ಲಾಘನೀಯ. ನಿಮಗೆ ಈಗ ಬೇಕಾದುದು ವೃತ್ತಿ ಹಾಗೂ ಶಿಕ್ಷಣದ ಬಗೆಗಿನ ಸರಿಯಾದ ಮಾರ್ಗದರ್ಶನ. ನೀವು ನಿಮ್ಮ ಆಸಕ್ತಿಯ ಕ್ಷೇತ್ರವನ್ನು ಈಗಾಗಲೇ ನಿರ್ಧರಿಸಿರುವುದರಿಂದ, ಮೊದಲು ಅದಕ್ಕೆ ಪೂರಕ ಶಿಕ್ಷಣ ಪಡೆಯಿರಿ. ವ್ಯವಹಾರ ಕ್ಷೇತ್ರದಲ್ಲಿ ಮುಂದುವರಿಯಲು ಆಯಾ ಕ್ಷೇತ್ರದ ಬಗ್ಗೆ ಜ್ಞಾನ, ಅನುಭವ ಬಹಳ ಮುಖ್ಯ. ಇಲ್ಲಿ ಧೈರ್ಯ, ಸಮಯ ಪ್ರಜ್ಞೆ, ನಿರ್ಧಾರ ಕೈಗೊಳ್ಳುವ ಸಾಮರ್ಥ್ಯ, ವಿವೇಚನಾ ಶಕ್ತಿ, ಬಂಡವಾಳ ಒಗ್ಗೂಡಿಸುವ ಸಾಮರ್ಥ್ಯ ಮುಖ್ಯ ಪಾತ್ರ ನಿರ್ವಹಿಸುತ್ತವೆ. ಹಣಕಾಸಿನ ಕೊರತೆ ಇದ್ದಲ್ಲಿ, ಬ್ಯಾಂಕ್‌ಗಳಿಂದ ಶಿಕ್ಷಣ ಸಾಲ ಪಡೆದು ವಿದ್ಯೆ ಪೂರೈಸಿ. ಹಣಗಳಿಕೆಯ ಮಾರ್ಗ ಕಂಡುಕೊಳ್ಳುವ ಮೊದಲು ಜ್ಞಾನ ಸಂಪಾದನೆಯ ಮಾರ್ಗ ಗಟ್ಟಿ ಮಾಡಿಕೊಳ್ಳಿ. ವ್ಯವಹಾರದಲ್ಲಿ ನಷ್ಟ ಸಹಜ, ಆದರೆ ಗಳಿಸಿದ ವಿದ್ಯೆ ಯಾವತ್ತೂ ನಮ್ಮನ್ನು ಸೋಲಿಸಲಾರದು. ಅದುವೇ ನಮ್ಮ ಎಲ್ಲ ವ್ಯವಹಾರಗಳಿಗೆ ಮೂಲ ಬಂಡವಾಳ. ಮುಂದೆ ಅದೇ ಹಣ ಗಳಿಸುವ ಬಗೆಯನ್ನೂ ತಿಳಿಸುತ್ತದೆ.

ಹಣವನ್ನು ಒಮ್ಮಿಂದೊಮ್ಮೆಗೆ ದ್ವಿಗುಣಗೊಳಿಸುವ ಸಕ್ರಮ ಹಾದಿ ಇಲ್ಲ. ಶಿಕ್ಷಣದ ನಂತರ ಒಂದಿಷ್ಟು ವರ್ಷ ಯಾವುದಾದರೂ ಉತ್ತಮ ಸಂಸ್ಥೆಯಲ್ಲಿ ಕೆಲಸ ಮಾಡಿ ಅನುಭವ ಪಡೆಯಿರಿ. ಸದ್ಯ ಇರುವ ಹಣವನ್ನು ಯಾವುದಾದರೂ ಬ್ಯಾಂಕ್‌ನಲ್ಲಿ ಜೋಪಾನವಾಗಿ ಹೂಡಿಕೆ ಮಾಡಿ. ಟಾಟಾ, ಬಿರ್ಲಾ, ರಿಲಯನ್ಸ್, ಇನ್ಫೊಸಿಸ್, ವಿಪ್ರೊ, ಮಹೀಂದ್ರ, ಬಜಾಜ್ ಇತ್ಯಾದಿ ಬೃಹತ್ ಕಂಪನಿಗಳ ಹಿಂದಿನ ಯಶೋಗಾಥೆ ಹಾಗೂ ಕಂಪನಿಯ ಮಾಲೀಕರ ಬದುಕನ್ನು ಅರಿಯುವ ಪ್ರಯತ್ನ ಮಾಡಿ. ಅವರೆಲ್ಲ ಶ್ರಮ, ವ್ಯವಹಾರಕ್ಕೆ ಮುಡಿಪಾಗಿಟ್ಟ ಸಮಯ, ನಿರ್ಧಾರದಲ್ಲಿನ ಗಟ್ಟಿತನ, ನಂಬಿದ ವಿಚಾರದಲ್ಲಿ ಅಚಲ ವಿಶ್ವಾಸ, ಸಹೋದ್ಯೋಗಿಗಳಿಗೆ ನೀಡಿದ ಗೌರವ ಇತ್ಯಾದಿಗಳ ಬಲದಿಂದ ಹಂತಹಂತವಾಗಿ ಮೇಲೆ ಬಂದವರು. ಹಣ ಗಳಿಸುವ ಬಗ್ಗೆ ಅಧ್ಯಯನ ಮಾಡಿ ಆ ಮಟ್ಟಕ್ಕೇರಿದವರಲ್ಲ. ಆತಂಕ ಬೇಡ, ಗೆಲುವು ನಿಮ್ಮದಾಗಿರಲಿ.

ಹಣಕಾಸು, ತೆರಿಗೆ ಸಮಸ್ಯೆಗೆ ಪರಿಹಾರ

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ. ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-560001. ಇ-ಮೇಲ್: businessdesk@prajavani.co.in

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Accounts & Finance

ಎಂಎನ್ಸಿಗೆ ಅಕೌಂಟೆಂಟ್ಸ್ ರಿಪೋರ್ಟರ್ಸ್ ಕಂಪ್ಯೂಟರ್ ಆಪರೇಟರ್ಸ್ ಆಫೀಸ್/ ಅಕೌಂಟ್ಸ್ ಅಸಿಸ್ಟೆಂಟ್ಸ್ ಸ್ಟೋರ್ಕೀಪರ್ಸ್ ಫಿಟ್ಟರ್ಸ್ ವೆಲ್ಡರ್ಸ್ ಎಲೆಕ್ಟ್ರಾನಿಕ್ಸ್ ಮೋನಿಕಾ 7204367465/ 8050107101

✓ ಕರ್ನಾಟಕದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟ 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80000. 7760014526, 7795199673

Marketing & Sales

WANTED AREA sales manager for mattress manufacturing company for bangalore rural and urban area age 18 - 35 years mobile: 8884442047 Email: comfortsleepmysuru@gmail.com

✓ ಕನ್ನಡ ಮತ್ತು ಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000- 15,000 ವರೆಗೆ ಸಂಪಾದಿಸಿ.ಕೊರಿಯರ್ ಸೌಲಭ್ಯವಿದೆ.8884777502, 8884777503

Drivers

ಪ್ರಮುಖ ಟ್ಯಾಕ್ಸಿ ಕಂಪನಿಗೆ ಡ್ರೈವರ್ ಬೇಕಾಗಿದ್ದಾರೆ (ತಕ್ಷಣವೇ ಸೇರುವಿಕೆ) ಬೆಂಗಳೂರಿನಾದ್ಯಂತ ಮುಕ್ತ ಸ್ಥಾನ ಆಟೋಮ್ಯಾಟಿಕ್ ಕಾರ್: ಒತ್ತಡ ಮುಕ್ತ ಚಾಲನೆ ಸಂಬಳ: 18000- 20000 ಪ್ರತಿ ತಿಂಗಳು + ಕುಟುಂಬಕ್ಕೆ ಖಾಸಗಿ ವಿಮೆ + ಮಕ್ಕಳ ಶೈಕ್ಷಣಿಕ ಬೆಂಬಲ ನೀಡಲಾಗುವುದು ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: 08047106868

✓ ಕರ್ನಾಟಕದಾದ್ಯಂತ ಹೆಸರಾಂತ ಕಂಪನಿ, ಆಫೀಸ್ ಕೆಲಸಕ್ಕೆ ಯುವಕ/ಯುವತಿಯರು ಬೇಕಾಗಿದ್ದಾರೆ. ವಸತಿಯೂಟದೊಂದಿಗೆ Salary+OT 17,800 - 68,000/-, 9538811104, 9538811223

Multiple Vacancy

ಬೇಕಾಗಿದ್ದಾರೆಬೆಂಗಳೂರಿನ ಕಂಪನಿಯೊಂದರಲ್ಲಿ ಟ್ರೈನರ್ಸ್, ಲೀಡರ್ಸ್, ಅಸಿಸ್ಟೆಂಟ್ ಮ್ಯಾನೇಜರ್, ಬ್ರಾಂಚ್ ಮ್ಯಾನೇಜರ್, ಕೆಲಸಕ್ಕೆ ಯುವಕ ಯುವತಿಯರು ಬೇಕಾಗಿದ್ದಾರೆ. ವಯೋಮಿತಿ 18 ರಿಂದ 30. ವಿದ್ಯಾರ್ಹತೆ SSLC ಮೆಲ್ಪಟ್ಟವರು. ಸಂಬಳ ಟ್ರೈನಿಂಗ್ ಸಮಯದಲ್ಲಿ10,000ದಿಂದ 12,000 ಟ್ರೈನಿಂಗ್ ಮುಗಿದ ನಂತರ25,000 ದಿಂದ 50,000ದ ವರೆಗೆ ನೀಡಲಾಗುವುದು.ಉಚಿತ ವಸತಿ, ಆಸಕ್ತಿಯುಳ್ಳವರು ಕರೆಮಾಡಿ 9110686982

Teachers/ Professors

St. Thomas Residential School, Bidadi
(Under MME Society, an outreach project of Mar Thoma Syrian Church)
STAFF REQUIRED
The following experienced and dedicated staff required for immediate appointment:
1. Computer Teacher: To teach up to 10th Std.
2. Maths Teachers: B.Sc, B.Ed.
3. Nursery Teacher: NTT Trained
4. Physical Education Teacher - B.PEd/C.PEd
5. Hindi Teacher: BA, B.Ed
6. School Bus Driver: With valid DL
7. Van Attenders (Female): 7th Standard Pass
8. Male Office Staff: Minimum Degree with computer knowledge.
Apply within 7 days to:
The Secretary, The Malankara Mar Thoma Educational Society, 47, Primrose Road, Bangalore - 560025
or email your resume to: stthomasbidadi@rediffmail.com

General

ಹೆಸರಾಂತ ಶಿಕ್ಷಣ ಸಂಸ್ಥೆಗೆ ಸ್ವಚ್ಛವಾಗಿ ಕನ್ನಡ ಮಾತನಾಡುವ ಟೆಲಿಕಾಲರ್ಸ್ ತಕ್ಷಣ ಬೇಕಾಗಿದ್ದಾರೆ,ಆಕರ್ಷಕ ಸಂಬಳ ಮತ್ತು ಬತ್ಯೆ, ಕೂಡಲೇ ಸಂಪರ್ಕಿಸಿ: 08048531033/ 8884535357

ಖಾಸಗಿ ಬ್ಯಾಂಕ್‌ಗಳಲ್ಲಿ ಕೆಲಸ ಮಾಡಲು ಯುವಕ, ಯುವತಿಯರು ಬೇಕಾಗಿದ್ದಾರೆ SSLC, PUC,Degree ಸಂಬಳ 15000 to 28000 ಸಂಪರ್ಕಿಸಿರಿ 9980814578, 9980812378

KTPL GROUPಗೆ ಲ್ಯಾಂಡ್ ಸೂಪರ್ವೈಸರ್, ಆಫೀಸ್ ಅಡ್ಮಿನಿಸ್ಟ್ರೇಟರ್, ಪರ್ಸನಲ್ ಸೆಕ್ರೇಟರಿ ಬೇಕಾಗಿದ್ದಾರೆ. ಸಂಪರ್ಕಿಸಿ: marketing@krishitech.org 080-22221649

ಬೇಕಾಗಿದ್ದಾರೆ : ಸೆಕ್ಯೂರಿಟೀ ಗಾರ್ಡ್‌ಗಳು, ಅಟೆಂಡರ್, ಆಯಾಗಳು, ಸಂಪರ್ಕಿಸಿ : ಕ್ಯಾಮ್ಲಿನ್ ಆಂಗ್ಲಶಾಲೆ, 6ನೇ 'ಸಿ' ಮೇನ್, 4ನೇ ಕ್ರಾಸ್, ಹಂಪಿನಗರ, ಬೆಂಗಳೂರು.

Part-Time Jobs

ಕನ್ನಡ ಮತ್ತು ಇಂಗ್ಲಿಷ್ ಓದಲು,ಬರೆಯಲು ಬರುವ ಯುವಕ/ ಯುವತಿಯರಿಗೆ, ಗೃಹಿಣಿಯರಿಗೆ, ಮನೆಯಲ್ಲೇ ಕುಳಿತು,ಬುಕ್ ಬರೆಯುವ ಮೂಲಕ ತಿಂಗಳಿಗೆ 14,000- 16,000/-ರವರೆಗೆ ಸಂಪಾದಿಸಿ.(ಕೊರಿಯರ್ ಇದೆ).8884686861, 8884686860.

ವೈಯಕ್ತಿಕ

Announcements

ಮಹಾವಿಷ್ಣು ದಶಾವತಾರ ದೇವಸ್ಥಾನ

ಹೊಸ ದೇವಸ್ಥಾನ ನಿರ್ಮಾಣ ಮಾಡಲು ಭಕ್ತರ ಸಹಾಯ ಕೋರಲಾಗಿದೆ
ಜನಾರ್ದನ್, ಭೂಮಾಲಿಕರು
98450 33641

ಪ್ರವಾಸ

Travel

03.07.2022 13ದಿನಗಳು ವಿಮಾನ,AC ಬಸ್,ಊಟ, ರೂಂ ವಸತಿಯೊಂದಿಗೆ ಕಾಶಿ, ಗಯಾ, ಅಲಹಾಬಾದ್,ಆಗ್ರಾ,ದೆಹಲಿ, ಅಯೋಧ್ಯ,ನೈಮಿಷರಣ್ಯಾ. ಪ್ರವಾಸ.ಆರ್.ಗಾಂಧಿ ಟೂರ್ಸ್(ರಿ) 6363416487/ 9902433500

09.07.2022ರಿಂದ 12ದಿನಗಳು ರೂ.45,000/ವಿಮಾನ ಮತ್ತು A/C.ಬಸ್ಸಿನಲ್ಲಿ ಅಮಾರನಾಥ್, ವೈಷ್ಣೋದೇವಿ,ಕಾಶ್ಮೀರ,ದೆಹಲಿ, ವಾಘಾಬಾರ್ಡರ್..ವಿವರಗಳಿಗೆ ಏಷ್ಯನ್ ಟ್ರಾವೆಲ್ ಲೈನ್ಸ್.164/3 ಆರ್.ವಿ.ರಸ್ತೆ,ಬೆಂಗಳೂರು.04. ಮೊಬೈಲ್:8105657052

10/07/2022 13/17 ದಿನಗಳು ರೈಲು/ವಿಮಾನದಲ್ಲಿ, ದೆಹಲಿ ಮಥುರ ಆಗ್ರ, ಅಮೃತಸರ, ಅಮರನಾಥ್, ವೈಷ್ಣೋದೇವಿ, ಕಾಶ್ಮೀರ, ಕುರುಕ್ಷೇತ್ರ 21,000/- (ಕೆಲವೇ ಸೀಟುಗಳಿವೆ) ಪ್ರತಿ ತಿಂಗಳು ಅಂಡಮಾನ್ ಹವಳದ್ವೀಪ. 'ಶ್ರೀಸಾಯಿ ರಾಘವೇಂದ್ರ ಟ್ರಾವೆಲ್ಸ್'- 9739847429/ 9845560219.

ಭವಿಷ್ಯ

Astrology

ಒಂದೇ ಕರೆಯಲ್ಲಿ100% ಗ್ಯಾರಂಟಿ ಶಾಶ್ವತ ಪರಿಹಾರ ಸ್ತ್ರೀಪುರುಷ ವಶೀಕರಣ ಸ್ಪೆಷಲಿಸ್ಟ್ ಪಂಡಿತ್. ಕೃಷ್ಣಪ್ರಸಾದ್:ಉಚಿತಭವಿಷ್ಯ ಖಚಿತಪರಿಹಾರ, ದಕ್ಷಿಣಕನ್ನಡ ಮಾಂತ್ರಿಕರು, ಶ್ರೀಕ್ಷೇತ್ರಹೊರನಾಡು: 7022443071

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

DH DECCAN HERALD
ಪ್ರಜಾವಾಣಿ
Classifieds EDUCATION SPECIAL
SPECIAL RATES FOR
Admission Notice,
Education Success
Congratulation Ads
For More Details Contact:
Santhosh Kumar : 9880856233
Jerry Louis : 9731810277
Ravichandra : 9901641752
Vishal GM : 9845114560
Tanveer : 9886213331
Email : dhclassifieds@deccanherald.co.in

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ
ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ದಯವಿಟ್ಟು ಸಂಪರ್ಕಿಸಿ:
Santhosh Kumar : 9880856233
Jerry : 9731810277 | Ravichandra : 9901641752
Vishal : 9845114560 | Anitha R: 9900428036
ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮ್ಯಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಿನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಮುಂಬೈ ಧಾರಣೆ

ಶೇಂಗಾ
24-5-2022

ಜಾವಾ 70/80(ಹೊಸ)	10150-10200
ಜಾವಾ 80/90(ಹೊಸ)	9500-9550
ದಪ್ಪ ಮಧ್ಯಪ್ರದೇಶ(ಹೊಸ)	10850-10900
ದಪ್ಪ ಗುಜರಾತ್(ಹೊಸ)	9950-10000

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1600 (1600)
ಒಂದು ವಾರದ ಡೆಲಿವರಿ	1595 (1595)
ಸೋಯಾ ಕಚ್ಚಾ	1515 (1510)
ಪಾಮ್ ವಾರದ ಡೆಲಿವರಿ	1533 (1523)
ಸೂರ್ಯಕಾಂತಿ ಎಣ್ಣೆ ಕಚ್ಚಾ	1800 (1800)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)
ಅಪರಂಜಿ ಚಿನ್ನ 10ಗ್ರಾಂ
51,200 (51,000)
ಬೆಳ್ಳಿ ಕೆ.ಜಿ 61,800 (62,200)
ಆವರಣದಲ್ಲಿ ಹಿಂದಿನ ದಿನದ ಧಾರಣೆ

ಕೊಬ್ಬರಿ ಧಾರಣೆ

ಪುತ್ತೂರು(ಇತರೆ)	₹4500-10500
ತುರುವೇಕೆರೆ	₹14950-14950

ಮೊದಲ ಕ್ವಾಲಿಫೈಯರ್: ಮಿಲ್ಲರ್ ಆರ್ಭಟ; ರಾಜಸ್ಥಾನ್‌ಗೆ ಇನ್ನೂ ಇದೆ ಅವಕಾಶ

ಫೈನಲ್‌ಗೆ ಗುಜರಾತ್ ಟೈಟನ್ಸ್

ಕೋಲ್ಕತ್ತ: ಮೊದಲ ಬಾರಿಗೆ ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯಲ್ಲಿ ಆಡುತ್ತಿರುವ ಗುಜರಾತ್ ಟೈಟನ್ಸ್ ತಂಡವು ಫೈನಲ್‌ಗೆ ಲಗ್ಗೆಯಿಟ್ಟಿತು.

ಮಂಗಳವಾರ ಈಡನ್ ಗಾರ್ಡನ್‌ನಲ್ಲಿ ನಡೆದ ಮೊದಲ ಕ್ವಾಲಿಫೈಯರ್‌ನಲ್ಲಿ ಗುಜರಾತ್ ತಂಡವು 7 ವಿಕೆಟ್‌ಗಳಿಂದ ರಾಜಸ್ಥಾನ ರಾಯಲ್ಸ್ ವಿರುದ್ಧ ಜಯಿಸಿ ಫೈನಲ್‌ಗೆ ಲಗ್ಗೆ ಇಟ್ಟಿತು. ಡೇವಿಡ್ ಮಿಲ್ಲರ್ (ಅಜೇಯ 68; 38ಎಸೆತ, 4X3, 6X5) ಅವರ ಅಬ್ಬರದ ಆಟಕ್ಕೆ ಜಯ ಒಲಿಯಿತು.

ಟಾಸ್ ಗೆದ್ದ ಗುಜರಾತ್ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ರಾಯಲ್ಸ್ ತಂಡವು ಜೋಸ್ ಬಟ್ಲರ್ (89; 56ಎಸೆತ, 4X12, 6X2) ಬ್ಯಾಟಿಂಗ್ ಬಲದಿಂದ 20 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 188 ರನ್ ಗಳಿಸಿತು. ಗುರಿ ಬೆನ್ನಟ್ಟಿದ ಗುಜರಾತ್ ತಂಡವು 19.3 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 191 ರನ್ ಗಳಿಸಿತು.

ಪಂದ್ಯದ ಕೊನೆಯ ಓವರ್‌ನಲ್ಲಿ ಗುಜರಾತ್ ತಂಡಕ್ಕೆ 16 ರನ್‌ಗಳ ಅಗತ್ಯವಿತ್ತು. ಪ್ರಸಿದ್ಧ ಕೃಷ್ಣ ಹಾಕಿದ ಈ ಓವರ್‌ನಲ್ಲಿ ಮೊದಲ ಮೂರು ಎಸೆತಗಳಲ್ಲಿ ಡೇವಿಡ್ ಮಿಲ್ಲರ್ 'ಸಿಕ್ಸರ್ ಹ್ಯಾಟ್ರಿಕ್' ಸಿಡಿಸಿ ತಂಡವನ್ನು ಗೆಲುವಿನ ಗಡಿ ದಾಟಿಸಿದರು.

85 ರನ್‌ಗಳಿಗೆ ಮೂರು ವಿಕೆಟ್ ಕಳೆದುಕೊಂಡು ಆತಂಕದಲ್ಲಿದ್ದ ಗುಜರಾತ್ ತಂಡಕ್ಕೆ ಮಿಲ್ಲರ್ ಮತ್ತು ಹಾರ್ದಿಕ್ ಪಾಂಡ್ಯ (ಅಜೇಯ 40) ಜಯದ ಕಾಣಿಕೆ ನೀಡಿದರು. ಮುರಿಯದ ನಾಲ್ಕನೇ ವಿಕೆಟ್ ಜೊತೆಯಾಟದಲ್ಲಿ 106 ರನ್ ಸೇರಿಸಿದರು.

ಬಟ್ಲರ್ ಅಬ್ಬರ: ರಾಜಸ್ಥಾನ ರಾಯಲ್ಸ್ ತಂಡದ ಆರಂಭಿಕ ಬ್ಯಾಟರ್ ಜೋಸ್ ಬಟ್ಲರ್ ಇನಿಂಗ್ಸ್‌ನ ಕೊನೆಯ ಐದು ಓವರ್‌ಗಳಲ್ಲಿ ಅಬ್ಬರಿಸಿದರು. ಇದರಿಂದಾಗಿ ತಂಡವು ಹೋರಾಟದ ಮೊತ್ತ ಗಳಿಸಲು ಸಾಧ್ಯವಾಯಿತು.

ಗುಜರಾತ್ ತಂಡದ ಬೌಲರ್‌ಗಳ ಉತ್ತಮ ದಾಳಿಯಿಂದಾಗಿ ರಾಜಸ್ಥಾನ 15 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 124 ರನ್ ಗಳಿಸಿತ್ತು.

ಬಟ್ಲರ್ ಅವರೊಂದಿಗೆ ಎರಡನೇ ವಿಕೆಟ್ ಜೊತೆಯಾಟದಲ್ಲಿ 68 ರನ್ ಸೇರಿಸಿದ್ದ ನಾಯಕ ಸಂಜು ಸ್ಯಾಮ್ಸನ್ (47; 26ಎ) ಹತ್ತನೇ ಓವರ್‌ನಲ್ಲಿ ಔಟಾದರು. ಇದರಿಂದಾಗಿ ವಿಕೆಟ್ ಉಳಿಸಿಕೊಳ್ಳುವತ್ತ ಹೆಚ್ಚು ಗಮನ ನೀಡಿದ ಬಟ್ಲರ್ ಮತ್ತು ದೇವದತ್ತ ಪಡಿಕ್ಕಲ್ (28; 20ಎ) ಹೆಚ್ಚು ವೇಗವಾಗಿ ಆಡಲಿಲ್ಲ. ಆದರೆ, 15ನೇ ಓವರ್‌ನಲ್ಲಿ ಪಡಿಕ್ಕಲ್ ಔಟಾದ ನಂತರ ಬಟ್ಲರ್ ಆರ್ಭಟ ಮುಗಿಲುಮುಟ್ಟಿತು.

ಆ ಹಂತದಲ್ಲಿ ಬಟ್ಲರ್ 35 ಎಸೆತಗಳಲ್ಲಿ 37 ರನ್‌ಗಳನ್ನು ಗಳಿಸಿದ್ದರು. ಇದರ ನಂತರ ಎದುರಿಸಿದ 20 ಎಸೆತಗಳಲ್ಲಿ 52 ರನ್‌ಗಳನ್ನು ಸೂರೆ ಮಾಡಿದರು. ತಂಡದ ಮೊತ್ತಕ್ಕೆ 64 ರನ್‌ಗಳು ಹರಿದುಬಂದವು.

ರಾಯಲ್ಸ್ ತಂಡವು ಫೈನಲ್‌ಗೆ ಅರ್ಹತೆ ಪಡೆಯಲು ಎರಡನೇ ಕ್ವಾಲಿಫೈಯರ್ ಆಡಬೇಕಿದೆ. ಅದರಲ್ಲಿ ಗೆದ್ದರೆ ಪ್ರಶಸ್ತಿ ಸುತ್ತಿಗೆ ಪ್ರವೇಶಿಸುವ ಅವಕಾಶ ಗಿಟ್ಟಿಸಲಿದೆ.

ಡೇವಿಡ್ ಮಿಲ್ಲರ್ ಬ್ಯಾಟಿಂಗ್ ಸೊಬಗು– ಪಿಟಿಐ ಚಿತ್ರ

ಸ್ಕೋರ್ ಕಾರ್ಡ್

ರಾಜಸ್ಥಾನ್ ರಾಯಲ್ಸ್ 6ಕ್ಕೆ 188 (20 ಓವರ್)
ಯಶಸ್ವಿ ಸಿ ಸಹಾ ಬಿ ಯಶ್ 3 (8ಎ), ಬಟ್ಲರ್ ರನೌಟ್ (ಜೋಸೆಫ್/ ಸಹಾ) 89 (56ಎ, 4X12, 6X2), ಸ್ಯಾಮ್ಸನ್ ಸಿ ಜೋಸೆಫ್ ಬಿ ಸಾಯಿಕಿಶೋರ್ 47 (26ಎ, 4X5, 6X3), ದೇವದತ್ತ ಬಿ ಹಾರ್ದಿಕ್ 28 (20ಎ, 4X2, 6X2), ಹೆಟ್ಮೆಯರ್ ಸಿ ತೆವಾಟಿಯಾ ಬಿ ಶಮಿ 4 (7ಎ), ರಿಯಾನ್ ರನೌಟ್ (ಸಹಾ/ಯಶ್) 4 (3ಎ), ಅಶ್ವಿನ್ ಔಟಾಗದೆ 2 (1ಎ), ಬೌಲ್ಟ್ ಔಟಾಗದೆ 0 (0ಎ)
ಇತರೆ: 11 (ನೋಬಾಲ್ 1, ವೈಡ್ 10)
ವಿಕೆಟ್ ಪತನ: 1–11 (ಯಶಸ್ವಿ ಜೈಸ್ವಾಲ್, 1.6), 2–79 (ಸಂಜು ಸ್ಯಾಮ್ಸನ್, 9.5), 3-116 (ದೇವದತ್ತ ಪಡಿಕ್ಕಲ್, 14.1), 4-161 (ಶಿಮ್ರಾನ್ ಹೆಟ್ಮೆಯರ್, 18.3), 5-185 (ಜೋಸ್ ಬಟ್ಲರ್, 19.5), 6-186 (ರಿಯಾನ್, 19.5)
ಬೌಲಿಂಗ್: ಮೊಹಮ್ಮದ್ ಶಮಿ 4–0–43–1, ಯಶ್ ದಯಾಳ್ 4-0-46-1, ಅಲ್ಜರಿ ಜೋಸೆಫ್ 2-0-27-0, ರಶೀದ್ ಖಾನ್ 4-0-15-0, ಆರ್.ಸಾಯಿ ಕಿಶೋರ್ 4-0-43-1, ಹಾರ್ದಿಕ್ ಪಾಂಡ್ಯ 2-0-14-1

ಗುಜರಾತ್ ಟೈಟನ್ಸ್ 3ಕ್ಕೆ 191 (19.3 ಓವರ್)
ಸಹಾ ಸಿ ಸ್ಯಾಮ್ಸನ್ ಬಿ ಬೌಲ್ಟ್ 0 (2ಎ), ಶುಭಮನ್ ರನೌಟ್ (ದೇವದತ್ತ/ ಹೆಟ್ಮೆಯರ್) 35 (21ಎ, 4X5, 6X1), ವೇಡ್ ಸಿ ಬಟ್ಲರ್ ಬಿ ಮೆಕಾಯ್ 35 (30ಎ, 4X6), ಹಾರ್ದಿಕ್ ಔಟಾಗದೆ 40 (27ಎ, 4X5), ಮಿಲ್ಲರ್ ಔಟಾಗದೆ 68 (38ಎ, 4X3, 6X5)
ಇತರೆ: 13 (ಲೆಗ್‌ಬೈ 1, ನೋಬಾಲ್ 1, ವೈಡ್ 11)
ವಿಕೆಟ್ ಪತನ: 11-0 (ವೃದ್ಧಿಮಾನ್ ಸಹಾ, 0.2), 2-72 (ಶುಭಮನ್ ಗಿಲ್, 7.4), 3-85 (ಮ್ಯಾಥ್ಯು ವೇಡ್, 9.3)
ಬೌಲಿಂಗ್: ಟ್ರೆಂಟ್ ಬೌಲ್ಟ್ 4-0-38-1, ಪ್ರಸಿದ್ಧ ಕೃಷ್ಣ 3.3-0-40-0, ರವಿಚಂದ್ರನ್ ಅಶ್ವಿನ್ 4-0-40-0, ಯಜುವೇಂದ್ರ 4-0-32-0, ಒಬೆದ್ ಮೆಕಾಯ್ 4-0-40-1

ಫಲಿತಾಂಶ: ಗುಜರಾತ್ ಟೈಟನ್ಸ್‌ಗೆ ಏಳು ವಿಕೆಟ್‌ಗಳ ಜಯ

ಪರ್ಪಲ್ ಕ್ಯಾಪ್ (ಹೆಚ್ಚು ವಿಕೆಟ್ ಗಳಿಸಿದವರು)

ಆಟಗಾರ	ತಂಡ	ವಿಕೆಟ್
ಯಜುವೇಂದ್ರ	ರಾಜಸ್ಥಾನ	26
ಹಸರಂಗ	ಬೆಂಗಳೂರು	24
ರಬಾಡ	ಪಂಜಾಬ್	23

ಆರೆಂಜ್ ಕ್ಯಾಪ್ (ಹೆಚ್ಚು ರನ್ ಗಳಿಸಿದವರು)

ಆಟಗಾರ	ತಂಡ	ರನ್
ಜೋಸ್ ಬಟ್ಲರ್	ರಾಜಸ್ಥಾನ	718
ರಾಹುಲ್	ಲಖನೌ	537
ಕ್ವಿಂಟನ್ ಡಿಕಾಕ್	ಲಖನೌ	502

ಬೆಂಗಳೂರಿಗೆ ಕನ್ನಡಿಗ ರಾಹುಲ್ ಸವಾಲು

ಐಪಿಎಲ್ ಎಲಿಮಿನೇಟರ್ ಇಂದು: ಲಖನೌಗೆ ರಾಯಲ್ ಚಾಲೆಂಜ್

ಕೋಲ್ಕತ್ತ (ಪಿಟಿಐ): ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯ ಲೀಗ್ ಸುತ್ತಿನ ಕೊನೆಯ ಹಂತದ ನಾಟಕೀಯ ಲೆಕ್ಕಾಚಾರಗಳಲ್ಲಿ ಪ್ಲೇ ಆಫ್ ಅವಕಾಶ ಗಿಟ್ಟಿಸಿರುವ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಮುಂದೆ ಈಗ ಕಠಿಣ ಸವಾಲು ಇದೆ.

ಈಡನ್ ಗಾರ್ಡನ್‌ನಲ್ಲಿ ಬುಧವಾರ ನಡೆಯಲಿರುವ ಎಲಿಮಿನೇಟರ್ ಪಂದ್ಯದಲ್ಲಿ ಫಫ್ ಡುಪ್ಲೆಸಿ ನಾಯಕತ್ವದ ಬೆಂಗಳೂರು ಬಳಗಕ್ಕೆ ಕನ್ನಡಿಗ ಕೆ.ಎಲ್. ರಾಹುಲ್ ನೇತೃತ್ವದ ಲಖನೌ ಸೂಪರ್ ಜೈಂಟ್ಸ್ ಎದುರಾಗಲಿದೆ. ಇದೇ ಮೊದಲ ಸಲ ಐಪಿಎಲ್‌ನಲ್ಲಿ ಕಣಕ್ಕಿಳಿದಿರುವ ಹೊಸ ತಂಡ ಲಖನೌ ಲೀಗ್ ಹಂತದಲ್ಲಿ ಒಂಬತ್ತು ಪಂದ್ಯಗಳನ್ನು ಗೆದ್ದಿದೆ. ರಾಹುಲ್ ಎರಡು ಮತ್ತು ಕ್ವಿಂಟನ್ ಡಿಕಾಕ್ ಒಂದು ಶತಕ ಗಳಿಸಿದ್ದಾರೆ. ಕೋಲ್ಕತ್ತ ನೈಟ್‌ರೈಡರ್ಸ್ ಎದುರಿನ ಪಂದ್ಯದಲ್ಲಿ ಇವರಿಬ್ಬರೂ ಮೊದಲ ವಿಕೆಟ್ ಜೊತೆಯಾಟದಲ್ಲಿ ಅಜೇಯ 210 ರನ್ ಗಳಿಸಿ ದಾಖಲೆ ಬರೆದಿದ್ದರು.

ಎವಿನ್ ಲೂಯಿಸ್, ದೀಪಕ್ ಹೂಡಾ, ಆಲ್‌ರೌಂಡರ್‌ಗಳಾದ ಮಾರ್ಕಸ್ ಸ್ಟೊಯಿನಿಸ್ ಮತ್ತು ಜೇಸನ್ ಹೋಲ್ಡರ್ ಉತ್ತಮ ಫಾರ್ಮ್‌ನಲ್ಲಿರುವುದರಿಂದ ಬ್ಯಾಟಿಂಗ್ ವಿಭಾಗ ಬಲಿಷ್ಠವಾಗಿದೆ. ಆರಂಭಿಕ ಓವರ್‌ಗಳಲ್ಲಿಯೇ ವಿಕೆಟ್ ಗಳಿಸುವ ಆವೇಶ್ ಖಾನ್, ಮೊಹಸೀನ್ ಖಾನ್ ಮತ್ತು ಸ್ಪಿನ್ನರ್ ರವಿ ಬಿಷ್ಣೋಯಿ ಅವರನ್ನು ಎದುರಿಸುವ ಸವಾಲು ಬೆಂಗಳೂರು ಬ್ಯಾಟಿಂಗ್ ಪಡೆಯ ಮುಂದಿದೆ.

ಸತತ ವೈಫಲ್ಯಗಳ ನಂತರ ವಿರಾಟ್ ಕೊಹ್ಲಿ ಕಳೆದ ಪಂದ್ಯದಲ್ಲಿ ಲಯಕ್ಕೆ ಮರಳಿರುವುದು ತಂಡದಲ್ಲಿ ಉತ್ಸಾಹ ಹೆಚ್ಚಿಸಿದೆ. ನಾಯಕ ಡುಪ್ಲೆಸಿ, ದಿನೇಶ್ ಕಾರ್ತಿಕ್ ಮತ್ತು ಗ್ಲೆನ್ ಮ್ಯಾಕ್ಸ್‌ವೆಲ್ ಬ್ಯಾಟಿಂಗ್ ವಿಭಾಗದ ಶಕ್ತಿಯಾಗಿದ್ದಾರೆ. ಆದರೆ ಬೌಲರ್‌ಗಳು ಸ್ಥಿರತೆ ಕಾಪಾಡಿಕೊಳ್ಳುವ ಸವಾಲು ತಂಡಕ್ಕೆ ಇದೆ. ಹರ್ಷಲ್ ಪಟೇಲ್, ಸ್ಪಿನ್ನರ್ ವಣಿಂದು ಹಸರಂಗಾ ಮತ್ತು ಜೋಶ್ ಹ್ಯಾಜಲ್‌ವುಡ್ ಅವರು ರಾಹುಲ್ ಪಡೆಯ ಅಬ್ಬರಕ್ಕೆ ತಡೆಯೊಡ್ಡುವಲ್ಲಿ ಸಫಲರಾದರೆ ಆರ್‌ಸಿಬಿಗೆ ಎರಡನೇ ಕ್ವಾಲಿಫೈಯರ್ ಪ್ರವೇಶಿಸುವ ಅವಕಾಶ ಲಭಿಸಬಹುದು.

ಪಾಯಿಂಟ್ ಪಟ್ಟಿಯಲ್ಲಿ ನಾಲ್ಕನೇ ಸ್ಥಾನಕ್ಕಾಗಿ ನಡೆದಿದ್ದ ಪೈಪೋಟಿಯಲ್ಲಿ ಡೆಲ್ಲಿ ಕ್ಯಾಪಿಟಲ್ಸ್ ತಂಡವು ಮುಂಬೈ ಇಂಡಿಯನ್ಸ್ ಎದುರು ಸೋತ ಕಾರಣಕ್ಕೆ ಆರ್‌ಸಿಬಿಯ ಹಾದಿ ಸುಗಮವಾಗಿತ್ತು. ಅದರಿಂದಾಗಿ ಸತತ ಮೂರನೇ ಆವೃತ್ತಿಯಲ್ಲಿಯೂ ಪ್ಲೇ ಆಫ್ ಪ್ರವೇಶಿಸಿತು.

ವಿರಾಟ್ ಕೊಹ್ಲಿ ಮತ್ತು ಫಫ್ ಡುಪ್ಲೆಸಿ

ಕ್ವಿಂಟನ್ ಡಿಕಾಕ್ ಮತ್ತು ಕೆ.ಎಲ್. ರಾಹುಲ್

ಪಂದ್ಯ ಆರಂಭ: ರಾತ್ರಿ 7.30
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್, ಹಾಟ್‌ಸ್ಟಾರ್

ಮುಖಾಮುಖಿ
ಈ ಬಾರಿಯ ಟೂರ್ನಿಯಲ್ಲಿ ಉಭಯ ತಂಡಗಳು ಒಂದು ಬಾರಿ ಸೆಣಸಿವೆ. ಅದರಲ್ಲಿ ಲಖನೌ ತಂಡವು ಜಯಿಸಿತ್ತು

ಮೊದಲ ಸಲ
ಲಖನೌ ಸೂಪರ್ ಜೈಂಟ್ಸ್ ತಂಡಕ್ಕೆ ಇದು ಚೊಚ್ಚಲ ಐಪಿಎಲ್. ಲೀಗ್ ಹಂತದಲ್ಲಿ ಮೂರನೇ ಸ್ಥಾನ ಪಡೆದು ಪ್ಲೇಆಫ್ ಪ್ರವೇಶಿಸಿದೆ.

ಕಣದಲ್ಲಿ ಕನ್ನಡಿಗರು
ಕೆ.ಎಲ್.ರಾಹುಲ್, ಮನೀಷ್ ಪಾಂಡೆ, ಕೃಷ್ಣಪ್ಪ ಗೌತಮ್ (ಲಖನೌ ತಂಡ)

ಆರ್‌ಸಿಬಿ ಪ್ಲೇ ಆಫ್ ಸಾಧನೆ

ವರ್ಷ	ಹಂತ
2009	ರನ್ನರ್ಸ್ ಅಪ್
2010	ಪ್ಲೇ ಆಫ್
2011	ರನ್ನರ್ಸ್ ಅಪ್
2015	ಮೂರನೇ ಸ್ಥಾನ
2016	ರನ್ನರ್ಸ್ ಅಪ್
2020	ನಾಲ್ಕನೇ ಸ್ಥಾನ
2021	ನಾಲ್ಕನೇ ಸ್ಥಾನ
2022	ನಾಲ್ಕನೇ ಸ್ಥಾನ

ಹೆಚ್ಚು ರನ್ ಗಳಿಸಿರುವ ಬ್ಯಾಟರ್‌ಗಳು (2022)

ಬ್ಯಾಟರ್	ಪಂದ್ಯ	ರನ್	ಶ್ರೇಷ್ಠ	ಅರ್ಧಶತಕ	ಶತಕ	ಸ್ಟ್ರೈಕ್‌ರೇಟ್
ರಾಯಲ್ ಚಾಲೆಂಜರ್ಸ್ ಬೆಂಗಳೂರು						
ಫಫ್ ಡುಪ್ಲೆಸಿ	14	443	96	3	-	130.67
ವಿರಾಟ್ ಕೊಹ್ಲಿ	14	309	73	2	-	117.93
ದಿನೇಶ್ ಕಾರ್ತಿಕ್	14	287	66*	1	-	191.33
ಗ್ಲೆನ್ ಮ್ಯಾಕ್ಸ್‌ವೆಲ್	11	268	55	1	-	172.90
ಲಖನೌ ಸೂಪರ್‌ಜೈಂಟ್ಸ್						
ಕೆ.ಎಲ್. ರಾಹುಲ್	14	537	103*	2	3	135.26
ಕ್ವಿಂಟನ್ ಡಿಕಾಕ್	14	502	140*	1	3	149.40
ದೀಪಕ್ ಹೂಡಾ	13	406	59	0	4	133.55
ಕೃಣಾಲ್ ಪಾಂಡ್ಯ	13	183	42	0	0	127.08

ಹೆಚ್ಚು ವಿಕೆಟ್ ಗಳಿಸಿದ ಬೌಲರ್‌ಗಳು (2022)

ಬೌಲರ್	ಪಂದ್ಯ	ಓವರ್	ರನ್	ವಿಕೆಟ್	ಶ್ರೇಷ್ಠ
ರಾಯಲ್ ಚಾಲೆಂಜರ್ಸ್ ಬೆಂಗಳೂರು					
ವಣಿಂದು ಹಸರಂಗಾ	14	49	362	24	18ಕ್ಕೆ5
ಹರ್ಷಲ್ ಪಟೇಲ್	13	46.2	356	18	34ಕ್ಕೆ4
ಜೋಷ್ ಹ್ಯಾಜಲ್‌ವುಡ್	10	38.3	311	15	25ಕ್ಕೆ4
ಮೊಹಮ್ಮದ್ ಸಿರಾಜ್	13	45	442	8	30ಕ್ಕೆ2
ಲಖನೌ ಸೂಪರ್‌ಜೈಂಟ್ಸ್					
ಆವೇಶ್ ಖಾನ್	12	43.4	372	17	24ಕ್ಕೆ4
ಜೇಸನ್ ಹೋಲ್ಡರ್	12	41.3	391	14	31ಕ್ಕೆ3
ಮೊಹಸಿನ್ ಖಾನ್	8	29	172	13	16ಕ್ಕೆ4
ರವಿ ಬಿಷ್ಣೋಯಿ	13	50	411	12	22ಕ್ಕೆ2

ಶಫಾಲಿ ಮಿಂಚು; ವೆಲೊಸಿಟಿಗೆ ಜಯ

ಪುಣೆ (ಪಿಟಿಐ): ವೆಲೊಸಿಟಿ ತಂಡವು ಮಹಿಳೆಯರ ಟಿ20 ಕ್ರಿಕೆಟ್ ಚಾಲೆಂಜರ್ಸ್ ಟೂರ್ನಿಯ ಪಂದ್ಯದಲ್ಲಿ ಮಂಗಳವಾರ ಜಯ ಸಾಧಿಸಿತು.

ಟಾಸ್ ಗೆದ್ದ ವೆಲೊಸಿಟಿ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಹರ್ಮನ್‌ಪ್ರೀತ್ ಕೌರ್ (71; 51ಎ, 4X7, 6X3) ಅವರ ಅರ್ಧಶತಕದ ಬಲದಿಂದ ಸೂಪರ್‌ನೋವಾಸ್ ತಂಡವು 20 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 150 ರನ್ ಗಳಿಸಿತು. ಗುರಿ ಬೆನ್ನಟ್ಟಿದ ವೆಲೊಸಿಟಿ ತಂಡವು 18.2 ಓವರ್‌ಗಳಲ್ಲಿ 3 ವಿಕೆಟ್‌ಗೆ 151 ರನ್ ಗಳಿಸಿತು. ಏಳು ವಿಕೆಟ್‌ಗಳಿಂದ ಜಯ ದಾಖಲಿಸಿತು. ಶೆಫಾಲಿ (51) ಮತ್ತು ಲಾರಾ (ಔಟಾಗದೆ 51) ತಂಡವನ್ನು ಗೆಲುವಿನತ್ತ ಮುನ್ನಡೆಸಿದರು.

ಸಂಕ್ಷಿಪ್ತ ಸ್ಕೋರು: ಸೂಪರ್ ನೋವಾಸ್: 20 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 150 (ತಾನಿಯಾ ಭಾಟಿಯಾ 36, ಹರ್ಮನ್‌ಪ್ರೀತ್ ಕೌರ್ 71, ಸುನ್ ಲೂಸ್ ಔಟಾಗದೆ 20, ಕೇಟ್ ಕ್ರಾಸ್ 24ಕ್ಕೆ2, ದೀಪ್ತಿ ಶರ್ಮಾ 31ಕ್ಕೆ1) ವೆಲೊಸಿಟಿ: 18.2 ಓವರ್‌ಗಳಲ್ಲಿ 3ಕ್ಕೆ151 (ಶೆಫಾಲಿ ವರ್ಮಾ 51, ಯಷ್ಟಿಕಾ ಭಾಟಿಯಾ 17, ಲಾರಾ ವೊಲ್‌ವಾರ್ಡೆಟ್ ಔಟಾಗದೆ 51, ದೀಪ್ತಿ ಶರ್ಮಾ ಔಟಾಗದೆ 24, ದಿಯಾಂದ್ರ ಡಾಟಿನ್ 21ಕ್ಕೆ2) ಫಲಿತಾಂಶ: ವೆಲೊಸಿಟಿಗೆ 7 ವಿಕೆಟ್ ಜಯ.

ಬೆಳಗಾವಿಯಲ್ಲಿ ರಾಜ್ಯ ಜೂನಿಯರ್ ಈಜು

ಬೆಂಗಳೂರು: ಬೆಳಗಾವಿಯ ಕೆಎಲ್‌ಇ ಸೊಸೈಟಿಯ ಈಜು ಕೇಂದ್ರದಲ್ಲಿ ಬುಧವಾರದಿಂದ ರಾಜ್ಯ ಜೂನಿಯರ್ ಮತ್ತು ಸಬ್‌ಜೂನಿಯರ್ ಈಜು ಚಾಂಪಿಯನ್‌ಷಿಪ್ ಆರಂಭವಾಗಲಿದೆ.

ಐದು ದಿನಗಳ ಸ್ಪರ್ಧೆಯಲ್ಲಿ ರಾಜ್ಯದ 30 ಕ್ಲಬ್‌ಗಳಿಂದ ಒಟ್ಟು 600 ಈಜುಪಟುಗಳು ಪೈಪೋಟಿ ನಡೆಸುವರು. ಮುಂಬರಲಿರುವ ರಾಷ್ಟ್ರೀಯ ಸಬ್‌ಜೂನಿಯರ್ ಮತ್ತು ಜೂನಿಯರ್ ಈಜು ಚಾಂಪಿಯನ್‌ಷಿಪ್‌ಗಳಲ್ಲಿ ಭಾಗವಹಿಸುವ ತಂಡಗಳನ್ನು ಇಲ್ಲಿ ಆಯ್ಕೆ ಮಾಡಲಾಗುವುದು ಎಂದು ಕರ್ನಾಟಕ ರಾಜ್ಯ ಈಜು ಸಂಸ್ಥೆ ಪ್ರಕಟಣೆಯಲ್ಲಿ ತಿಳಿಸಿದೆ.

ಹಾಕಿ: ಜಪಾನ್‌ಗೆ ಮಣಿದ ಭಾರತ

ಜಕಾರ್ತ, ಇಂಡೊನೇಷ್ಯಾ (ಪಿಟಿಐ): ಹೊಸ ಆಟಗಾರರೇ ಹೆಚ್ಚಿರುವ ಭಾರತ ತಂಡವು ಏಷ್ಯಾಕಪ್ ಹಾಕಿ ಟೂರ್ನಿಯ ಎರಡನೇ ಲೀಗ್ ಪಂದ್ಯದಲ್ಲಿ ಮಂಗಳವಾರ ಜಪಾನ್ ಎದುರು ಮುಗ್ಗರಿಸಿತು.

ಇಲ್ಲಿ ನಡೆದ ಎ ಗುಂಪಿನ ಹಣಾಹಣಿಯಲ್ಲಿ ಜಪಾನ್ 5–2ರಿಂದ ಗೆದ್ದಿತು. ಈ ಸೋಲಿನೊಂದಿಗೆ ಭಾರತ ತಂಡವು ಚಾಂಪಿಯನ್‌ಷಿಪ್‌ನಿಂದ ಹೊರಬೀಳುವ ಆತಂಕ ಎದುರಿಸುತ್ತಿದೆ. ಮೊದಲ ಪಂದ್ಯದಲ್ಲಿ ಪಾಕಿಸ್ತಾನ ಎದುರು ತಂಡ ಡ್ರಾ ಸಾಧಿಸಿತ್ತು. ಇಂಡೊನೇಷ್ಯಾ ವಿರುದ್ಧದ ಕೊನೆಯ ಲೀಗ್ ಪಂದ್ಯದಲ್ಲಿ ಭಾರತ ದೊಡ್ಡ ಅಂತರದಲ್ಲಿ ಗೆದ್ದರೂ ನಾಕೌಟ್ ಹಂತ ತಲುಪುವುದು ಕಷ್ಟ ಎನಿಸಿದೆ.

ಈ ಪಂದ್ಯದಲ್ಲಿ ಜಪಾನ್ ಪರ ಕೋಸೆ ಕವಾಬಿ (40 ಮತ್ತು 56ನೇ ನಿಮಿಷ), ಕೆನ್ ನಗಯೋಶಿ (24ನೇ ನಿಮಿಷ), ರಿಯೊಮಾ ಊಕಾ (49ನೇ ನಿ.) ಮತ್ತು ಕೋಜಿ ಯಮಕಶಿ (54ನೇ ನಿ.) ಗೋಲು ಕೈಚಳಕ ತೋರಿದರು. ಭಾರತ ತಂಡಕ್ಕೆ ಪವನ್ ರಾಜಭರ್ (45ನೇ ನಿ.) ಮತ್ತು ಉತ್ತಮ್ ಸಿಂಗ್ (50ನೇ ನಿ.) ಗೋಲು ಗಳಿಸಿದರು.

ಪಾಕಿಸ್ತಾನಕ್ಕೆ ಜಯ: ಪಾಕಿಸ್ತಾನ ತಂಡವು 13–0 ಗೋಲುಗಳಿಂದ ಆತಿಥೇಯ ಇಂಡೊನೇಷ್ಯಾವನ್ನು ಮಣಿಸಿತು.

'ನಗ್ನದೇಹ ತೋರಿಸಲು ಸೂಚಿಸಿದ್ದರು'

ವಾಷಿಂಗ್ಟನ್ (ಎಪಿ): ತಾವು ಮಹಿಳೆ ಎಂಬುದನ್ನು ಸಾಬೀತುಪಡಿಸಲು ಜನನಾಂಗ ತೋರಿಸುವಂತೆ ಅಥ್ಲೆಟಿಕ್ಸ್ ಪದಾಧಿಕಾರಿಗಳು ಸೂಚಿಸಿದ್ದರು ಎಂದು ದಕ್ಷಿಣ ಆಫ್ರಿಕಾದ ಅಥ್ಲೀಟ್ ಕಾಸ್ಟರ್ ಸೆಮೆನ್ಯಾ ಆರೋಪಿಸಿದ್ದಾರೆ.

ಎಚ್‌ಬಿಒ ರಿಯಲ್ ಸ್ಪೋರ್ಟ್ಸ್‌ಗೆ ನೀಡಿದ ಸಂದರ್ಶನದಲ್ಲಿ ಈ ಕುರಿತು ಮಾತನಾಡಿರುವ ಎರಡು ಬಾರಿಯ ಒಲಿಂಪಿಕ್ ಚಾಂಪಿಯನ್ '2009ರ ಬರ್ಲಿನ್ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಈ ಘಟನೆ ನಡೆದಿತ್ತು. ವಿಶ್ವ ಟ್ರ್ಯಾಕ್ ಆ್ಯಂಡ್ ಫೀಲ್ಡ್ ಆಡಳಿತ ಮಂಡಳಿ ಈ ರೀತಿ ಸೂಚಿಸಿತ್ತು. ಆಗ ನನಗೆ 18 ವರ್ಷವಾಗಿತ್ತು. ನನಗೆ ಪುರುಷಾಂಗವಿದೆಯೆಂದು ಅವರು ಭಾವಿಸಿದ್ದರು' ಎಂದಿದ್ದಾರೆ.

'ನಾನು ಮಹಿಳೆ. ನೀವು ನನ್ನ ಬಗ್ಗೆ ಏನೆಂದುಕೊಂಡಿದ್ದರೆಂಬುದು ನಗಣ್ಯ. ನನ್ನ ಜನನಾಂಗವನ್ನು ತೋರಿಸಲು ಯಾವುದೇ ಹಿಂಜರಿಕೆ ಇಲ್ಲವೆಂದು ಅವರಿಗೆ ಹೇಳಿದ್ದೆ' ಎಂದೂ ಸೆಮೆನ್ಯಾ ತಿಳಿಸಿದ್ದಾರೆ.

ಫ್ರೆಂಚ್ ಓಪನ್ ಟೆನಿಸ್ ಟೂರ್ನಿ: ಮೆಡ್ವೆಡೆವ್ ಮುನ್ನಡೆ

ಶಪವಲೊವ್‌ಗೆ ರೂನೆ ಆಘಾತ

ಪ್ಯಾರಿಸ್ (ಎಎಫ್‌ಪಿ): ವಿಶ್ವ ರ‍್ಯಾಂಕಿಂಗ್‌ನಲ್ಲಿ ಎರಡನೇ ಸ್ಥಾನದಲ್ಲಿರುವ ರಷ್ಯಾದ ಡೇನಿಯಲ್ ಮೆಡ್ವೆಡೆವ್ ಫ್ರೆಂಚ್ ಓಪನ್ ಟೆನಿಸ್ ಟೂರ್ನಿಯಲ್ಲಿ ಶುಭಾರಂಭ ಮಾಡಿದರು. ಡೆನ್ಮಾರ್ಕ್‌ನ ಯುವ ಆಟಗಾರ ಹೋಲ್ಗಾ ರೂನೆ ಕೆನಡಾದ ಡೆನಿಸ್ ಶಪವಲೊವ್‌ಗೆ ಆಘಾತ ನೀಡಿದರು.

ಹರ್ನಿಯಾ ಚಿಕಿತ್ಸೆಗೆ ಒಳಗಾದ ಬಳಿಕ ಆವೆಮಣ್ಣಿನ ಅಂಗಣದಲ್ಲಿ ತಮ್ಮ ಎರಡನೇ ಪಂದ್ಯವಾಡಿದ ಮೆಡ್ವೆಡೆವ್, ಮೊದಲ ಸುತ್ತಿನಲ್ಲಿ 6-2, 6-2, 6-2ರಿಂದ ಅರ್ಜೆಂಟೀನಾದ ಫಕುಂಡೊ ಬ್ಯಾಗ್ನಿಸ್ ಅವರನ್ನು ಪರಾಭವಗೊಳಿಸಿದರು. 103ನೇ ರ‍್ಯಾಂಕಿನ ಆಟಗಾರನ ಎದುರು ಎಂಟು ಬ್ರೇಕ್ ಪಾಯಿಂಟ್ ಗಳಿಸಿದರು.

19 ವರ್ಷದ ರೂನೆ 14ನೇ ಶ್ರೇಯಾಂಕದ ಕೆನಡಾ ಆಟಗಾರನನ್ನು 6-3, 6-1, 7-6 (7/4)ರಿಂದ ಮಣಿಸಿ ಎರಡನೇ ಸುತ್ತಿಗೆ ಕಾಲಿಟ್ಟರು. 2019ರಲ್ಲಿ ಇಲ್ಲಿ ಬಾಲಕರ ವಿಭಾಗದಲ್ಲಿ ರೂನೆ ಚಾಂಪಿಯನ್ ಆಗಿದ್ದರು. ಪುರುಷರ ಸಿಂಗಲ್ಸ್ ವಿಭಾಗದ ಮೊದಲ ಸುತ್ತಿನ ಇನ್ನುಳಿದ ಪಂದ್ಯಗಳಲ್ಲಿ ಕಜಕಿಸ್ತಾನದ ಅಲೆಕ್ಸಾಂಡರ್ ಬಬ್ಲಿಕ್ 6-2, 6-4, 6-4ರಿಂದ ಫ್ರಾನ್ಸ್‌ನ ಅರ್ಥರ್ ರಿಂಡರ್‌ಕ್ನೆಚ್ ಎದುರು, ಸರ್ಬಿಯಾದ ಲಾಸ್ಲೊ ಡಿಜೆರ್ 6-4, 6-4, 6-4ರಿಂದ ಲಿಥುವೇನಿಯಾದ ರಿಕಾರ್ಡಸ್ ಬೆರೆಂಕಿಸ್ ವಿರುದ್ಧ ಜಯ ಸಾಧಿಸಿದರು.

ಮಹಿಳಾ ಸಿಂಗಲ್ಸ್ ವಿಭಾಗದ ಪಂದ್ಯಗಳಲ್ಲಿ ಫ್ರಾನ್ಸ್‌ನ ಅಲಿಜ್ ಕಾರ್ನೆಟ್ 6-2, 6-0ರಿಂದ ಜಪಾನ್‌ನ ಮಿಸಾಕಿ ಡೋಯಿ ಎದುರು, ಲಾತ್ವಿಯಾದ ಎಲೆನಾ ಒಸ್ಟಾಂಪೆಕೊ 6-1, 6-4ರಿಂದ ಇಟಲಿಯ ಲೂಸಿಯಾ ಬ್ರೊಂಜೆಟ್ಟಿ ಎದುರು ಜಯಿಸಿ ಎರಡನೇ ಸುತ್ತಿಗೆ ಮುನ್ನಡೆದರು.

ಎರಡನೇ ಸುತ್ತಿಗೆ ಬೋಪಣ್ಣ ಜೋಡಿ: ಭಾರತದ ರೋಹನ್ ಬೋಪಣ್ಣ ಮತ್ತು ನೆದರ್ಲೆಂಡ್ಸ್‌ನ ಮ್ಯಾಟ್‌ವೆ ಮಿಡಲ್‌ಕೂಪ್ ಜೋಡಿಯು ಡಬಲ್ಸ್ ವಿಭಾಗದಲ್ಲಿ ಎರಡನೇ ಸುತ್ತಿಗೆ ಕಾಲಿಟ್ಟರು.ಮಂಗಳವಾರ ನಡೆದ ಮೊದಲ ಸುತ್ತಿನ ಪಂದ್ಯದಲ್ಲಿ ಬೋಪಣ್ಣ– ಮ್ಯಾಟ್‌ವೆ ಅವರಿಗೆ 6-4, 6-1ರಿಂದ ಇಂಡೊನೇಷ್ಯಾದ ಸಾಸ್‌ಚಾ ವೇಯ್ಸ್‌ಬರ್ಗ್ ಮತ್ತು ಲೂಕಾ ವ್ಯಾನ್ ಎದುರು ಜಯ ಒಲಿಯಿತು.

ಡೇನಿಯಲ್ ಮೆಡ್ವೆಡೆವ್ ಆಟದ ಶೈಲಿ– ಎಎಫ್‌ಪಿ ಚಿತ್ರ

ಸಂಕ್ಷಿಪ್ತ ಸುದ್ದಿ

3 ತಿಂಗಳು ಕಳೆದರೂ ರಷ್ಯಾಗೆ ಲಭಿಸದ ಮಹತ್ವದ ಗೆಲುವು

ಮಾಸ್ಕೊ (ಎಪಿ): ಜಗತ್ತಿನ ಎರಡನೇ ಬಲಿಷ್ಠ ರಾಷ್ಟ್ರ ರಷ್ಯಾ, ಪುಟ್ಟ ದೇಶ ಉಕ್ರೇನ್ ಮೇಲೆ ಯುದ್ಧ ಆರಂಭಿಸಿ 3 ತಿಂಗಳು ಕಳೆದರೂ ನಿರೀಕ್ಷಿತ ಗೆಲವು ಸಾಧಿಸುವಲ್ಲಿ ವಿಫಲವಾಗಿದೆ.

ರಷ್ಯಾ ಫೆಬ್ರುವರಿ 24ರಂದು ಉಕ್ರೇನಿನ ವಿರುದ್ಧ ಯುದ್ಧ ಘೋಷಿಸಿದಾಗ, ಕೆಲವೇ ದಿನ ಅಥವಾ ವಾರಗಳಲ್ಲಿ ಗೆಲುವು ಸಾಧಿಸುವ ಉತ್ಸಾಹದಲ್ಲಿತ್ತು. ಆದರೆ ಬಲಾಢ್ಯ ರಷ್ಯಾ ಸೈನ್ಯದ ವಿರುದ್ಧ ಉಕ್ರೇನ್ ಪ್ರಬಲ ಪೈಪೋಟಿ ನೀಡುತ್ತಿದೆ.

ಯುದ್ಧದಲ್ಲಿ ರಷ್ಯಾ ಸದ್ಯ ಸಾಧಿಸಿದ್ದು ಸಣ್ಣಪುಟ್ಟ ಗೆಲುವು ಮಾತ್ರ. ಉಕ್ರೇನಿನ ಕೀವ್ ಮತ್ತಿತರ ದೊಡ್ಡ ನಗರಗಳ ಮೇಲೆ ರಷ್ಯಾ ಭೀಕರ ದಾಳಿ ನಡೆಸಿದ್ದು, ಸಾಕಷ್ಟು ಸಾವು-ನೋವು ಸಂಭವಿಸಿದೆ. ಆದಾಗ್ಯೂ ಉಕ್ರೇನ್ ಪಡೆಗಳು ಪ್ರತಿರೋಧ ತೋರಿ ಅವುಗಳನ್ನು ಹಿಡಿತದಲ್ಲಿ ಇಟ್ಟುಕೊಂಡಿವೆ.

ಉಕ್ರೇನ್ ಪ್ರತಿರೋಧಕ್ಕೆ ತತ್ತರಿಸಿದ ರಷ್ಯಾ ಕಳೆದ ತಿಂಗಳು ಕೀವ್ ಸುತ್ತಮುತ್ತಲಿನ ಪ್ರದೇಶಗಳಿಂದ ತನ್ನ ಸೇನೆಯನ್ನು ವಾಪಸ್ ಕರೆಸಿಕೊಂಡಿದೆ. ಮರಿಯುಪೋಲ್ ನಗರವನ್ನು ಮಾತ್ರ ಸದ್ಯ ತನ್ನ ವಶಕ್ಕೆ ಪಡೆದುಕೊಂಡಿದೆ.

ಶ್ರೀಲಂಕಾ: ಪೆಟ್ರೋಲ್ ದರ ಲೀಟರ್‌ಗೆ ₹420

ಕೊಲಂಬೊ (ಎಎಫ್‌ಪಿ): ಶ್ರೀಲಂಕಾದಲ್ಲಿ ಮಂಗಳವಾರ ಇಂಧನ ಬೆಲೆ ದಾಖಲೆಯ ಗರಿಷ್ಠ ಮಟ್ಟಕ್ಕೆ ಏರಿಕೆಯಾಗಿದ್ದು, ಡೀಸೆಲ್ ಬೆಲೆಯನ್ನು ಲೀಟರ್‌ಗೆ ₹289ರಿಂದ ₹400ಕ್ಕೆ, ಪೆಟ್ರೋಲ್ ಬೆಲೆಯನ್ನು ಲೀಟರ್‌ಗೆ ₹338ರಿಂದ ₹420ಕ್ಕೆ ಹೆಚ್ಚಿಸಲಾಗಿದೆ.

ಐಪಿಇಎಫ್ ವಿರುದ್ಧ ಚೀನಾ ಆಕ್ರೋಶ

ಬೀಜಿಂಗ್ (ಪಿಟಿಐ): ವ್ಯಾಪಾರ, ಆರ್ಥಿಕ ಮತ್ತು ಹೂಡಿಕೆಯ ಅವಕಾಶಗಳನ್ನು ಹೆಚ್ಚಿಸಲು ಭಾರತ ಸೇರಿದಂತೆ 12 ಇಂಡೋ-ಪೆಸಿಫಿಕ್ ರಾಷ್ಟ್ರಗಳೊಂದಿಗೆ ಅಮೆರಿಕ ಆರಂಭಿಸಿರುವ ಹೊಸ ವ್ಯಾಪಾರ ಒಪ್ಪಂದವನ್ನು (ಐಪಿಇಎಫ್) ಚೀನಾ ವಿರೋಧಿಸಿದೆ. ಈ ಒಪ್ಪಂದವು, ಇಂಡೋ–ಪೆಸಿಫಿಕ್ ಪ್ರದೇಶದಲ್ಲಿ ತನ್ನ ಪ್ರಾ ಬಲ್ಯಕ್ಕೆ ಎದುರಾದ ಅಪಾಯ ಎಂದು ಪರಿಗಣಿಸಿರುವ ಚೀನಾ, ಅದರ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದೆ. 'ಇದು ಆರ್ಥಿಕ ನ್ಯಾಟೊ' ಎಂದು ಚೀನಾ ಮಾಧ್ಯಮಗಳು ಕರೆದಿವೆ.

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಉದ್ಯೋಗ ವಾಣಿ

ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು
ಆಡಳಿತ ಕಚೇರಿ, ಜಿಕೆವಿಕೆ, ಬೆಂಗಳೂರು–560 065.
Ph No. Office : 23332521/23330153 (Ext. 259) Fax : 91-080-23332521

No. AO/RT/11/61/Backlog Teaching Post/2022-23 Date: 24-05-2022

–: ಪ್ರಕಟಣೆ :–

ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದಲ್ಲಿ 02 ಬ್ಯಾಕ್‌ಲಾಗ್ ಬೋಧಕರ ಹುದ್ದೆಗಳನ್ನು – ಪ್ರಾಧ್ಯಾಪಕ ವರ್ಗ: Agril. Engg.-1 Post (SC), Plant Pathology-1 Post (ST), ತುಂಬಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಕರೆಯಲಾಗಿದೆ. ಭರ್ತಿ ಮಾಡಲಾದ ಅರ್ಜಿಗಳನ್ನು ಸ್ವೀಕರಿಸಲು ಕಡೆಯ ದಿನಾಂಕ: 22–06–2022 ಆಗಿರುತ್ತದೆ. ಪ್ರಕಟಣೆ, ವಿದ್ಯಾರ್ಹತೆ ಹಾಗೂ ಅರ್ಜಿ ನಮೂನೆಯನ್ನು ವಿಶ್ವವಿದ್ಯಾನಿಲಯದ ವೆಬ್‌ಸೈಟ್‌ನಿಂದ (website:www.uasbangalore.edu.in) ಡೌನ್‌ಲೋಡ್ ಮಾಡಿಕೊಳ್ಳಬಹುದು.

ಆದೇಶದ ಮೇರೆಗೆ
ಸಹಿ/–ಆಡಳಿತಾಧಿಕಾರಿಗಳು

ದಿ ಭಾರತ್ ಕೋ–ಆಪರೇಟಿವ್ ಬ್ಯಾಂಕ್ ಲಿ.,
ನಂ.30, 15ನೇ ಕ್ರಾಸ್, 3ನೇ ಬ್ಲಾಕ್, ಜಯನಗರ, ಬೆಂಗಳೂರು–560011
ದೂರವಾಣಿ ಸಂಖ್ಯೆ: 26632783, 26633566

ನೇಮಕಾತಿ ಪ್ರಕಟಣೆ

ದಿ ಭಾರತ್ ಕೋ–ಆಪರೇಟಿವ್ ಬ್ಯಾಂಕ್ ಲಿ., ಜಯನಗರ, ಬೆಂಗಳೂರು ಇದರಲ್ಲಿ ಖಾಲಿ ಇರುವ ಈ ಕೆಳಕಂಡ 18 ಹುದ್ದೆಗಳನ್ನು ಲಿಖಿತ ಪರೀಕ್ಷೆ ಹಾಗೂ ಸಂದರ್ಶನದ ಮೂಲಕ ಭರ್ತಿ ಮಾಡಲು ಅರ್ಹ ಅಭ್ಯರ್ಥಿಗಳಿಂದ ದಿನಾಂಕ : 25–05–2022 ರಿಂದ ಅರ್ಜಿ ಆಹ್ವಾನಿಸಲಾಗಿದೆ.

ಕ್ರ.ಸಂ.	ಹುದ್ದೆಯ ವಿವರ	ವೇತನ ಶ್ರೇಣಿ ರೂ.	ಹುದ್ದೆಗಳ ಸಂಖ್ಯೆ
1.	ಮುಖ್ಯ ಕಾರ್ಯನಿರ್ವಹಣಾಧಿಕಾರಿ	40050 – 56550	1
2.	ಹಿರಿಯ ವ್ಯವಸ್ಥಾಪಕರು	36300 – 53850	1
3.	ಕಂಪ್ಯೂಟರ್ ಮ್ಯಾನೇಜರ್ (ಸಿಸ್ಟಂ ಅಡ್ಮಿನಿಸ್ಟ್ರೇಟರ್ ಮುಖ್ಯಸ್ಥ)	28100 – 50100	1
4.	ವ್ಯವಸ್ಥಾಪಕರು	28100 – 50100	3
5.	ಅಕೌಂಟೆಂಟ್	24000 – 45300	2
6.	ಅಸಿಸ್ಟೆಂಟ್ ಅಕೌಂಟೆಂಟ್	21600 – 40050	2
7.	ದ್ವಿತೀಯ ದರ್ಜೆ ಸಹಾಯಕರು	17650 – 32000	2
8.	ಅಟೆಂಡರ್	12500 – 24000	6
		ಒಟ್ಟು	18

ಅರ್ಜಿ ನಮೂನೆ/ಮೀಸಲಾತಿ/ವಿದ್ಯಾರ್ಹತೆ/ವಯೋಮಿತಿ/ಅರ್ಜಿ ಶುಲ್ಕ/ ಆಯ್ಕೆ ವಿಧಾನ/ ಲಗತ್ತಿಸಬೇಕಾದ ಪ್ರಮಾಣ ಪತ್ರಗಳು, ನಿಬಂಧನೆಗಳು ಮತ್ತು ಸೂಚನೆಗಳು ಇತ್ಯಾದಿ ವಿವರಗಳು ಬ್ಯಾಂಕಿನ website : www.bcbbank.co ರಲ್ಲಿ ಲಭ್ಯವಿರುತ್ತದೆ. ಅರ್ಹ ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕವಾದ: 15–06–2022 ಸಂಜೆ 5.00 ಘಂಟೆಯೊಳಗೆ ಖುದ್ದಾಗಿ/ ಅಂಚೆ/ಕೊರಿಯರ್ ಮೂಲಕ ಅರ್ಜಿ ಸಲ್ಲಿಸಬಹುದಾಗಿದೆ.

ಸಿಬ್ಬಂದಿ ನೇಮಕಾತಿ ಸಮಿತಿ ಪರವಾಗಿ
ಸಹಿ/–
ಮುಖ್ಯ ಕಾರ್ಯನಿರ್ವಹಣಾಧಿಕಾರಿ

ಸ್ಥಳ: ಬೆಂಗಳೂರು
ದಿನಾಂಕ: 25–05–2022

ಸುನಿಲ್ ಚೆಟ್ರಿ

ಫುಟ್‌ಬಾಲ್: ಭಾರತ ತಂಡಕ್ಕೆ ಮರಳಿದ ಚೆಟ್ರಿ

ನವದೆಹಲಿ (ಪಿಟಿಐ): ನಾಯಕ ಸುನಿಲ್ ಚೆಟ್ರಿ ಅವರು ಆರು ತಿಂಗಳುಗಳ ಬಳಿಕ ಭಾರತ ಫುಟ್‌ಬಾಲ್ ತಂಡಕ್ಕೆ ಮರಳಿದ್ದಾರೆ.

ಜೋರ್ಡಾನ್ ತಂಡದ ಎದುರು ಇದೇ 28ರಂದು ದೋಹಾದಲ್ಲಿ ನಡೆಯಲಿರುವ ಸ್ನೇಹಪರ ಪಂದ್ಯಕ್ಕೆ ಭಾರತದ 25 ಮಂದಿಯ ತಂಡವನ್ನು ಮಂಗಳವಾರ ಪ್ರಕಟಿಸಲಾಗಿದ್ದು, ಚೆಟ್ರಿ ಸ್ಥಾನ ಪಡೆದಿದ್ದಾರೆ. ಚೆಟ್ರಿ, ಹೋದ ವರ್ಷ ಅಕ್ಟೋಬರ್‌ನಲ್ಲಿ ಸ್ಯಾಫ್ ಚಾಂಪಿಯನ್‌ಷಿಪ್‌ನ ಫೈನಲ್‌ನಲ್ಲಿ ನೇಪಾಳ ತಂಡದ ಎದುರು ಕೊನೆಯ ಪಂದ್ಯ ಆಡಿದ್ದರು. ಆ ಪಂದ್ಯದಲ್ಲಿ ಭಾರತ 3–0ಯಿಂದ ಜಯ ಸಾಧಿಸಿತ್ತು. ಆ ಬಳಿಕ ಗಾಯದ ಕಾರಣ ಕಣಕ್ಕಿಳಿದಿರಲಿಲ್ಲ.

ತಂಡ: ಗೋಲ್ ಕೀಪರ್ಸ್: ಗುರುಪ್ರೀತ್ ಸಿಂಗ್ ಸಂಧು, ಲಕ್ಷ್ಮೀಕಾಂತ್ ಕಟ್ಟಿಮನಿ, ಅಮರಿಂದರ್ ಸಿಂಗ್. ಡಿಫೆಂಡರ್ಸ್: ರಾಹುಲ್ ಭೆಕೆ, ಆಕಾಶ್ ಮಿಶ್ರಾ, ಹರ್ಮನ್‌ಜೋತ್ ಸಿಂಗ್ ಖಾಬ್ರಾ, ರೋಷನ್ ಸಿಂಗ್, ಅನ್ವರ್ ಅಲಿ, ಸಂದೇಶ್ ಜಿಂಗಾನ್, ಸುಭಾಶಿಶ್ ಬೋಸ್, ಪ್ರೀತಮ್ ಕೋಟಲ್. ಮಿಡ್‌ಫೀಲ್ಡರ್ಸ್: ಜೀಕ್ಸನ್ ಸಿಂಗ್, ಅನಿರುದ್ಧ್ ಥಾಪಾ, ಗ್ಲ್ಯಾನ್ ಮಾರ್ಟಿನ್ಸ್, ಬ್ರೆಂಡನ್ ಫರ್ನಾಂಡಿಸ್, ಋತ್ವಿಕ್ ದಾಸ್, ಉದಾಂತ ಸಿಂಗ್, ಯಾಸಿರ್ ಮೊಹಮ್ಮದ್, ಸಹಲ್ ಅಬ್ದುಲ್ ಸಮದ್, ಸುರೇಶ್ ವಾಂಗ್‌ಜಮ್, ಆಶಿಕ್ ಕುರುನಿಯನ್, ಲಿಸ್ಟನ್ ಕೊಲಾಕೊ. ಫಾರ್ವರ್ಡ್ಸ್: ಇಶಾನ್ ಪಂಡಿತ, ಸುನಿಲ್ ಚೆಟ್ರಿ ಮತ್ತು ಮನ್ವೀರ್ ಸಿಂಗ್.

ಚೆಸ್: ಸೆಮಿಗೆ ಪ್ರಜ್ಞಾನಂದ

ಪ್ರಜ್ಞಾನಂದ

ಚೆನ್ನೈ (ಪಿಟಿಐ): ಭಾರತದ ಯುವ ಗ್ರ್ಯಾಂಡ್‌ಮಾಸ್ಟರ್ ಆರ್. ಪ್ರಜ್ಞಾನಂದ ಅವರು ಮೆಲ್ಟ್‌ವೇರ್ ಚಾಂಪಿಯನ್ಸ್ ಚೆಸ್ ಟೂರ್ ಚೆಸೇಬಲ್ ಮಾಸ್ಟರ್ ಆನ್‌ಲೈನ್ ಟೂರ್ನಿಯ ಸೆಮಿಫೈನಲ್‌ಗೆ ಲಗ್ಗೆಯಿಟ್ಟಿದ್ದಾರೆ.

16 ವರ್ಷದ ಪ್ರಜ್ಞಾನಂದ ಎಂಟರಘಟ್ಟದ ಪಂದ್ಯದಲ್ಲಿ 2.5–1.5ರಿಂದ ಚೀನಾದ ವೇ ಯಿ ಅವರನ್ನು ಪರಾಭವಗೊಳಿಸಿದರು. ಸೆಮಿಫೈನಲ್‌ನಲ್ಲಿ ಅವರಿಗೆ ನೆದರ್ಲೆಂಡ್ಸ್‌ನ ಅನೀಶ್ ಗಿರಿ ಸವಾಲು ಎದುರಾಗಿದೆ.

ಸೋಮವಾರ ತಡರಾತ್ರಿ ನಡೆದ ಕ್ವಾರ್ಟರ್‌ಫೈನಲ್‌ನಲ್ಲಿ ಕಪ್ಪುಕಾಯಿಗಳೊಂದಿಗೆ ಆಡಿದ ಪ್ರಜ್ಞಾನಂದ, 90 ನಡೆಗಳಲ್ಲಿ ಜಯ ತಮ್ಮದಾಗಿಸಿಕೊಂಡರು. ಈ ಪಂದ್ಯದಲ್ಲಿ ಅವರು ಕನಿಷ್ಠ ಜಯಸಾಧಿಸಿದ್ದರೂ ಸೆಮಿಫೈನಲ್ ತಲುಪುವುದು ಖಚಿತವಿತ್ತು.

ಆಸ್ಟ್ರೇಲಿಯಾ ತಂಡಕ್ಕೆ ವೆಟೋರಿ ನೇಮಕ

ಮೆಲ್ಬರ್ನ್ (ಎಪಿ): ಆಸ್ಟ್ರೇಲಿಯಾ ಪುರುಷರ ಕ್ರಿಕೆಟ್ ತಂಡಕ್ಕೆ ನ್ಯೂಜಿಲೆಂಡ್ ತಂಡ್ ಮಾಜಿ ನಾಯಕ ಡೇನಿಯಲ್ ವೆಟೋರಿ ಅವರನ್ನು ಸಹಾಯಕ ಕೋಚ್ ಆಗಿ ನೇಮಕ ಮಾಡಲಾಗಿದೆ.

ಇಂಡಿಯನ್ ಪ್ರೀಮಿಯರ್ ಲೀಗ್ ಮತ್ತು ಆಸ್ಟ್ರೇಲಿಯಾದ ಬಿಗ್ ಬ್ಯಾಷ್ ಲೀಗ್‌ಗಳಲ್ಲಿ ಕೋಚ್ ಆಗಿ ಕಾರ್ಯನಿರ್ವಹಿಸಿದ್ದಾರೆ. ಎಡಗೈ ಸ್ಪಿನ್ನರ್ ಆಗಿದ್ದ ವೆಟೋರಿ ಬಾಂಗ್ಲಾ ತಂಡಕ್ಕೆ ಕೆಲಕಾಲ ಸ್ಪಿನ್ ಬೌಲಿಂಗ್ ಕೋಚ್ ಆಗಿದ್ದರು.